*Pandit Teaches the Bible Series*

# The Kingdom of God

**Kannada Edition**

**Author: T. Pandit**

**Translator: Genie Cliff**

This is the Kannada version of a college level textbook prepared a few years ago for a Bible college in South India. It was written it with the South Indian Christian context in mind. With minor adaptions it should, however, be useful also in other cultural contexts.

T. Pandit has many years of experience as an educationist, a Bible teacher and a college principal, in India as well as internationally. He is now retired.

This book is translated into Kannada by Genie Cliff, a post graduate in English Literature and a Systems Engineer, also holds a degree in Textile Technology and B. D. He formerly worked in the KSC as administrator, accountant, teacher, translator, in charge of material production. He is married and settled in Davangere at present.

October 2021


## Copyright waiver

The authors of this work hereby waive all claim of copyright (economic and moral) in this work and immediately place it in the public domain. It may be used, distorted or destroyed in any manner whatsoever without further attribution or notice to the creators.

The authors of this work would, however, object to to any republishing of this work for the purposes of financial gain.

ಕನ್ನಡ ಸತ್ಯವೇದ ಮಹಾವಿದ್ಯಾಲಯ ಪಠ್ಯಪುಸ್ತಕ ಸರಣಿ

# ದೇವರ ರಾಜ್ಯ

***ಮೊದಲನೆಯ ಕನ್ನಡ ಆವೃತ್ತಿ***


ಪ್ರಧಾನ ಸಂಪಾದಕರು

**ಟಿ. ಪಂಡಿತ್**

ಲೇಖಕರು

**ಟಿ. ಪಂಡಿತ್**

# ಪರಿವಿಡಿ

ಶಿಕ್ಷಕರಿಗಾಗಿ 5

## ದೇವರ ರಾಜ್ಯವನ್ನು ಅರ್ಥಮಾಡಿಕೊಳ್ಳುವುದು

ಅಧ್ಯಯನ 1: ಅರಸನಾದ ದೇವರು 8
ಅಧ್ಯಯನ 2: ದೇವರ ರಾಜ್ಯದ ಒಂದು ತಪ್ಪಾದ ದೃಷ್ಟಿಕೋನ 10
ಅಧ್ಯಯನ 3: ದೇವರ ರಾಜ್ಯದ ಒಂದು ಸರಿಯಾದ ದೃಷ್ಟಿಕೋನ 13
ಅಧ್ಯಯನ 4: ಅರಸನಾದ ಯೇಸು 16

## ದೇವರ ರಾಜ್ಯದ ಕುರಿತು ಹೆಚ್ಚಿನ ವಿಷಯಗಳು

ಅಧ್ಯಯನ 5: ದೇವರ ರಾಜ್ಯವು ಆಗಮಿಸುತ್ತದೆ 20
ಅಧ್ಯಯನ 6: ದೇವರ ರಾಜ್ಯವು ಮೇರೆಗಳನ್ನು ದಾಟುತ್ತದೆ 22
ಅಧ್ಯಯನ 7: ದೇವರ ರಾಜ್ಯವು ಬೆಳೆಯುತ್ತದೆ 24
ಅಧ್ಯಯನ 8: ದೇವರ ರಾಜ್ಯದ ಎರಡು ಸವಾಲೊಡ್ಡುವ ಮೌಲ್ಯಗಳು 26
ಅಧ್ಯಯನ 9: ದೇವರ ರಾಜ್ಯಕ್ಕಾಗಿ ಕಾಯುವುದು 28
ಅಧ್ಯಯನ 10: ಸಭೆ ಮತ್ತು ದೇವರ ರಾಜ್ಯ 31

## ದೇವರ ರಾಜ್ಯದಂತೆ ಜೀವಿಸುವುದು

ಅಧ್ಯಯನ 11: ಪರ್ವತ ಪ್ರಸಂಗ 33
ಅಧ್ಯಯನ 12: ನಮ್ಮ ಆಶೀರ್ವಾದಗಳು 40
ಅಧ್ಯಯನ 13: ನಮ್ಮ ಪ್ರಭಾವ 44
ಅಧ್ಯಯನ 14: ನಮ್ಮ ನೈತಿಕ ನೀತಿವಂತಿಕೆ 47
ಅಧ್ಯಯನ 15: ನಮ್ಮ ಧಾರ್ಮಿಕ ನೀತಿವಂತಿಕೆ 51
ಅಧ್ಯಯನ 16: ನಮ್ಮ ಮಹತ್ವಾಕಾಂಕ್ಷೆ 54
ಅಧ್ಯಯನ 17: ನಮ್ಮ ಸಂಬಂಧಗಳು 56
ಅಧ್ಯಯನ 18: ನಾವು ಮಾಡಲೇಬೇಕಾದ ಆಯ್ಕೆ 59

## ಉತ್ತರಗಳು – ದೇವರ ರಾಜ್ಯವನ್ನು ಅರ್ಥಮಾಡಿಕೊಳ್ಳುವುದು

ಉತ್ತರಗಳು 1: ಅರಸನಾದ ದೇವರು 61
ಉತ್ತರಗಳು 2: ದೇವರ ರಾಜ್ಯದ ಒಂದು ತಪ್ಪಾದ ದೃಷ್ಟಿಕೋನ 67
ಉತ್ತರಗಳು 3: ದೇವರ ರಾಜ್ಯದ ಒಂದು ಸರಿಯಾದ ದೃಷ್ಟಿಕೋನ 71
ಉತ್ತರಗಳು 4: ಅರಸನಾದ ಯೇಸು 75

## ಉತ್ತರಗಳು – ದೇವರ ರಾಜ್ಯದ ಕುರಿತು ಹೆಚ್ಚಿನ ವಿಷಯಗಳು


ಉತ್ತರಗಳು 5: ದೇವರ ರಾಜ್ಯವು ಆಗಮಿಸುತ್ತದೆ 81

ಉತ್ತರಗಳು 6: ದೇವರ ರಾಜ್ಯವು ಮೇರೆಗಳನ್ನು ದಾಟುತ್ತದೆ 87

ಉತ್ತರಗಳು 7: ದೇವರ ರಾಜ್ಯವು ಬೆಳೆಯುತ್ತದೆ 91

ಉತ್ತರಗಳು 8: ದೇವರ ರಾಜ್ಯದ ಎರಡು ಸವಾಲೊಡ್ಡುವ ಮೌಲ್ಯಗಳು 95

ಉತ್ತರಗಳು 9: ದೇವರ ರಾಜ್ಯಕ್ಕಾಗಿ ಕಾಯುವುದು 99

ಉತ್ತರಗಳು 10: ಸಭೆ ಮತ್ತು ದೇವರ ರಾಜ್ಯ 105


## ಉತ್ತರಗಳು – ದೇವರ ರಾಜ್ಯದಂತೆ ಜೀವಿಸುವುದು


ಉತ್ತರಗಳು 11: ಪರ್ವತ ಪ್ರಸಂಗ 108

ಉತ್ತರಗಳು 12: ನಮ್ಮ ಆಶೀರ್ವಾದಗಳು 111

ಉತ್ತರಗಳು 13: ನಮ್ಮ ಪ್ರಭಾವ 113

ಉತ್ತರಗಳು 14: ನಮ್ಮ ನೈತಿಕ ನೀತಿವಂತಿಕೆ 116

ಉತ್ತರಗಳು 15: ನಮ್ಮ ಧಾರ್ಮಿಕ ನೀತಿವಂತಿಕೆ 121

ಉತ್ತರಗಳು 16: ನಮ್ಮ ಮಹತ್ವಾಕಾಂಕ್ಷೆ 127

ಉತ್ತರಗಳು 17: ನಮ್ಮ ಸಂಬಂಧಗಳು 131

ಉತ್ತರಗಳು 18: ನಾವು ಮಾಡಲೇಬೇಕಾದ ಆಯ್ಕೆ 135

# ಶಿಕ್ಷಕರಿಗಾಗಿ

## ಪಠ್ಯಪುಸ್ತಕ ಮತ್ತು ಕೋರ್ಸ್

ಈ ಪಠ್ಯಪುಸ್ತಕವನ್ನು ದೇವರ ರಾಜ್ಯ ಎಂಬ ಒಂದು ವಾರದ ಕೋರ್ಸಿಗಾಗಿ ಸಿದ್ಧಪಡಿಸಲಾಗಿದೆ. ಇದನ್ನು ಸದ್ಯದಲ್ಲಿ ಕನ್ನಡ ಸತ್ಯವೇದ ಕಾಲೇಜಿನ ಮೊದಲನೇ ವರ್ಷದ ಕೋರ್ಸಿನ ಅಂತ್ಯದಲ್ಲಿ ಬೋಧಿಸಲಾಗುತ್ತಿದೆ. ಇದನ್ನು ಎರಡನೇ ಅಥವಾ ಮೂರನೇ ವರ್ಷದ ಕೋರ್ಸಿನಲ್ಲಿಯೂ ಸಹ ಬಳಸಬಹುದಾಗಿದೆ.

ಈ ಪುಸ್ತಕವು ಎರಡು ಮುಖ್ಯಭಾಗಗಳನ್ನು ಹೊಂದಿದೆ, ಅವು ಯಾವವೆಂದರೆ ಅಧ್ಯಯನಗಳು ಮತ್ತು ಉತ್ತರಗಳು:

1. ***ಅಧ್ಯಯನಗಳು:*** ಬಹುತೇಕ ಅಧ್ಯಯನಗಳು ಮೂರು ಭಾಗಗಳನ್ನು ಹೊಂದಿವೆ: ಪೀಠಿಕೆ, ಸತ್ಯವೇದ ವಚನದ / ವಚನಗಳ ಉಲ್ಲೇಖ ಮತ್ತು ಪ್ರಶ್ನೆಗಳು. ಕೆಲವು ಪ್ರಶ್ನೆಗಳು ಕಷ್ಟಕರವಾಗಿದ್ದರೂ ಬಹುತೇಕ ಪ್ರಶ್ನೆಗಳು ಸರಳವಾಗಿವೆ. ಪಠ್ಯಕ್ಕೆ ಸಂಬಂಧಿತ ಪ್ರಶ್ನೆಗಳೂ ಸಹ ಇವೆ ಹಾಗೂ ಜೀವನಕ್ಕೆ ಅನ್ವಯಿಸುವ ಪ್ರಶ್ನೆಗಳೂ ಸಹ ಇವೆ. ಕೆಲವು ಅಧ್ಯಯನಗಳು ಟಿಪ್ಪಣೆಗಳನ್ನು ಹೊಂದಿವೆ.

2. ***ಉತ್ತರಗಳು:*** ಪ್ರತಿಯೊಂದು ಅಧ್ಯಯನದಲ್ಲಿರುವ ಪ್ರಶ್ನೆಗಳಿಗೆ ಅನುಗುಣವಾದ ಉತ್ತರಗಳೂ ಸಹ ಕೊಡಲ್ಪಟ್ಟಿವೆ. ಅವುಗಳು ನನ್ನ ಉತ್ತರಗಳಾಗಿವೆ. ಖಂಡಿತವಾಗಲೂ ನೀವು ಆ ಉತ್ತರಗಳನ್ನು ಬದಲಾಯಿಸಬಹುದು, ಅವುಗಳಿಗೆ ಹೆಚ್ಚಿನ ಅಂಶಗಳನ್ನು ಸೇರಿಸಬಹುದು ಮತ್ತು ನನ್ನ ಉತ್ತರಗಳಿಗೆ ನೀವು ಸವಾಲು ಹಾಕಬಹುದು ಅಥವಾ ಅದನ್ನು ಪ್ರಶ್ನಿಸಬಹುದು. ಉತ್ತರಗಳು ಪ್ರಾಥಮಿಕವಾಗಿ ಸಹಾಯಕರವಾಗಿರಲೆಂದು ಹಾಕಿದ್ದರೂ ಸಹ ವಿದ್ಯಾರ್ಥಿಗಳು ಅದನ್ನು ಪರಾಮರ್ಶೆಗಾಗಿ ಬಳಸಬಹುದು. ಬಹುತೇಕ ಉತ್ತರಗಳ ಭಾಗಗಳು "ಪರ್ಯಾಲೋಚನೆ" ಎಂಬ ಭಾಗದೊಂದಿಗೆ ಕೊನೆಗೊಳ್ಳುತ್ತದೆ. ಅವುಗಳ ಉದ್ದೇಶ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಸಾರಾಂಶವನ್ನು ಕೊಡುವುದರೊಂದಿಗೆ ಸವಾಲನ್ನು ಒಡ್ಡುವುದಾಗಿದೆ. ಪ್ರತಿಯೊಂದು ಉತ್ತರಗಳ ಭಾಗಗಳು "ಶಿಕ್ಷಕರಿಗಾಗಿ" ಎಂಬ ಭಾಗದೊಂದಿಗೆ ಪ್ರಾರಂಭವಾಗುತ್ತದೆ. ಒಂದು ನಿರ್ದಿಷ್ಟವಾದ ಅಧ್ಯಯನಕ್ಕಾಗಿ ಹೇಗೆ ಯೋಜನೆ ಮಾಡಿಕೊಳ್ಳಬೇಕು ಮತ್ತು ಅದನ್ನು ಹೇಗೆ ಬಳಸಬೇಕು ಎಂಬುದರ ಕುರಿತು ಶಿಕ್ಷಕರಿಗೆ ಅಲ್ಲಿ ಸಲಹೆಗಳನ್ನು ಸೂಚಿಸಲಾಗಿದೆ. ಕೆಲವೊಂದು ಕಷ್ಟಕರವಾದ ಅಂಶಗಳನ್ನು ಸವಿಸ್ತಾರವಾಗಿ ವಿವರಿಸಲಾಗಿದೆ.

**ಯೋಜನೆ**

ಈ ಪಠ್ಯಪುಸ್ತಕವನ್ನು ನೀವು ಒಂದು ವಾರದ ಕೋರ್ಸಿಗಾಗಿ ಈ ಕೆಳಗಿನಂತೆ ಬಳಸಬಹುದು:

***ಸೋಮವಾರ ಮತ್ತು ಮಂಗಳವಾರ***

ದೇವರ ರಾಜ್ಯವನ್ನು ಅರ್ಥಮಾಡಿಕೊಳ್ಳುವುದು (ಅಧ್ಯಯನಗಳು 1–4)

ಅಂದಾಜು ಸಮಯ: ಕನಿಷ್ಠ 8 ತಾಸು

***ಬುಧವಾರ***

ದೇವರ ರಾಜ್ಯದ ಕುರಿತು ಹೆಚ್ಚಿನ ವಿಷಯಗಳು (ಅಧ್ಯಯನಗಳು 5–10, ಮುಖ್ಯವಾಗಿ 5, 9 ಮತ್ತು 10ನೇ ಅಧ್ಯಯನಗಳಿಗೆ ಹೆಚ್ಚಿನ ಪ್ರಾಧ್ಯಾನತೆಯನ್ನು ಕೊಡಿರಿ)

ಅಂದಾಜು ಸಮಯ: ಸುಮಾರು 7 ತಾಸು. ಹಾಗಾಗಿ ಎರಡು ಅಥವಾ ಮೂರು ಅಧ್ಯಯನಗಳನ್ನು ಕೈಬಿಡಬೇಕಾದ ಪರಿಸ್ಥಿತಿ ಬರಬಹುದು. ಅವುಗಳನ್ನು ನಂತರ ಬೋಧಿಸಬಹುದು ಅಥವಾ ವಿದ್ಯಾರ್ಥಿಗಳಿಗೆ ಮನೆಗೆಲಸಕ್ಕಾಗಿ ಕೊಡಬಹುದು.

***ಗುರುವಾರ ಮತ್ತು ಶುಕ್ರವಾರ***

ದೇವರ ರಾಜ್ಯದಂತೆ ಜೀವಿಸುವುದು (ಅಧ್ಯಯನಗಳು 11–18)

ಅಂದಾಜು ಸಮಯ: 8 ತಾಸು

ಶುಕ್ರವಾರದಂದು ಯಾವುದೇ ಗ್ರಂಥಾಲಯ ಸಮಯ ಅಥವಾ ಮನೆಗೆಲಸ ಇರುವುದಿಲ್ಲ ಎಂಬುದನ್ನು ಮರೆಯದಿರಿ.

## ನಾಲ್ಕು ಹಂತಗಳಲ್ಲಿ ಒಂದು ಅಧ್ಯಯನವನ್ನು ಮುಗಿಸುವುದು ಹೇಗೆ ?

1. ನೀವು ಅಧ್ಯಯನದ ಪೀಠಿಕೆಯನ್ನು ವಿದ್ಯಾರ್ಥಿಗಳಿಗೆ ಬೋಧಿಸಿರಿ.
2. ವಿದ್ಯಾರ್ಥಿಗಳು ಸತ್ಯವೇದದ ಪಠ್ಯವನ್ನು ಓದಿದ ನಂತರ ಮೂರು ಅಥವಾ ನಾಲ್ಕು ಗುಂಪುಗಳಾಗಿ ಆ ಅಧ್ಯಯನದ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವರು.
3. ತರಗತಿಯಲ್ಲಿಯೇ ಅವರ ಉತ್ತರಗಳನ್ನು ಕೇಳಿರಿ. ಸಮಯವನ್ನು ವ್ಯರ್ಥವಾಗಿ ಕಳೆಯಬೇಡಿರಿ. ಸರಳವಾದ ಪ್ರಶ್ನೆಗಳನ್ನು ಕೈಬಿಟ್ಟು ವಿದ್ಯಾರ್ಥಿಗಳಿಗೆ ಕಷ್ಟವೆನಿಸುವ ಅಂಶಗಳ ಮೇಲೆ ಹೆಚ್ಚಿನ ಸಮಯವನ್ನು ಕಳೆಯಿರಿ. ವಿದ್ಯಾರ್ಥಿಗಳ ತಪ್ಪು ತಿಳುವಳಿಕೆಯನ್ನು ಸ್ಪಷ್ಟಪಡಿಸಿರಿ.
4. ತರಗತಿಯಲ್ಲಿ ಪೂರ್ಣಗೊಳ್ಳದ ಕೆಲಸವನ್ನು ವಿದ್ಯಾರ್ಥಿಗಳು ಗ್ರಂಥಾಲಯದ ಸಮಯದಲ್ಲಿ ಮುಗಿಸುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ.

## ವಿದ್ಯಾರ್ಥಿಯ ಐದು ಗುರಿಗಳು

1. ವಿದ್ಯಾರ್ಥಿಗಳು ತಮ್ಮ ಓದುವ ಹಾಗು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯಗಳನ್ನು ಇನ್ನೂ ಹೆಚ್ಚಾಗಿ ಅಭಿವೃದ್ಧಿಪಡಿಸಿಕೊಳ್ಳಬೇಕು.
2. ವಿದ್ಯಾರ್ಥಿಗಳು ತಾವು ಓದಿದ ವಿಷಯದ ಕುರಿತು ಆಲೋಚಿಸುವಂತೆ ಹಾಗೂ ತಾವು ಅರ್ಥ ಮಾಡಿಕೊಂಡಿರುವ ಸಂಗತಿಯಿಂದ ಸಮಾರೋಪಗಳಿಗೆ ತಲುಪುವಂತೆ ಅವರನ್ನು ನಿರಂತರವಾಗಿ ಉತ್ತೇಜಿಸುತ್ತಿರಬೇಕು.
3. ವಿದ್ಯಾರ್ಥಿಗಳು ಹೊಸ ಒಡಂಬಡಿಕೆಯಲ್ಲಿ ಬಿಂಬಿಸಲಾಗಿರುವ ರೀತಿಯಲ್ಲಿಯೇ ದೇವರ ರಾಜ್ಯವನ್ನು ಅರ್ಥ ಮಾಡಿಕೊಳ್ಳಬೇಕು.
4. ವಿದ್ಯಾರ್ಥಿಗಳು ತಾವು ಕಲಿತಂತಹ ಸಂಗತಿಯನ್ನು ತಮ್ಮ ಸ್ವಂತ ದಕ್ಷಿಣ ಭಾರತದ ಸನ್ನಿವೇಶಕ್ಕೆ ಅಳವಡಿಸಿಕೊಳ್ಳಲು ಪ್ರೋತ್ಸಾಹಿಸಲ್ಪಡಬೇಕು.
5. ವಿದ್ಯಾರ್ಥಿಗಳು ಧ್ಯಾನಕ್ಕಾಗಿ, ಸತ್ಯವೇದ ಅಧ್ಯಯನಗಳಿಗಾಗಿ ಮತ್ತು ಪ್ರಸಂಗಗಳಿಗಾಗಿ ಈ ಪಠ್ಯಪುಸ್ತಕದಲ್ಲಿರುವ ಅಂಶಗಳನ್ನು ಬಳಸಿಕೊಳ್ಳುವಂತೆ ಪ್ರೋತ್ಸಾಹಿಸಲ್ಪಡಬೇಕು.

## ಕೆಲವು ಸಾಮಾನ್ಯ ಸಲಹೆಗಳು

1. ಆದಷ್ಟು ಕಡಿಮೆ ಉಪನ್ಯಾಸ ಮಾಡಿರಿ ಮತ್ತು **"ಬೋಧಿಸಿರಿ"**.
2. ನಿಮ್ಮ ಬೋಧನೆಯನ್ನು ಕ್ರಿಯಾತ್ಮಕ ಗುಂಪು ಕೆಲಸಗಳ ಮೇಲೆ ಆಧರಿಸಿರಿ. ಇದನ್ನು ಸಾಧಿಸುವ ನಿಟ್ಟಿನಲ್ಲಿಯೇ ಈ ಪಠ್ಯಪುಸ್ತಕವನ್ನು ರಚಿಸಲಾಗಿದೆ. ಒಂದು ಗುಂಪಿನಲ್ಲಿ ವ್ಯತ್ಯಾಸವಾದ ಸಾಮರ್ಥ್ಯಗಳನ್ನು ಹೊಂದಿರುವ ವಿದ್ಯಾರ್ಥಿಗಳಿರುವುದು ಅತ್ಯಂತ ಸೂಕ್ತವಾಗಿದೆ.
3. ಎಲ್ಲಾ ವಿದ್ಯಾರ್ಥಿಗಳು ತರಗತಿಯಲ್ಲಿ ಕ್ರಿಯಾಶೀಲರಾಗಿರುವುದನ್ನು ಖಚಿತಪಡಿಸಿಕೊಳ್ಳಿರಿ. ಹೆಚ್ಚು ಮಾತನಾಡದ, ನಾಚಿಕೆ ಸ್ವಭಾವದ ಅಥವಾ ಬಲಹೀನ ವಿದ್ಯಾರ್ಥಿಗಳನ್ನು ಉತ್ತೇಜನಪಡಿಸಿರಿ.
4. ಒಬ್ಬ ವಿದ್ಯಾರ್ಥಿಯನ್ನು ಎಂದಿಗೂ ಪರಿಹಾಸ್ಯ ಮಾಡಬೇಡಿರಿ. ಎಲ್ಲಾ ಸಮಯದಲ್ಲೂ ಪ್ರೋತ್ಸಾಹಪಡಿಸಿರಿ.
5. ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳುವಂತೆ ಉತ್ತೇಜಿಸಿರಿ ಮತ್ತು ಎಲ್ಲಾ ಪ್ರಶ್ನೆಗಳಿಗೆ ನಿಮ್ಮಿಂದ ಉತ್ತರಿಸಲಾಗದಿದ್ದರೆ ಮುಜುಗರಪಡಬೇಡಿರಿ. ಯಾವ ಸತ್ಯವೇದ ಬೋಧಕನಿಗೂ ಎಲ್ಲಾ ಉತ್ತರ ತಿಳಿದಿರುವುದಿಲ್ಲ.
6. ವಿದ್ಯಾರ್ಥಿಗಳು ಅರ್ಥವಿಲ್ಲದ ಅಥವಾ ಅಸಂಬದ್ಧ ಪ್ರಶ್ನೆಗಳನ್ನು ಕೇಳಿ ನಿಮ್ಮನ್ನು ದಾರಿತಪ್ಪಿಸದಂತೆ ಎಚ್ಚರವಾಗಿರ್ರಿ. ತರಗತಿಯ ಸಮಯವು ಅತ್ಯಂತ ಅಮೂಲ್ಯವಾದದ್ದು, ಅದನ್ನು ವ್ಯರ್ಥವಾಗಿ ಕಳೆದುಕೊಳ್ಳಬಾರದು.

# ದೇವರ ರಾಜ್ಯವನ್ನು ಅರ್ಥಮಾಡಿಕೊಳ್ಳುವುದು

# ಅಧ್ಯಯನ 1: ಅರಸನಾದ ದೇವರು

## ಪೀಠಿಕೆ

ಈ ಅಧ್ಯಯನವು ದಾವೀದನಿಂದ ಬರೆಯಲ್ಪಟ್ಟ ಕೀರ್ತನೆ 145 ರ ಮೇಲೆ ಆಧಾರಿತವಾಗಿದೆ. ದಾವೀದನು ದೇವರನ್ನು ಸ್ತುತಿಸಲೇಬೇಕಾದ ಸನ್ನಿವೇಶಕ್ಕೆ ನಾವು ಕೆಲವು ಕಾರಣಗಳನ್ನು ನೋಡಲಿದ್ದೇವೆ.

ದಾವೀದನು ಸುಮಾರು ಕ್ರಿ.ಪೂ. 1010 ರಿಂದ ಕ್ರಿ.ಪೂ. 970 ರವರೆಗೆ 40 ವರ್ಷಗಳ ಕಾಲ ಇಸ್ರಾಯೇಲ್ಯರ ಅರಸನಾಗಿ ಆಳಿದನು. ಆದರೆ ದಾವೀದನು ದೇವರ ಹಾಗೂ ಆತನ ರಾಜ್ಯದ ಕುರಿತಾದ ಈ ಸುಂದರವಾದ ಕೀರ್ತನೆಯನ್ನು ನಿಖರವಾಗಿ ಈ 40 ವರ್ಷಗಳ ಯಾವ ಅವಧಿಯಲ್ಲಿ ಬರೆದನೆಂಬುದನ್ನು ತಿಳಿಯಲು ಸಾಧ್ಯವಾಗಿಲ್ಲ.

ಕೀರ್ತನೆ 145 ರಲ್ಲಿ ಇಹಲೋಕದ ಒಬ್ಬ ಶ್ರೇಷ್ಠ ಅರಸನು ಅಂದರೆ ದಾವೀದನು ತನಗಿಂತ ಶ್ರೇಷ್ಠನಾದ ಇನ್ನೊಬ್ಬ ಅರಸನನ್ನು ಅಂದರೆ ಅರಸನಾದ ದೇವರು (ವ. 1), ಇಡೀ ವಿಶ್ವದ ಸೃಷ್ಟಿಕರ್ತನು, ಪಾಲಕನು ಮತ್ತು ಅಧಿಪತಿಯಾದ ದೇವರನ್ನು ಸ್ತುತಿಸುವುದನ್ನು ನಾವು ಕಾಣುತ್ತೇವೆ. ದೇವರ ಶಾಶ್ವತವಾದ ರಾಜ್ಯವು ಪ್ರಭಾವವನ್ನೂ ಘನವನ್ನೂ ಹೊಂದಿದೆ (ವ. 11–13).

ದಾವೀದನು ತಾನು ಏನನ್ನು ಬರೆಯುತ್ತಿದ್ದೇನೆಂದು ತಿಳಿದಿದ್ದನು. ಅದು ಆತನ ಸ್ವ-ಅನುಭವದ ಮೇಲೆ ಆಧಾರಿತವಾಗಿತ್ತು, ಈ ಅಧ್ಯಯನದ ಮೂಲಕ ನಾವು ದಾವೀದನ ಅನುಭವದಿಂದ ಕಲಿತುಕೊಳ್ಳಬಹುದು. ಆತನ ಅನುಭವವನ್ನು ನಾವು ನಮ್ಮ ಸ್ವಂತ ಜೀವನಕ್ಕೆ ಅನ್ವಯಿಸಿಕೊಳ್ಳುವುದಾದರೆ ಜ್ಞಾನವಂತರಾಗುತ್ತೇವೆ.

## ಓದಿರಿ

ಕೀರ್ತನೆ 145

## ಪ್ರಶ್ನೆಗಳು

1. ಈ ಕೀರ್ತನೆಯನ್ನು ರಚಿಸಲು ವಿವಿಧ ಮಾರ್ಗಗಳುಂಟು:
   1) ಮೊದಲನೇಯದು ಯಾರು ಮಾತನಾಡಿದರು ಎಂಬುದರ ಮೇಲೆ ಆಧಾರಗೊಂಡಿದೆ. ನೀವು ಇದನ್ನು ಹೇಗೆ ರಚಿಸುವಿರಿ?
   2) ಎರಡನೇಯದು ವಿಷಯಾಂಶದ ಮೇಲೆ ಆಧಾರಿತವಾಗಿದೆ. ನೀವು ಇದನ್ನು ಹೇಗೆ ರಚಿಸುವಿರಿ?
2. ಈ ಕೀರ್ತನೆಯಲ್ಲಿರುವ ಒಂದು ಕುತುಹಲಕಾರಿಯಾದ ವಿಶಿಷ್ಟತೆಯೇನೆಂದರೆ, ಈ ಕೀರ್ತನೆಯಲ್ಲಿ "ಸ್ತುತಿಸು" ಎಂಬುದನ್ನು ವ್ಯಕ್ತಪಡಿಸಲು ವಿವಿಧ ಪದಗಳನ್ನು (ಸಮಾನಾರ್ಥ ಪದಗಳನ್ನು) ಬಳಸಲಾಗಿದೆ. ನೀವು ಸತ್ಯವೇದವನ್ನು ಓದಿ ಈ ಸಮಾನಾರ್ಥ ಪದಗಳ ಒಂದು ಪಟ್ಟಿಯನ್ನು ಮಾಡಿರಿ. ದಾವೀದನು ಯಾಕೆ ಇಷ್ಟೊಂದು ಸಮಾನಾರ್ಥ ಹೇಳಿಕೆಯನ್ನು ಬಳಸಿದನೆಂದು ನೀವು ಆಲೋಚಿಸುತ್ತೀರಿ?
3. ದಾವೀದನು ಈ ಸ್ತುತಿಯ ಸುದೀರ್ಘತೆಯನ್ನು ವಿವರಿಸಲೂ ಸಹ ವಿವಿಧ ಹೇಳಿಕೆಗಳನ್ನು ಬಳಸಿದನು. ನೀವು ಯಾವ ಹೇಳಿಕೆಗಳನ್ನು ಕಾಣುತ್ತೀರಿ?
4. ಮತ್ತೊಮ್ಮೆ ಈ ವಚನಗಳನ್ನು ನೋಡಿರಿ 1–7:
   1) ದೇವರು ಯಾಕೆ ಸ್ತುತಿಸಲ್ಪಡಬೇಕೆಂಬುದಕ್ಕೆ ಕಾರಣಗಳ (ಅಥವಾ ಆತನ ಗುಣಗಳ) ಒಂದು ಪಟ್ಟಿಯನ್ನು ಮಾಡಿರಿ.
   2) ನಿಮ್ಮ ಸ್ವಂತ ಪದಗಳಲ್ಲಿ ಅದರ ಅರ್ಥವನ್ನು ವಿವರಿಸಿರಿ.
   3) ನಿಮ್ಮ ಸ್ವಂತ ಜೀವನದಲ್ಲಿ ಮತ್ತು ಪರಿಸ್ಥಿತಿಗಳಲ್ಲಿ ಅವುಗಳು ಹೇಗೆ ವ್ಯಕ್ತವಾಗಿವೆ ಎಂಬುದಕ್ಕೆ ಉದಾಹರಣೆಗಳನ್ನು ಕೊಡಿರಿ.

5. ಹಿಂದಿನ ಸಂತತಿಗಳ ಸ್ತುತಿಯು ದಾವೀದನು ದೇವರಿಗೆ ಮೂರು ವ್ಯತ್ಯಾಸವಾದ ರೀತಿಯಲ್ಲಿ ಪ್ರತಿಕ್ರಿಯಿಸುವಂತೆ ಪ್ರೇರೇಪಿಸಿದವು (ವ 5–7, 21). ಹೇಗೆ?

6. ಮತ್ತೊಮ್ಮೆ ಈ ವಚನಗಳನ್ನು ನೋಡಿರಿ 8–13:

   1) ಅರಸನಾದ ದೇವರ ಮತ್ತು ಆತನ ರಾಜ್ಯದ ಗುಣಲಕ್ಷಣದ ಕುರಿತು ನಾವು ಏನನ್ನು ಕಲಿಯುತ್ತೇವೆ?

   2) ಈ ಗುಣಲಕ್ಷಣಗಳು ನಿಮ್ಮ ಸ್ವಂತ ಜೀವನದಲ್ಲಿ ಮತ್ತು ಪರಿಸ್ಥಿತಿಗಳಲ್ಲಿ ಹೇಗೆ ವ್ಯಕ್ತವಾಗಿವೆ ಎಂಬುದಕ್ಕೆ ಉದಾಹರಣೆಗಳನ್ನು ಕೊಡಿರಿ.

7. ಮತ್ತೊಮ್ಮೆ ಈ ವಚನಗಳನ್ನು ನೋಡಿರಿ 13–20:

   1) ಇಲ್ಲಿ ತಿಳಿಸಲಾಗಿರುವ ಜೀವಿಗಳು ಮತ್ತು ಜನರು ಯಾರು? ಮತ್ತು ದೇವರು ಅವರಿಗಾಗಿ ಏನು ಮಾಡಿದನು? ಎರಡು ಕಾಲಮುಗಳುಳ್ಳ ಒಂದು ಚಾರ್ಟ್‌ನ್ನು ಮಾಡಿರಿ. ಮೊದಲನೇಯ ಕಾಲಮಿನ ಶೀರ್ಷಿಕೆಯು "ಜೀವಿ/ವ್ಯಕ್ತಿ" ಎಂದಾಗಿರಲಿ. ಎರಡನೇಯ ಕಾಲಮ್‌ನ ಶೀರ್ಷಿಕೆಯು "ದೇವರು ಅವರಿಗಾಗಿ ಮಾಡಿದ್ದು" ಎಂದಾಗಿರಲಿ. ಬಹುಶಃ ಹತ್ತು ಸಾಲುಗಳು ಆಗಬಹುದು.

   2) ನಂತರ ನಿಮ್ಮ ಯೋಚನೆಗೆ ಬರುವಷ್ಟು ಅನೇಕ ಕಾರ್ಯರೂಪದ ಉದಾಹರಣೆಗಳನ್ನು ಕೊಡಿರಿ.

8. ದಾವೀದನು ತನ್ನ ಈ ಕೀರ್ತನೆಯನ್ನು ಸಮಾರೋಪಗೊಳಿಸುವಾಗ ದೇವರ ಗುಣಗಳನ್ನು ಮತ್ತು ಕೃತ್ಯಗಳನ್ನು ಹೇಗೆ ಕೊಂಡಾಡುತ್ತಾನೆ (ವ 21)?

9. ದಾವೀದನು ಅರಸನಾದ ದೇವರನ್ನು ಮತ್ತು ಆತನ ರಾಜ್ಯವನ್ನು ಈ ಕೀರ್ತನೆಯಲ್ಲಿ ಹೇಗೆ ವರ್ಣಿಸುತ್ತಾನೆ ಎಂದು ಕೆಲವು ವಾಕ್ಯಗಳಲ್ಲಿ ಸಾರಾಂಶಗೊಳಿಸಿರಿ. ನಿಮ್ಮ ಸ್ವಂತ ವಾಕ್ಯಗಳಲ್ಲಿ ಸಾರಾಂಶಗೊಳಿಸಿರಿ.

10. ನೀವು ಈ ಅಧ್ಯಯನದ ಮೂಲಕ ಕಲಿತಂತಹ ಅತ್ಯಂತ ಮುಖ್ಯ ಪಾಠ ಏನು ಎಂದು ನಿಮಗೆ ಅನಿಸುತ್ತದೆ ಎಂಬುದರ ಕುರಿತು ನಿಮ್ಮ ಗುಂಪುಗಳಲ್ಲಿ ಹಂಚಿಕೊಳ್ಳಿರಿ. ನಿಮಗೆ ಯಾಕೆ ಆ ಪಾಠ ಅಷ್ಟು ಪ್ರಾಮುಖ್ಯವೆನಿಸಿತು ಎಂಬುದನ್ನು ವಿವರಿಸಿರಿ.

11. ಎಲ್ಲರೂ ಹಂಚಿಕೊಂಡ ನಂತರ ನಿಮ್ಮ ನಿಮ್ಮ ಗುಂಪುಗಳಲ್ಲಿ ಒಬ್ಬರು ಇನ್ನೊಬ್ಬರಿಗಾಗಿ ಪ್ರಾರ್ಥಿಸಿರಿ.

## ಹೆಚ್ಚಿನ ಪ್ರಶ್ನೆಗಳು (ಗ್ರಂಥಾಲಯ ಸಮಯಕ್ಕಾಗಿ ಮತ್ತು ಮನೆಗೆಲಸಕ್ಕಾಗಿ)

12. ಪ್ರಶ್ನೆ 5 ಕ್ಕೆ ನೀವು ಕೊಟ್ಟ ಉತ್ತರವನ್ನು ಗಮನಿಸಿರಿ. ನೀವು ಇದೇ ರೀತಿಯಲ್ಲಿ ದೇವರಿಗೆ ಪ್ರತಿಕ್ರಿಯಿಸಿದ ಒಂದು ಅಥವಾ ಎರಡು ಸನ್ನಿವೇಶವನ್ನು ವಿವರಿಸಿರಿ. ಒಂದು ಚಿಕ್ಕ ಸಾಕ್ಷಿಯ ರೂಪದಲ್ಲಿ ಅದನ್ನು ಬರೆಯಿರಿ.

13. ನೀವು ಪ್ರಶ್ನೆ 7 ಕ್ಕೆ ಉತ್ತರಿಸುವಾಗ ರಚಿಸಿದ ಚಾರ್ಟ್ ಅನ್ನು ಗಮನಿಸಿರಿ. ದೇವರು ಅರಸನಾಗಿ ಮಾಡುವ ಕಾರ್ಯಗಳ ಕುರಿತು ನೀವು ಏನನ್ನು ಕಲಿಯುತ್ತೀರಿ? ಆದಷ್ಟು ನಿಮ್ಮ ಸ್ವಂತ ವಾಕ್ಯಗಳಲ್ಲಿ ನಿಮ್ಮ ಸಮಾರೋಪಗಳನ್ನು ಸಾರಾಂಶಗೊಳಿಸಿರಿ.

14. ಒಂದು ವೇಳೆ ಭಾರತವು ದೇವರ ಕಾರ್ಯದೊಂದಿಗೆ ಸಂಪೂರ್ಣವಾಗಿ ಕೈ ಜೋಡಿಸುವುದಾದರೆ ಈ ದೇಶವು ಯಾವ ಮಟ್ಟಕ್ಕೆ ಮುಟ್ಟಬಹುದೆಂದು ಊಹಿಸಿಕೊಳ್ಳಿರಿ. ನಮ್ಮ ದೇಶವು ಯಾವ ಒಂದು ಅಥವಾ ಎರಡು ಕ್ಷೇತ್ರಗಳಲ್ಲಿ ವ್ಯತ್ಯಾಸವಾಗಿ ಕಾಣಬಹುದು ಎಂಬುದನ್ನು ವಿವರಿಸಿರಿ. ನಿಮ್ಮ ಅಂಶಗಳನ್ನು ಬರೆಯಿರಿ.

15. ದೇವರ ಹಾಗೂ ಆತನ ರಾಜ್ಯದ ಗುಣಲಕ್ಷಣಗಳನ್ನು ನಿಮ್ಮ ನಿಮ್ಮ ನೆರೆಹೊರೆಯಲ್ಲಿ ಇನ್ನೂ ಸ್ಪಷ್ಟವಾಗಿ ಕಾಣಿಸುವಂತೆ ನಿಮ್ಮ ಸಭೆಯ ಅನ್ಯೋನ್ಯತೆಯು ತೆಗೆದುಕೊಳ್ಳಬಹುದಾದ ನಿರ್ಧಿಷ್ಟವಾದ ಕ್ರಮಗಳು ಯಾವವು? ನಿಮ್ಮ ಅಂಶಗಳನ್ನು ಬರೆಯಿರಿ.


16. ನೀವು ನಿಮ್ಮ ಕಾಲೇಜಿನಲ್ಲಿ (ನಿಮ್ಮ ಕೆಲಸದ ಸ್ಥಳದಲ್ಲಿ) ಅಥವಾ ನೀವು ವಾಸಿಸುವ ಸ್ಥಳದಲ್ಲಿ ಮುಂದಿನ ಕೆಲವು ತಿಂಗಳುಗಳಲ್ಲಿ ದೇವರ ಕಾರ್ಯವನ್ನು ಬಿಂಬಿಸಲು ಯಾವ ಒಂದು ನಿರ್ಧಿಷ್ಟವಾದ ಕ್ರಮವನ್ನು ತೆಗೆದುಕೊಳ್ಳುವಿರಿ ಎಂಬುವುದನ್ನು ವಿವರಿಸಿರಿ. ಕಾರ್ಯರೂಪಕ್ಕೆ ತರಬಹುದಾದ ಅಂಶಗಳನ್ನು ಮಾತ್ರ ತಿಳಿಸಿರಿ! ನಂತರ ನಿಮ್ಮ ತೀರ್ಮಾನವನ್ನು ಕಾರ್ಯರೂಪಕ್ಕೆ ತರಲು ಸಹಾಯ ಮಾಡಲು ಇಚ್ಛಿಸುವ ಕೆಲವು ಸ್ನೇಹಿತರನ್ನು (ಅಥವಾ ಸಹದ್ಯೋಗಿಗಳನ್ನು) ಕಂಡುಕೊಳ್ಳಿರಿ.

# ಅಧ್ಯಯನ 2: ದೇವರ ರಾಜ್ಯದ ತಪ್ಪಾದ ದೃಷ್ಟಿಕೋನ

## ಪೀಠಿಕೆ

ಯೇಸುವಿನ ಕಾಲದ ಯೆಹೂದ್ಯರು ದೇವರು ತನ್ನ ಮೆಸ್ಸೀಯನನ್ನು ಕಳುಹಿಸುವನೆಂದು ಕಾಯುತ್ತಿದ್ದರು. ಆ ಮೆಸ್ಸೀಯನು ದಾವೀದನ ಸಂತತಿಯ ಮೂಲಕ ಬರುವ ಒಬ್ಬ ಅರಸನಾಗಿರುವನು. ಆ ಮೆಸ್ಸೀಯನು ಈಗಿನ ಕೆಟ್ಟ ಯುಗಕ್ಕೆ ಒಂದು ನಾಟಕೀಯವಾದ ಅಂತ್ಯವನ್ನು ಹಾಕಿ ಈ ಭೂಮಿಯ ಮೇಲೆ ದೇವರ ಅಧಿಪತ್ಯವನ್ನು, ಅಂದರೆ ದೇವರ ರಾಜ್ಯವನ್ನು ಪರಿಚಯಿಸುವನು. ಈ ಕೆಳಗಿನ ಚಿತ್ರಣವು ಅವರ ದೃಷ್ಟಿಕೋನವನ್ನು ವಿವರಿಸುತ್ತದೆ:

**ಯೇಸುವಿನ ಕಾಲದಲ್ಲಿ ಯೆಹೂದ್ಯರಿಗಿದ್ದ ನಿರೀಕ್ಷೆಗಳು**




ಅಡ್ಡವಾದ ಗೆರೆಯು ಕಾಲವನ್ನು ಸೂಚಿಸುತ್ತದೆ, ಭೂತಕಾಲದಿಂದ (ಎಡಗಡೆಯಿಂದ) ಭವಿಷ್ಯದವರೆಗೆ (ಬಲಗಡೆಯವರೆಗೆ). ನೇರವಾದ ಗೆರೆಯು ಅಂತ್ಯದ ಆಗಮನವನ್ನು ಸೂಚಿಸುತ್ತದೆ (ಈ ಘಟನೆಗೆ ಹಳೇ ಒಡಂಬಡಿಕೆಯು "ಯೆಹೋವನ ದಿನ" ಮತ್ತು "ದೇವರ ನ್ಯಾಯತೀರ್ಪಿನ ದಿನ" ಎಂಬ ಹೇಳಿಕೆಗಳನ್ನು ಬಳಸುತ್ತದೆ). ಯೇಸುವಿನ ಕಾಲದಲ್ಲಿ ಯೆಹೂದ್ಯರು ಮೆಸ್ಸೀಯನು "ಈಗಿನ ಕಾಲವನ್ನು ಅಂತ್ಯಗೊಳಿಸಿ" "ಬರಲಿರುವ ಕಾಲವನ್ನು" ಅಂದರೆ ದೇವರ ರಾಜ್ಯವನ್ನು ಪರಿಚಯಿಸುವನು ಎಂದು ನಿರೀಕ್ಷಿಸಿದ್ದರು.

ಯೆಹೂದ್ಯರು ಈಗಿನ ಕಾಲವನ್ನು ಸೈತಾನನ ಕಾಲವೆಂದು ಅಂದರೆ ಸೈತಾನನು ಪ್ರಪಂಚವನ್ನು ಆಳುವ ಇತಿಹಾಸದ ಒಂದು ಕಾಲವೆಂದು ಅರ್ಥಮಾಡಿಕೊಂಡಿದ್ದರು. ಈ ಕಾಲವು ಪಾಪದ, ರೋಗದ ಮತ್ತು ಮರಣದ ಕಾಲವಾಗಿದೆ. ಅದಲ್ಲದೆ ಈ ಕಾಲವು ದೇವರಾತ್ಮನ ಪ್ರಸನ್ನತೆಯು ತನ್ನ ಜನರ ನಡುವೆ ಇಲ್ಲದಿರುವ ಒಂದು ಕಾಲವಾಗಿದೆ.

ಆದರೆ ಮೆಸ್ಸೀಯನು ದೇವರ ರಾಜ್ಯದೊಂದಿಗೆ ಬರುವಾಗ ಸೈತಾನನ ಆಳ್ವಿಕೆಯ ಅಡಿಯಲ್ಲಿರುವ ಈಗಿನ ಕಾಲವು ಅಂತ್ಯಗೊಳ್ಳುತ್ತದೆ. ದೇವರ ಮೆಸ್ಸೀಯನು ಆಳಲಿರುವ ರಾಜ್ಯವು ಸೈತಾನನ ರಾಜ್ಯಕ್ಕೆ ತದ್ವಿರುದ್ಧವಾಗಿದೆ. ಅಲ್ಲಿ ಪಾಪದ ಬದಲಾಗಿ ನೀತಿವಂತಿಕೆ ಇರುವದು. ಅಲ್ಲಿ ರೋಗ ಮತ್ತು ಕಷ್ಟದ ಬದಲಾಗಿ ಪೂರ್ಣತೆ, ಆರೋಗ್ಯ ಮತ್ತು ಶಾಂತಿ (ಈ ಒಂದು ಸ್ಥಿತಿಗೆ ಇಬ್ರಿಯ ಭಾಷೆಯಲ್ಲಿ *ಶಾಲೋಮ್* ಎನ್ನುತ್ತಾರೆ) ಇರುವುದು. ಅಲ್ಲಿ

ಮರಣದ ಬದಲಾಗಿ ದೇಹದ ಪುನರುತ್ಥಾನ ಮತ್ತು ನಿತ್ಯಜೀವ ಇರುವದು. ಅಂತಿಮವಾಗಿ, ಬರಲಿರುವ ಯುಗದ ಈ ರಾಜ್ಯದಲ್ಲಿ (ಅಂದರೆ ದೇವರ ರಾಜ್ಯದಲ್ಲಿ) ದೇವರ ಆತ್ಮನ ಪ್ರಸನ್ನತೆಯು ತನ್ನ ಜನರ ನಡುವೆ ಇರುವುದು.

"ಅಂತ್ಯದ" ಮತ್ತು ದೇವರ ರಾಜ್ಯದ ಕುರಿತಾದ ಈ ಯೆಹೂದ್ಯರ ತಿಳುವಳಿಕೆಯು ಅನೇಕ ಸತ್ಯವನ್ನೊಳಗೊಂಡಿದ್ದರೂ ಅದು ಸಂಪೂರ್ಣವಾಗಿ ಸರಿಯಲ್ಲ. ಹಾಗಾಗಿ ನಾವು ಅದನ್ನು "ದೇವರ ರಾಜ್ಯದ ತಪ್ಪಾದ ದೃಷ್ಟಿಕೋನ" ಎಂದು ಕರೆಯುತ್ತೇವೆ. ಆ ದೃಷ್ಟಿಕೋನವನ್ನು ನಾವು ಹೊಸ ಒಡಂಬಡಿಕೆಯಲ್ಲಿ ಕಾಣುವುದಿಲ್ಲವಾದ್ದರಿಂದ ಅದನ್ನು ತಪ್ಪೆಂದು ಕರೆಯುತ್ತೇವೆ. ನಾವು ಮುಂದಿನ ಅಧ್ಯಯನದಲ್ಲಿ ಯೇಸು ಮತ್ತು ಆತನ ಅಪೊಸ್ತಲರು "ಅಂತ್ಯದ" ಮತ್ತು ದೇವರ ರಾಜ್ಯದ ಕುರಿತು ಹೇಗೆ ಬೋಧಿಸಿದರು ಎಂಬುದನ್ನು ನೋಡಲಿದ್ದೇವೆ. ಆಗ ನಾವು ದೇವರ ರಾಜ್ಯದ ಸರಿಯಾದ ದೃಷ್ಟಿಕೋನವನ್ನು ತಿಳಿದುಕೊಳ್ಳುವೆವು.

ಒಂದು ತಪ್ಪಾದ ದೃಷ್ಟಿಕೋನವನ್ನು ತಿಳಿದುಕೊಳ್ಳಲು ಪ್ರಯತ್ನಿಸುವುದು ಸುಮ್ಮನೆ ಕಾಲಹರಣ ಮಾಡಿದಂತೆ ಎಂದು ನೀವು ಆಲೋಚಿಸಬಹುದು. ನಾವು ಕೇವಲ ಸರಿಯಾದ ದೃಷ್ಟಿಕೋನದ ಮೇಲೆ ಮಾತ್ರ ಸಮಯವನ್ನು ಕಳೆಯುವುದು ಸೂಕ್ತವಲ್ಲವೇ? ಆದರೆ ನಾನು ಹಾಗೆ ಯೋಚಿಸುವುದಿಲ್ಲ. ಅದಕ್ಕೆ ನಾನು ಮೂರು ಕಾರಣಗಳನ್ನು ಕೊಡುತ್ತೇನೆ:

1) ನಾವು ಸರಿಯಾದ ಸಂಗತಿಯನ್ನು ತಪ್ಪಾದ ಸಂಗತಿಗೆ ವಿರುದ್ಧವಾಗಿ ಹೋಲಿಸುವಾಗ ಮಾತ್ರ ಸರಿಯಾದ ಸಂಗತಿಯನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳುತ್ತೇವೆ.

2) ಯೆಹೂದ್ಯರು ಯಾಕೆ ಯೇಸುವಿನಲ್ಲಿ ನಿರಾಶೆಪಟ್ಟರು ಮತ್ತು ಯಾಕೆ ಆತನನ್ನು ತಿರಸ್ಕರಿಸಿದರು ಎಂಬುದರ ಕುರಿತು ಇದರಿಂದ ನಾವು ಉತ್ತಮವಾಗಿ ತಿಳಿದುಕೊಳ್ಳಬಹುದು. ಯೇಸು ಅವರ ನಿರೀಕ್ಷೆಗೆ ತಕ್ಕಂತೆ ಒಬ್ಬ ದೇವರ ಮೆಸ್ಸೀಯನಾಗಿ ಕಾರ್ಯಮಾಡಲಿಲ್ಲ. ಯಾಕೆಂದರೆ ಯೇಸುವು ಪವಿತ್ರ ದೇಶದಿಂದ ರೋಮನ್ನರನ್ನು ಓಡಿಸಿ, ದೇವರ ರಾಜ್ಯವನ್ನು ಸ್ಥಾಪಿಸಿ, ಯೆರೂಸಲೇಮನ್ನು ಅದರ ರಾಜಧಾನಿಯಾಗಿ ಮಾಡಿ ಮತ್ತು ತನ್ನನ್ನು ಅದರ ರಾಜನನ್ನಾಗಿ ಸ್ಥಾಪಿಸಿಕೊಳ್ಳಲಿಲ್ಲ. ಆತನು ಇಹಲೋಕದಲ್ಲಿರುವ ಸೈತಾನನ ಆಳ್ವಿಕೆಯನ್ನು ಮತ್ತು ರೋಗವನ್ನೂ ಮರಣವನ್ನೂ ಪೂರ್ಣವಾಗಿ ಅಂತ್ಯಗೊಳಿಸಲಿಲ್ಲ. ಹಾಗಾಗಿ ಯೆಹೂದ್ಯರು ಆತನಲ್ಲಿ ನಿರಾಶೆಗೊಂಡರು ಮತ್ತು ಆತನನ್ನು ತಿರಸ್ಕರಿಸಿದರು. ಅವರು "ಅಂತ್ಯದ" ಮತ್ತು ದೇವರ ರಾಜ್ಯದ ಕುರಿತು ಒಂದು ತಪ್ಪಾದ ತಿಳುವಳಿಕೆಯನ್ನು ಹೊಂದಿದ್ದರಿಂದ ಹಾಗೆ ಮಾಡಿದರು.

3) "ಅಂತ್ಯದ" ಮತ್ತು ದೇವರ ರಾಜ್ಯದ ಈ ತಪ್ಪಾದ ತಿಳುವಳಿಕೆಯನ್ನು ಇಂದಿಗೂ ಸಹ ಅನೇಕ ಕ್ರೈಸ್ತ ವಿಶ್ವಾಸಿಗಳಲ್ಲಿ ನಾವು ಕಾಣಬಹುದು. ಹಾಗಾಗಿ ನಾವೂ ಸಹ ಅದೇ ತಪ್ಪಾದ ದೃಷ್ಟಿಕೋನವನ್ನು ಅಂಗೀಕರಿಸಿ ಅದು ಸರಿಯಾಗಿರಬಹುದೆಂದು ಆಲೋಚಿಸುವ ಅಪಾಯದಲ್ಲಿದ್ದೇವೆ. ಹಾಗಾಗಿ ನಾವು ದೇವರ ರಾಜ್ಯದ "ಯೆಹೂದ್ಯ ದೃಷ್ಟಿಕೋನ" ಮತ್ತು "ಕ್ರೈಸ್ತ ದೃಷ್ಟಿಕೋನ"ದ ನಡುವಿನ ವ್ಯತ್ಯಾಸವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು.

## ಪ್ರಶ್ನೆಗಳು

1. ಯೇಸುವಿನ ಕಾಲದಲ್ಲಿ ಯೆಹೂದ್ಯರಿಗಿದ್ದ ನಿರೀಕ್ಷೆಗಳನ್ನು ನಿಮ್ಮ ಗುಂಪಿನಲ್ಲಿರುವ ಇತರರಿಗೆ ಹಂಚಿಕೊಳ್ಳಿರಿ. ನಿಮ್ಮ ಸ್ವಂತ ಮಾತುಗಳಲ್ಲಿ ಮೇಲಿನ ಚಿತ್ರಣವನ್ನು ನೋಡದೆ ಮತ್ತು ನೀವು ಬರೆದಿರುವ ಅಂಶವನ್ನು ನೋಡದೆ ವಿವರಿಸಿರಿ.

2. ಅನೇಕ ವರ್ಷಗಳ ಹಿಂದೆ ನಾನು ಪಾಶ್ಚಾತ್ಯ ದೇಶದಲ್ಲಿರುವ ಒಂದು ಸತ್ಯವೇದ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದೆ. ಅಲ್ಲಿದ್ದ ನನ್ನ ಕೆಲವು ವಿದ್ಯಾರ್ಥಿಗಳು ಬಂದಂತ ಸಭೆಯಲ್ಲಿ ಅವರ ಸಭಾಪಾಲಕರು ಅವರಿಗೆ ಹೀಗೆ ಬೋಧನೆ ಮಾಡಿದ್ದರು:

   *ಯೇಸುವು ಶಿಲುಬೆಯ ಮರಣವನ್ನು ಹೊಂದಿ, ಸತ್ತು ಪುನರುತ್ಥಾನ ಹೊಂದಿ ಮೂರನೆ ದಿನದಲ್ಲಿ ಎದ್ದಾಗ, ಈಗಿನ ಕಾಲವು ಅಂತ್ಯವಾಗಿ ದೇವರ ರಾಜ್ಯವು ಬಲವಾಗಿ ಬಂದಿತು. ಹಾಗಾಗಿ ವಿಶ್ವಾಸಿಗಳಾದ ನಾವು ಸೈತಾನನ ಕಾಲವು ಅಂತ್ಯವಾಯಿತು ಎಂದು ಅರ್ಥಮಾಡಿಕೊಳ್ಳಬೇಕು ಆತನು ಯೇಸುವಿನಿಂದ ಸೋಲಿಸಲ್ಪಟ್ಟಿದ್ದಾನೆ. ಈಗ ಯೇಸು ಸತ್ತವರೊಳಗಿಂದ ಎದ್ದು ಪವಿತ್ರಾತ್ಮನು ದೇವಜನರ ಮೇಲೆ ಸುರಿಸಲ್ಪಟ್ಟಿರುವುದರಿಂದ ದೇವರ ಕಾಲವು ಬಂದಿದೆ. ಅದರ ಪರಿಣಾಮವಾಗಿ ಪಾಪಕ್ಕೆ ನಮ್ಮ ಜೀವಿತದ ಮೇಲೆ ಯಾವ ಅಧಿಕಾರವಿಲ್ಲ ಮತ್ತು ಒಬ್ಬ ನಿಜವಾದ ವಿಶ್ವಾಸಿಯ ಜೀವನದಲ್ಲಿ ರೋಗ ಮತ್ತು ಖಾಯಿಲೆಗೆ ಯಾವ ಸಂಬಂಧವಿಲ್ಲ. ಬದಲಾಗಿ ದೇವಜನರಾದ ನಾವು ಯೇಸುವಿನ ಹೆಸರಿನಲ್ಲಿ ಸಂಪೂರ್ಣ ಸ್ವಸ್ಥತೆಯನ್ನು ಘೋಷಿಸಿಕೊಳ್ಳಬೇಕು.*

   1) ನೀವು ಎಂದಾದರೂ ಈ ರೀತಿಯಾದ ಬೋಧನೆಯನ್ನು ಕೇಳಿದ್ದೀರೋ? ನಿಮ್ಮ ಅನುಭವವನ್ನು ಹಂಚಿಕೊಳ್ಳಿರಿ.

2) ಈ ರೀತಿಯಾದ ಬೋಧನೆಯಲ್ಲಿ ಯಾವ ಸಮಸ್ಯೆಗಳಿವೆ? ಚರ್ಚಿಸಿರಿ ಮತ್ತು ನಿಮ್ಮ ಸಮಾರೋಪಗಳನ್ನು ಕೆಲವೇ ಅಂಶಗಳಲ್ಲಿ ಸಾರಾಂಶಗೊಳಿಸಿರಿ.

3. ದೇವರಾಜರವರು ಕರ್ನಾಟಕದಲ್ಲಿ ಒಬ್ಬ ಸುವಾರ್ತಿಕನಾಗಿ ಪ್ರಾಮಾಣಿಕವಾದ ಕೆಲಸವನ್ನು ಮಾಡುತ್ತಿದ್ದಾರೆ. ಅವರು ಹಳ್ಳಿಗಳಲ್ಲಿ ಜನರನ್ನು ಸಂಧಿಸುವಾಗ ಅವರಿಗೆ ಆಗ್ಗಾಗ್ಗೆ ಈ ರೀತಿಯಾಗಿ ಹೇಳುತ್ತಾರೆ:

*ನೀವು ಯೇಸುವನ್ನು ನಿಮ್ಮ ಸ್ವಂತ ರಕ್ಷಕನನ್ನಾಗಿ ಮಾಡಿಕೊಂಡರೆ ನಿಮಗಿರುವ ಎಲ್ಲಾ ಸಮಸ್ಯೆಗಳು ಪರಿಹಾರವಾಗುತ್ತವೆ. ನಿಮಗೆ ಇನ್ನು ಮೇಲೆ ಯಾವ ಚಿಂತೆಗಳು ಇರುವುದಿಲ್ಲ. ನಿಮಗೆ ಇರುವ ಎಲ್ಲಾ ಖಾಯಿಲೆಗಳು ವಾಸಿಯಾಗುತ್ತವೆ. ನಿಮ್ಮ ಮಕ್ಕಳು ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳನ್ನು ಗಳಿಸುತ್ತಾರೆ. ದೇವರು ನಿಮ್ಮ ಹಣಕಾಸನ್ನು ಆಶೀರ್ವದಿಸುತ್ತಾನೆ.*

1) ನೀವು ಇದುವರೆಗೂ ಯೇಸುವಿನ ಮೇಲೆ ನಂಬಿಕೆ ಇಡದ ಜನರಿಗೆ ಸುವಾರ್ತೆಯನ್ನು ಸಾರುವಾಗ ಇದೇರೀತಿಯಾದ ಮಾತಗಳನ್ನು ಹೇಳೀದ್ದಿರೋ? ನಿಮ್ಮ ಸಾಕ್ಷಿಗಳನ್ನು ಹಂಚಿಕೊಳ್ಳಿರಿ.

3) ಈ ರೀತಿಯಾಗಿ ಹೇಳುವುದರಲ್ಲಿ ಯಾವ ಸಮಸ್ಯೆಗಳಿವೆ? ಚರ್ಚಿಸಿರಿ ಮತ್ತು ನಿಮ್ಮ ಸಮಾರೋಪಗಳನ್ನು ಕೆಲವೇ ಅಂಶಗಳಲ್ಲಿ ಸಾರಾಂಶಗೊಳಿಸಿರಿ.

4. ಸೀತಾ ಬೆಂಗಳೂರಿನಲ್ಲಿ ವಾಸಿಸುವ ಒಬ್ಬ ಯೌವ್ವನಸ್ಥ ಹುಡುಗಿ. ಆಕೆಗೆ ಉನ್ನತ ಪದವಿಯನ್ನು ಮಾಡಬೇಕೆಂಬ ಆಸೆ, ಆದರೆ ಅದಕ್ಕೂ ಮೊದಲು ಪಿ.ಯು.ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು. ಆಕೆಯು ಇತರರಂತೆ ಜಾಣೆಯಲ್ಲದಿದ್ದರೂ ನಿಶ್ಚಯವಾಗಲೂ ಒಬ್ಬ ಪ್ರಾಮಾಣಿಕ ವಿದ್ಯಾರ್ಥಿನಿಯಾಗಿದ್ದಾಳೆ. ಆಕೆಯು ತನ್ನ ಪರೀಕ್ಷೆಗಾಗಿ ಶ್ರಮಪಟ್ಟು ಓದುತ್ತಾಳೆ. ಅದಲ್ಲದೆ ಆಕೆಯು ಒಬ್ಬ ಒಳ್ಳೆಯ ವಿಶ್ವಾಸಿಯಾಗಿದ್ದು ತನ್ನ ವಿದ್ಯಾಭ್ಯಾಸಕ್ಕಾಗಿ ಹಾಗೂ ತನ್ನ ಪರೀಕ್ಷೆಗಾಗಿ ಯಥಾರ್ಥವಾಗಿ ದೇವರಲ್ಲಿ ಪ್ರಾರ್ಥಿಸುತ್ತಾಳೆ. ಆಕೆಯು ತನ್ನ ಪರೀಕ್ಷೆಯನ್ನು ಬರೆಯುತ್ತಾಳೆ, ಆದರೆ ಫಲಿತಾಂಶ ಹೊರಬಂದಾಗ ಆಕೆಯು ತೇರ್ಗಡೆಯಾಗಿರುವುದಿಲ್ಲ.

ಇಂತಹ ಸೋಲನ್ನು ಅನುಭವಿಸಿದಾಗ ಸೀತಾಳಿಗೆ ಹೇಗನ್ನಿಸಿರಬಹುದು ಎಂದು ನೀವು ಯೋಚಿಸುತ್ತೀರಿ? ಆಕೆಯು ತನ್ನ ಸೋಲಿಗೆ ಯಾವ ರೀತಿ ಪ್ರತಿಕ್ರಿಯಿಸಿರಬಹುದು? ನೀವು ಆಕೆಯ ಪ್ರಾಣ ಸ್ನೇಹಿತನಾಗಿ / ಸ್ನೇಹಿತಳಾಗಿ ಇಂತಹ ಸನ್ನಿವೇಶದಲ್ಲಿ ಯಾವ ಸಮಾಲೋಚನೆಯನ್ನು ಕೊಡುವಿರಿ.

5. ರಾಧಮ್ಮ ಮಧ್ಯಕರ್ನಾಟಕದ ಒಂದು ಪಟ್ಟಣದಲ್ಲಿರುವ ಪೆಂತಕೋಸ್ತ ಸಭೆಯ ಸೆಲ್ ಗ್ರೂಪ್ ನಾಯಕಿಯಾಗಿದ್ದಾರೆ. ಅವರು ತಮ್ಮ ಸಭೆಯ ಒಬ್ಬ ನಂಬಿಗಸ್ತ ಸದಸ್ಯರಾಗಿದ್ದಾರೆ. ಅವರ ಯಥಾರ್ಥವಾದ ನಂಬಿಕೆ ಮತ್ತು ಮಾದರಿಯಾದ ಕ್ರೈಸ್ತೀಯ ಜೀವನವನ್ನು ಕಂಡು ಜನರೆಲ್ಲಾ ಆಕೆಯನ್ನು ಪ್ರೀತಿಸುತ್ತಾರೆ ಮತ್ತು ಗೌರವಿಸುತ್ತಾರೆ. ಆದರೆ ಒಂದು ದಿನ ಅವರು ಆರೋಗ್ಯ ತಪಾಸಣೆಗೆ ಹೋದಾಗ ಅವರಿಗೆ ಕ್ಯಾನ್ಸರ್ ಇದೆ ಎಂದು ಗೊತ್ತಾಗುತ್ತದೆ. ಅವರ ಕುಟುಂಬವು ತಮ್ಮಲ್ಲಿದ್ದ ಹಣವನ್ನೆಲ್ಲಾ ಖರ್ಚುಮಾಡಿ ಅವರಿಗೆ ಶಸ್ತ್ರಚಿಕಿತ್ಸೆಯನ್ನು ಮತ್ತು ಕೀಮೋ ಥೆರಪಿಯನ್ನು ಮಾಡಿಸುತ್ತಾರೆ. ಅವರ ಸಭೆಯವರು, ವಿಶೇಷವಾಗಿ ಅವರ ಸೆಲ್ ಗ್ರೂಪ್ ಸದಸ್ಯರು ಅವರ ಸೌಖ್ಯಕ್ಕಾಗಿ ಅನೇಕ ಗಂಟೆಗಳ ಕಾಲ ಉಪವಾಸ ಪ್ರಾರ್ಥನೆಯನ್ನು ಮಾಡುತ್ತಾರೆ. ಆದರೆ ಯಾವ ಚಿಕಿತ್ಸೆಯೂ ಫಲಕಾರಿಯಾಗದೆ ಕ್ಯಾನ್ಸರ್ ರೋಗವು ದೇಹದಲ್ಲೆಲ್ಲಾ ಹರಡಿಕೊಂಡು ಒಂದು ವರ್ಷದೊಳಗೆ ನಿಧನರಾಗುತ್ತಾರೆ.

ರಾಧಮ್ಮನವರು ಸೌಖ್ಯರಾಗದೆ ಕ್ಯಾನ್ಸರ್‌ಗೆ ಬಲಿಯಾಗಿದ್ದಾರೆಂಬ ಸುದ್ದಿಯನ್ನು ಕೇಳುವಾಗ ಅವರ ಸೆಲ್ ಗ್ರೂಪ್ ಸದಸ್ಯರಿಗೆ ಹೇಗನ್ನಿಸಿರಬಹುದೆಂದು ನೀವು ಆಲೋಚಿಸುತ್ತೀರಿ? ನೀವು ಅವರಿಗೆ ಹೇಗೆ ಸಮಾಲೋಚನೆ ಕೊಡುವಿರಿ?

6. ಪ್ರಕಾಶ್‌ರವರು ಬೆಂಗಳೂರಲ್ಲಿರುವ ಒಂದು ಆತ್ಮಭರಿತ ಸಭೆಯ ಸಭಾಪಾಲಕರಾಗಿದ್ದಾರೆ. ಅವರು ಒಬ್ಬ ಒಳ್ಳೆಯ ಪ್ರಸಂಗಿಕರಾಗಿದ್ದಾರೆ ಹಾಗೂ ಸಭೆಯು ದಿನೇ ದಿನೇ ಬೆಳೆಯುತ್ತಾ ಹೊಸ ಜನರು ಅವರ ಸಭೆಗೆ ಸೇರಿಕೊಳ್ಳುತ್ತಿದ್ದಾರೆ. ವಿಶ್ವಾಸಿಗಳು ಅವರನ್ನೂ ಮತ್ತು ಅವರ ಸುಂದರವಾದ ಕುಟುಂಬವನ್ನೂ ಪ್ರೀತಿಸುತ್ತಾರೆ. ಅದಲ್ಲದೆ ಅವರು ಸಭಾಪಾಲಕರ ಮೇಲೆ ಅಪಾರವಾದ ಗೌರವ ಮತ್ತು ಭರವಸೆಯನ್ನು ಇಟ್ಟಿದ್ದಾರೆ. ಕೆಲವು ವರ್ಷಗಳ ನಂತರ ಸಭಾಪಾಲಕರು ಸಭೆಗೆ ಬರುತ್ತಿದ್ದ ಒಬ್ಬ ಸ್ತ್ರೀಯೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಂಡಿರುವ ವಿಷಯವು ಬಯಲಾಗುತ್ತದೆ. ವಿಶ್ವಾಸಿಗಳು ಇದನ್ನು ಕೇಳಿದಾಗ ಆಘಾತಕ್ಕೊಳಗಾಗುತ್ತಾರೆ. ಅನೇಕರು ಸಭೆಯನ್ನು ಬಿಟ್ಟು ಹೋಗುತ್ತಾರೆ ಮತ್ತು ಸೇವೆಯು ಬಿದ್ದು ಹೋಗುತ್ತದೆ.


ತಮ್ಮ ಸಭಾಪಾಲಕರಾದ ಪ್ರಕಾಶ್‌ರವರು ಮಾಡಿದ ಸಂಗತಿಯನ್ನು ವಿಶ್ವಾಸಿಗಳು ತಿಳಿದುಕೊಂಡಾಗ ಅವರ ನಂಬಿಕೆಗೆ ಏನಾಗಿರಬಹುದೆಂದು ನೀವು ಆಲೋಚಿಸುತ್ತೀರಿ? ನೀವು ಅವರಿಗೆ ಹೇಗೆ ಸಮಾಲೋಚನೆ ಕೊಡುವಿರಿ?

# ಅಧ್ಯಯನ 3: ದೇವರ ರಾಜ್ಯದ ಒಂದು ಸರಿಯಾದ ದೃಷ್ಟಿಕೋನ

## ಪೀಠಿಕೆ

ಹೊಸ ಒಡಂಬಡಿಕೆಯ ಪಠ್ಯದ ಒಂದು ಸೂಕ್ಷ್ಮವಾದ ವಚನವು ಯೇಸುವಿನ ಕಾಲದಲ್ಲಿನ ಯೆಹೂದ್ಯರು ಹೊಂದಿದ್ದ ದೇವರ ರಾಜ್ಯದ ತಿಳುವಳಿಕೆಯನ್ನು ಯೇಸು ಮತ್ತು ಹೊಸ ಒಡಂಬಡಿಕೆಯ ಪುಸ್ತಕದ ಲೇಖಕರುಗಳು ಸವಮ್ಮತಿಸಿರಲಿಲ್ಲ ಎಂಬುದು ಪ್ರಕಟವಾಗುತ್ತದೆ. ಹಾಗಾಗಿ ನಾವು ಹಿಂದಿನ ಅಧ್ಯಯನದಲ್ಲಿ ಗಮನಿಸಿದ ಚಿತ್ರಣವನ್ನು ಈ ರೀತಿಯಾಗಿ ಬದಲಾಯಿಸಬೇಕಾಗುತ್ತದೆ.

**ಆದಿಕ್ರೈಸ್ತರ ದೃಷ್ಟಿಕೋನ**




ಆದಿಕ್ರೈಸ್ತರ ದೃಷ್ಟಿಕೋನದಲ್ಲಿ ಅಂತ್ಯವು ಎರಡು ಹಂತಗಳಲ್ಲಿ ಬರುತ್ತದೆ. ಅಂತ್ಯದ ಆರಂಭವು ಯೇಸುವಿನೊಂದಿಗೆ ಹಾಗೂ ಪವಿತ್ರಾತ್ಮನ ಸುರಿಸುವಿಕೆಯೊಂದಿಗೆ ಬಂದಿತು. ಅಂತ್ಯದ ಅಂತ್ಯವು ಯೇಸುವಿನ ತಿರುಗಿ ಬರೋಣದೊಂದಿಗೆ, ನ್ಯಾಯತೀರ್ಪಿನ ದಿನದೊಂದಿಗೆ ಮತ್ತು ದೇವರ ನೂತನ ಭೂಮಿ ಮತ್ತು ನೂತನ ಆಕಾಶದೊಂದಿಗೆ ಬರಲಿದೆ.

ಈಗಿನ ಯುಗವು ಸೈತಾನನ ಕಾಲವಾಗಿದೆ. ನಾವು ಹಿಂದಿನ ಅಧ್ಯಯನದಲ್ಲಿ ಕಂಡಂತೆ, ಇದು ಪಾಪದ, ರೋಗದ ಮತ್ತು ಮರಣದ ಯುಗವಾಗಿದೆ. ಈ ಯುಗವು ಪವಿತ್ರಾತ್ಮನ ಪ್ರಸನ್ನತೆಯು ತನ್ನ ಜನರ ನಡುವೆ ಇಲ್ಲದಿರುವ ಯುಗವು ಸಹ ಆಗಿದೆ.

ಯೇಸುವಿನ ಸೇವೆ, ಮರಣ, ಪುನರುತ್ಥಾನ ಮತ್ತು ಮಹಿಮಾಕರಣದೊಂದಿಗೆ ಹಾಗೂ ಪಂಚಶತ್ತಮ ದಿನದಂದು ಆದ ಪವಿತ್ರಾತ್ಮನ ಸುರಿಸಲ್ಪಡುವಿಕೆಯೊಂದಿಗೆ ಈ ಯುಗವು ಮಾರಣಾಂತಿಕ ಹೊಡೆತವನ್ನು ಅನುಭವಿಸಿದರೂ ಸಂಪೂರ್ಣವಾಗಿ ಮರಣಹೊಂದಿಲ್ಲ. ಕೆಳಗಿನ ರೇಖೆಯು ಇದನ್ನು ಸೂಚಿಸುತ್ತದೆ.

ಮೇಲಿನ ರೇಖೆಯು ಯೇಸುವಿನ ಮೊದಲನೆಯ ಬರೋಣದೊಂದಿಗೆ ಅಂತ್ಯದ ಪ್ರಾರಂಭವು ಬಂದಾಗ್ಯೂ ಅದು ಆತನ ಎರಡನೇ ಬರೋಣದವರೆಗೆ ಪೂರ್ಣಗೊಳ್ಳುವುದಿಲ್ಲ ಎಂಬ ಸತ್ಯವನ್ನು ಸೂಚಿಸುತ್ತದೆ. ಆತನ ಎರಡನೇ ಬರೋಣವು ಅಂತ್ಯದ ಅಂತ್ಯವನ್ನು ತರುತ್ತದೆ.

ಈಗಾಗಲೇ ಯೇಸುವಿನ ಕಾಲದಿಂದ ಇಹಲೋಕದಲ್ಲಿರುವ ಬರಲಿರುವ ಯುಗವು ಯೇಸುವಿನ ತಿರುಗಿ ಬರೋಣದೊಂದಿಗೆ, ನ್ಯಾಯತೀರ್ಪಿನ ದಿನದೊಂದಿಗೆ ಮತ್ತು ದೇವರ ನೂತನ ಭೂಮಿ ಮತ್ತು ನೂತನ ಆಕಾಶದೊಂದಿಗೆ ತನ್ನ ಪೂರ್ಣ ಬಲದಿಂದ ಬರಲಿದೆ. ಆಗ ಇನ್ನು ಮುಂದೆ ಪಾಪ ಇರುವುದಿಲ್ಲ, ರೋಗ ಇರುವುದಿಲ್ಲ ಮತ್ತು ಮರಣ ಇರುವುದಿಲ್ಲ. ಆಗ ನೀತಿವಂತಿಕೆಯು, ಶಾಲೋಮ್

ಮತ್ತು ನಿತ್ಯಜೀವ ಇರುವುದು. *ಇಗೋ, ದೇವರ ನಿವಾಸವು ಮನುಷ್ಯರಲ್ಲಿ ಅದೆ; ಆತನು ಅವರೊಡನೆ ವಾಸಮಾಡುವನು* (ಪ್ರಕಟನೆ 21:3).

ಹಾಗಾದರೆ ನಾವು ಈ ಹೊಸ ಒಡಂಬಡಿಕೆಯ ದೃಷ್ಟಿಕೋನದಲ್ಲಿ ದೇವರ ರಾಜ್ಯವನ್ನು ಹೇಗೆ ಅರ್ಥಮಾಡಿಕೊಳ್ಳಬೇಕು? ಈ ಪ್ರಾಮುಖ್ಯವಾದ ಪ್ರಶ್ನೆಯನ್ನು ಉತ್ತರಿಸಲು ಮೂರು ಅಂಶಗಳು ಸಹಾಯಕರವಾಗುತ್ತದೆ.

- ದೇವರ ರಾಜ್ಯವು ಒಂದು ಹೊಸದಾದ ಮತ್ತು ಸ್ಪಷ್ಟವಾದ ರೀತಿಯಲ್ಲಿ ಯೇಸುವಿನೊಂದಿಗೆ (ಸೇವೆ, ಹಿಂಸೆ ಮತ್ತು ಮರಣ, ಪುನರುತ್ಥಾನ ಮತ್ತು ಮಹಿಮಾಕರಣದೊಂದಿಗೆ) ಹಾಗೂ ಪಂಚಶತ್ತಮ ದಿನದಂದು ಆದ ಪವಿತ್ರಾತ್ಮನ ಸುರಿಸಲ್ಪಡುವಿಕೆಯೊಂದಿಗೆ ಬಂದಿತು.

- ಆ ಸಮಯ ಮೊದಲುಗೊಂಡು ಸುವಾರ್ತೆಯು ಎಲ್ಲಾ ಕಡೆಯಲ್ಲೂ ಸಾರಲ್ಪಡುತ್ತಿರುವಾಗ ದೇವರ ರಾಜ್ಯವು ಸ್ಪಷ್ಟವಾದ ರೀತಿಯಲ್ಲಿ ಕಾರ್ಯ ಮಾಡುತ್ತಿದೆ. ಜನರು ಶುಭವಾರ್ತೆಯನ್ನು ಕೇಳುತ್ತಿದ್ದಾರೆ. ಅವರು ತಮ್ಮ ಪಾಪಗಳಿಂದ ರಕ್ಷಣೆ ಹೊಂದುತ್ತಿದ್ದಾರೆ. ಅವರು ಸೈತಾನನ ಶಕ್ತಿಗಳಿಂದ ಬಿಡುಗಡೆ ಹೊಂದುತ್ತಿದ್ದಾರೆ. ಅವರು ತಮ್ಮ ರೋಗಗಳಿಂದ ಸ್ವಸ್ಥತೆಯನ್ನು ಹೊಂದುತ್ತಿದ್ದಾರೆ. ಅವರ ಜೀವಿತಗಳು ಕ್ರಿಸ್ತನ ಸ್ವಾರೂಪ್ಯಕ್ಕೆ ರೂಪಗೊಳ್ಳುತ್ತಿದೆ. ಅವರ ಕೃತ್ಯಗಳು ದೇವರ ರಾಜ್ಯದ ನಿಯಮಗಳನ್ನು ವ್ಯಕ್ತಪಡಿಸುತ್ತಿದೆ.

- ದೇವರ ರಾಜ್ಯವು ಯೇಸುವಿನ ತಿರುಗಿ ಬರೋಣದೊಂದಿಗೆ ಮತ್ತು ದೇವರ ನ್ಯಾಯತೀರ್ಪಿನ ದಿನದೊಂದಿಗೆ ಪೂರ್ಣ ಬಲದಿಂದ ಬರಲಿದೆ. ಆ ದಿನದಂದು ಒಂದು ನೂತನ ಭೂಮಿ ಮತ್ತು ನೂತನ ಆಕಾಶವು ಇರುವುದು.

ಸತ್ಯವೇದ ಶಾಸ್ತ್ರಜ್ಞರುಗಳು ದೇವರ ರಾಜ್ಯದ ***ಈಗ ಬಂದಿದ್ದರೂ ಮುಂದೆ ಬರಲಿರುವ*** ದೃಷ್ಟಿಕೋನದ ಕುರಿತು ಮಾತನಾಡುತ್ತಾರೆ. ಹೀಗೆ ಹೇಳುವುದರ ಮೂಲಕ ಅವರು ಅರ್ಥೈಸುವುದೇನೆಂದರೆ ಒಂದು ಕಡೆಯಲ್ಲಿ ದೇವರ ರಾಜ್ಯವು ಈಗಾಗಲೇ ಯೇಸುವಿನೊಂದಿಗೆ ಬಂದಿದೆ ಮತ್ತು ಇನ್ನೊಂದು ಕಡೆಯಲ್ಲಿ ದೇವರ ರಾಜ್ಯವು ತನ್ನ ಪೂರ್ಣತೆಯೊಂದಿಗೆ ಮುಂದೆ ಬರಲಿದೆ. ಅದು ಯೇಸುವಿನ ಎರಡನೇ ಬರೋಣದಲ್ಲಿ ಮಾತ್ರ ಬರುವುದು.

ಅದರರ್ಥ ನಾವು ಕಾಲಗಳ ನಡುವೆ ಜೀವಿಸುತ್ತಿದ್ದೇವೆ.

- ಯೇಸುವಿನ ಮೊದಲ ಮತ್ತು ಎರಡನೇ ಬರೋಣದ ಕಾಲಗಳ ನಡುವಿನ ಸಮಯ
- ಅಂತ್ಯದ ಆರಂಭದ ಮತ್ತು ಅಂತ್ಯದ ಅಂತ್ಯದ ಕಾಲಗಳ ನಡುವಿನ ಸಮಯ
- ದೇವರ ರಾಜ್ಯದ ಬರೋಣದ ಮತ್ತು ದೇವರ ರಾಜ್ಯದ ನೆರವೇರುವಿಕೆಯ ಕಾಲಗಳ ನಡುವಿನ ಸಮಯ

ಹಾಗಾಗಿ ಇಹಲೋಕದಲ್ಲಿ ಜೀವಿಸುತ್ತಿರುವ ವಿಶ್ವಾಸಿಗಳಾದ ನಾವು ನಾಲ್ಕು ಗೋಡೆಗಳ ಮಧ್ಯೆ ನಿಂತುಕೊಂಡಿದ್ದೇವೆ: ನಮ್ಮ ಹಿಂದೆ ಯೇಸುವಿನ ಮೊದಲ ಬರೋಣವಿದೆ; ನಮ್ಮ ಮುಂದೆ ಯೇಸುವಿನ ಎರಡನೇ ಬರೋಣವಿದೆ: ನಮ್ಮ ಕೆಳಗೆ ಈಗಿನ ಯುಗದ ಶಕ್ತಿಗಳಿವೆ; ನಮ್ಮ ಮೇಲೆ ಬರಲಿರುವ ಯುಗದ ಶಕ್ತಿಗಳಿವೆ.

***ಈಗ ಬಂದಿದ್ದರೂ ಮುಂದೆ ಬರಲಿರುವ*** ದೃಷ್ಟಿಕೋನವು ಹೊಸ ಒಡಂಬಡಿಕೆಯ ಪುಸ್ತಕದ ಲೇಖಕರಿಗೆ ಹಾಗೂ ಆದಿ ಸಭೆಗೆ ನಿರ್ಣಾಯಕವಾಗಿತ್ತು. ಅವರು ತಮ್ಮ ಕ್ರೈಸ್ತಿಯ ಅಸ್ಥಿತ್ವವನ್ನು ಕಾಲಗಳ ನಡುವಿನಲ್ಲಿ ಜೀವಿಸುತ್ತಿರುವ ಜೀವನವೆಂದು ಅರ್ಥಮಾಡಿಕೊಂಡಿದ್ದರು. ಭವಿಷ್ಯವು ಈಗಾಗಲೇ ಪ್ರಾರಂಭವಾಗಿತ್ತು. ಆದರೂ ಅದು ಇನ್ನೂ ಸಂಪೂರ್ಣವಾಗಿ ನೆರವೇರಿರಲಿಲ್ಲ. ಈ ಅಂತಿಮ ಗತಿ ಶಾಸ್ತ್ರದ ಚೌಕಟ್ಟು ಅವರ ಕುರಿತು ಎಲ್ಲವನ್ನು ನಿರ್ದೇಷಿಸಿತು: ಅವರು ಹೇಗೆ ಜೀವಿಸಬೇಕು, ಹೇಗೆ ಯೋಚಿಸಬೇಕು, ಇಹಲೋಕದಲ್ಲಿ ತಮ್ಮ ಸ್ಥಾನವನ್ನು ಹೇಗೆ ಅರ್ಥಮಾಡಿಕೊಳ್ಳಬೇಕು. ಅವರಿಗೆ ಇಹಲೋಕವು ಗತಿಸಿಹೋಗುತ್ತಿತ್ತು, ಅಂದರೆ ಅದು ನಾಶನದ ಮಾರ್ಗದಲ್ಲಿತ್ತು.

## ಪ್ರಶ್ನೆಗಳು

1. ಎರಡು ಚಿತ್ರಗಳನ್ನು ಹೋಲಿಸಿರಿ (ಅಧ್ಯಯನ 2 ರಲ್ಲಿರುವ ಚಿತ್ರ ಮತ್ತು ಈ ಅಧ್ಯಯನದಲ್ಲಿರುವ ಚಿತ್ರ). ಇವುಗಳ ನಡುವೆ ಇರುವ ಮುಖ್ಯ ವ್ಯತ್ಯಾಸವೇನು?
2. ಈಗಿನ ಯುಗವನ್ನು ಸೂಚಿಸುವ ಗೆರೆಯು ಏನಾಗುತ್ತದೆ ಎಂಬುದನ್ನು ವಿವರಿಸಿರಿ.
3. ಈಗಿನ ಯುಗವನ್ನು ಸೂಚಿಸಲು ಬಳಸಲಾಗಿರುವ ಇನ್ನೂ ಎರಡು ಪದಗಳು ಯಾವವು?
4. ಬರಲಿರುವ ಯುಗವನ್ನು ಸೂಚಿಸುವ ರೇಖೆಯು ಏನಾಗುತ್ತದೆ ಎಂಬುದನ್ನು ವಿವರಿಸಿರಿ.
5. ಎಡಗಡೆಯಲ್ಲಿರುವ ನೇರವಾದ ಗೆರೆಯು ಅಂತ್ಯದ ಪ್ರಾರಂಭವನ್ನು ಸೂಚಿಸುತ್ತದೆ. ಇದನ್ನು ಸೂಚಿಸಲು ಬಳಸಬಹುದಾದ ಇತರೇ ಎರಡು ಪದಗಳಾವವು?
6. ಬಲಗಡೆಯಲ್ಲಿರುವ ನೇರವಾದ ಗೆರೆಯು ಅಂತ್ಯದ ನೇರವೇರುವಿಕೆಯನ್ನು ಸೂಚಿಸುತ್ತದೆ. ಇದನ್ನು ಸೂಚಿಸಲು ಬಳಸಬಹುದಾದ ಇತರೆ ಎರಡು ಪದಗಳಾವವು?
7. ವಿಶ್ವಾಸಿಗಳಾದ ನಾವು ನಾಲ್ಕು ಗೋಡೆಗಳ ಮಧ್ಯೆ ನಿಂತುಕೊಂಡಿದ್ದೇವೆ ಎಂಬ ಹೇಳಿಕೆಯನ್ನು ವಿವರಿಸಿರಿ. ಮೇಲಿನ ಚಿತ್ರವನ್ನು ಅಥವಾ ಪಠ್ಯವನ್ನು ನೋಡದೆ ನಿಮ್ಮ ಸ್ವಂತ ಮಾತುಗಳಲ್ಲಿ ವಿವರಿಸಿರಿ.
8. ನಾವು ಅಂತ್ಯ ದಿನಗಳಲ್ಲಿ ಜೀವಿಸುತ್ತಿದ್ದೇವೆ ಎಂಬ ಹೇಳಿಕೆಯನ್ನು ನೀವು ಹೇಗೆ ವಿವರಿಸುವಿರಿ.
9. ದೇವರ ರಾಜ್ಯದ ಕುರಿತಾದ ಈಗ ಬಂದಿದೆ ಮತ್ತು ಮುಂದೆಯೂ ಬರಲಿದೆ ಎಂಬ ಹೇಳಿಕೆಯನ್ನು ವಿವರಿಸಿರಿ.
10. ರೋಮ 5:1 ಮತ್ತು ಗಲಾತ್ಯ 5:5 ರಲ್ಲಿ ಪೌಲನು ನೀತಿ ಎಂದು ಬಳಸುವ ಪದದಲ್ಲಿ ಈಗ ಬಂದಿದೆ ಮತ್ತು ಮುಂದೆಯೂ ಬರಲಿದೆ ಎಂಬ ದೃಷ್ಟಿಕೋನವನ್ನು ನಾವು ಹೇಗೆ ಕಾಣುತ್ತೇವೆ?
11. ಎಫೆಸ 1:7 ಮತ್ತು 4:40 ರಲ್ಲಿ ಪೌಲನು ವಿಮೋಚನೆ (ಬಿಡುಗಡೆ – JV) ಎಂದು ಬಳಸುವ ಪದದಲ್ಲಿ ಈಗ ಬಂದಿದೆ ಮತ್ತು ಮುಂದೆಯೂ ಬರಲಿದೆ ಎಂಬ ದೃಷ್ಟಿಕೋನವನ್ನು ನಾವು ಹೇಗೆ ಕಾಣುತ್ತೇವೆ?
12. ರೋಮ 8:15 ಮತ್ತು 8:23 ರಲ್ಲಿ ಪೌಲನು ಪುತ್ರರ ಆತ್ಮನನ್ನು ಮತ್ತು ಪುತ್ರರ ಪದವಿಯನ್ನು (ಮಗನ ಭಾವ ಮತ್ತು ಪುತ್ರರ ಪದವಿ – JV) ಎಂದು ಬಳಸುವ ಪದದಲ್ಲಿ ಈಗ ಬಂದಿದೆ ಮತ್ತು ಮುಂದೆಯೂ ಬರಲಿದೆ ಎಂಬ ದೃಷ್ಟಿಕೋನವನ್ನು ನಾವು ಹೇಗೆ ಕಾಣುತ್ತೇವೆ?
13. ಈಗ ಬಂದಿದೆ ಮತ್ತು ಮುಂದೆಯೂ ಬರಲಿದೆ ಎಂಬ ದೃಷ್ಟಿಕೋನದಲ್ಲಿ, ಯೇಸು ಮತ್ತಾಯ 12:22–28 ರಲ್ಲಿ "ದೇವರ ರಾಜ್ಯ" ಎಂಬ ಪದವನ್ನು ಬಳಸುತ್ತಾನೆ ಮತ್ತು ಮತ್ತಾಯ 25:31–34 ರಲ್ಲಿ "ರಾಜ್ಯ" ಎಂಬ ಪದವನ್ನು ಬಳಸುತ್ತಾನೆ. ಇವೆರಡನ್ನೂ ಒಂದಕ್ಕೊಂದು ಹೋಲಿಸಿರಿ.
14. ಮತ್ತಾಯ 13:24–33 ರಲ್ಲಿ ನಾವು ದೇವರ ರಾಜ್ಯದ ಕುರಿತು ಮೂರು ಸಾಮ್ಯಗಳನ್ನು ಕಾಣುತ್ತೇವೆ (ಅಲ್ಲಿ ಮತ್ತಾಯನು ಪರಲೋಕ ರಾಜ್ಯ ಎಂಬ ಸಮಾನಾರ್ಥ ಪದವನ್ನು ಬಳಸುತ್ತಾನೆ). ಚಿತ್ರಣದ ಯಾವ ಭಾಗದಲ್ಲಿ ನಾವು ಈ ಸಾಮ್ಯಗಳನ್ನು ಸೇರಿಸಬಹುದು (ಮೇಲಿರುವ ಪರಿಚಯವನ್ನು ನೋಡಿರಿ)? ಯಾಕೆ ಎಂಬುದನ್ನು ವಿವರಿಸಿರಿ.
15. ನಿಮ್ಮ ಸೆಲ್‌ಗ್ರೂಪ್‌ಗಾಗಿ (ಅಥವಾ ಯೌವ್ವನಸ್ಥರ ಗುಂಪಿಗಾಗಿ) ಈ ಅಧ್ಯಯನದ ಮೇಲೆ ಆಧಾರಿತವಾದ ಒಂದು ಸರಳವಾದ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಮೇಲಿರುವ ಪ್ರಶ್ನೆ 9–12 ರಲ್ಲಿರುವ ಸತ್ಯವೇದ ವಚನಗಳಿಂದ ಪ್ರಾರಂಭಿಸುವುದು ಸೂಕ್ತ. ಪೌಲನು ಬಳಸಿರುವ ನೀತಿ, ವಿಮೋಚನೆ ಮತ್ತು ಪುತ್ರತ್ವ ಎಂಬ ಮೂರು ಪರಿಕಲ್ಪನೆಗಳಲ್ಲಿ ವ್ಯಕ್ತವಾಗಿರುವ ಈಗ ಬಂದಿದೆ – ಮತ್ತು ಮುಂದೆಯು ಬರಲಿದೆ ಎಂಬ ದೃಷ್ಟಿಕೋನವನ್ನು ಗ್ರಹಿಸಲು ಅವರಿಗೆ ಮಾರ್ಗದರ್ಶಿಸಿರಿ. ನಂತರ ಈ ದ್ವಿ–ದೃಷ್ಟಿಕೋನವನ್ನು ವಿವರಿಸಲು ಒಂದು ಸರಳವಾದ ಚಿತ್ರವನ್ನು ಬಿಡಿಸಿರಿ. ಆಗ ನೀವು ಮೇಲಿರುವ ಪರಿಚಯದಲ್ಲಿರುವ ಚಿತ್ರದಲ್ಲಿ ಅಧ್ಯಯನ ಎರಡರ ಚಿತ್ರಣದಿಂದ ತೆಗೆದುಕೊಳ್ಳಲಾದ ಈಗಿರುವ ಮತ್ತು ಬರಲಿರುವ ಯುಗದ ಮಾಹಿತಿಯನ್ನು ಕಾಣಬಹುದು.

# ಅಧ್ಯಯನ 4: ಅರಸನಾದ ಯೇಸು

## ಪೀಠಿಕೆ

ಹೊಸ ಒಡಂಬಡಿಕೆಯು ರಾಜ್ಯಕ್ಕೆ ಸಂಬಂಧಿಸಿದ ಅನೇಕ ಹೇಳಿಕೆಗಳನ್ನು ಬಳಸುತ್ತದೆ, ಉದಾಹರಣೆಗೆ:

- ಪರಲೋಕ ರಾಜ್ಯ (ಮತ್ತಾಯನ ಸುವಾರ್ತೆಯಲ್ಲಿ ಇದನ್ನು ಹೆಚ್ಚಾಗಿ ಕಾಣಬಹುದು, ಇತರೇ ಸುವಾರ್ತೆಗಳಲ್ಲಿ ದೇವರ ರಾಜ್ಯ ಎಂಬುದಾಗಿದೆ)
- ತಂದೆಯ ರಾಜ್ಯ: ಮತ್ತಾಯ 13:43; ಲೂಕ 11:2, ಮತ್ತಾಯ 26:29
- ಬೆಳಕಿನ ರಾಜ್ಯ: ಕೊಲೊಸ್ಸೆ 1:12
- ನಮ್ಮ ಕರ್ತನ ರಾಜ್ಯ: 2 ತಿಮೋಥಿ 4:18; 2 ಪೇತ್ರ 1:11
- ಕ್ರಿಸ್ತನ ರಾಜ್ಯ: ಎಫೆಸ 5:5; 2 ತಿಮೋಥಿ 4:1
- ಮಗನ ರಾಜ್ಯ: ಮತ್ತಾಯ 16:28; ಕೊಲೊಸ್ಸೆ 1:13
- ನನ್ನ ರಾಜ್ಯ: ಯೋಹಾನ 18:36

ಈ ವ್ಯತ್ಯಾಸಗಳು ಹೊಸ ಒಡಂಬಡಿಕೆಯಲ್ಲಿ ವಿವಿಧ ರಾಜ್ಯಗಳಿವೆ ಮತ್ತು ದೇವರ ರಾಜ್ಯವು ಕ್ರಿಸ್ತನ/ಮಗನ ರಾಜ್ಯಕ್ಕಿಂತ ವ್ಯತ್ಯಾಸವಾಗಿರಬಹುದು ಎಂದು ಘೋಷಿಸಿಕೊಳ್ಳುವಂತೆ ಕೆಲವರನ್ನು ನಡೆಸಿವೆ. ಈ ದೃಷ್ಟಿಕೋನವು ನಂಬಲಿಕ್ಕೆ ಕಷ್ಟವಾಗಿದೆ. ಉದಾಹರಣೆಗೆ ಪ್ರಕಟನೆ 11:15 ರಲ್ಲಿ ದೇವರ ರಾಜ್ಯದ ಕುರಿತು ಉಲ್ಲೇಖಿಸುತ್ತಾ "ನಮ್ಮ ದೇವರ ಮತ್ತು ಆತನ ಅಭಿಷಿಕ್ತನ ರಾಜ್ಯ" ಎಂದು ಬರೆದಿರುವ ಹೇಳಿಕೆಯನ್ನು ಕಾಣುತ್ತೇವೆ. ದೇವರು ಹಾಗೂ ಕುರಿಮರಿಯು ದೇವರ ರಾಜ್ಯದ ಸಿಂಹಾಸನದ ಮೇಲೆ ಕುಳಿತುಕೊಂಡಿದ್ದಾರೆ. ಆ ರಾಜ್ಯವು ಆತನ ಮಗನ (ಅಥವಾ ಕ್ರಿಸ್ತನ / ದೇವರ ಕುರಿಮರಿಯ) ರಾಜ್ಯವು ಸಹ ಆಗಿದೆ.

ಹೊಸ ಒಡಂಬಡಿಕೆಯು ದೇವರ ರಾಜ್ಯದ ಕುರಿತು ಚಿತ್ರಿಸುವ ದೊಡ್ಡ ಚಿತ್ರಣವು ಆ ರೀತಿಯ ರಾಜ್ಯವು ಒಂದೇ ಇದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಪರಿಣಾಮವಾಗಿ ರಾಜ್ಯದ ಕುರಿತು ವ್ಯಕ್ತವಾಗಿರುವ ಈ ಎಲ್ಲಾ ಹೇಳಿಕೆಗಳು ಒಂದೆ ನೈಜತೆಯ ಮತ್ತು ಸ್ವಾಸ್ತ್ಯವನ್ನು ಉಲ್ಲೇಖಿಸುತ್ತವೆ. ಅವುಗಳು ಸಮಾನಾರ್ಥ ಪದಗಳಾಗಿವೆ.

ಇಂಗ್ಲಿಷ್ ಭಾಷೆಯಲ್ಲಿ ಕಿಂಗ್‌ಡಮ್ ಎನ್ನುವ ಪದವು ಅನೇಕ ಬಾರಿ ದೇಶ ಅಥವಾ ರಾಷ್ಟ್ರ ಎಂಬ ಅರ್ಥವನ್ನು ಕೊಡುತ್ತದೆ. ದ ಯುನೈಟೆಡ್ ಕಿಂಗ್‌ಡಮ್ ಎಂಬುದು ಯುರೋಪಿನಲ್ಲಿರುವ ಒಂದು ದೇಶವಾಗಿದೆ ಮತ್ತು ಡೆನ್ಮಾರ್ಕ್ ದೇಶವನ್ನು ಒಬ್ಬ ರಾಜನು ಆಳುತ್ತಿರುವುದರಿಂದ ಅದು ಒಂದು ರಾಜ್ಯವಾಗಿದೆ. ಹಾಗಾಗಿ ರಾಜ್ಯ ಎಂಬ ಪದವು ಒಬ್ಬ ರಾಜನು ಆಳುವ ಭೌಗೋಳಿಕ ಪ್ರದೇಶವನ್ನು ಸೂಚಿಸುತ್ತದೆ. ಆದರೆ ಹೊಸ ಒಡಂಬಡಿಕೆಯ ಗ್ರೀಕ್ ಪದವಾದ ಬಸಿಲಿಯಾ ಎಂಬುದು ಒಂದು ದೇಶವನ್ನು ಸೂಚಿಸದೆ ಆಳು ಅಥವಾ ಆಳ್ವಿಕೆ ಎಂಬ ಅರ್ಥವನ್ನು ಸೂಚಿಸುತ್ತದೆ. ಹಾಗಾಗಿ ದೇವರ ರಾಜ್ಯ ಮತ್ತು ಕ್ರಿಸ್ತನ ರಾಜ್ಯ ಎಂಬ ಹೇಳಿಕೆಗಳು ಯಾವುದೇ ಭೌಗೋಳಿಕ ಪ್ರದೇಶವನ್ನು ಸೂಚಿಸದೇ ದೇವರ / ಕ್ರಿಸ್ತನ ಅಧಿಕಾರವನ್ನು ಸೂಚಿಸುತ್ತದೆ.

ನಾವು ಹಿಂದಿನ ಅಧ್ಯಯನದಲ್ಲಿ ಕಂಡಂತೆ ಹೊಸ ಒಡಂಬಡಿಕೆಯು ದೇವರ ರಾಜ್ಯವನ್ನು ಎರಡು ಕಾಲಗಳಿಂದ ನೋಡುತ್ತದೆ. ಈಗ ಬಂದಿರುವುದು ಮತ್ತು ಮುಂದೆ ಬರಲಿರುವುದು ಈ ಎರಡು ಕಾಲಗಳ ಕುರಿತು ಒತ್ತಿ ಹೇಳದ ಕೆಲವು ಹೇಳಿಕೆಗಳು ಸಹ ಇವೆ. ಹಾಗಾಗಿ ದೇವರ ರಾಜ್ಯವನ್ನು ಹೊಸ ಒಡಂಬಡಿಕೆಯಲ್ಲಿ ಹೀಗೆ ಉಪಯೋಗಿಸಲಾಗಿದೆ.

1) ಯಾವುದೇ ಕಾಲಕ್ಕೆ ಸಂಬಂಧಿಸದೆ: ದೇವರ ರಾಜ್ಯವು ಇತಿಹಾಸದಲ್ಲಿ ಯಾವುದೇ ಸಮಯದಲ್ಲಾಗಲಿ ಮತ್ತು ಯಾವುದೇ ಸ್ಥಳದಲ್ಲಾಗಲಿ ಇರುವ ದೇವರ ಆಳ್ವಿಕೆ / ಅಧಿಕಾರ / ಅಧಿಪತ್ಯ / ರಾಜತ್ವ ಆಗಿದೆ.
2) ಈಗ ಬಂದಿರುವ ಕಾಲಕ್ಕೆ ಸಂಬಂಧಿಸಿದಂತೆ: ಈಗ ನಾವು ದೇವರ ರಾಜ್ಯವನ್ನು ಪ್ರವೇಶಿಸಬಹುದು ಮತ್ತು ಆತನ ಆಳ್ವಿಕೆ / ಅಧಿಕಾರ / ಅಧಿಪತ್ಯ / ರಾಜತ್ವದ ಆಶೀರ್ವಾದಗಳನ್ನು ಅನುಭವಿಸಬಹುದು.

3) ಮುಂದೆ ಬರಲಿರುವ ಕಾಲಕ್ಕೆ ಸಂಬಂಧಿಸಿದಂತೆ: ದೇವರ ರಾಜ್ಯವು ನಮ್ಮ ಕರ್ತನಾದ ಯೇಸು ಕ್ರಿಸ್ತನ ತಿರುಗಿ ಬರೋಣದೊಂದಿಗೆ ಮಾತ್ರ ಬರಲಿರುವ ಒಂದು ಭವಿಷ್ಯದ ರಾಜ್ಯವಾಗಿದೆ. ಆಗ ನಾವು ದೇವರ ರಾಜ್ಯವನ್ನು ಪ್ರವೇಶಿಸಿ ಆತನ ಆಳ್ವಿಕೆ / ಅಧಿಕಾರ / ಅಧಿಪತ್ಯ / ರಾಜತ್ವದ ಆಶೀರ್ವಾದಗಳನ್ನು ಅನುಭವಿಸಬಹುದು.

ಈ ಅಧ್ಯಯನವು ಯೇಸುವನ್ನು ರಾಜನಂತೆ ಕಾಣುವುದರ ಮೇಲೆ ಕೇಂದ್ರಿಕೃತವಾಗಿದೆ. ಮೊದಲು ಯೋಹಾನನು ಬರೆದ ಸುವಾರ್ತೆಯಲ್ಲಿರುವ ಮೂರು ವಾಕ್ಯಭಾಗಗಳನ್ನು ನೋಡಲಿದ್ದೇವೆ. ಅಲ್ಲಿ ಜನರಿಂದ ಅಥವಾ ತನ್ನಿಂದಲೇ ಯೇಸು ಅರಸನೆಂದು ಕರೆಯಲ್ಪಟ್ಟಿದ್ದಾನೆ. ನಂತರ ಕೊಲೊಸ್ಸೆಯ ಸಭೆಗೆ ಪೌಲನು ಬರೆದ ಪತ್ರಿಕೆಯ ಮೊದಲನೇಯ ಅಧ್ಯಾಯದಲ್ಲಿರುವ ಕ್ರಿಸ್ತನ ಕುರಿತಾದ ಪೌಲನ ವರ್ಣನೆಯನ್ನು ನೋಡಲಿದ್ದೇವೆ. ಅಂತಿಮವಾಗಿ ಅರಸನಾದ ಯೇಸುವಿನ ಕುರಿತು ಪ್ರಕಟಣೆ ಪುಸ್ತಕದಲ್ಲಿ ಕೆಲವು ವಚನಗಳನ್ನು ನೋಡಲಿದ್ದೇವೆ.

## ಓದಿರಿ

ಯೋಹಾನ 6:14–15; 12:12–16; 18:28–40

ಕೊಲೊಸ್ಸೆ 1:10–20

ಪ್ರಕಟನೆ 7:17; 17:14; 19:16; 22:1,3

## ಪ್ರಶ್ನೆಗಳು

1. ದೇವರ ರಾಜ್ಯ ಮತ್ತು ಕ್ರಿಸ್ತನ ರಾಜ್ಯ ಎಂಬ ಹೇಳಿಕೆಗಳು ಒಂದಕ್ಕೊಂದು ಹೇಗೆ ಸಂಬಂಧಿಸಿವೆ?
2. ರಾಜ್ಯ ಎಂಬ ಪದವು ಯಾಕೆ ಸುಲಭವಾಗಿ ತಪ್ಪು ತಿಳಿಯಲ್ಪಡುತ್ತದೆ ಎಂಬುದನ್ನು ವಿವರಿಸಿರಿ. ಹೊಸ ಒಡಂಬಡಿಕೆಯ ಹಿನ್ನಲೆಯಲ್ಲಿ ಅದು ಸಾಮಾನ್ಯವಾಗಿ ಏನನ್ನು ಅರ್ಥೈಸುತ್ತದೆ?
3. ಹೊಸ ಒಡಂಬಡಿಕೆಯಲ್ಲಿ ಬಳಸಲಾಗಿರುವ ದೇವರ ರಾಜ್ಯ ಎಂಬ ಹೇಳಿಕೆಯ ಮೂರು ವಿಷಯಾಂಶಗಳು ಯಾವವು?
4. ಯೋಹಾನ 6:14–15 ರಲ್ಲಿ ಯೇಸುವಿನ ಗುರುತಿನ ಕುರಿತು ಜನರಿಗಿದ್ದ ತಿಳುವಳಿಕೆಯ ಬಗ್ಗೆ ನಾವು ಏನನ್ನು ಕಲಿತುಕೊಳ್ಳುತ್ತೇವೆ? ಯೇಸು ಇದಕ್ಕೆ ಹೇಗೆ ಪ್ರತಿಕ್ರಿಯಿಸಿದನು?
5. ಯೇಸು ಅರಸನಂತೆ ಪ್ರವೇಶಿಸಿದ ಸಮಯದಲ್ಲಿ ಜನರ ಗುಂಪಿನಲ್ಲಿ ಉಂಟಾದ ನಿರೀಕ್ಷೆಗಳು ಏನಾಗಿದ್ದಿರಬಹುದು (ಯೋಹಾನ 12:12–16)? ವಿವರಿಸಿರಿ.
6. ಯೇಸು ಅರಸನಂತೆ ಪ್ರವೇಶಿಸಿದ ಸಮಯದಲ್ಲಿ ಯೇಸುವಿನ ಕುರಿತು ಶಿಷ್ಯರಿಗಿದ್ದ ತಿಳುವಳಿಕೆಯು ಏನಾಗಿದ್ದಿರಬಹುದು (ಯೋಹಾನ 12:12–16)? ವಿವರಿಸಿರಿ.
7. ಯೇಸು ಪಿಲಾತನ ಮುಂದೆ ನ್ಯಾಯವಿಚಾರಿಸಲ್ಪಟ್ಟಾಗ ಯೇಸುವಿನ ಕುರಿತು ಜನರಿಗಿದ್ದ ತಿಳುವಳಿಕೆಯು ಏನಾಗಿದ್ದಿರಬಹುದು (ಯೋಹಾನ 18:38–40)? ವಿವರಿಸಿರಿ.
8. ಪಿಲಾತನು ನಡೆಸಿದ ವಿಚಾರಣೆಯಲ್ಲಿ ನಾವು ಯೇಸುವಿನ ರಾಜ್ಯತ್ವದ ಕುರಿತು ಏನನ್ನು ತಿಳಿದುಕೊಳ್ಳುತ್ತೇವೆ (ಯೋಹಾನ 18:28–37)?
9. ಪ್ರಶ್ನೆ 4–8 ನ್ನು ಗಮನಿಸುತ್ತಾ ಯೇಸು ಮತ್ತು ಆತನ ರಾಜ್ಯತ್ವದ ಕುರಿತು ನೀವು ಏನನ್ನು ಕಲಿತುಕೊಂಡಿರಿ ಎಂಬುದನ್ನು ಸಾರಾಂಶಗೊಳಿಸಿರಿ. ನಿಮ್ಮ ಸ್ವಂತ ವಾಕ್ಯವನ್ನು ಬಳಸಿರಿ.
10. ನಾವು ಕೊಲೊಸ್ಸೆ 1:10–14 ರಲ್ಲಿ ದೇವ ಭಕ್ತರ ಬಾಧ್ಯತೆಯ ಹಾಗೂ ದೇವರ ರಾಜ್ಯದ ಕುರಿತು ಏನನ್ನು ಕಲಿಯುತ್ತೇವೆ?

11. ಕೊಲೊಸ್ಸೆ 1:15–17 ರಲ್ಲಿ ಸೃಷ್ಟಿಯಲ್ಲಿನ ಕ್ರಿಸ್ತನ ಸರ್ವಶ್ರೇಷ್ಠತೆಯ ಅಥವಾ ರಾಜತ್ವದ ಕುರಿತು ಪೌಲನು ಬರೆಯುತ್ತಾನೆ. ಆತನ ಆರು ಅಂಶಗಳು ಯಾವವು?

12. ಕೊಲೊಸ್ಸೆ 1:18–20 ರಲ್ಲಿ ವಿಮೋಚನೆಯಲ್ಲಿನ ಕ್ರಿಸ್ತನ ಸರ್ವಶ್ರೇಷ್ಠತೆಯ ಅಥವಾ ರಾಜತ್ವದ ಕುರಿತು ಪೌಲನು ಬರೆಯುತ್ತಾನೆ. ಆತನ ಆರು ಅಂಶಗಳು ಯಾವವು?

13. ಕೊಲೊಸ್ಸೆ 1:15–18 ರಲ್ಲಿ ತಿಳಿಸಲ್ಪಟ್ಟಿರುವ ಕ್ರಿಸ್ತನ ಸರ್ವಶ್ರೇಷ್ಠತೆಯ ಅಥವಾ ರಾಜತ್ವದ ಕುರಿತಾದ ಪೌಲನ ದೈವಶಾಸ್ತ್ರವನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಸಾರಾಂಶಗೊಳಿಸಿರಿ.

14. ನಾವು ಪ್ರಕಟನೆ 7:17 ರಲ್ಲಿ ಯೇಸುವಿನ ಕುರಿತು ಏನನ್ನು ಕಲಿಯುತ್ತೇವೆ?

15. ನಾವು ಪ್ರಕಟನೆ 17:14 ರಲ್ಲಿ ಯೇಸುವಿನ ಕುರಿತು ಏನನ್ನು ಕಲಿಯುತ್ತೇವೆ?

16. ನಾವು ಪ್ರಕಟನೆ 19:16 ರಲ್ಲಿ ಯೇಸುವಿನ ಕುರಿತು ಏನನ್ನು ಕಲಿಯುತ್ತೇವೆ? (1 ತಿಮೋಥಿ 6:15 ರೊಂದಿಗೆ ಹೋಲಿಸಿರಿ)

17. ನಾವು ಪ್ರಕಟನೆ 22:1,3 ರಲ್ಲಿ ಯೇಸುವಿನ ಕುರಿತು ಏನನ್ನು ಕಲಿಯುತ್ತೇವೆ?

18. ಹಾಗಾದರೆ ನಾವು ಪ್ರಕಟನೆ ಪುಸ್ತಕದಲ್ಲಿರುವ ವಚನಗಳಿಂದ ಯೇಸುವಿನ ರಾಜ್ಯತ್ವದ ಕುರಿತು ಮತ್ತು ಆತನ ರಾಜ್ಯದ ಕುರಿತು ಏನನ್ನು ಅರ್ಥ ಮಾಡಿಕೊಳ್ಳಬಹುದು.

# ದೇವರ ರಾಜ್ಯದ ಕುರಿತು ಹೆಚ್ಚಿನ ವಿಷಯಗಳು

# ಅಧ್ಯಯನ 5: ದೇವರ ರಾಜ್ಯವು ಆಗಮಿಸುತ್ತದೆ

## ಪೀಠಿಕೆ

ಸಮನಾಂತರ ಸುವಾರ್ತೆಗಳ ಲೇಖಕರುಗಳು (ಮತ್ತಾಯ, ಮಾರ್ಕ ಮತ್ತು ಲೂಕ) ತಮ್ಮ ಪುಸ್ತಕಗಳ ಮೊದಲ ಅಧ್ಯಾಯಗಳಲ್ಲಿ ಯೇಸು ತನ್ನ ಸೇವೆಯ ಮೂಲಕ ದೇವರ ರಾಜ್ಯವನ್ನು ಹೇಗೆ ಪರಿಚಯಿಸಿದನು ಎಂಬುದನ್ನು ತಮ್ಮ ಓದುಗರಿಗೆ ತೋರಿಸುತ್ತಾರೆ. ಯೇಸು ತನ್ನ ಮಾತುಗಳ (ತನ್ನ ಘೋಷಣೆ ಹಾಗೂ ಬೋಧನೆಯ) ಮತ್ತು ಕೃತ್ಯಗಳ (ರೋಗಿಗಳನ್ನು ಸ್ವಸ್ಥಮಾಡುವುದರ ಹಾಗೂ ದೆವ್ವಪೀಡಿತರನ್ನು ಬಿಡುಗಡೆಗೊಳಿಸುವುದರ) ಮೂಲಕ ಅದನ್ನು ಮಾಡಿದನು.

ಈ ಅಧ್ಯಯನದಲ್ಲಿ ಯೇಸುವಿನೊಂದಿಗೆ ಆಗಮಿಸಿದ ದೇವರ ರಾಜ್ಯದ ಕುರಿತು ಕೆಲವು ಮುಖ್ಯ ಪಠ್ಯಗಳನ್ನು ನಾವು ನೋಡೋಣ. ನಾವು ಆತನ ಸೇವೆಯ ಅಧಿಕಾರವನ್ನು ಮತ್ತು ಅದಕ್ಕೆ ಜನರು ತೋರಿದ ಪ್ರತಿಕ್ರಿಯೆಯನ್ನೂ ಪರಿಗಣಿಸೋಣ.

ಹೇಗಿದ್ದರೂ "ಇಹಲೋಕದಲ್ಲಿ ದೇವರ ರಾಜ್ಯವನ್ನು ಜೀವಿಸುವುದರ" ಕುರಿತಾದ ಯೇಸುವಿನ ಬೋಧನೆಯನ್ನು ಈ ಪುಸ್ತಕದ ಮೂರನೆಯ ಭಾಗದಲ್ಲಿ ನೋಡಿಕೊಳ್ಳೋಣ. ಈ ಮೂರನೆಯ ಭಾಗವು ಪರ್ವತ ಪ್ರಸಂಗದ ಕುರಿತಾಗಿದೆ.

## ಓದಿರಿ

ಮತ್ತಾಯ 4:23–25

ಮಾರ್ಕ 1:14–15, 35–39, 44–45

ಲೂಕ 4:31–41; 5:1–14

## ಪ್ರಶ್ನೆಗಳು

1. ನಾವು ಮತ್ತಾಯ 4:23–25 ಮತ್ತು ಮಾರ್ಕ 1:14–15 ರಲ್ಲಿ ದೇವರ ರಾಜ್ಯದ ಕುರಿತು ಏನನ್ನು ಕಲಿಯುತ್ತೇವೆ?
2. ನಾವು ಲೂಕ 5:1–11 ರಲ್ಲಿ ದೇವರ ರಾಜ್ಯದ ಅಧಿಕಾರವು (4:32 ರೊಂದಿಗೆ ಹೋಲಿಸಿರಿ) ಹೇಗೆ ಕಾರ್ಯಾತ್ಮಕವಾಗಿರುವುದನ್ನು ಕಾಣುತ್ತೇವೆ?
3. ಯೇಸುವನ್ನು ಹಿಂಬಾಲಿಸಬೇಕೆಂದು ಆದಿಶಿಷ್ಯರು ಮಾಡಿದ ತೀರ್ಮಾನವನ್ನು ಅವರ ಸಂಬಂಧಿಕರು ಹಾಗೂ ಉದ್ಯೋಗಿಗಳು ಕೇಳಿಸಿಕೊಂಡಾಗ ಅವರಿಗೆ ಹೇಗನ್ನಿಸಿರಬಹುದು?
4. ಯೇಸುವಿನೊಂದಿಗೆ ದೇವರ ರಾಜ್ಯವು ಆಗಮಿಸಿದಾಗ ಕಪೆರ್ನೌಮಿನ ಜನರಿಗೆ ಯಾವ ಪ್ರಯೋಜನವಾಯಿತು (ಲೂಕ 4:31–41)?
5. ಯೇಸುವಿನಲ್ಲಿ ದೇವರ ರಾಜ್ಯದ ಆಗಮನವು ಕಪೆರ್ನೌಮಿನಲ್ಲಿದ್ದ ಯಾವ ಬಲಿಷ್ಠ ಶಕ್ತಿಗಳಿಗೆ ಸವಾಲನ್ನು ಒಡ್ಡಿತು?
6. ಮಾರ್ಕ 1:35–39 ರಲ್ಲಿರುವ ಯೇಸುವಿನ ಕ್ರಿಯೆಗಳು ದೇವರ ರಾಜ್ಯದ ಮೌಲ್ಯ ಮತ್ತು ಪ್ರಾಧಾನ್ಯತೆಗಳ ಕುರಿತು ಏನನ್ನು ಬಹಿರಂಗಪಡಿಸುತ್ತವೆ?
7. ಪ್ರಾಚೀನ ಇಸ್ರಾಯೇಲಿನಲ್ಲಿ ಕುಷ್ಠರೋಗಿಗಳು ಅನುಭವಿಸಿದ ಕರುಣಾಜನಕ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಯಾಜಕಕಾಂಡ 13:44–46 ನಮಗೆ ಸಹಾಯಮಾಡುತ್ತವೆ. ಕುಷ್ಠರೋಗಿಗಳು ಧಾರ್ಮಿಕವಾಗಿ ಅಶುದ್ಧರಾಗಿದ್ದರು, ದೈಹಿಕರಾಗಿ ಅಸ್ವಸ್ಥರಾಗಿದ್ದರು, ಸಾಮಾಜಿಕವಾಗಿ ಬಹಿಷ್ಕರಿಸಲ್ಪಟ್ಟಿದ್ದರು ಮತ್ತು ಮಾನಸಿಕವಾಗಿ ತಮ್ಮ ಸಮುದಾಯದಿಂದ ಬೇರ್ಪಟ್ಟಿದ್ದರು. ಯೇಸು ಲೂಕ 5:12–14 ರಲ್ಲಿರುವ ಕುಷ್ಠರೋಗಿಗೆ ಹೇಗೆ ಪೂರ್ಣವಾದ ಮರುಸಂಧಾನವನ್ನು ಅನುಗ್ರಹಿಸುತ್ತಾನೆ?

8. ನಡೆದ ಸಂಗತಿಯನ್ನು ಯಾರಿಗೂ ಹೇಳಬಾರದೆಂದು ಯೇಸು ಕುಷ್ಠರೋಗಿಗೆ ಹೇಳಿದ್ದನ್ನು ಮಾರ್ಕ 1:44 ರಲ್ಲಿ ನೋಡುತ್ತೇವೆ. ಆದರೆ ಆ ಕುಷ್ಠರೋಗಿಯು ಯೇಸುವಿನ ಅಧಿಕಾರಕ್ಕೆ ಅವಿಧೇಯನಾದನು (ಮಾರ್ಕ 1:45). ಆ ಕುಷ್ಠರೋಗಿಯ ಅವಿಧೇಯತೆಯಿಂದ ಯಾರ ಮೇಲೆ ನಕಾರಾತ್ಮಕವಾದ ಪರಿಣಾಮ ಬೀರಿತು?

9. ಇಂದು ದಕ್ಷಿಣ ಭಾರತದಲ್ಲಿ ಯಾವ ಬಲಿಷ್ಠವಾದ ಶಕ್ತಿಗಳು ಹೆಚ್ಚಾಗಿ ದೇವರ ರಾಜ್ಯದ ಪ್ರಭಾವಕ್ಕೆ ವಿರುದ್ಧವಾಗಿ ನಿಂತಿವೆ (ಪ್ರಶ್ನೆ 5 ಕ್ಕೆ ನೀವು ಕೊಟ್ಟಿರುವ ಉತ್ತರವನ್ನು ಗಮನಿಸಿರಿ)? ವಿವರಿಸಿರಿ.

10. ನಿಮ್ಮ ಸ್ವಂತ ಸಮಾಜದಲ್ಲಿರುವ ಈ ರೀತಿಯ ಬಲಿಷ್ಠ ಶಕ್ತಿಗಳನ್ನು ಎದುರಿಸಲು ದೇವರು ನಿಮ್ಮ ಸಭೆಯನ್ನು ಹೇಗೆ ಬಳಸಬಹುದು?

11. ನಿಮ್ಮ ಜೀವಿತವನ್ನು ಯೇಸುವಿನ ರಾಜ್ಯದ ಮೌಲ್ಯ ಮತ್ತು ಪ್ರಾಧಾನ್ಯತೆಗಳಿಗೆ ಅನುಸಾರವಾಗಿ ಕ್ರಮಪಡಿಸಿಕೊಳ್ಳುವಂತೆ ನಿಮ್ಮನ್ನು ಬಲಗೊಳಿಸಿದ ಪ್ರಾರ್ಥನೆಯ ಹಾಗೂ ವೈಯಕ್ತಿಕ ಧ್ಯಾನದ ಸಮಯವನ್ನು ವಿವರಿಸಿರಿ. ನಿಮ್ಮ ಉತ್ತರವನ್ನು ಮೇಲಿನ 6 ನೇ ಪ್ರಶ್ನೆಯೊಂದಿಗೆ ಹೋಲಿಸಿರಿ.

12. ಇಂದು ದಕ್ಷಿಣ ಭಾರತದಲ್ಲಿರುವ ನಾವು ಈ ಕೆಳಗಿನ ವಚನಗಳಲ್ಲಿ ದಾಖಲಾಗಿರುವ ಯೇಸುವಿನ ಮಾತುಗಳನ್ನು ಪಾಲಿಸದಿದ್ದರೆ ಏನಾಗಬಹುದು:

    1) ಮಹಾ ಆಜ್ಞೆ (ಮತ್ತಾಯ 22:37–39)

    2) ಮಹಾ ಆದೇಶ (ಮತ್ತಾಯ 28:16–20) ಮತ್ತು

    3) ಬಂಗಾರದ ನಿಯಮ (ಮತ್ತಾಯ 7:12)

    ಯಾವ ಜನರ ಗುಂಪು ದೇವರ ಆಶೀರ್ವಾದಗಳನ್ನು ಕಳಕೊಳ್ಳಬಹುದು?

13. ನೀವು ಈ ಅಧ್ಯಯನದಲ್ಲಿ ಯೇಸುವಿನ ಸೇವೆಯ ಪ್ರಾರಂಭದ ಅವಧಿಯಲ್ಲಿದ್ದ ದೇವರ ರಾಜ್ಯದ ಕುರಿತು ಕಲಿತಿರುವ ಸಂಗತಿಯನ್ನು ಸಾರಾಂಶಗೊಳಿಸಿರಿ. ನಿಮ್ಮ ಸ್ವಂತ ಮಾತುಗಳಲ್ಲಿ ಹೇಳಿರಿ; ನಿಮ್ಮ ನೋಟ್ ಬುಕ್‌ಗಳಲ್ಲಿ ಬರೆದುಕೊಂಡಿರುವುದನ್ನಾಗಲಿ ಅಥವಾ ಈ ಅಧ್ಯಯನದಲ್ಲಿರುವ ಪಠ್ಯವನ್ನಾಗಲಿ ನೋಡಿ ಹೇಳಬೇಡಿರಿ!

# ಅಧ್ಯಯನ 6: ದೇವರ ರಾಜ್ಯವು ಮೇರೆಗಳನ್ನು ದಾಟುತ್ತದೆ

## ಪೀಠಿಕೆ

ಸಮಾರ್ಯದ ಜನರು ಮಿಶ್ರಿತವಾದ ಸಾಂಸ್ಕೃತಿಕ ಮತ್ತು ಧಾರ್ಮಿಕ ಪರಂಪರೆಯನ್ನು ಹೊಂದಿದ್ದರು. ಅವರು ಮಧ್ಯ ಪಾಲೇಸ್ತೇನಿನ ಸಮಾರ್ಯ ಎಂಬ ಜಿಲ್ಲೆಯಲ್ಲಿ ವಾಸಿಸುತ್ತಿದ್ದರು. ಇದು ಉತ್ತರ ರಾಜ್ಯವಾದ ಇಸ್ರಾಯೇಲಿನ ಕೇಂದ್ರ ಭಾಗವಾಗಿತ್ತು. ಅದನ್ನು ಅಸ್ಸಿರಿಯನ್ ಸಾಮ್ರಾಜ್ಯವು ಕ್ರಿ.ಪೂ. 722–721 ರಲ್ಲಿ ವಶ ಮಾಡಿಕೊಂಡಿತು. ಆ ಸಮಯದಲ್ಲಿ ಅಲ್ಲಿನ ಅನೇಕ ಸ್ಥಳೀಯರನ್ನು ಗಡಿಪಾರು ಮಾಡಲಾಯಿತು ಮತ್ತು ಇತರೇ ದೇಶದ ಜನರನ್ನು ಆ ಸ್ಥಳದಲ್ಲಿ ಹಾಕಲಾಯಿತು.

ಬಾಬೆಲಿನ ಸೆರೆವಾಸದ ನಂತರ (ಕ್ರಿ.ಪೂ. 538 ಮತ್ತು ಅನಂತರ) ಯೆಹೂದಕ್ಕೆ (ದಕ್ಷಿಣ ರಾಜ್ಯವಾದ ಇಸ್ರಾಯೇಲಿನ ಕೇಂದ್ರ ಭಾಗಕ್ಕೆ) ಹಿಂತಿರುಗಿದ ಯೆಹೂದ್ಯರನ್ನು ಸಮಾರ್ಯದಲ್ಲಿ ವಾಸವಾಗಿದ್ದ ಜನರು ಅವರನ್ನು ಹಗೆತನದಿಂದ ಸ್ವೀಕರಿಸಿದರು. ಅಲ್ಲಿದ್ದಂತ ಜನರಿಗೆ ಯೆಹೂದ್ಯ ನಾಯಕರು ಅನ್ಯರನ್ನು ಮದುವೆ ಆಗಬಾರದು ಮತ್ತು ಸ್ಥಳೀಯ ಜನರ ಪ್ರಭಾವದಿಂದ ತಮ್ಮ ಯೆಹೂದ್ಯ ಧರ್ಮವನ್ನು ಕಾಪಾಡಿಕೊಳ್ಳಬೇಕು ಎಂದು ಹೇಳಿದ್ದರು. ಯೆಹೂದ್ಯ ಇತಿಹಾಸಕಾರನಾದ ಯೊಸೇಫಸ್‌ನು ಒಂದು ಗುಂಪಿನ ಜನರು ಹೇಗೆ ಇನ್ನೊಂದು ಗುಂಪಿನ ಜನರ ಮುಖ್ಯ ಆರಾಧನ ಸ್ಥಳದ ಮೇಲೆ ದಾಳಿ ಮಾಡುತ್ತಿದ್ದರು ಎಂಬುದನ್ನು ನಮಗೆ ತಿಳಿಸುತ್ತಾನೆ. ಯೆಹೂದ್ಯರು ಗೇರಿಜಿಮ್ ಬೆಟ್ಟವನ್ನು ದಾಳಿ ಮಾಡಿದ್ದರು ಮತ್ತು ಸಮಾರ್ಯದವರು ಯೆರೂಸಲೇಮಿನ ದೇವಾಲಯದ ಮೇಲೆ ದಾಳಿ ಮಾಡಿದರು.

ಹೊಸ ಒಡಂಬಡಿಕೆಯ ಕಾಲದಲ್ಲಿ ಯೆಹೂದ್ಯರ ಮತ್ತು ಸಮಾರ್ಯದವರ ನಡುವಿನ ಅನೇಕ ಶತಮಾನಗಳ ಘರ್ಷಣೆಯು ಹಾಗೆ ಮುಂದುವರೆಯುತ್ತಾ ಬಂದಿತ್ತು. ಯೆಹೂದ್ಯರು ಸಮಾರ್ಯದವರನ್ನು ಹಾಗೂ ಸಮಾರ್ಯದವರು ಯೆಹೂದ್ಯರನ್ನು ಕೀಳಾಗಿ ಕಾಣುತ್ತಿದ್ದರು. ಒಳ್ಳೇ ಸಮಾರ್ಯದವನ (ಲೂಕ 10) ಮತ್ತು ಯಾಕೋಬನ ಬಾವಿಯ ಬಳಿಯಲ್ಲಿ ಒಬ್ಬ ಸಮಾರ್ಯ ಸ್ತ್ರೀಯನ್ನು ಸಂದಿಸಿದ್ದರ ಕುರಿತಾದ ಕತೆಯ ಹಿಂದಿರುವ ಯೇಸುವಿನ ಸಂದೇಶವನ್ನು ಈ ಹಿನ್ನಲೆಯಲ್ಲಿ ಓದಬೇಕು.

ಫಿಲಿಪ್ಪ ಮತ್ತು ಸಮಾರ್ಯದಲ್ಲಿನ ಆತನ ಸೇವೆಯ ಕುರಿತು ಅಪೊಸ್ತಲರ ಕೃತ್ಯ 8 ರಲ್ಲಿರುವ ಕಥೆಗೂ ಇದೇ ಹಿನ್ನಲೆಯಾಗಿದೆ. ಫಿಲಿಪ್ಪನು ಯೆರೂಸಲೇಮಿನ ಸಭೆಯಲ್ಲಿದ್ದ ಏಳು ಹಿರಿಯರಲ್ಲಿ ಒಬ್ಬನಾಗಿದ್ದನು (ಅಪೊ.ಕೃತ್ಯ. 6) ಮತ್ತು ಆತನು ನಂತರ ಸುವಾರ್ತಿಕನಾದ ಫಿಲಿಪ್ಪನು ಎಂದು ಕರೆಯಲ್ಪಟ್ಟನು. ಫಿಲಿಪ್ಪನು ಮತ್ತು ಸಮಾರ್ಯದವರು ಪರಸ್ಪರ ಪೂರ್ವ ಗ್ರಹಿಕೆಗಳನ್ನು, ಶಂಕೆಗಳನ್ನು ಮತ್ತು ಭಯಗಳನ್ನು ಹೊಂದಿದ್ದಿರಬಹುದು. ಯಾಕೆಂದರೆ ಅವರು ಅವುಗಳನ್ನು ತಮ್ಮ ಜನರ ಇತಿಹಾಸದಿಂದ ಅಂದರೆ ರಾಷ್ಟ್ರೀಯತೆ, ಜನಾಂಗೀಯತೆ, ಧಾರ್ಮಿಕ ಹೆಮ್ಮೆ, ರಾಜಕೀಯ ಘರ್ಷಣೆ ಮತ್ತು ಹಿಂಸಾಚಾರದ ಇತಿಹಾಸದಿಂದ ಪಡೆದುಕೊಂಡಿದ್ದರು.

ಯೆಹೂದ್ಯರು ಸಮಾರ್ಯದವರನ್ನು ಅನ್ಯರೆಂದೂ ಪರಿಗಣಿಸಲಿಲ್ಲ ಹಾಗೂ ಅವರನ್ನು ಯೆಹೂದ್ಯರೆಂದೂ ಪರಿಗಣಿಸಲಿಲ್ಲ.

## ಓದಿರಿ

ಅಪೊಸ್ತಲರ ಕೃತ್ಯಗಳು 8:4–25

## ಪ್ರಶ್ನೆಗಳು

1. ಫಿಲಿಪ್ಪನು ದೇವರ ರಾಜ್ಯದ ಕುರಿತು ಸಾರುವುದಕ್ಕಾಗಿ ಸಮಾರ್ಯದೊಳಗೆ ಪ್ರಯಾಣಿಸಿದಾಗ ಯಾವ ಪೂರ್ವಗ್ರಹಿಕೆಗಳನ್ನು ಮತ್ತು ಭಯವನ್ನು ಎದುರಿಸಿದನು?
2. ಯಾವ ಗುಂಪಿನ ಜನರು ನಿಮ್ಮಲ್ಲಿ ಅದೇ ರೀತಿಯ ಭಯವನ್ನು ಹುಟ್ಟಿಸುತ್ತಾರೆ?
3. ಫಿಲಿಪ್ಪನು ಕ್ರಿಸ್ತನನ್ನು ಕುರಿತು ಸಾರಲು ಸಮಾರ್ಯದೊಳಗೆ ಹೋದನು. ಸುವಾರ್ತೆಯನ್ನು ಸಾರಬೇಕೆಂಬ ನಿಮ್ಮ ಸಮರ್ಪಣೆಯು ಸ್ವತಃ ನಿಮ್ಮಲ್ಲಿರುವ ಮತ್ತು ಇತರರಲ್ಲಿರುವ ಪೂರ್ವಗ್ರಹಿಕೆಗಳನ್ನು ಮತ್ತು ಭಯವನ್ನು ಎದುರಿಸುವಂತೆ ಹೇಗೆ ನಡೆಸಿದೆ?

4. ಫಿಲಿಪ್ಪನ ಸಂದೇಶದ ವಿಶಯಾಂಶವನ್ನು ವಿವರಿಸಿರಿ ಮತ್ತು ಆತನ ಸೇವೆಯ ಗುಣಲಕ್ಷಣಗಳನ್ನು ವಿವರಿಸಿರಿ.

5. ಆತನ ಕೃತ್ಯಗಳು ಆತನ ಮಾತಿನಲ್ಲಿರುವ ಸತ್ಯತೆಯನ್ನು ಹೇಗೆ ಬಿಂಬಿಸುತ್ತದೆ?

6. ನಿಮ್ಮ ಸ್ವಂತ ಸಭೆಯು ಯೇಸುವಿನ ಸಲುವಾಗಿ ಇದೇ ರೀತಿಯ ಪೂರ್ವಗ್ರಹಿಕೆಗಳಗಳನ್ನು ಮತ್ತು ಭಯವನ್ನು ಎದುರಿಸಬೇಕಾಗಿ ಬಂದಾಗ ನಿಮ್ಮ ಮಾತಿನಲ್ಲಿರುವ ಸುವಾರ್ತೆಯ ಸತ್ಯತೆಯನ್ನು ಬಿಂಬಿಸಲು ಯಾವ ನಿರ್ದಿಷ್ಟವಾದ ಕೃತ್ಯಗಳನ್ನು ಮಾಡಬಹುದು.

7. ರಕ್ಷಣೆ ಹೊಂದುವುದಕ್ಕಿಂತ ಮೊದಲು ಆಡಿದ ಮಂತ್ರವಾದಿಯಾದ ಸಿಮೋನನ ಮಾತುಗಳನ್ನು ಮತ್ತು ಕೃತ್ಯಗಳನ್ನು ಫಿಲಿಪ್ಪನು ಸಮಾರ್ಯದಲ್ಲಿ ತಂಗಿದ್ದಾಗ ಆಡಿದ ಮಾತುಗಳೊಂದಿಗೆ ಮತ್ತು ಕೃತ್ಯಗಳೊಂದಿಗೆ ಹೋಲಿಸಿರಿ. ಸಮಾರ್ಯದ ಜನರು ಇವರಿಬ್ಬರಿಗೂ ತೋರಿದ ಪ್ರತಿಕ್ರಿಯೆಯನ್ನು ಸಹ ಹೋಲಿಸಿರಿ.

8. ನಿಮ್ಮ ಮಾತುಗಳೂ ಮತ್ತು ಕೃತ್ಯಗಳು ನಿಮ್ಮ ಸ್ನೇಹಿತರಲ್ಲಿ ಮತ್ತು ನೆರೆಹೊರೆಯವರಲ್ಲಿ ಯಾವ ರೀತಿಯ ಪ್ರತಿಕ್ರಿಯೆಯನ್ನು ಹುಟ್ಟಿಸುತ್ತದೆ? ನಿವು ಇನ್ನೂ ಹೆಚ್ಚಾಗಿ ಫಿಲಿಪ್ಪನಂತೆ ಆಗಬೇಕಾದರೆ ನಿಮ್ಮ ಮಾತುಗಳಲ್ಲಿ ಮತ್ತು ಕೃತ್ಯಗಳಲ್ಲಿ ಯಾವ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗಬಹುದು?

9. ಯೆರೂಸಲೇಮಿನಲ್ಲಿದ್ದ ಅಪೊಸ್ತಲರು ಯಾಕೆ ಪೇತ್ರ ಮತ್ತು ಯೋಹಾನರನ್ನು ಸಮಾರ್ಯಕ್ಕೆ ಕಳುಹಿಸಿದ್ದರೆಂದು ನೀವು ಯೋಚಿಸುತ್ತಿರಿ?

10. ಧರ್ಮ, ಇತಿಹಾಸ ಮತ್ತು ಸಂಪ್ರದಾಯದ ನಿಮಿತ್ತ ನಿಮ್ಮಿಂದ ಬೇರ್ಪಟ್ಟ ಜನರನ್ನು ದೇವರ ರಾಜ್ಯದ ನಿಮ್ಮ ಅನುಭವವು ಒಳಗೊಂಡಿದೆಯೋ? ಯಾಕೆ ಒಳಗೊಂಡಿದೆ – ಯಾಕೆ ಒಳಗೊಂಡಿಲ್ಲಾ?

11. ಈ ಕಥೆಯಲ್ಲಿ ಪವಿತ್ರಾತ್ಮನು ಯಾವ ಪಾತ್ರವನ್ನು ವಹಿಸುತ್ತಾನೆ? ದೇವರ ಜನರೆಲ್ಲರೂ ಆತನ ರಾಜ್ಯದ ಶುಭ ಸಂದೇಶವನ್ನು ಅನುಭವಿಸುವುದರಲ್ಲಿ ಪವಿತ್ರಾತ್ಮನು ಯಾವ ಪಾತ್ರವನ್ನು ವಹಿಸುತ್ತಾನೆ?

12. ವಿವಿಧ ಹಿನ್ನಲೆಯುಳ್ಳ ಜನರು ಒಟ್ಟಾಗಿ ಬರಬೇಕಾದರೆ ನಿಮ್ಮ ಸಭೆಯಲ್ಲಿ ಯಾವ ಬದಲಾವಣೆಗಳನ್ನು ಪವಿತ್ರಾತ್ಮನು ತರಬೇಕೆಂದು ನೀವು ಇಚ್ಚಿಸುತ್ತೀರಿ?

13. ಒಂದು ಹಾಳೆಯನ್ನು ಮಡಚಿ ಎರಡು ಭಾಗವಾಗಿ ಮಾಡಿರಿ ಎಡಗಡೆಯಲ್ಲಿ ನಿಮಗಿಂತ ಬಹಳ ವ್ಯತ್ಯಾಸವಾದ ಜನರ ಪಟ್ಟಿಯನ್ನು ಮಾಡಿರಿ (ಅವರ ಜನಾಂಗ, ಭಾಷೆ, ಜಾತಿ, ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನ, ಶೈಕ್ಷಣಿಕ ಅರ್ಹತೆಗಳು ಮತ್ತು ಇತ್ಯಾದಿಗಳನ್ನು ಪರಿಗಣಿಸಿರಿ). ಬಲಗಡೆಯಲ್ಲಿ ನಿಮ್ಮ ಮಾತಿನಿಂದ ಅಥವಾ ಕೃತ್ಯದಿಂದ ದೇವರ ರಾಜ್ಯದ ಸಂದೇಶವನ್ನು ಉತ್ತಮವಾದ ರೀತಿಯಲ್ಲಿ ಪ್ರದರ್ಶಿಸಬಹುದಾದ ಪಟ್ಟಿಯನ್ನು ಮಾಡಿರಿ.

# ಅಧ್ಯಯನ 7: ದೇವರ ರಾಜ್ಯವು ಬೆಳೆಯುತ್ತದೆ

## ಪೀಠಿಕೆ

ಮತ್ತಾಯನು ಬರೆದ ಸುವಾರ್ತೆಯ 13 ನೇ ಅಧ್ಯಾಯವು ದೇವರ ರಾಜ್ಯದ ಕುರಿತು ಯೇಸು ಹೇಳಿದ ಏಳು ಸಾಮ್ಯಗಳನ್ನು ಒಳಗೊಂಡಿದೆ. ಮತ್ತಾಯನು ಸಾಮಾನ್ಯವಾಗಿ ಪರಲೋಕ ರಾಜ್ಯ ಎಂಬ ಹೇಳಿಕೆಯನ್ನು ಉಪಯೋಗಿಸುತ್ತಾನೆ. ಈ ಹೇಳಿಕೆಯು ಯೆಹೂದ್ಯರಿಗೆ ಹೆಚ್ಚು ಬೇಸರಿಕೆಯನ್ನು ಉಂಟುಮಾಡುತ್ತಿರಲಿಲ್ಲ. ಅವರು ದೇವರ ಪವಿತ್ರ ನಾಮವನ್ನು ಪ್ರಸ್ತಾಪಿಸಬೇಕಾದ ಸಂದರ್ಭ ಬಂದಾಗ ಅದರ ಜಾಗದಲ್ಲಿ ಬೇರೆ ಪದಗಳನ್ನು ಹಾಕುತ್ತಿದ್ದರು. ಅಂತಹ ಪದಗಳಲ್ಲಿ "ಪರಲೋಕ" ಸಹ ಒಂದು ಪದವಾಗಿತ್ತು. ನಾವು ಈ ಅಧ್ಯಯನದಲ್ಲಿ ಮೊದಲ ನಾಲ್ಕು ಸಾಮ್ಯಗಳನ್ನು ನೋಡಲಿದ್ದೇವೆ.

- ಬಿತ್ತುವವನ ಸಾಮ್ಯ (ವ 1–9; 18–23)
- ಕಳೆಯನ್ನು ಕುರಿತ ಸಾಮ್ಯ (ವ 24–30; 36–43)
- ಸಾಸಿವೆ ಕಾಳಿನ ಸಾಮ್ಯ (ವ 31–32)
- ಹುಳಿ ಹಿಟ್ಟಿನ ಸಾಮ್ಯ (ವ 33)

ಈ ಎಲ್ಲಾ ನಾಲ್ಕು ಸಾಮ್ಯಗಳು ಈಗಿನ "ಸಭೆಯ ಯುಗದಲ್ಲಿ" ದೇವರ ರಾಜ್ಯವು ಹರಡುವುದರ, ಬೆಳೆಯುವುದರ ಮತ್ತು ವಿಸ್ತಾರವಾಗುವುದರ ಕುರಿತಾಗಿದೆ.

## ಓದಿರಿ

ಮತ್ತಾಯ 13:1–9; 18–43

## ಪ್ರಶ್ನೆಗಳು

1. ದೇವರ ರಾಜ್ಯ ಮತ್ತು ಪರಲೋಕ ರಾಜ್ಯ ಎಂಬ ಹೇಳಿಕೆಗಳ ನಡುವಿನ ಸಂಬಂಧವನ್ನು ವಿವರಿಸಿರಿ?
2. ಬಿತ್ತುವವವನ, ಕಳೆಯ, ಸಾಸುವೆ ಕಾಳಿನ ಮತ್ತು ಹುಳಿಹಿಟ್ಟಿನ ನಾಲ್ಕು ಸಾಮ್ಯಗಳಲ್ಲಿ ಇರುವ ಸಾಮಾನ್ಯವಾದ ಅಂಶ ಯಾವುದು?
3. ಬಿತ್ತುವವನ ಸಾಮ್ಯದಿಂದ ನಾವು ದೇವರ ರಾಜ್ಯದ ಕುರಿತು ಏನನ್ನು ಕಲಿಯುತ್ತೇವೆ? ಒಂದು ಪಟ್ಟಿಯನ್ನು ಮಾಡಿರಿ.
4. ಬಿತ್ತುವವನ ಸಾಮ್ಯವನ್ನು ಆದರಿಸಿ ಒಂದು ಚಾರ್ಟನ್ನು ಮಾಡಿರಿ. ಆ ಚಾರ್ಟಲ್ಲಿ ಮೂರು ಕಾಲಮನ್ನು ಮಾಡಿ ಮೂರು ರೀತಿಯ ನೆಲವನ್ನು, ದೇವರ ರಾಜ್ಯಕ್ಕೆ ಅದು ತೋರಿಸಿದ ಪ್ರತಿಕ್ರಿಯೆಯನ್ನು ಹೋಲಿಸಿರಿ ಮತ್ತು ಕೊನೆಯಲ್ಲಿ ನೀವು ಈ ರೀತಿಯ ಪ್ರತಿಕ್ರಿಯೆಯನ್ನು ನೋಡಿದ ಉದಾಹರಣೆಯನ್ನು ಪಟ್ಟಿ ಮಾಡಿರಿ.
5. ಬಿತ್ತುವವನ ಸಾಮ್ಯದ ಈ ಚಾರ್ಟಿನಿಂದ ನಿಮ್ಮ ಸ್ವಂತ ಸೇವೆಯ ಕುರಿತು ನೀವು ಯಾವ ಸಮಾರೋಪಗಳಿಗೆ ತಲುಪಿದ್ದೀರಿ?
6. ಯೇಸುವಿನ ಕಾಲದಲ್ಲಿದ್ದ ಯೆಹೂದ್ಯರು ದೇವರ ರಾಜ್ಯವು ಪರಿಪೂರ್ಣವಾಗಿ ಏಕಕಾಲದಲ್ಲಿ ಆಗಮಿಸಿ ತಕ್ಷಣವಾಗಿ ಒಂದು ವ್ಯತ್ಯಾಸವಾದ ಜಗತ್ತನ್ನು ಉದ್ಘಾಟಿಸಬೇಕೆಂದು ನಿರೀಕ್ಷಿಸಿದ್ದರು. ಕಳೆಯ ಕುರಿತಾದ ಸಾಮ್ಯವು ಈ ತಪ್ಪು ತಿಳುವಳಿಕೆಯನ್ನು ಹೇಗೆ ತಿದ್ದುತ್ತದೆ?
7. ಕಳೆಯ ಕುರಿತಾದ ಸಾಮ್ಯದಿಂದ ನಿಮ್ಮ ಸೇವೆಗಾಗಿ ದೇವರ ರಾಜ್ಯದ ಕುರಿತು ಏನನ್ನು ಕಲಿಯುತ್ತೀರಿ?

8. ಸಾಸಿವೆ ಕಾಳಿನ ಸಾಮ್ಯದಿಂದ ನಾವು ದೇವರ ರಾಜ್ಯದ ಕುರಿತು ಏನನ್ನು ಕಲಿಯುತ್ತೇವೆ?

9. ಈ ತಿಳುವಳಿಕೆಯು ನಮ್ಮ ಸೇವೆಯಲ್ಲಿ ಹೇಗೆ ಸಹಾಯಕರವಾಗಬಹುದು?

10. ಹುಳಿ ಹಿಟ್ಟಿನ ಸಾಮ್ಯದಿಂದ ನಾವು ದೇವರ ರಾಜ್ಯದ ಕುರಿತು ಏನನ್ನು ಕಲಿಯುತ್ತೇವೆ?

11. ಈ ತಿಳುವಳಿಕೆಯು ನಮ್ಮ ಸೇವೆಯಲ್ಲಿ ಹೇಗೆ ಸಹಾಯಕರವಾಗಬಹುದು?

# ಅಧ್ಯಯನ 8: ದೇವರ ರಾಜ್ಯದ ಎರಡು ಸವಾಲೊಡ್ಡುವ ಮೌಲ್ಯಗಳು

## ಪೀಠಿಕೆ

ಈ ಅಧ್ಯಯನದಲ್ಲಿ ನಾವು ದೇವರ ರಾಜ್ಯದ ಎರಡು ಮೂಲಭೂತ ಮೌಲ್ಯಗಳನ್ನು ನೋಡಲಿದ್ದೇವೆ. ಕೃಪೆಯ ಮೌಲ್ಯ ಮತ್ತು ಸೇವೆಯ ಮೌಲ್ಯ. ಮೊದಲ ಮೌಲ್ಯವು ಯೇಸುವಿನ ಒಂದು ಸಾಮ್ಯದ ಮೇಲೆ ಆಧಾರಿತವಾಗಿದೆ (ದ್ರಾಕ್ಷೇತೋಟದಲ್ಲಿ ಕೆಲಸ ಮಾಡಿದ ಕೂಲಿ ಆಳುಗಳ ಸಾಮ್ಯ ಮತ್ತಾಯ 20:1–16). ಎರಡನೇ ಮೌಲ್ಯವು ಒಂದು ತಾಯಿಯ ಬೇಡಿಕೆಗೆ ಸಂಬಂಧಿಸಿ ಯೇಸು ಬೋಧಿಸಿದ ಸಂಗತಿಯಾಗಿದೆ (ಮತ್ತಾಯ 20:17–28).

ಈ ಎರಡು ಕೃಪೆಯ ಮೌಲ್ಯ ಮತ್ತು ಸೇವೆಯ ಮೌಲ್ಯಗಳು ನಮ್ಮ ಬಿದ್ದುಹೋಗಿರುವ ಮಾನವ ಸ್ವಭಾವಕ್ಕೆ ವಿರುದ್ಧವಾಗಿದೆ. ಇದೇ ಸಂಗತಿಯು ನಮ್ಮಲ್ಲಿ ಅನೇಕರಿಗೆ ಸವಾಲೊಡ್ಡುವ ಸಂಗತಿಯಾಗಿದೆ ಮತ್ತು ಅದು ಕೆಲವೊಮ್ಮೆ ಗೊಂದಲಮಯವೂ ಅನ್ನಿಸಬಹುದು. ದ್ರಾಕ್ಷೇತೋಟದ ಯಜಮಾನನು ಪ್ರತಿನಿಧಿಸುವ ಕೃಪೆಯು ಅನ್ಯಾಯವೆಂದು ನಮಗೆ ಅನಿಸುತ್ತದೆ. ನಾವು ಒಂದು ವೇಳೆ ಬಾಯಿತೆರೆದು ಹೇಳದಿದ್ದಾಗ್ಯೂ ಈ ರೀತಿಯ ಸೇವಕತ್ವವು ಯೇಸುವಿಗಾಗಿ ಮತ್ತು ಇತರೆ "ಸಂತರಿಗಾಗಿ" ಆದರೆ ನನಗಲ್ಲ ಎಂದುಕೊಳ್ಳುತ್ತೇವೆ. ಇಲ್ಲವಾದರೆ ನಾವು "ಸೇವಕ" ಎಂಬ ಪದದ ಅರ್ಥವನ್ನೇ ಬದಲಾಯಿಸುತ್ತೇವೆ: ಭಾರತದಲ್ಲಿ ಸೇವಕರಾಗಿ ಜೀವಿಸದ ಅನೇಕ "ದೇವರ ಸೇವಕರುಗಳು" ಇದ್ದಾರೆ.

ಈ ಎರಡು ಮೌಲ್ಯಗಳನ್ನು ಯೇಸು ಪಿಲಾತನಿಗೆ ಹೇಳಿದ ಮಾತುಗಳಲ್ಲಿ ಕಾಣುತ್ತೇವೆ: *ನನ್ನ ರಾಜ್ಯವು ಈ ಲೋಕದ್ದಲ್ಲ* (ಯೋಹಾನ 18:36). ನಾವು "ಈ ಲೋಕದ್ದಲ್ಲ" ಎಂಬ ಹೇಳಿಕೆಯನ್ನು ಎರಡು ರೀತಿಯಲ್ಲಿ ಅರ್ಥಮಾಡಿಕೊಳ್ಳಬಹುದು. ಒಂದು ರೀತಿಯಲ್ಲಿ ಯೇಸುವಿನ ರಾಜ್ಯವು ಭೂಲೋಕ ಸಂಬಂಧವಾದುದ್ದಲ್ಲ ಬದಲಾಗಿ ಪರಲೋಕ ಸಂಬಂಧವುಳ್ಳದಾಗಿದೆ ಎಂಬುದಾಗಿ ಅರ್ಥಮಾಡಿಕೊಳ್ಳಬಹುದು. ಇನ್ನೊಂದು ರೀತಿಯಲ್ಲಿ, ಯೇಸು ಈ ಉದ್ದೇಶದಿಂದಲೂ ಸಹ ಹೇಳಿದ್ದನೆಂದು ನಾನು ಭಾವಿಸುತ್ತೇನೆ – ಯೇಸುವಿನ ರಾಜ್ಯದ ಮೌಲ್ಯಗಳು ಈ ಬಿದ್ದು ಹೋದ ಜಗತ್ತಿಗೆ, ಅಂದರೆ ಅಧಿಕಾರ ದಾಹವುಳ್ಳ ಮಾನವ ಅರಸರುಗಳ ಮತ್ತು ನಿರ್ದಯಿ ಮಾನವ ಸಾಮ್ರಾಜ್ಯಗಳ ಜೊತೆಗೆ ಯಾವ ಸಂಬಂಧವನ್ನು ಹೊಂದಿಲ್ಲ ಎಂಬುದಾಗಿ ಅರ್ಥಮಾಡಿಕೊಳ್ಳಬಹುದು. ಯೇಸುವಿನ ರಾಜ್ಯದ ಮೌಲ್ಯಗಳು ಮೇಲಿನಿಂದ ಅಥವಾ ಪರಲೋಕದಿಂದ ಅಥವಾ ಇನ್ನೊಂದು ಸ್ಥಳದಿಂದ ಬಂದಿದೆ. ಆತನ ರಾಜ್ಯವು ದೈವಿಕ ಮೌಲ್ಯಗಳನ್ನು ಹೊಂದಿದೆ. ಆ ಮೌಲ್ಯಗಳನ್ನು (*ಯೆಹೋವ, ಯೆಹೋವ ಕನಿಕರವೂ ದಯೆಯೂ ಉಳ್ಳ ದೇವರು; ದೀರ್ಘಶಾಂತನೂ ಪ್ರೀತಿಯೂ ನಂಬಿಕೆಯೂ ಉಳ್ಳವನು* ಎಂದು ತನ್ನನ್ನು ವರ್ಣಿಸಿಕೊಳ್ಳುವ, ವಿಮೋ 34:6) ತಂದೆಯಾದ ದೇವರಲ್ಲಿ ಮತ್ತು *ತನ್ನ ಪ್ರಾಣವನ್ನು ಅನೇಕರಿಗೆ ಈಡಾಗಿ ಕೊಡುವುದಕ್ಕಾಗಿ* (ಮತ್ತಾಯ 20:28) ನರನಾಗಿ ಬಂದ ದೇವರಾದ ಯೇಸುವಿನಲ್ಲಿ ಕಾಣಬಹುದು.

## ಓದಿರಿ

ಮತ್ತಾಯ 20:1–28

## ಪ್ರಶ್ನೆಗಳು

1. ದ್ರಾಕ್ಷೇತೋಟದ ಯಜಮಾನನು ತನ್ನ ಕೂಲಿಯಾಳುಗಳೊಂದಿಗೆ ವರ್ತಿಸಿದ ರೀತಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು? ನಿಮಗೆ ಯಾಕೆ ಹೀಗನ್ನಿಸುತ್ತದೆ?
2. ದೇವರ ರಾಜ್ಯದ ಮೌಲ್ಯಗಳ ಕುರಿತು ದ್ರಾಕ್ಷೇತೋಟದ ಯಜಮಾನನ ಗುಣವು ಏನನ್ನು ಪ್ರಕಟಿಸುತ್ತದೆ?
3. ದ್ರಾಕ್ಷಿತೋಟದ ಯಜಮಾನನು ತನ್ನ ಕೂಲಿಯಾಳುಗಳೊಂದಿಗೆ ವರ್ತಿಸಿದ ರೀತಿಯು ನಮ್ಮಲ್ಲಿ ಅನೇಕರಿಗೆ ಬೇಸರವನ್ನುಂಟುಮಾಡುವುದರ ಹಿಂದೆ ಇರುವ ಮಾನವ ಮೌಲ್ಯಗಳು ಯಾವವು?

4. ದ್ರಾಕ್ಷೇತೋಟದ ಯಜಮಾನನ ದೇವರ ರಾಜ್ಯದ ಮೌಲ್ಯಗಳನ್ನು ನಿಮ್ಮ ಸಮುದಾಯದಲ್ಲಿ, ಕೆಲಸದ ಸ್ಥಳಗಳಲ್ಲಿ, ಶಾಲಾ ಕಾಲೇಜುಗಳಲ್ಲಿ, ಸಭೆಗಳಲ್ಲಿ ಪ್ರದರ್ಶಿಸಲು ನಿಮಗೆ ಸಿಕ್ಕ ಅವಕಾಶದ ಬಗ್ಗೆ ಹಂಚಿಕೊಳ್ಳಿರಿ.

5. ವಿಶ್ವಾಸಿಗಳು ದ್ರಾಕ್ಷೇತೋಟದ ಯಜಮಾನನಂತೆ ಇನ್ನೂ ಹೆಚ್ಚಾಗಿ ವರ್ತಿಸಿದರೆ ಆ ಸ್ಥಳಗಳು ಹೇಗೆ ಬದಲಾಗಬಹುದು?

6. ದ್ರಾಕ್ಷೇತೋಟದ ಯಜಮಾನನಂತೆ ವರ್ತಿಸಲು ನಮ್ಮ ಆಧುನಿಕ ಸಮಾಜಕ್ಕೆ (ಅಥವಾ ಭಾರತ ಸರ್ಕಾರಕ್ಕೆ) ಸಾಧ್ಯವಿದೆ ಎಂದು ನೀವು ಯೋಚಿಸುತ್ತಿರೋ – ಯಾಕೆ – ಯಾಕಿಲ್ಲ?

7. ತನ್ನ ಭವಿಷ್ಯದ ಕುರಿತು ಯೇಸುವು ನಿರೀಕ್ಷಿಸಿದ ಸಂಗತಿಯನ್ನು ಜೆಬೆದಾಯನ ಹೆಂಡತಿಯು ತನ್ನ ಮಕ್ಕಳಿಗಾಗಿ ಅಪೇಕ್ಷಿಸಿದ ಭವಿಷ್ಯದೊಂದಿಗೆ ಹೋಲಿಸಿರಿ.

8. ತನ್ನ ಮರಣದ ಕುರಿತು ಯೇಸು ವರ್ಣಿಸಿದ ಸಂಗತಿಯು ದೇವರ ರಾಜ್ಯದ ಮೌಲ್ಯಗಳ ಕುರಿತು ಆಕೆಯು ಹೊಂದಿದ್ದ ತಿಳುವಳಿಕೆಯನ್ನು ಹೇಗೆ ಬದಲಾಯಿಸಿತು?

9. ಶ್ರೇಷ್ಠತೆಯನ್ನು ಹುಡುಕಬಾರದೆಂದು ಯೇಸು ತನ್ನ ಶಿಷ್ಯರಿಗೆ ನಿರುತ್ಸಾಹಗೊಳಿಸಲಿಲ್ಲ. ಆದರೆ ಶ್ರೇಷ್ಠತೆಯ ಕುರಿತು ಅವರಿಗಿದ್ದ ತಿಳುವಳಿಕೆಯನ್ನು ಆತನು ಹೇಗೆ ಸರಿಪಡಿಸಿದನು?

10. ದೇವರ ರಾಜ್ಯದ ಮೌಲ್ಯಗಳನ್ನು ಪ್ರತಿಬಿಂಬಿಸುವಂತಹ ವೃತ್ತಿಪರ ಮತ್ತು ಆರ್ಥಿಕ ಆಯ್ಕೆಗಳನ್ನು ಮಾಡಿಕೊಳ್ಳುವಂತೆ ಒಬ್ಬ ಸಭಾಪಾಲಕನು ತನ್ನ ವಿಶ್ವಾಸಿಗಳಿಗೆ ಮಾರ್ಗದರ್ಶಿಸುವಾಗ ಶ್ರೇಷ್ಠತೆಯ ಕುರಿತಾಗಿರುವ ಸತ್ಯವೇದಾನುಸಾರವಾದ ಈ ತಿಳುವಳಿಕೆಯು ಆತನಿಗೆ ಹೇಗೆ ಸಹಾಯವಾಗಬಲ್ಲದು?

11. ತ್ಯಾಗಪೂರ್ವಕವಾದ ಸೇವಕತ್ವದ ಮೂಲಕ ಶ್ರೇಷ್ಠತೆಯನ್ನು ಧರಿಸಿಕೊಂಡಿರುವ ನಿಮಗೆ ತಿಳಿದಿರುವ ಒಬ್ಬ ವ್ಯಕ್ತಿಯನ್ನು ವರ್ಣಿಸಿರಿ.

12. ಶ್ರೇಷ್ಠತೆಯ ಕಡೆಗೆ ಸಾಗುವ ಯೇಸುವಿನ ಮಾರ್ಗವನ್ನು ಹಿಂಬಾಲಿಸಲು ಬಯಸುವ ವ್ಯಕ್ತಿಯು ಪ್ರತಿದಿನ ಯಾವ ಆಯ್ಕೆಗಳನ್ನು ಮಾಡಬೇಕಾಗಬಹುದು?

13. ಶ್ರೇಷ್ಠತೆಯ ಕಡೆಗೆ ಸಾಗುವ ಯೇಸುವಿನ ಮಾರ್ಗವನ್ನು ನೀವು ಹಿಂಬಾಲಿಸುತ್ತಿರುವಾಗ ಈ ವಾರದಲ್ಲಿ ಯಾವ ಆಯ್ಕೆಗಳನ್ನು ಎದುರಿಸುತ್ತಿದ್ದಿರಿ?

# ಅಧ್ಯಯನ 9: ದೇವರ ರಾಜ್ಯಕ್ಕಾಗಿ ಕಾಯುವುದು

## ಪೀಠಿಕೆ

ಮತ್ತಾಯನ ಸುವಾರ್ತೆಯ 24 ಮತ್ತು 25 ಅಧ್ಯಾಯಗಳು ಯೇಸುವಿನ ಉದ್ದವಾದ ಪ್ರಸಂಗವನ್ನು ಹೊಂದಿವೆ. ಯೆರೂಸಲೇಮಿನ ದೇವಾಲಯದ ನಾಶನದ, ಮನುಷ್ಯಕುಮಾರನ ಬರೋಣದ ಮತ್ತು ಅಂತ್ಯಕಾಲದ ಕುರಿತು ಶಿಷ್ಯರಿಗಿದ್ದ ಪ್ರಶ್ನೆಗಳನ್ನು ಉತ್ತರಿಸಲು ಯೇಸು ಈ ಉದ್ದವಾದ ಪ್ರಸಂಗವನ್ನು ಮಾಡಿದನು. ಈ ಘಟನೆಯು ಓಲಿವ್ ಬೆಟ್ಟದ ಮೇಲೆ ಯೇಸು ಕ್ರೂಜಿಸಲ್ಪಡುವದಕ್ಕಿಂತ ಕೆಲವು ದಿನಗಳ ಹಿಂದೆ ನಡೆಯಿತು (24:1–3).

ಇತರೆ ಅಂಶಗಳನ್ನು ಹೊರತುಪಡಿಸಿ ಈ ಪ್ರಸಂಗವು ನಾಲ್ಕು ಕತೆಗಳನ್ನು ಅಥವಾ ಸಾಮ್ಯಗಳನ್ನು ಹೊಂದಿದೆ:

- ನಂಬಿಗಸ್ತನೂ ಜ್ಞಾನಿಯೂ ಆದ ಸೇವಕ (24:45–51)
- ಹತ್ತುಮಂದಿ ಕನ್ಯೆಯರ ಸಾಮ್ಯ (25:1–13)
- ತಲಾಂತುಗಳ ಸಾಮ್ಯ (25:14–30)
- ಕುರಿ ಆಡುಗಳ ಸಾಮ್ಯ (25:31–46)

ಈ ಕತೆಗಳ ಅಥವಾ ಸಾಮ್ಯಗಳ ಭಾವನಾತ್ಮಕ ಗಮನವು ನಿರೀಕ್ಷೆ ಮತ್ತು ನಂಬಿಗಸ್ತ ವಿಧೇಯತೆಯ ಮೇಲಿದೆ. ಸತ್ಯವೇದಾನುಸಾರವಾದ ದೃಷ್ಟಿಕೋನದಲ್ಲಿ ಜ್ಞಾನಿಯಾಗಿರುವುದೆಂದರೆ ಜ್ಞಾನ (ಸೂಕ್ಷ್ಮ–ದೃಷ್ಟಿ) ಮತ್ತು ವಿಧೇಯತೆ ಎರಡನ್ನೂ ಹೊಂದಿರುವುದಾಗಿದೆ. ತನ್ನ ಶಿಷ್ಯರು ತಾವು ತಿಳುಕೊಂಡದ್ದನ್ನು ಕಾರ್ಯರೂಪಕ್ಕೆ ತರಬೇಕೆಂದು ಯೇಸು ಅಪೇಕ್ಷಿಸಿದನು.

ಯೇಸು ತನ್ನ ಪ್ರಸಂಗದ ಪ್ರಾರಂಭದಲ್ಲಿ ಸುವಾರ್ತೆಯ ಮತ್ತು ಅಂತ್ಯದ ಕುರಿತು ಒಂದು ಕುತೂಹಲಕರವಾದ ಮಾಹಿತಿಯನ್ನು ತಿಳಿಸುತ್ತಾನೆ: ***"ಪರಲೋಕ ರಾಜ್ಯದ ಈ ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲಾ ಜನಾಂಗಗಳಿಗೆ ಸಾಕ್ಷಿಗಾಗಿ ಸಾರಲಾಗುವದು; ಆಗ ಅಂತ್ಯವು ಬರುವದು"*** (24:14).

ಯೇಸು ತನ್ನ ಶಿಷ್ಯರಿಗೆ (ಮತ್ತು ಸಭೆಯ ಯುಗದಲ್ಲಿ ಜೀವಿಸುತ್ತಿರುವ ಎಲ್ಲಾ ವಿಶ್ವಾಸಿಗಳಿಗೆ) ಕೊಟ್ಟ ಪ್ರಭೋದನೆಗಳನ್ನು ಐದು ಅಂಶಗಳಲ್ಲಿ ಸಾರಾಂಶಗಳಿಸಬಹುದು:

1. ದೇವರ ರಾಜ್ಯದ ಕುರಿತಾದ ಸುವಾರ್ತೆಯನ್ನು ಸಾರಿರಿ!
2. ಎಚ್ಚರವಾಗಿರ್ರಿ !
3. ಸಿದ್ಧರಾಗಿರ್ರಿ !
4. ನಂಬಿಗಸ್ತರಾಗಿರ್ರಿ !
5. ಯೇಸುವಿನಂತಿರ್ರಿ !

# ಓದಿರಿ

ಮತ್ತಾಯ 24:36–25:46

## ಪ್ರಶ್ನೆಗಳು

1. ಈ ಪಠ್ಯವನ್ನು ನಿಮ್ಮ ಸತ್ಯವೇದ ಅನುವಾದವು ಹೇಗೆ ವಿಭಾಗಿಸುತ್ತದೆ? ಅದರ ಶೀರ್ಷಿಕೆಗಳನ್ನು ಬರೆಯಿರಿ. ಮೂರು ಮುಖ್ಯ ಅನುವಾದಗಳನ್ನು (*ಸತ್ಯವೇದವು, ಪವಿತ್ರಗ್ರಂಥ* ಮತ್ತು *ಪವಿತ್ರ ಬೈಬಲ್*) ಒಂದಕ್ಕೊಂದು ಹೋಲಿಸಿರಿ. ನೀವು ಒಂದುವೇಳೆ *ಸತ್ಯವೇದವು* ಎಂಬ ಅನುವಾದವನ್ನು ಉಪಯೋಗಿಸುತ್ತಿದ್ದರೆ ಪ್ರತಿಯೊಂದು ವಾಕ್ಯವೃಂದವನ್ನು ಗುರುತಿಸಿ ಅದಕ್ಕೆ ನಿಮ್ಮ ಸ್ವಂತ ಶೀರ್ಷಿಕೆಗಳನ್ನು ಕೊಡಿರಿ.
2. ಯೇಸು ಯಾಕೆ ನೋಹನ ದಿನಗಳನ್ನು ನೆನಪಿಸುತ್ತಾನೆ?
3. ಯೇಸು ಯಾಕೆ ತನ್ನ ಶಿಷ್ಯರಿಗೆ ಎಚ್ಚರವಾಗಿರಬೇಕೆಂದು ಹೇಳುತ್ತಾನೆ?
4. ರಾತ್ರಿಯಲ್ಲಿ ಬರುವ ಕಳ್ಳನ ಕುರಿತು ಯೇಸು ಹೇಳಿದ ಅಂಶವನ್ನು ವಿವರಿಸಿರಿ.
5. ಒಬ್ಬ ನಂಬಿಗಸ್ತ ಸೇವಕನ ಹಾಗೂ ಒಬ್ಬ ದುಷ್ಟ ಸೇವಕನ ನಡುವೆ ಇರುವ ಮುಖ್ಯವಾದ ವ್ಯತ್ಯಾಸವೇನು?
6. ನಿಮ್ಮ ಸತ್ಯವೇದವನ್ನು ನೋಡದೆ ಯೇಸುವು ಮತ್ತಾಯ 24:36–51 ರಲ್ಲಿ ಹೇಳಿರುವುದನ್ನು ನಿಮ್ಮ ಸ್ವಂತ ಮಾತುಗಳಲ್ಲಿ ಸಾರಂಶಗೊಳಿಸಿರಿ.
7. ಹತ್ತು ಮಂದಿ ಕನ್ಯೆಯರ ಸಾಮ್ಯವು ಯಾವುದರ ಕುರಿತಾಗಿದೆ ಎಂದು ಯೇಸು ಹೇಳಿದನು?
8. ಬುದ್ಧಿವಂತ ಕನ್ಯೆಯರು ತಮ್ಮ ಜ್ಞಾನವನ್ನು ಹೇಗೆ ತೋರಿದರು?
9. ಮದುಮಗನ ನಿಷ್ಠುರತೆಯು ಏನನ್ನು ಪ್ರದರ್ಶಿಸಿತು?
10. ಯೇಸು ಹತ್ತು ಮಂದಿ ಕನ್ಯೆಯರ ಸಾಮ್ಯವನ್ನು ಹೇಗೆ ಸಮಾರೋಪಗೊಳಿಸುತ್ತಾನೆ?
11. ತಲಾಂತುಗಳ ಸಾಮ್ಯವು ಯಾವುದರ ಕುರಿತಾಗಿದೆ (ಮೂರು ಅನುವಾದಗಳಲ್ಲಿರುವ ಮೊದಲನೇಯ ವಾಕ್ಯವನ್ನು ಹೋಲಿಸಿರಿ, ವ. 14)?
12. ಯಜಮಾನನು ಯಾಕೆ ತನ್ನ ಎಲ್ಲಾ ಆಳುಗಳಿಗೆ ಸಮನಾದ ಮೊತ್ತವನ್ನು ಕೊಡಲಿಲ್ಲ?
13. ಯಜಮಾನನು ಮೊದಲ ಎರಡು ಆಳುಗಳನ್ನು ಹೇಗೆ ಹೊಗಳುತ್ತಾನೆ?
14. ಯಜಮಾನನು ಮೂರನೆಯ ಆಳಿನ ಮೇಲೆ ಯಾಕೆ ಅಷ್ಟು ಕೋಪಗೊಂಡನು?
15. ಹತ್ತು ಮಂದಿ ಕನ್ಯೆಯರ ಸಾಮ್ಯ ಮತ್ತು ತಲಾಂತುಗಳ ಸಾಮ್ಯವು ದೇವರ ರಾಜ್ಯವು ತನ್ನ ಪರಿಪೂರ್ಣತೆಯೊಂದಿಗೆ ಬರುವಾಗ ಹೇಗಿರುವುದು ಎಂಬುದನ್ನು ಹೇಗೆ ಪ್ರದರ್ಶಿಸುತ್ತವೆ?
16. ದೇವರು ನಿಮಗೆ ಅನೇಕ ಅವಕಾಶಗಳನ್ನು, ಸಂಪನ್ಮೂಲಗಳನ್ನು ಮತ್ತು ಅನುಭವಗಳನ್ನು ಕೊಟ್ಟಿದ್ದಾನೆ, ನಿಮ್ಮ ಜೀವಿತದ (ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ವೃತ್ತಿಪರ ಮತ್ತು ರಾಜಕೀಯ) ಆಯ್ಕೆಗಳು ಒಬ್ಬ ಒಳ್ಳೆಯ ಸೇವಕನ ಗುಣಗಳನ್ನು ಪ್ರತಿಬಿಂಬಿಸುತ್ತಿವೆಯೋ? ಎಷ್ಟರ ಮಟ್ಟಿಗೆ ಪ್ರತಿಬಿಂಬಿಸುತ್ತಿದೆ ಮತ್ತು ಹೇಗೆ ಪ್ರತಿಬಿಂಬಿಸುತ್ತಿದೆ? ಯಾಕೆ – ಯಾಕಿಲ್ಲ?
17. "ಕುರಿಗಳ" ರೀತಿಯ ಜನರ ಹಾಗೂ "ಆಡುಗಳ" ರೀತಿಯ ಜನರ ನಡುವಿನ ವ್ಯತ್ಯಾಸವನ್ನು ವಿವರಿಸಿರಿ.
18. ದೇವರ ರಾಜ್ಯವನ್ನು ಅಂತಿಮವಾಗಿ ಪ್ರವೇಶಿಸುವ ಜನರು ಯಾವ ರೀತಿಯ ಜೀವಿತವನ್ನು ಜೀವಿಸಬೇಕೆಂದು ಯೇಸು ಅಪೇಕ್ಷಿಸುತ್ತಾನೆ (25:31–46)?
19. ಸತ್ಯವೇದವನ್ನು ಓದುವ ಅನೇಕರು "ಕುರಿಗಳ ಮತ್ತು ಆಡುಗಳ" (25:31–46) ವಾಕ್ಯಭಾಗವನ್ನು ಓದುವಾಗ ಕಷ್ಟಪಡುತ್ತಾರೆ ಯಾಕೆ? ನೀವು ಅದನ್ನು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?

20. ಕಾಯುವುದು ಒಂದು ಕ್ರಿಯಾತ್ಮಕವಲ್ಲದ ಅನುಭವ ಎಂದು ಅನೇಕರು ಅಂದುಕೊಳ್ಳುತ್ತಾರೆ. ನೀವು ಯೇಸುವಿನ ಹಿಂದಿರುಗುವಿಕೆಗಾಗಿ ಕ್ರಿಯಾತ್ಮಕವಾಗಿ ಕಾಯುತ್ತಿದ್ದೀರೆಂದು ಮುಂದಿನ ವಾರ ನೀವು ಮಾಡಲಿರುವ ಕ್ರಿಯೆಗಳು ಹೇಗೆ ಪ್ರದರ್ಶಿಸಬಹುದು?

21. ದೇವರ ರಾಜ್ಯವು ಪರಿಪೂರ್ಣಗೊಳ್ಳುವುದನ್ನು ಎದುರುನೋಡುತ್ತಿರುವ ವಿಶ್ವಾಸಿಗಳಿಗಾಗಿ ಯೇಸು ಕೊಡುವ ಪ್ರಬೋಧನೆಗಳನ್ನು ನಾವು ಹೇಗೆ ಸಾರಾಂಶಗೊಳಿಸಬದುದು?

# ಅಧ್ಯಯನ 10: ಸಭೆ ಮತ್ತು ದೇವರ ರಾಜ್ಯ

## ಪೀಠಿಕೆ

ಅನೇಕ ದೈವಶಾಸ್ತ್ರಜ್ಞರು ದೇವರ ರಾಜ್ಯ ಮತ್ತು ಸಭೆ ಎರಡು ಒಂದೇ ಸಂಗತಿಯಾಗಿದೆ ಎಂದು ಹೇಳುತ್ತಾರೆ. ಅದು ಸರಿಯಲ್ಲ. ಆದರೆ ದೇವರ ರಾಜ್ಯಕ್ಕೂ ಮತ್ತು ಸಭೆಗೂ ಒಂದು ಬಲವಾದ ನಂಟಿದೆ. ಸಭೆಯು ಯೇಸುವಿನ ಮೊದಲ ಮತ್ತು ಎರಡನೇಯ ಬರೋಣದ ನಡುವೆ ಇರುವ ಕಾಲದಲ್ಲಿ ಅಂದರೆ ಸಭೆಯ ಯುಗದಲ್ಲಿ ದೇವರ ರಾಜ್ಯದ ಪ್ರತಿರೂಪವಾಗಿದೆ ಅಥವಾ ದೇವರ ರಾಜ್ಯವನ್ನು ವ್ಯಕ್ತಪಡಿಸುವಂತಹದ್ದಾಗಿದೆ.

ಸಭೆ ಮತ್ತು ದೇವರ ರಾಜ್ಯದ ನಡುವೆ ಇರುವ ಸಂಬಂಧದ ಕೆಲವು ಅಂಶಗಳನ್ನು ನಾವು ಈ ಅಧ್ಯಯನದಲ್ಲಿ ನೋಡಲಿದ್ದೇವೆ.

## ಓದಿರಿ

ಮತ್ತಾಯ 28:8–10, 16–20

ಅಪೊ. ಕೃತ್ಯ. 1:4–8

1 ಕೊರಿಂಥ. 12:27; ಎಫೆಸ 1:23

## ಪ್ರಶ್ನೆಗಳು

1. ಯೇಸು ಸಮಾಧಿಯ ಬಳಿಯಲ್ಲಿದ್ದ ಸ್ತ್ರೀಯರ ಮೂಲಕ ತನ್ನ ಉಳಿದ ಹನ್ನೊಂದು ಶಿಷ್ಯರಿಗೆ ಯಾವ ಸಂದೇಶವನ್ನು ತಿಳಿಸಿದನು (ಮತ್ತಾಯ 28:8–10)?
2. ಮತ್ತಾಯ 28:18–20 ರಲ್ಲಿ ಯೇಸು ತನ್ನ ಹನ್ನೊಂದು ಶಿಷ್ಯರಿಗೆ ಕೊಟ್ಟ ಪ್ರಬೋಧನೆಯನ್ನು ಮಹಾ ಆದೇಶ ಎಂದು ಕರೆಯುತ್ತಾರೆ. ಅದನ್ನು ನಾವು ಮೂರು ಭಾಗಗಳಾಗಿ ರಚಿಸಬಹುದು. ಹೇಗೆ? ಪ್ರತಿಯೊಂದು ಭಾಗದ ಮಹತ್ವವೇನು?
3. ಯೇಸು ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ ಎಂದು ತನ್ನ ಹನ್ನೊಂದು ಶಿಷ್ಯರಿಗೆ ಹೇಳಿದನು. ಅದರಲ್ಲಿ ಯಾವ ಮೂರು ಹಂತಗಳು ಒಳಗೊಂಡಿವೆ ಎಂದು ಆತನು ಹೇಳಿದನು?
4. ಈ ಮಹಾ ಆದೇಶದ ಮೂರು ಹಂತಗಳನ್ನು ನಿಮ್ಮ ಸಭೆ ಎಷ್ಟರ ಮಟ್ಟಿಗೆ ಪಾಲಿಸಿದೆ? ನಿಮ್ಮ ಗುಂಪುಗಳಲ್ಲಿ ಹಂಚಿಕೊಳ್ಳಿರಿ.
5. ಯೇಸು ಯಾಕೆ ತನ್ನ ಶಿಷ್ಯರಿಗೆ ಯೆರೂಸಲೇಮಿನಲ್ಲಿ ಕಾದುಕೊಂಡಿರ್ರಿ ಎಂದು ಹೇಳಿದನು (ಅಪೊ. ಕೃತ್ಯ. 1:4–8)?
6. ಅಪೊ. ಕೃತ್ಯ. 1:4–8 ರಲ್ಲಿ ಯೇಸು, ದೇವರ ರಾಜ್ಯ, ಪವಿತ್ರಾತ್ಮ ಮತ್ತು ಶಿಷ್ಯರ ನಡುವೆ ಯಾವ ಸಂಬಂಧವಿದೆ ಎಂದು ನಾವು ಕಾಣುತ್ತೇವೆ?
7. ಅಪೋಸ್ತಲರ ಕೃತ್ಯಗಳು ಲೂಕನ ಬರೆದ ಸುವಾರ್ತೆಯ ಮುಂದುವರೆದ ಭಾಗವಾಗಿದೆ ಎಂದು ಅನೇಕ ಸತ್ಯವೇದ ಶಾಸ್ತ್ರಜ್ಞರು ಕಾಣುತ್ತಾರೆ, ಅದನ್ನು ಅವರು ಕಥೆಯ ಎರಡನೆಯ ಭಾಗದಂತೆ (ಅ. ಕೃ. 1:1 ರಲ್ಲಿರುವ ಲೂಕನ ಪೀಠಿಕೆಯನ್ನು ನೋಡಿರಿ) ಮಾತ್ರವಲ್ಲದೇ ದೈವಶಾಸ್ತ್ರವಾಗಿಯೂ ಎರಡನೇಯ ಭಾಗವೆಂದು ಕಾಣುತ್ತಾರೆ. ನೀವು ಅವರೊಂದಿಗೆ ಒಪ್ಪುತ್ತೀರೋ? ಯಾಕೆ – ಯಾಕಿಲ್ಲ?
8. 1 ಕೊರಿಂಥ. 12:27 ಮತ್ತು ಎಫೆಸ 1:23 ರ ಮೂಲಕ ಯೇಸು ಮತ್ತು ಸಭೆಯ ನಡುವೆ ಇರುವ ಸಂಬಂಧದ ಕುರಿತು ನಾವು ಏನನ್ನು ಕಲಿಯುತ್ತೇವೆ?
9. ಮೇಲಿನ ಪ್ರಶ್ನೆಯ ಉತ್ತರದಿಂದ ನಾವು ಸಭೆಯ ಹಾಗೂ ದೇವರ ರಾಜ್ಯದ ಕುರಿತು ಯಾವ ಸಮಾರೋಪಗಳನ್ನು ಮಾಡಬಹುದು?
10. ನೀವು ಈ ಅಧ್ಯಯನದಲ್ಲಿ ಸಭೆಯ ಹಾಗೂ ದೇವರ ರಾಜ್ಯದ ಕುರಿತು ಕಲಿತಿರುವುದನ್ನು ಸಾರಾಂಶಗೊಳಿಸಿರಿ.

# ದೇವರ ರಾಜ್ಯದಂತೆ ಜೀವಿಸುವುದು

# ಅಧ್ಯಯನ 11: ಪರ್ವತ ಪ್ರಸಂಗ

## ಪ್ರಸಂಗ

ಪರ್ವತ ಪ್ರಸಂಗವು ಯೇಸುವಿನ ಬೋಧನೆಯ ಚಿರಪರಿಚಿತವಾದ ಭಾಗವಾಗಿದೆ. ಅದನ್ನು ಮತ್ತಾಯ 5–7 ನೇ ಅಧ್ಯಾಯಗಳಲ್ಲಿ ಕಾಣಬಹುದು. ಅದಕ್ಕೆ ಕೊಡಲಾಗಿರುವ ಶೀರ್ಷಿಕೆಯು ಮತ್ತಾಯನು ಅದರ ಕುರಿತಾಗಿ ಕೊಡುವ ಪೀಠಿಕೆಯ ಮೇಲೆ ಆಧಾರವಾಗಿದೆ. *ಆತನು ಜನಸಮೂಹಗಳನ್ನು ನೋಡಿದವನಾಗಿ ಪರ್ವತವನ್ನೇರಿದನು: ಅಲ್ಲಿ ಆತನು ಕೂತುಕೊಂಡಾಗ ಆತನ ಶಿಷ್ಯರು ಆತನ ಬಳಿಗೆ ಬಂದರು. ಆತನು ಅವರಿಗೆ ಬಾಯಿ ತೆರೆದು ಅವರಿಗೆ ಬೋಧಿಸಿ ಹೇಳಿದ್ದೇನೆಂದರೆ* (5:1).

ನಾವು ಲೂಕನ ಬರೆದ ಸುವಾರ್ತೆಯಲ್ಲಿಯೂ ಇದೇ ರೀತಿಯ ಯೇಸುವಿನ ಪ್ರಸಂಗವನ್ನು ಕಾಣುತ್ತೇವೆ (ಲೂಕ 6:20–49). ಆದರೆ ಅಲ್ಲಿ ಯೇಸುವಿನ ಮಾತುಗಳು ಸ್ವಲ್ಪ ವ್ಯತ್ಯಾಸವಾಗಿದೆ ಮತ್ತು ಅದರ ಸನ್ನಿವೇಶವು ಸಹ ವ್ಯತ್ಯಾಸವಾಗಿದೆ. ಅಲ್ಲಿ ಯೇಸು 12 ಜನ ಶಿಷ್ಯರೊಂದಿಗೆ ಪರ್ವತದಿಂದ ಕೆಳಗಿಳಿದು ಸಮತಟ್ಟಾದ ಭೂಮಿಯ ಮೇಲೆ ಬಂದಾಗ ಒಂದು ದೊಡ್ಡ ಶಿಷ್ಯರ ಗುಂಪಿನೊಟ್ಟಿಗೆ ಮಾತನಾಡುತ್ತಿದ್ದಾನೆ (ಲೂಕ 6:12, 17).

ಹಾಗಾದರೆ ಈಗ ಉದ್ಭವಿಸುವ ಪ್ರಶ್ನೆಯೇನೆಂದರೆ: ಮತ್ತಾಯನು ಮತ್ತು ಲೂಕನು ನಡೆದ ಒಂದೇ ಘಟನೆಯ ಮತ್ತು ಒಂದೇ ಪ್ರಸಂಗದ ಕುರಿತು ದಾಖಲಿಸಿದ್ದಾರೋ ಅಥವಾ ಅವೆರಡೂ ವ್ಯತ್ಯಾಸವಾದ ಪ್ರಸಂಗಗಳೋ? ಈ ಎರಡೂ ಪ್ರಸಂಗಗಳ ನಡುವೆ ವ್ಯತ್ಯಾಸಗಳಿದ್ದಾಗ್ಯೂ ಅವೆರಡು ಒಂದೇ ಆಗಿರುವ ಸಾಧ್ಯತೆ ಹೆಚ್ಚಿದೆ. ಹೊಸ ಒಡಬಂಡಿಕೆಯಲ್ಲಿರುವ ಎಲ್ಲಾ ಪ್ರಸಂಗಗಳು ಉದ್ದವಾದ ಪ್ರಸಂಗಗಳ ಸಾರಾಂಶ ಮಾತ್ರವಾಗಿದೆ. ಹಾಗಾಗಿ ಮತ್ತಾಯನು ಮತ್ತು ಲೂಕನು ಯೇಸು ಹೇಳಿದ ಒಂದೇ ಪ್ರಸಂಗವನ್ನು ಸಾರಾಂಶಗೊಳಿಸಿದ್ದರೆ ಅವರಿಬ್ಬರ ಸಾರಾಂಶದ ನಡುವೆ ಅಲ್ಪ ವ್ಯತ್ಯಾಸವಿರಬಹುದೆಂದು ನಾವು ನಿರೀಕ್ಷಿಸಬಹುದು. ಅದರಲ್ಲೂ ವಿಶೇಷವಾಗಿ ಯೇಸು ಅರಾಮಿಕ್ ಭಾಷೆಯಲ್ಲಿ ಮಾತನಾಡಿದ್ದನ್ನು ಮತ್ತಾಯನು ಮತ್ತು ಲೂಕನು ಗ್ರೀಕ್ ಭಾಷೆಯಲ್ಲಿ ಬರೆದಿದ್ದನ್ನು ನೆನಪಿಸಿಕೊಳ್ಳುವಾಗ ಅದು ಸಹಜವೆನಿಸಬಹುದು. "ಆತನು ಪರ್ವತವನ್ನೆರಿದನು" ಎಂದು ಮತ್ತಾಯನು ಹೇಳುವುದರ ಹಾಗೂ "ಆತನು ಅವರೊಂದಿಗೆ ಕೆಳಗಿಳಿದು ಸಮಭೂಮಿಯ ಮೇಲೆ ನಿಂತಿದ್ದಾಗ" ಎಂದು ಲೂಕನು ಹೇಳುವುದರ ನಡುವೆ ಯಾವುದೇ ತದ್ವಿರೋಧತೆಯಿಲ್ಲ. ಯೇಸು ಮತ್ತು ಆತನ 12 ಶಿಷ್ಯರು ಪರ್ವತದಿಂದ ಸ್ವಲ್ಪ ಕೆಳಗೆ ಇಳಿದು ಸಮಭೂಮಿಯ ಮೇಲೆ ಬಂದಿರಬಹುದು – ಅದರರ್ಥ ಆತನು ಸಂಪೂರ್ಣವಾಗಿ ಪರ್ವತ ಕೆಳಗೆ ಬಂದನು ಎಂದಲ್ಲ. ನಂತರ ಯೇಸು ದೊಡ್ಡ ಜನಸಮೂಹವು ಆತನನ್ನು ಕಾಣುವಂತೆ ಮತ್ತು ಆತನ ಸ್ವರವನ್ನು ಕೇಳುವಂತೆ ಆತನು ಎತ್ತರ ಪ್ರದೇಶದ ಮೇಲೆ ನಿಂತುಕೊಂಡನು.

ಆದರೆ ನಿಶ್ಚಯವಾಗಲೂ ಸುವಾರ್ತೆಯ ಲೇಖಕರೂ ದೇವರ ರಾಜ್ಯದ ಕುರಿತು ಯೇಸು ಬೋಧಿಸಿದ ಒಂದು ಪ್ರಸಂಗವನ್ನು ದಾಖಲಿಸಿದರೋ ಅಥವಾ ಎರಡು ಪ್ರಸಂಗವನ್ನು ದಾಖಲಿಸಿದರೋ ಎನ್ನುವುದರಲ್ಲಿ ಹೆಚ್ಚು ತಲೆಕೆಡಿಸಿಕೊಳ್ಳುವ ಅವಶ್ಯವಿಲ್ಲ. ಈ ಪಠ್ಯಪುಸ್ತಕದಲ್ಲಿ ಮತ್ತಾಯನು 5–7 ಅಧ್ಯಾಯಗಳಲ್ಲಿರುವ ಯೇಸುವಿನ ಮಾತುಗಳನ್ನು ಬಳಸಲಿದ್ದೇವೆ. ಇದೇ ಪಠ್ಯಕ್ಕೆ "ಪರ್ವತ ಪ್ರಸಂಗ" ಎಂಬ ಶೀರ್ಷಿಕೆ ಕೊಡಲಾಗಿದೆ.

ಯೇಸು ತನ್ನ ಸೇವೆಯ ಪ್ರಾರಂಭದಲ್ಲಿ ಈ ಪ್ರಸಂಗವನ್ನು ಶಿಷ್ಯರ ಒಂದು ದೊಡ್ಡ ಗುಂಪಿಗೆ, ಅಂದರೆ ಆತನನ್ನು ನಂಬಿ ಆತನನ್ನು ಹಿಂಬಾಲಿಸಿದ ಜನರಿಗೆ ಮಾಡಿದನು.

## ಈ ಪ್ರಸಂಗವು ಯಾವುದರ ಕುರಿತಾಗಿದೆ?

ಜನಪ್ರಸಿದ್ಧವಾದ ಇಂಗ್ಲಿಷ್ ಲೇಖಕರು ಹಾಗೂ ಸತ್ಯವೇದ ಬೋಧಕರು ಆದ ಜಾನ್ ಸ್ಟಾಟ್‌ರವರು ತಮ್ಮ *ದ ಮೆಸೇಜ್ ಆಫ್ ದ ಸರ್ಮನ್ ಆನ್ ದ ಮೌಂಟ್* ಪುಸ್ತಕದಲ್ಲಿ ಪರ್ವತ ಪ್ರಸಂಗವನ್ನು "ಕ್ರಿಸ್ತೀಯ ಸಂಪ್ರದಾಯವನ್ನು" ಸಾರಾಂಶಗೊಳಿಸುವ ಒಂದು "ಪ್ರಣಾಳಿಕೆಯಾಗಿದೆ" ಎಂದು ಕರೆಯುತ್ತಾರೆ. ಈ ಲೋಕದಲ್ಲಿ ಯೇಸುವನ್ನು ಹಿಂಬಾಲಿಸುವುದರ ನಿಜವಾದ ಅರ್ಥವನ್ನು ಯೇಸು ತನ್ನ ಶಿಷ್ಯರಿಗೆ ಬೋಧಿಸುತ್ತಾನೆ. ಆತನು ದೇವರ ರಾಜ್ಯದ ನಿಯಮಗಳ ದೃಷ್ಟಿಕೋನದಿಂದ ಮಾನವನ ಜೀವನ ಮತ್ತು ಮಾನವನ ಅನ್ಯೋನ್ಯತೆ ಹೇಗೆ ಕಾಣುತ್ತದೆ ಎಂಬುದನ್ನು ವರ್ಣಿಸುತ್ತಾನೆ.

ಯೇಸುವಿನ ಹಿಂಬಾಲಕರು ದೇವರ ರಾಜ್ಯವನ್ನು ಪ್ರವೇಶಿಸಿದ್ದಾರೆ ಹಾಗಾಗಿ ಅವರ ಜೀವಿತಗಳು ಯೆಹೂದ್ಯರಿಗಿಂತಲೂ (ವಿಶೇಷವಾಗಿ ಆ ಕಾಲದಲ್ಲಿ ದೈವಶಾಸ್ತ್ರ ಬೋಧಕರಾದ ಶಾಸ್ತ್ರಿಗಳಿಗಿಂತಲೂ ಮತ್ತು ಬಕ್ತಿವಂತ ಪರಿಸಾಯರಿಗಿಂತಲೂ) ಮತ್ತು ಅನ್ಯಜನರಿಗಿಂತಲೂ ವ್ಯತ್ಯಾಸವುಳ್ಳದಾಗಿರಬೇಕು. ಆತನು ತನ್ನ ಪ್ರಸಂಗದ ಪ್ರತಿಯೊಂದು ವಾಕ್ಯವೃಂದದಲ್ಲಿ ಈ ವ್ಯತ್ಯಾಸವನ್ನು ತೋರಿಸುತ್ತಾನೆ.

## ಹಳೇ ಒಡಂಬಡಿಕೆಯ ಹಿನ್ನಲೆ

ಸತ್ಯವೇದದುದ್ದಕ್ಕೂ "ದೇವಜನರು" ಎಂಬ ಪ್ರದಾನ ವಿಷಯವನ್ನು ನಾವು ಕಾಣುತ್ತೇವೆ. ಅಬ್ರಹಾಮನ ಕುರಿತಾದ ಕತೆಗಳಿಂದ (ಬಹುಶಃ ಅದಕ್ಕಿಂತಲೂ ಮುಂಚಿನಿಂದ) ತನ್ನ ಜನರಾಗಿರಲು ಮತ್ತು ತನಗೆ ವಿಧೇಯರಾಗಿರಲು ಒಂದು ಜನಾಂಗವನ್ನು ರಾಷ್ಟ್ರಗಳಿಂದ ಕರೆಯುವ ದೇವರ ಉದ್ದೇಶ ಮತ್ತು ಯೋಜನೆಯನ್ನು ನಾವು ಕಾಣುತ್ತೇವೆ. ಅವರು ತಮ್ಮ ಸುತ್ತಲಿರುವ ರಾಷ್ಟ್ರಗಳಿಗಿಂತ ವಿಭಿನ್ನರಾಗಿದ್ದು "ಪರಿಶುದ್ಧ" (ಅಥವಾ "ಬೇರ್ಪಟ್ಟ") ಜನಾಂಗವಾಗಿರಲು ಕರೆಯಲ್ಪಟ್ಟಿದ್ದರು. ದೇವರು ತನ್ನ ಈ ಉದ್ದೇಶವನ್ನು ಮೊಶೆಯ ನಾಯಕತ್ವದ ಅಡಿಯಲ್ಲಿ ಈಜಿಪ್ತಿನ ಗುಲಾಮತನದಿಂದ ಬಿಡಿಸಲ್ಪಟ್ಟ ಇಸ್ರಾಯೆಲ್ಯರಿಗೆ ಸ್ಪಷ್ಟಪಡಿಸಿದನು: *ಯೆಹೋವನು ಮೋಶೆಗೆ ಹೇಳಿದ್ದೇನೆಂದರೆ – ನೀನು ಇಸ್ರಾಯೇಲ್ಯರಿಗೆ ಹೀಗೆ ಆಜ್ಞಾಪಿಸಬೇಕು – ನಾನು ನಿಮ್ಮ ದೇವರಾಗಿರುವ ಯೆಹೋವನು; ನೀವು ವಾಸವಾಗಿದ್ದ ಐಗುಪ್ತದೇಶದ ಆಚಾರಗಳನ್ನು ಅನುಸರಿಸಬಾರದು; ನಾನು ನಿಮ್ಮನ್ನು ಬರಮಾಡುವ ಕಾನಾನ್‌ದೇಶದ ಆಚರಣೆಗಳನ್ನೂ ನೀವು ಅನುಸರಿಸಬಾರದು; ಅವರಲ್ಲಿರುವ ನಿಯಮಗಳಿಗೆ ನೀವು ಒಳಗಾಗಬಾರದು. ಯೆಹೋವನೆಂಬ ನಾನೇ ನಿಮ್ಮ ದೇವರಾಗಿರುವುದರಿಂದ ನನ್ನ ನಿರ್ಣಯಗಳ ಪ್ರಕಾರವೇ ನಡೆಯಬೇಕು ನೀವು ನಡೆಯಬೇಕು, ನನ್ನ ವಿಧಿಗಳನ್ನು ಅನುಸರಿಸಬೇಕು* (ಯಾಜಕಕಾಂಡ 18:1–4).

ಆದರೆ ಇಸ್ರಾಯೇಲ್ಯರು ದೇವರ ನಿರೀಕ್ಷೆಗನುಸಾರವಾಗಿ ಜೀವಿಸಲಿಲ್ಲ. ಬದಲಾಗಿ ಅವರು ತಮ್ಮ ಸುತ್ತಲಿರುವ ರಾಷ್ಟ್ರಗಳ ಜೀವನ ಶೈಲಿಯನ್ನು ಧಾರ್ಮಿಕ ಆಚಾರಗಳನ್ನು, ಆಲೋಚನಾ ಶೈಲಿಯನ್ನು ಪಾಲಿಸತೊಡಗಿದರು. ಆದರೆ ನಿಜವಾಗಲೂ ಎಂಥಹ ಜನರಾಗಿದ್ದರೆಂದು ಅವರಿಗೆ ನೆನಪಿಸಲು ದೇವರು ಇಸ್ರಾಯೆಲ್ಯ ರು ನಡುವೆ ಪ್ರವಾದಿಗಳನ್ನು ಕಳುಹಿಸುತ್ತಲೇ ಇದ್ದನು. ಪ್ರವಾದಿಗಳು ಜನರು ದೇವರ ಮಾರ್ಗವನ್ನು ಹಿಂಬಾಲಿಸುವಂತೆ ಬೇಡುತ್ತಿದ್ದರು. ಆದರೆ ಇಸ್ರಾಯೇಲರು ಅವರ ಮಾತಿಗೆ ಕಿವಿಗೊಡಲಿಲ್ಲ. ಹಾಗಾಗಿ ದೇವರ ನ್ಯಾಯತೀರ್ಪು ಮೊದಲು ಇಸ್ರಾಯೇಲಿನ ಮೇಲೆ (ಇಸ್ರಾಯೇಲ್ ದೇಶದ ಉತ್ತರ ರಾಜ್ಯದ ಮೇಲೆ) ಮತ್ತು ಆನಂತರ ಯೆಹೂದದ ಮೇಲೆ (ಇಸ್ರಾಯೇಲ್ ದೇಶದ ದಕ್ಷಿಣ ರಾಜ್ಯದ ಮೇಲೆ) ಬಂದಿತು.

ದೇವರು ಯೇಸುವಿನ ಮೂಲಕ ತನ್ನ ರಾಜ್ಯವನ್ನು ಒಂದು ಹೊಸದಾದ ರೀತಿಯಲ್ಲಿ ಪರಿಚಯಪಡಿಸಿದನು. ದೇವರು ತನ್ನ ಜನರೊಂದಿಗೆ ಒಂದು ಹೊಸ ಒಡಂಬಡಿಕೆಯನ್ನು ಮಾಡಿಕೊಳ್ಳುವ ಸಮಯ ಬಂದಿತ್ತು. ಆ ಹೊಸ ಒಡಂಬಡಿಕೆಯು ದೇವರ ರಾಜ್ಯದ ನಿಯಮಗಳಿಗೆ ಅನುಸಾರವಾದ ಜೀವನವನ್ನು ಪ್ರದರ್ಶಿಸಿತು. ಹಾಗಾಗಿ ದೇವರು ತನ್ನ ಧರ್ಮಶಾಸ್ತ್ರವನ್ನು ಸಿನಾಯ್ ಪರ್ವತದ ಮೇಲೆ ಕೊಟ್ಟಾಗ ಮಾಡಿಕೊಂಡ ಹಳೇಯ ಒಡಂಬಡಿಕೆಯ ಬೆಳಕಿನಲ್ಲಿ ಪರ್ವತ ಪ್ರಸಂಗವನ್ನು ಅರ್ಥಮಾಡಿಕೊಳ್ಳಬಹುದು. ಹಳೇ ಒಡಂಬಡಿಕೆಯ ಧರ್ಮಶಾಸ್ತ್ರವು ಹಳೇಯ ಒಡಂಬಡಿಕೆಯ ಅಡಿಯಲ್ಲಿದ್ದ ದೇವಜನರ ಜೀವಿತವನ್ನು ನಿಯಂತ್ರಿಸುತ್ತಿತ್ತು. ಪರ್ವತ ಪ್ರಸಂಗವು ಹೊಸ ಒಡಂಬಡಿಕೆಯ ಅಡಿಯಲ್ಲಿರುವ ದೇವಜನರ ಜೀವಿತವನ್ನು ಪ್ರದರ್ಶಿಸುತ್ತದೆ.

## ಹೊಸ ಒಡಂಬಡಿಕೆಯ ಹಿನ್ನಲೆ

ಪರ್ವತ ಪ್ರಸಂಗವನ್ನು ಮತ್ತಾಯನ ಬರೆದ ಸುವಾರ್ತೆಯಲ್ಲಿ ಯೇಸುವಿನ ಬಹಿರಂಗ ಸೇವೆಯ ಪ್ರಾರಂಭದಲ್ಲಿ ಕಾಣಬಹುದು. ಯೇಸು ಆಗ ತಾನೇ ದೇವರ ರಾಜ್ಯದ ಶುಭ ಸಂದೇಶವನ್ನು ಸಾರಲು ಪ್ರಾರಂಭಿಸಿದನು. ಹಳೇ ಒಡಂಬಡಿಕೆಯ ಕಾಲದಲ್ಲಿ ದೇವರು ಮಾಡಿದ ವಾಗ್ದಾನಗಳು ಈಗ ನೆರವೇರತೊಡಗಿದ್ದವು. ಯೇಸುವಿನೊಂದಿಗೆ ಹೊಸ ಯುಗವು ಆಗಮಿಸಿತ್ತು. ಯೇಸುವಿನೊಂದಿಗೆ ದೇವರ ಆಳ್ವಿಕೆಯು ಮಾನವನ ಜಗತ್ತಿಗೆ ಒಂದು ಹೊಸದಾದ ರೀತಿಯಲ್ಲಿ ಪ್ರವೇಶಿಸಿತು:

> *ಅಂದಿನಿಂದ ಯೇಸು – ಪರಲೋಕರಾಜ್ಯವು ಸಮೀಪಿಸಿತು; ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಸಾರಿ ಹೇಳುವುದಕ್ಕೆ ಪ್ರಾರಂಭಿಸಿದನು.*
>
> *ಬಳಿಕ ಯೇಸು ಗಲಿಲಾಯದಲ್ಲೆಲ್ಲಾ ತಿರುಗಾಡಿ ಅಲ್ಲಿಯವರ ಸಭಾಮಂದಿರಗಳಲ್ಲಿ ಉಪದೇಶ ಮಾಡುತ್ತಾ, ಪರಲೋಕರಾಜ್ಯದ ಸುವಾರ್ತೆಯನ್ನು ಸಾರುತ್ತಾ ... ಇದ್ದನು (ಮತ್ತಾ 4:17 23)*

ಪರ್ವತ ಪ್ರಸಂಗದ ಹೊಸ ಒಡಂಬಡಿಕೆಯ ಹಿನ್ನಲೆಯು ಇದೇ ಆಗಿದೆ. ಅದು ದೇವರ ರಾಜ್ಯವು ತನ್ನ ಪ್ರಜೆಗಳಿಂದ ಅಪೇಕ್ಷಿಸುವ ಪಶ್ಚಾತ್ತಾಪ ಮತ್ತು ನೀತಿವಂತಿಕೆಯು ಎಂತದ್ದೆಂದು ಯೇಸುವಿನ ಹಿಂಬಾಲಕರಿಗೆ ತೋರಿಸುತ್ತದೆ. ಮಾನವನ ಜೀವನ ಮತ್ತು ಮಾನವನ ಅನ್ಯೋನ್ಯತೆಯು ದೇವರ ಆಳ್ವಿಕೆಯ ಅಡಿಯಲ್ಲಿ ಹೇಗಿರುತ್ತದೆ ಎಂಬುದನ್ನು ಅದು ವರ್ಣಿಸುತ್ತದೆ. ಅದನ್ನು ಒಂದೇ ಪದದಲ್ಲಿ ಹೀಗೆ ಸಾರಾಂಶಗೊಳಿಸಬಹುದು – ದೇವರ ರಾಜ್ಯವು ವಿಭಿನ್ನವಾಗಿರುವುದು. ದೇವರ ರಾಜ್ಯದಲ್ಲಿ ಜೀವಿಸುವ ಜೀವನವು ಇಹಲೋಕದ, ಅಂದರೆ ಬಿದ್ದುಹೋಗಿರುವ ಹಾಗೂ ಸೈತಾನನಿಂದ ಪ್ರೇರಿಪಿಸಲ್ಪಟ್ಟ ಪ್ರಾಪಂಚಿಕ ಆಸೆಗಳಿಂದ ("ಶರೀರದಾಶೆಗಳಿಂದ") ನಿಯಂತ್ರಿಸಲ್ಪಡುವ ಜೀವನಕ್ಕಿಂತ ಅತ್ಯಂತ ವ್ಯತ್ಯಾಸವುಳ್ಳದ್ದಾಗಿರುವುದು.

## ಇಂದು ಪರ್ವತ ಪ್ರಸಂಗಕ್ಕೂ ನಮಗೂ ಯಾವುದಾದರೂ ಸಂಬಂಧವಿದೆಯೋ?

ಈ ಲೋಕದಲ್ಲಿರುವ ದೇವರ ರಾಜ್ಯಕ್ಕನುಸಾರವಾದ ಜೀವನದ ಕುರಿತು ಹೊಸ ಒಡಂಬಡಿಕೆಯಲ್ಲಿ ಒಂದು ಸಂಪೂರ್ಣವಾದ ವಿವರಣೆಯನ್ನು ಪರ್ವತ ಪ್ರಸಂಗದಲ್ಲಿ ಮಾತ್ರ ಕಾಣಬಹುದು.

ಪರ್ವತ ಪ್ರಸಂಗದಲ್ಲಿ ನಾವು ನಿಜವಾಗಲು ಕ್ರಿಸ್ತೀಯ ಮೌಲ್ಯಗಳನ್ನು, ನೈತಿಕ ಮಾನದಂಡಗಳನ್ನು, ಧಾರ್ಮಿಕ ಭಕ್ತಿಯನ್ನು, ಹಣದ ಹಾಗೂ ಜೀವನ ಶೈಲಿಯ ಹಾಗೂ ಜೀವನದ ಧ್ಯೇಯದ ಮತ್ತು ಸಂಬಂಧಗಳ ಕುರಿತಾಗಿರುವ ಮನೋಭಾವನೆಯನ್ನು ಕಾಣಬಹುದು. ಅವುಗಳು ಅಕ್ರೈಸ್ತ ಜಗತ್ತಿಗಿಂತ ಸಂಪೂರ್ಣವಾಗಿ ವ್ಯತ್ಯಾಸವಾಗಿದೆ. ಯಾಕೆ? ಯಾಕೆಂದರೆ ಅವುಗಳು ದೇವರ ರಾಜ್ಯದ ನಿಯಮಗಳನ್ನು ಪ್ರತಿಬಿಂಬಿಸುತ್ತವೆಯೇ ಹೊರತು ಇಹಲೋಕದ ನಿಯಮಗಳನ್ನಲ್ಲ.

ಹಾಗಾಗಿ ಪರ್ವತ ಪ್ರಸಂಗವು ಯೇಸು ಆ ದಿನಗಳಲ್ಲಿ ತನ್ನ ಶಿಷ್ಯರಿಂದ ನಿರೀಕ್ಷಿಸಿದ ನಡತೆಯನ್ನು ತೋರಿಸುತ್ತದೆ. ಅವರು ದೇವರ ರಾಜ್ಯದ ಅಂದರೆ ಯೇಸುವಿನ ಮೊದಲನೇಯ ಬರೋಣದೊಂದಿಗೆ ಆಗಮಿಸಿದ ರಾಜ್ಯದ ಹಾಗೂ ಯೇಸುವಿನ ಎರಡನೇ ಬರೋಣದೊಂದಿಗೆ ಪರಿಪೂರ್ಣಗೊಳ್ಳುವ ರಾಜ್ಯದ ಪ್ರಜೆಗಳಾಗಿದ್ದರು.

ಇಂದು ವಿಶ್ವಾಸಿಗಳು ದೇವರ ರಕ್ಷಣಾ ಇತಿಹಾಸದ ಅದೇ ಕಾಲದಲ್ಲಿ ಜೀವಿಸುತ್ತಿದ್ದಾರೆ. ನಾವು ಇಂದಿಗೂ ಸಹ ಯೇಸುವಿನ ಮೊದಲನೇಯ ಮತ್ತು ಎರಡನೇ ಬರೋಣದ "ಕಾಲಗಳ ನಡುವೆ" ಜೀವಿಸುತ್ತಿದ್ದೇವೆ. ನಾವು ಇಂದಿಗೂ ಸಹ ಪ್ರಪಂಚವು ಗತಿಸಿಹೋಗುತ್ತಿರುವ (1 ಕೊರಿ. 7:31) ಮತ್ತು ದೇವರ ರಾಜ್ಯವು ಸಾಸಿವೆ ಕಾಳಿನಂತೆ (ಲೂಕ 13:19) ಬೆಳೆಯುತ್ತಿರುವ ಇತಿಹಾಸದ ಕಾಲಘಟ್ಟದಲ್ಲಿ ಜೀವಿಸುತ್ತಿದ್ದೇವೆ. ಹಾಗಾಗಿ ಪರ್ವತ ಪ್ರಸಂಗದ ಸಂದೇಶವು ಯೇಸುವಿನ ಮೊದಲ ಶಿಷ್ಯರಿಗೆ ಯಾವ ಸಂಬಂಧವನ್ನು ಹೊಂದಿತ್ತೋ ಅದೇ ಸಂಬಂಧವನ್ನು ಇಂದಿನ ವಿಶ್ವಾಸಿಗಳಾದ ನಮ್ಮೊಂದಿಗೂ ಹೊಂದಿದೆ. ಯೇಸು ಈ ಸತ್ಯಗಳನ್ನು ಗಲಿಲಾಯದ ಬೆಟ್ಟಗಳ ಮೇಲೆ ಬೋಧಿಸಿದಾಗ ಅದನ್ನು ಕೇಳಿಸಿಕೊಂಡ ಜನರಿಗೆ ಅದು ಯಾವ ಸಮಂಜಸತೆಯನ್ನು ಹೊಂದಿತ್ತೋ ಅದೇ ಸಮಂಜಸತೆಯನ್ನು ಇಂದು ದೇವರ ರಾಜ್ಯದ ಪ್ರಜೆಗಳಿಗೂ ಹೊಂದಿದೆ.

## ನಾವು ಪರ್ವತ ಪ್ರಸಂಗದ ಮಾನದಂಡಗಳಿಗೆ ಅನುಸಾರವಾಗಿ ಜೀವಿಸಲು ಸಾಧ್ಯವೇ?

ಪರ್ವತ ಪ್ರಸಂಗವು ಇಂದಿನ ವಿಶ್ವಾಸಿಗಳಿಗೂ ಸಂಬಂಧಪಟ್ಟಿದೆ ಎಂಬ ವಾಸ್ತವಾಂಶವನ್ನು ಮನದಟ್ಟುಮಾಡಿಕೊಳ್ಳುವುದು ಒಳ್ಳೆಯದು. ಆದರೆ ಈಗ ಉದ್ಭವಿಸುವ ಪ್ರಶ್ನೆಯು ನಾವು ಪರ್ವತ ಪ್ರಸಂಗದ ಮಾನದಂಡಗಳಿಗೆ ಅನುಸಾರವಾಗಿ ಕಾರ್ಯರೂಪದಲ್ಲಿ ಜೀವಿಸಲು ಸಾಧ್ಯವೇ? ಬಾಯಲ್ಲಿ ಹೇಳುವುದು ಸುಲಭ ಆದರೆ ನಿಜಜೀವನದಲ್ಲಿ ಕಾರ್ಯರೂಪಕ್ಕೆ ತರುವುದು ಸುಲಭವಲ್ಲ. ಪರ್ವತ ಪ್ರಸಂಗದ ಮಾನದಂಡಗಳನ್ನು ಸಾಧಿಸುವುದು ಸಾಧ್ಯವೇ? ಅಥವಾ ಅವುಗಳು ಕೇವಲ ಸಾಧಿಸಲಾಗದ ಗುರಿಗಳೋ?

ಜನರು ಈ ಪ್ರಶ್ನೆಗಳಿಗೆ ವ್ಯತ್ಯಾಸವಾದ ಉತ್ತರಗಳನ್ನು ನೀಡಿದ್ದಾರೆ:

- ಅನೇಕ ಓದುಗರು ಮತ್ತು ವಿಮರ್ಶಕರು ಇವುಗಳು ಸಾಧಿಸಲಾಗದ ಮಾನದಂಡ ಎಂದು ಹೇಳಿದ್ದಾರೆ. ಅವುಗಳನ್ನು ಕಾರ್ಯರೂಪದ ಕ್ರಿಸ್ತೀಯ ಜೀವನದಲ್ಲಿ ಸಾಧಿಸುವುದು ಅಸಾಧ್ಯವಾಗಿದೆ.

- ಕೆಲವರು ಅವುಗಳನ್ನು ವಿಶೇಷವಾದ ಸನ್ನಿವೇಶಕ್ಕೆ ಕೊಡಲಾದ ವಿಶೇಷವಾದ ಆಜ್ಞೆಗಳು ಎಂಬುದಾಗಿ ಕಾಣುತ್ತಾರೆ: ಅಂದರೆ, ಇತಿಹಾಸದ ಅಂತ್ಯದಲ್ಲಿ ಮಾತ್ರ ಜಾರಿಗೆ ತರಬೇಕಾದ "ವಿಶೇಷ ಆಜ್ಞೆಗಳು" ಎಂಬುದಾಗಿ. ಹಾಗಾಗಿ ಯೇಸು ದಿನನಿತ್ಯದ ಕ್ರಿಸ್ತೀಯ ಜೀವನವನ್ನು ಉದ್ದೇಶಿಸಿ ಇದನ್ನು ಕೊಡಲಿಲ್ಲ.

- ಅನೇಕ ಪ್ರಸಂಗಿಕರು ಮತ್ತು ಬೋಧಕರು ದಿನನಿತ್ಯ ಜೀವನಕ್ಕೆ ಅನುಕೂಲಕರವಾಗುವಂತೆ ಪರ್ವತ ಪ್ರಸಂಗದ ಮಾನದಂಡಗಳನ್ನು ಸಡಿಲಗೊಳಿಸಲು ಮತ್ತು ಮಾರ್ಪಡಿಸಲು ಯತ್ನಿಸಿದ್ದಾರೆ. ಕ್ರೈಸ್ತರ ಮೇಲೆ ಯೇಸು ಯಾವುದೇ ಮಾಡಲೇಬೇಕೆನ್ನುವ ಆಜ್ಞೆಗಳನ್ನು ಹಾಕಲಿಲ್ಲ ಎಂಬ ರೀತಿಯಲ್ಲಿ ಅವರು ಅದನ್ನು ಅರ್ಥವಿವರಿಸುತ್ತಾರೆ.

- ಇತರರು ಹೇಳುವುದೇನೆಂದರೆ, ಪರ್ವತ ಪ್ರಸಂಗವು ಮೂಲಭೂತವಾದ ನೈತಿಕ ಮಾನದಂಡಗಳ ಕುರಿತು ಮಾತನಾಡುತ್ತದೆ. ಅವುಗಳನ್ನು ಎಲ್ಲಾ ಧರ್ಮಗಳಲ್ಲಿ ಕಾಣಬಹುದು ಮತ್ತು ಅವುಗಳನ್ನು ಪಾಲಿಸುವುದು ಬಹಳ ಸುಲಭ. "ನಾನು ಪರ್ವತ ಪ್ರಸಂಗಕ್ಕೆ ಅನುಸಾರವಾಗಿಯೇ ಜೀವಿಸುತ್ತಿದ್ದೇನೆ. ನನಗೇನು ಅದು ಕಷ್ಟವೆನಿಸಲಿಲ್ಲ" ಎಂದು ಅವರು ಹೇಳುತ್ತಾರೆ.

- ವೈಯಕ್ತಿಕವಾಗಿ ಹೇಳಬೇಕಾದರೆ ನಾನು ಜಾನ್ ಸ್ಟಾಟ್‌ರವರೊಂದಿಗೆ ಒಪ್ಪುತ್ತೇನೆ. ಅವರು ಹೀಗೆ ಬರೆಯುತ್ತಾರೆ: "ಪರ್ವತ ಪ್ರಸಂಗದ ಮಾನದಂಡಗಳು ಪ್ರತಿಯೊಬ್ಬ ಮನುಷ್ಯನೂ ಸುಲಭವಾಗಿ ಸಾಧಿಸಬಲ್ಲ ಸಂಗತಿಯಲ್ಲ, ಅದೇ ಸಮಯದಲ್ಲಿ ಅದು ಯಾವ ಮನುಷ್ಯನಿಂದಲೂ ಸಹ ಸಾಧಿಸಲಾಗದ ಸಂಗತಿಯೂ ಅಲ್ಲ. ಅವುಗಳನ್ನು ಮನುಷ್ಯನ ಕೈಗೆಟಕದಂತೆ ಮಾಡುವುದು ಕ್ರಿಸ್ತನು ನೀಡಿದ ಆ ಸಂದೇಶದ ಉದ್ದೇಶವನ್ನೇ ನಿಷ್ಪ್ರಯೋಜನ ಮಾಡಿದಂತಾಗುತ್ತದೆ. ಅದೇ ಸಮಯದಲ್ಲಿ ಅದನ್ನು ಎಲ್ಲರ ಕೈಗೆಟಕುವಂತೆ ಮಾಡುವುದಾದರೆ ಮಾನವನ ಪಾಪಗಳನ್ನು ಪರಿಗಣನೆಗೆ ತೆಗೆದುಕೊಳ್ಳದಂತಾಗುತ್ತದೆ. ಅವುಗಳನ್ನು ಸಾಧಿಸಬಹುದು ಎನ್ನುವುದು ಸತ್ಯ. ಆದರೆ ಹೊಸ ಜನ್ಮವನ್ನು ಅನುಭವಿಸಿದವರು (ಅಂದರೆ, ದೇವರ ರಾಜ್ಯವನ್ನು ಪ್ರವೇಶಿಸಿದವರು) ಮಾತ್ರ ಅದನ್ನು ಸಾಧಿಸಬಲ್ಲರು". ಆ ಸಂದೇಶವು ಹೃದಯದ ನೀತಿವಂತಿಕೆಗೆ ಸಂಬಂಧಿಸಿರುವುದರಿಂದ ಹೊಸ ಜನ್ಮವು ಅತ್ಯವಶ್ಯವಾಗಿದೆ.

ಯೇಸು ಈಗಾಗಲೇ ತನ್ನ ಶಿಷ್ಯರಾಗಿ ಹಿಂಬಾಲಿಸುತ್ತಿದ್ದವರಿಗೆ ಪರ್ವತ ಪ್ರಸಂಗವನ್ನು ಸಾರಿದ್ದರಿಂದ ಅದು ದೇವರ ರಾಜ್ಯದ ಪ್ರಜೆಗಳಿಗೂ ಹಾಗೂ ದೇವರ ಕುಟುಂಬದ ಮಕ್ಕಳಿಗೂ ಅನ್ವಯಿಸುವಂತದ್ದಾಗಿದೆ.

ನಾವು ಯೇಸುವಿನ ಮಾನದಂಡಗಳನ್ನು ಸಾಧಿಸುವಾಗ (ಅಥವಾ ಕನಿಷ್ಟ ಪಕ್ಷ ಅದಕ್ಕೆ ಸಮೀಪ ಬರುವಾಗ) ನಮ್ಮ ಜೀವಿತಗಳು ನಾವು ಆತನಿಗೆ ಸಂಬಂಧಿಸಿದವರು ಎಂಬುದನ್ನು ತೋರಿಸುತ್ತವೆ. ದೇವರ ಉಚಿತವಾದ ವರ ಹಾಗೂ ಕೃಪೆಯ ನಿಮಿತ್ತ ನಾವು ದೇವರ ರಾಜ್ಯದ ಪ್ರಜೆಗಳಾಗಿದ್ದೇವೆ ಎಂಬುದಕ್ಕೆ ನಮ್ಮ ಜೀವಿತಗಳು ಸಾಕ್ಷ್ಯಾಧಾರವನ್ನು ಕೊಡುತ್ತವೆ.

## ಪರ್ವತ ಪ್ರಸಂಗದ ದೈವಶಾಸ್ತ್ರ

ಪರ್ವತ ಪ್ರಸಂಗವು ಮಾನವನ ಪುಣ್ಯಕ್ರಿಯೆಗಳ ಮೂಲಕ ರಕ್ಷಣೆಯುಂಟಾಗುತ್ತದೆ ಎಂಬ ಒಂದು ಸಿದ್ಧಾಂತವನ್ನು ಬೋಧಿಸುತ್ತದೆ ಮತ್ತು ಅದು ಹಳೇ ಒಡಂಬಡಿಕೆಯ ಧರ್ಮಶಾಸ್ತ್ರದ ಒಂದು ಕ್ರಿಸ್ತೀಯ ಆವೃತ್ತಿಯಾಗಿದ್ದು ಅದನ್ನು ಹೊಸ ಒಡಂಬಡಿಕೆಯ ನ್ಯಾಯವಿಧಾಯಕನಾದ ಯೇಸು ಪ್ರಸ್ತುತಪಡಿಸಿದನು ಎಂದು ಕೆಲವು ಸತ್ಯವೇದ ಶಾಸ್ತ್ರಜ್ಞರುಗಳು ಘೋಷಿಸಿಕೊಳ್ಳುತ್ತಾರೆ. ಈ ಘೋಷಣೆಯ ಪರಿಣಾಮವೇನೆಂದರೆ ಪರ್ವತ ಪ್ರಸಂಗದ ದೈವಶಾಸ್ತ್ರವು ಸುವಾರ್ತೆಯೊಂದಿಗೆ ತದ್ವಿರುದ್ಧವಾಗಿದೆ. ಯಾಕೆಂದರೆ ಸುವಾರ್ತೆಯು ಕೃಪೆಯಿಂದ ರಕ್ಷಣೆಯೇ ಹೊರತು ಕ್ರಿಯೆಗಳಿಂದಲ್ಲ ಎಂದು ಘೋಷಿಸುತ್ತದೆ.

ಖಂಡಿತವಾಗಲೂ ಈ ದೃಷ್ಟಿಕೋನವು ತಪ್ಪಾದದ್ದಾಗಿದೆ. ಇದನ್ನು ಪರ್ವತ ಪ್ರಸಂಗದ ಪ್ರಾರಂಭದಲ್ಲೇ ಕಾಣಬಹುದು. ಮೊದಲ ಸುಂದರವಾದ ಆಶೀರ್ವಚನದಲ್ಲಿಯೇ ಯೇಸು ಕೃಪೆಯಿಂದ ರಕ್ಷಣೆಯೇ ಹೊರತು ಕ್ರಿಯೆಗಳಿಂದಲ್ಲ ಎಂದು ಘೋಷಿಸುತ್ತಾನೆ: ಆತನು "ಆತ್ಮದಲ್ಲಿ ಬಡವರಾಗಿರುವವರಿಗೆ" ದೇವರ ರಾಜ್ಯವನ್ನು ವಾಗ್ದಾನ ಮಾಡುತ್ತಾನೆ. ಆತ್ಮದಲ್ಲಿ ಬಡವರಾಗಿರುವವರು ಎಂದರೆ ಆತ್ಮಿಕವಾಗಿ ಬಡವರಾಗಿದ್ದು ಹೊಗಳಿಕೊಳ್ಳಲು ಏನೂ ಹೊಂದಿಲ್ಲದ ಜನರಾಗಿದ್ದಾರೆ. ದೇವರ ರಾಜ್ಯವು ಅವರದು – ಅವರ ಕ್ರಿಯೆಗಳ ನಿಮಿತ್ತವಲ್ಲ ಬದಲಾಗಿ ದೇವರ ಕೃಪೆಯಿಂದಲೇ.

ಹಾಗಾದರೆ ಪರ್ವತ ಪ್ರಸಂಗದುದ್ದಕ್ಕೂ ನೀತಿವಂತಿಕೆಯ ಕುರಿತು ಒತ್ತಿ ಹೇಳಿರುವುದನ್ನು ನಾವು ಹೇಗೆ ವಿವರಿಸಬಹುದು? ಈ ಪ್ರಶ್ನೆಗೆ ಉತ್ತರವೇನೆಂದರೆ ಅದು ಒಂದುರೀತಿಯ ಹೊಸ ಧರ್ಮಶಾಸ್ತ್ರವಾಗಿದ್ದು ಹಳೇಯ ಧರ್ಮಶಾಸ್ತ್ರದಂತೆ ಎರಡು ದೈವಿಕ ಉದ್ದೇಶವನ್ನು

ಹೊಂದಿದೆ. ಮೊದಲನೇಯದಾಗಿ ಒಬ್ಬ ಅಕ್ರೈಸ್ತನು ತನ್ನ ಸ್ವಂತ ಶಕ್ತಿಯಿಂದ ದೇವರನ್ನು ಮೆಚ್ಚಿಸಲಾರನು (ಯಾಕೆಂದರೆ ಅವನು ಧರ್ಮಶಾಸ್ತ್ರಕ್ಕೆ ವಿಧೇಯನಾಗಲಾರನು) ಎಂಬುದನ್ನು ಅದು ತೋರಿಸುತ್ತದೆ, ಹಾಗಾಗಿ ಧರ್ಮಶಾಸ್ತ್ರವು ಆತನು ನೀತಿವಂತನಾಗಿ ಮಾಡಲ್ಪಡುವುದಕ್ಕಾಗಿ ಕ್ರಿಸ್ತನ ಕಡೆಗೆ ನಡೆಸುತ್ತದೆ. ಎರಡನೇಯದಾಗಿ ಕ್ರಿಸ್ತನ ಬಳಿಗೆ ನೀತಿವಂತನಾಗುವುದಕ್ಕಾಗಿ ಬಂದಿರುವ ವಿಶ್ವಾಸಿಗೆ ದೇವರಿಗೆ ಮೆಚ್ಚಿಕೆಯಾದ ಜೀವನವನ್ನು ಹೇಗೆ ಜೀವಿಸಬೇಕೆಂದು ತೋರಿಸುತ್ತದೆ. ಪೌಲನ ಪತ್ರಿಕೆಗಳ ಆಧರಿತವಾದ ಪ್ರಾರಂಭಿಕ ದೈವಶಾಸ್ತ್ರವು ವಿಶ್ವಾಸಿಯ ಜೀವಿತದಲ್ಲಿ ಧರ್ಮಶಾಸ್ತ್ರದ ಕ್ರಿಯೆಯನ್ನು ಹೀಗೆ ಸಾರಾಂಶಗೊಳಿಸುತ್ತದೆ: ಮೊದಲು ಧರ್ಮಶಾಸ್ತ್ರವು ನಮ್ಮನ್ನು ನೀತಿವಂತರಾಗುವುದಕ್ಕಾಗಿ ಕ್ರಿಸ್ತನ ಬಳಿಗೆ ಕಳುಹಿಸುತ್ತದೆ, ನಂತರ ನಾವು ಶುದ್ಧಿಕರಿಸಲ್ಪಡುವುದಕ್ಕಾಗಿ ಕ್ರಿಸ್ತನು ಪುನಃ ನಮ್ಮನ್ನು ಧರ್ಮಶಾಸ್ತ್ರದ ಬಳಿಗೆ ಕಳುಹಿಸುತ್ತಾನೆ (ಶುದ್ಧಿಕರಿಸಲ್ಪಟ್ಟ ಜೀವನವು ಹೇಗಿರುತ್ತದೆಂದು ಧರ್ಮಶಾಸ್ತ್ರವು ನಮಗೆ ತೋರಿಸುತ್ತದೆ).

## ಯೇಸುವಿನ ಅಧಿಕಾರ

ಪರ್ವತ ಪ್ರಸಂಗವನ್ನು ಬೋಧಿಸಿದ ಅದೇ ಯೇಸು ರೋಗ ಪೀಡಿತರನ್ನು ಗುಣಪಡಿಸಿದನು, ದೆವ್ವ ಬಾಧಿತರನ್ನು ಬಿಡುಗಡೆಗೊಳಿಸಿದನು ಮತ್ತು ಬಿರುಗಾಳಿಯನ್ನು ಅಡಗಿಸಿದನು. ಆತನ ಅಸಾಧಾರಣವಾದ ಅದ್ಭುತಗಳಲ್ಲಿ ಕಾರ್ಯಮಾಡಿದ ದೈವೀಕ ಶಕ್ತಿ ಮತ್ತು ಅಧಿಕಾರವು ಆತನ ಬೋಧನೆಗಳಲ್ಲಿಯು ಕಾರ್ಯಮಾಡಿತು.

ಪರ್ವತ ಪ್ರಸಂಗವನ್ನು ಮೊದಲು ಕೇಳಿದ ಜನರು (ಶಿಷ್ಯರ ಗುಂಪು) ಆ ಪ್ರಸಂಗಿಕನ ಅಸಾಧಾರಣವಾದ ಅಧಿಕಾರವನ್ನು ಕಂಡು ಆಶ್ಚರ್ಯಪಟ್ಟರು.

*ಯೇಸು ಈ ಮಾತುಗಳನ್ನು ಹೇಳಿ ಮುಗಿಸಿದ ಮೇಲೆ ಆ ಜನರ ಗುಂಪುಗುಳು ಆತನ ಉಪದೇಶಕ್ಕೆ ಅತ್ಯಾಶ್ಚರ್ಯಪಟ್ಟವು. ಯಾಕೆಂದರೆ ಅವರ ಶಾಸ್ತ್ರಿಗಳಂತೆ ಉಪದೇಶ ಮಾಡದೆ ಅಧಿಕಾರವಿದ್ದವನಂತೆ ಅವರಿಗೆ ಉಪದೇಶಮಾಡುತ್ತಿದ್ದನು* (ಮತ್ತಾಯ 7:28–29).

ಈ "ಅಧಿಕಾರವು" ಯಾವುದರ ಮೇಲೆ ಆಧರಿತವಾಗಿತ್ತು? ಯೇಸು ಈ ರೀತಿಯಾಗಿ ಮಾತನಾಡುವಂತೆ ಆತನು ತನ್ನ ಕುರಿತಾಗಿ ಏನೆಂದು ಭಾವಿಸಿದ್ದನು? ಯೇಸು ತಾನು ಯಾರೆಂಬುದನ್ನು ಮತ್ತು ತನ್ನ ಗುರಿ ಏನೆಂಬುದನ್ನು ಹೇಗೆ ಅರ್ಥಮಾಡಿಕೊಂಡಿದ್ದನು ಎಂಬುದರ ಕುರಿತು ಪರ್ವತ ಪ್ರಸಂಗವು ಕೆಲವು ಮಾಹಿತಿಗಳನ್ನು ತಿಳಿಸುತ್ತದೆ:

1. ಯೇಸು ಒಬ್ಬ ಬೋಧಕನಾಗಿ ಅಧಿಕಾರವುಳ್ಳವನಾಗಿದ್ದನು: ಶಿಷ್ಯರ ಗುಂಪು ಆತನ ಬೋಧನೆಯನ್ನು ಕೇಳಿ ಅತ್ಯಾಶ್ಚರ್ಯಪಟ್ಟರು. ಯಾಕೆಂದರೆ ಆತನು ಅವರ ಶಾಸ್ತ್ರಿಗಳಂತೆ ಬೋಧಿಸದೇ ಅಧಿಕಾರವುಳ್ಳವನಾಗಿ ಅವರಿಗೆ ಬೋಧಿಸಿದನು. ಯೆಹೂದ್ಯ ಶಾಸ್ತ್ರಿಗಳು ಈ ರೀತಿಯಾದ ಅಧಿಕಾರವನ್ನು ಘೋಷಿಸಿಕೊಂಡಿರಲಿಲ್ಲ. ಅವರಿಗಿದ್ದ ಏಕ ಮಾತ್ರ ಅಧಿಕಾರವು ಅವರು ಪದೇ ಪದೇ ಉಲ್ಲೇಖಿಸುತ್ತಿದ್ದ ಅಧಿಕಾರಿಗಳಿಂದ ದೊರಕ್ಕಿತ್ತು. ಹಾಗಾಗಿ ಅವರು ಆ ಅಧಿಕಾರದ ಮೂಲಕ ಮಾತನಾಡಿದರು. ಆದರೆ ಇನ್ನೊಂದು ಕಡೆಯಲ್ಲಿ ಯೇಸುವು ಶೈಕ್ಷಣಿಕವಾಗಿ ಒಬ್ಬ ಶಾಸ್ತ್ರಿಯಾಗದಿದ್ದರೂ ತಾನೇ ಅಧಿಕಾರ ಹೊಂದಿದವನಾಗಿ ಮಾತನಾಡಿದನು. ಆತನು ಅವರ ಅರ್ಥವಿವರಣೆಗಳನ್ನು ತೆಗೆದುಹಾಕಿ ದೇವರ ಧರ್ಮಶಾಸ್ತ್ರದ ತನ್ನ ಸ್ವಂತ ಸರಿಯಾದ ಮತ್ತು ಅಧಿಕಾರಯುಕ್ತವಾದ ಅರ್ಥವಿವರಣೆಯನ್ನು ನೀಡಿದನು.
2. ಯೇಸು ಕ್ರಿಸ್ತನಾಗಿ (ಮೆಸ್ಸೀಯನಾಗಿ) ಅಧಿಕಾರವುಳ್ಳವನಾಗಿದ್ದನು: ಮತ್ತಾಯ 5:17 ರಲ್ಲಿ ಯೇಸು ಹೀಗೆ ಹೇಳುತ್ತಾನೆ, *"ಮೋಶೆಯ ಧರ್ಮಶಾಸ್ತ್ರವನ್ನಾಗಲಿ ಪ್ರವಾದಿಗಳ ವಚನಗಳನ್ನಾಗಲಿ ತೆಗೆದುಹಾಕುವುದಕ್ಕೆ ನಾನು ಬಂದೆನೆಂದು ನೆನಸಬೇಡಿರಿ. ತೆಗೆದುಹಾಕುವುದಕ್ಕೆ ಬಂದಿಲ್ಲ; ನೆರವೇರಿಸುವುದಕ್ಕೆ ಬಂದಿದ್ದೇನೆ.* ಹಾಗಾಗಿ ಯೇಸು ಧರ್ಮಶಾಸ್ತ್ರದ ಹಾಗೂ ಪ್ರವಾದಿಗಳ ಎಲ್ಲಾ ಮುಂತಿಳಿಸುವಿಕೆಗಳು ಮತ್ತು ಮುಂಛಾಯೆಗಳು ತನ್ನಲ್ಲಿ ನೆರವೇರಿವೆ ಎಂದು ಘೋಷಿಸಿಕೊಂಡನು. ಎಲ್ಲಾ ಪ್ರವಾದನೆಗಳ ನೆರವೇರುವಿಕೆಯು ತಾನೇ ಆಗಿದ್ದೇನೆ ಎಂದು ಯೇಸು ತನ್ನ ಕುರಿತು ಅರ್ಥಮಾಡಿಕೊಂಡಿದ್ದನು. ಹಳೇ ಒಡಂಬಡಿಕೆಯಲ್ಲಿ ದೇವರು ವಾಗ್ದಾನ ಮಾಡಿದ್ದ ಮೆಸ್ಸೀಯನಾದ ಕ್ರಿಸ್ತನು ತಾನೇ ಆಗಿದ್ದೇನೆ ಎಂದು ಯೇಸು ತಿಳಿದಿದ್ದನು.
3. ಯೇಸು ಕರ್ತನಾಗಿ ಅಧಿಕಾರವುಳ್ಳವನಾಗಿದ್ದನು: ಯೇಸು ಜನರಿಗೆ ಆಜ್ಞೆಗಳನ್ನು ನೀಡುತ್ತಾ, ಅವರ ವಿಧೇಯತೆಯನ್ನು ನಿರೀಕ್ಷಿಸುತ್ತಾ ಮತ್ತು ಅವರ ನಿತ್ಯವಾದ ಕ್ಷೇಮವು ಅಪಾಯದಲ್ಲಿದೆ ಎಂದು ಎಚ್ಚರಿಸುತ್ತಾ ತನ್ನನ್ನು ಜನರ ಯಜಮಾನನನ್ನಾಗಿ ಕಂಡನು: *"ನನ್ನನ್ನು ಸ್ವಾಮಿ, ಸ್ವಾಮಿ ಅನ್ನುವವರೆಲ್ಲರು ಪರಲೋಕರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ; ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕರಾಜ್ಯದಲ್ಲಿ ಸೇರುವನು"* (7:21). ಹಾಗಾಗಿ ಯೇಸು ಅವರ ಬೋಧಕನೂ ಮತ್ತು ಕರ್ತನೂ ಆಗಿದ್ದನು.

4. ಯೇಸು ರಕ್ಷಕನಾಗಿ ಅಧಿಕಾರವುಳ್ಳವನಾಗಿದ್ದನು: ಯೇಸು ರಕ್ಷಣೆಯ ಮಾರ್ಗವನ್ನು ಅರಿತಿದ್ದನು ಮತ್ತು ಅದನ್ನು ಬೋಧಿಸಿದನು ಎಂಬುದು ಪರ್ವತ ಪ್ರಸಂಗದಲ್ಲಿ ಸ್ಪಷ್ಟವಾಗಿದೆ. ಆದರೆ ಆತನು ಕೇವಲ ರಕ್ಷಣೆಯ ಕುರಿತು ಬೋಧಿಸುವುದು ಮಾತ್ರವಲ್ಲದೆ ಆತನು ಅದನ್ನು (ಬಹಿರಂಗವಾಗಿ ಹೇಳದಿದ್ದಾಗ್ಯೂ) ಮಂಜೂರು ಮಾಡಿದನು: ಆತನು ಆಶೀರ್ವಚನಗಳಲ್ಲಿ ಆಶೀರ್ವಾದವನ್ನು ಬಿತ್ತರಿಸುತ್ತಾ ರಾಜ್ಯವನ್ನು ನೀಡಿದನು. ಹಾಗಾಗಿ ಆತನೇ ರಕ್ಷಕನಾಗಿದ್ದಾನೆ.

5. ಯೇಸು ನ್ಯಾಯಾಧಿಪತಿಯಾಗಿ ಅಧಿಕಾರವುಳ್ಳವನಾಗಿದ್ದನು: *ಆ ದಿನದಲ್ಲಿ "ಸ್ವಾಮಿ, ಸ್ವಾಮಿ, ನಿನ್ನ ಹೆಸರಿನ ಮೇಲೆ ನಾವು ಬೋಧನೆ ಹೇಳಲಿಲ್ಲವೇ? ನಿನ್ನ ಹೆಸರಿನ ಮೇಲೆ ದೆವ್ವಗಳನ್ನು ಬಿಡಿಸಲಿಲ್ಲವೇ? ನಿನ್ನ ಹೆಸರಿನ ಮೇಲೆ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲವೇ ಎಂದು ಆ ದಿನದಲ್ಲಿ ಎಷ್ಟೋ ಜನರು ನನಗೆ ಹೇಳುವರು. ಆಗ ನಾನು ಅವರಿಗೆ – ನಾನೆಂದೂ ನಿಮ್ಮ ಗುರುತು ಕಾಣೆನು; ಧರ್ಮವನ್ನು ಮೀರಿನಡೆಯುವವರೇ, ನನ್ನಿಂದ ತೊಲಗಿಹೋಗಿರಿ ಎಂದು ಎಲ್ಲರ ಮುಂದೆ ಹೇಳಿಬಿಡುವೆನು"* (7:22–23). ಆದರೆ ಯೇಸು ನ್ಯಾಯತೀರ್ಪಿನ ದಿನದಲ್ಲಿ ಮುಖ್ಯ ಉಲ್ಲೇಖವಾಗಿರುವನು. ಮಾನವರ ನೀತಿಯು ಯೇಸುವಿನ ಹೆಸರಿನ ಜ್ಞಾನದ ಹಾಗೂ ಅದರ ಬಳಕೆಯ ಮೇಲೆ ಆಧಾರವಾಗಿರುವುದಿಲ್ಲ. ಇಲ್ಲ, ಅದು ಆತನ ಕುರಿತಾದ ವೈಯಕ್ತಿಕ ಜ್ಞಾನದ ಮೇಲೆ ಆಧಾರವಾಗಿರುತ್ತದೆ.

6. ಯೇಸು ದೇವರ ಮಗನಾಗಿ ಅಧಿಕಾರವುಳ್ಳವನಾಗಿದ್ದನು: ಪರ್ವತ ಪ್ರಸಂಗದಲ್ಲಿ ಕೇವಲ ಒಂದು ಬಾರಿ ಮಾತ್ರ ಯೇಸು ದೇವರನ್ನು ತನ್ನ ತಂದೆಯೆಂದು ಕರೆಯುತ್ತಾನೆ: *"ನನ್ನನ್ನು "ಕರ್ತನೇ, ಕರ್ತನೇ" ಎಂದು ನನಗೆ ಹೇಳುವ ಪ್ರತಿಯೊಬ್ಬನೂ ಪರಲೋಕರಾಜ್ಯವನ್ನು ಪ್ರವೇಶಿಸುವುದಿಲ್ಲ". ಆದರೆ ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತವನ್ನು ಮಾಡುವವನೇ ಅದನ್ನು ಪ್ರವೇಶಿಸುವನು (7:21).* ಆದರೆ ದೇವರು ಸಂಪೂರ್ಣವಾಗಿ ಒಂದು ವ್ಯತ್ಯಾಸವಾದ ರೀತಿಯಲ್ಲಿ ತನ್ನ ತಂದೆಯಾಗಿದ್ದಾನೆ ಎಂಬ ವಾಸ್ತವಾಂಶವನ್ನು ಯೇಸು ಆಳವಾಗಿ ತಿಳಿದಿದ್ದನು. ಆತನ ಪುತ್ರತ್ವವು ನಮ್ಮ ಪುತ್ರತ್ವದಂತಿಲ್ಲ. ಅದು ಅದ್ವಿತೀಯವಾಗಿದೆ. ಹೇಗಿದ್ದರೂ ಈ ವಾಸ್ತವಾಂಶವನ್ನು ಪರ್ವತ ಪ್ರಸಂಗದಲ್ಲಿ ಬಹಿರಂಗವಾಗಿ ತಿಳಿಸಲ್ಪಟ್ಟಿಲ್ಲ.

7. ಯೇಸು ದೇವರಾಗಿ ಅಧಿಕಾರವುಳ್ಳವನಾಗಿದ್ದನು: ಇದನ್ನು ಯೇಸು ಪರ್ವತ ಪ್ರಸಂಗದಲ್ಲಿ ತನ್ನ ಕುರಿತಾಗಿ ದೈವಿಕವಾದ ಹಕ್ಕುಗಳನ್ನು ಮತ್ತು ಸೌಕರ್ಯಗಳನ್ನು ಬಳಸಿರುವ ರೀತಿಯಲ್ಲಿ ಕಾಣಬಹುದು. ಯೇಸು ತಾನು ದೇವರಿಗೆ ಸಮಾನನು ಎಂಬುದಾಗಿ ತನ್ನನ್ನು ಕಂಡನು ಮತ್ತು ತಾನು ದೇವರೊಂದಿಗೆ ಒಂದಾಗಿದ್ದೇನೆ ಎಂದೂ ಸಹ ಹೇಳಿದನು.

    - ಕರ್ತನು: ಯೇಸು ಕರ್ತನೆಂದು ಜನರು ವಿಧೇಯರಾಗುವುದು ಮತ್ತು ತಂದೆಯ ಚಿತ್ತವನ್ನು ಅವರು ಮಾಡುವುದು ಯೇಸುವಿಗೆ ಒಂದೇ ವಿಷಯವಾಗಿದೆ. ಹೀಗೆ ಆತನು ತನ್ನನ್ನು ದೇವರಿಗೆ ಸಮಾನನನ್ನಾಗಿ ಮಾಡಿಕೊಂಡನು (7:21).

    - ನ್ಯಾಯಾಧಿಪತಿ: ದೇವರು ನ್ಯಾಯಾಧಿಪತಿಯಾಗಿದ್ದಾನೆ ಎಂಬುದು ಎಲ್ಲರಿಗೂ ತಿಳಿದಿತ್ತು. ಯೇಸು ತಾನು ಒಬ್ಬ ನ್ಯಾಯಾಧಿಪತಿಯಾಗಿದ್ದೇನೆ ಎಂದು ಘೋಷಿಸಿಕೊಂಡಾಗ ತಾನು ದೇವರಾಗಿದ್ದೇನೆ ಎಂಬುದನ್ನು ಆತನು ಸೂಚಿಸಿದನು (7:22–23).

## ಪ್ರಶ್ನೆಗಳು

ಈ ಕೆಳಗಿರುವ ಪ್ರಶ್ನೆಗಳಿಗೆ ಮೇಲಿರುವ ಪಠ್ಯದಿಂದಲೇ ಸುಲಭವಾಗಿ ಉತ್ತರವನ್ನು ಕಂಡುಕೊಳ್ಳಬಹುದು. ಆದರೆ ನೀವು ಪಠ್ಯವನ್ನು ನೋಡದೆ ಈ ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸುವುದಾದರೆ ಹೆಚ್ಚಿನ ಸಂಗತಿಯನ್ನು ಕಲಿತುಕೊಳ್ಳಬಹುದು. ಹಾಗಾಗಿ ಆದಷ್ಟು ನಿಮ್ಮ ಸ್ವಂತ ಪದಗಳನ್ನು ಉಪಯೋಗಿಸಿರಿ.

1. ಈ ಪ್ರಸಂಗವನ್ನು ಯಾಕೆ "ಪರ್ವತ ಪ್ರಸಂಗ" ಎಂದು ಕರೆಯುತ್ತೇವೆ?
2. ಮತ್ತಾಯದಲ್ಲಿನ "ಪರ್ವತ ಪ್ರಸಂಗ" ಮತ್ತು ಲೂಕನ "ಬಯಲು ಪ್ರಸಂಗ" ಇವೆರಡೂ ಯೇಸು ನೀಡಿದ ಒಂದೇ ಪ್ರಸಂಗದ ಎರಡು ದಾಖಲೆಗಳಾಗಿವೆ ಎಂದು ನೀವು ಯೋಚಿಸುತ್ತಿರೋ? ಯಾಕೆ – ಯಾಕಿಲ್ಲ?
3. ಯೇಸು ಪರ್ವತ ಪ್ರಸಂಗವನ್ನು ಯಾರಿಗೆ ನೀಡಿದನು?
4. ಪರ್ವತ ಪ್ರಸಂಗವು ಯಾವ ರೀತಿಯ "ಪ್ರಣಾಳಿಕೆಯಾಗಿದೆ"?
5. ಯೇಸು ಪರ್ವತ ಪ್ರಸಂಗದುದ್ದಕ್ಕೂ ಮಾಡುವ ವಿರೋಧಾಲಂಕಾರ ಯಾವುದು?

6. ಪರ್ವತ ಪ್ರಸಂಗಕ್ಕೆ ಯಾವ ಹಳೇ ಒಡಂಬಡಿಕೆಯ ಹಿನ್ನಲೆಯಿದೆ?
7. ದೇವರು ಇಸ್ರಾಯೇಲ್ಯರಿಗೆ ಸೀನಾಯಿ ಪರ್ವತದಲ್ಲಿ ಕೊಟ್ಟ ಧರ್ಮಶಾಸ್ತ್ರದ ಹಾಗೂ ಪರ್ವತ ಪ್ರಸಂಗದ ನಡುವೆ ಇರುವ ಸಂಬಂಧವೇನು?
8. ಪರ್ವತ ಪ್ರಸಂಗದ ಹೊಸ ಒಡಂಬಡಿಕೆಯ ಹಿನ್ನಲೆಯೇನು?
9. ದೇವರ ರಾಜ್ಯದ ಜೀವನವು ಯಾಕೆ ಈ ಲೋಕದಲ್ಲಿರುವ ಜೀವನಕ್ಕಿಂತ ವ್ಯತ್ಯಾಸವಾಗಿದೆ?
10. ಇಂದು ಕ್ರೈಸ್ತ ವಿಶ್ವಾಸಿಗಳಿಗೆ ಪರ್ವತ ಪ್ರಸಂಗವು ಯಾಕೆ ಸಮಂಜಸವಾಗಿದೆ?
11. ಈ ಸಂದೇಶದ ಮಾನದಂಡಗಳಿಗೆ ಅನುಸಾರವಾಗಿ ನಿಜವಾಗಲೂ ಜೀವಿಸಲು ಸಾಧ್ಯವೇ? ಸತ್ಯವೇದವನ್ನು ಓದುವವರು ಈ ಪ್ರಶ್ನೆಗೆ ವ್ಯತ್ಯಾಸವಾದ ಉತ್ತರಗಳನ್ನು ನೀಡಿದ್ದಾರೆ. ನಿಮ್ಮ ವೈಯಕ್ತಿಕ ಉತ್ತರವೇನು?
12. ಪರ್ವತ ಪ್ರಸಂಗವು "ಕ್ರಿಯೆಗಳಿಂದ ರಕ್ಷಣೆಯೇ ಹೊರತು ಕೃಪೆಯಿಂದಲ್ಲ" ಎಂದು ಬೋಧಿಸುವುದರಿಂದ ಅದು ಸುವಾರ್ತೆಗೆ ತದ್ವಿರೋಧವಾಗಿದೆ ಎಂದು ಹೇಳುವುದು ಯಾಕೆ ತಪ್ಪು?
13. ಪರ್ವತ ಪ್ರಸಂಗದಲ್ಲಿ "ನೀತಿವಂತಿಕೆಯು" ಯಾಕೆ ಅಷ್ಟು ಪ್ರಾಮುಖ್ಯವಾದ ವಿಷಯವಾಗಿದೆ?
14. ಯೇಸು ತಮ್ಮ ಶಾಸ್ತ್ರಿಗಳಂತೆ ಬೋಧಿಸದೇ ಅಧಿಕಾರವುಳ್ಳವನಾಗಿ ಬೋಧಿಸಿದ್ದರಿಂದ ಜನರು ಆತನ ಬೋಧನೆಯನ್ನು ಕೇಳಿ ಅತ್ಯಾಶ್ಚರ್ಯಪಟ್ಟರು. ಹಾಗಾದರೆ ಯೇಸುವಿಗೆ ನಿಜವಾಗಲೂ ಇದ್ದ ಅಧಿಕಾರ ಯಾವುದಾಗಿತ್ತು?

# ಅಧ್ಯಯನ 12: ನಮ್ಮ ಆಶೀರ್ವಾದಗಳು

## ಪೀಠಿಕೆ

ಪರ್ವತ ಪ್ರಸಂಗವು ಎಂಟು ಆಶೀರ್ವಾದಗಳಿಂದ ಪ್ರಾರಂಭವಾಗುತ್ತದೆ. ಇಂಗ್ಲಿಷ್ ಭಾಷೆಯಲ್ಲಿ ಅವುಗಳನ್ನು "ಬಿಯಾಟಿಟ್ಯೂಡ್ಸ್" ಎಂದು ಕರೆಯುತ್ತಾರೆ. ಆ ಆಶೀರ್ವಾದಗಳ ಕುರಿತು ನಾವು ನಾಲ್ಕು ಸಾಮಾನ್ಯ ಅಂಶಗಳನ್ನು ಅರ್ಥಮಾಡಿಕೊಳ್ಳಬೇಕು:

1. ಯೇಸು ವರ್ಣಿಸುವ ಜನರು ಯಾರು?
2. ಯೇಸು ಹೊಗಳುವ ಗುಣಗಳು ಯಾವವು?
3. ಯೇಸು ವಾಗ್ದಾನ ಮಾಡುವ ಆಶೀರ್ವಾದಗಳು ಯಾವವು?
4. ಆಶೀರ್ವಾದಗಳು ನೆರವೇರುವ ಕಾಲವು ವರ್ತಮಾನವೋ ಅಥವಾ ಭವಿಷ್ಯವೋ?

## ಓದಿರಿ

ಮತ್ತಾಯ 5:1–12

## ಪ್ರಾರಂಭಿಕ ಟಿಪ್ಪಣಿಗಳು

"ಧನ್ಯರಾದ" ಜನರು ಸಾಮಾನ್ಯವಾಗಿ ಹೇಳಬೇಕಾದರೆ ವಿಶ್ವಾಸಿಗಳನ್ನು ಸೂಚಿಸುತ್ತದೆ. ಯೇಸು ತನ್ನ ಹಿಂಬಾಲಕರಲ್ಲಿ ಎಂಟು ವ್ಯತ್ಯಾಸವಾದ ಗುಂಪಿನ ಜನರಿದ್ದಾರೆ ಎಂದು ಉಲ್ಲೇಖಿಸುತ್ತಿಲ್ಲ. ಯೇಸು ತನ್ನ ಶಿಷ್ಯರಲ್ಲಿ ಕೆಲವರು ಆತ್ಮದಲ್ಲಿ ಬಡವರಾಗಿದ್ದಾರೆ ಮತ್ತು ಇನ್ನು ಕೆಲವರು ಸಾತ್ವಿಕರಾಗಿದ್ದಾರೆ ಮತ್ತು ಕರುಣೆಯುಳ್ಳವರಾಗಿದ್ದಾರೆ ಎಂದು ಹೇಳುತ್ತಿಲ್ಲ. ನಾವು ಅದನ್ನು "ಪವಿತ್ರಾತ್ಮನ ಫಲ" ಎಂಬ ಪೌಲನ ಬೋಧನೆಯೊಂದಿಗೆ ಹೋಲಿಸಬಹುದು: ಎಲ್ಲಾ ಒಂಬತ್ತು "ಫಲಗಳು" ಶುದ್ಧಿಕರಿಸಲ್ಪಟ್ಟ ಎಲ್ಲಾ ವಿಶ್ವಾಸಿಗಳಲ್ಲಿ ಕಾಣಲ್ಪಡಬೇಕು ("ಪವಿತ್ರಾತ್ಮನ ವರಗಳು" ಇನ್ನೊಂದು ಕಡೆಯಲ್ಲಿ ಸಭೆಯೆಂಬ ದೇಹದಲ್ಲಿ ವಿವಿಧ ಜನರಿಗೆ ಕೊಡಲಾಗಿದೆ). ಅದಲ್ಲದೆ ವಿಶ್ವಾಸಿಗಳಿಗೆ ಕೆಲವೊಮ್ಮೆ ಬಡವರಾಗಿರುವ ಅನುಭವ ಉಂಟಾಗುತ್ತದೆ ಮತ್ತು ಇನ್ನೂ ಕೆಲವೊಮ್ಮೆ ನೀತಿಗಾಗಿ ಹಸಿದು ಬಾಯಾರುವ ಅನುಭವ ಉಂಟಾಗುತ್ತದೆ ಎಂದು ಯೇಸು ಹೇಳುತ್ತಿಲ್ಲ ಅಥವಾ ಕೆಲವೊಮ್ಮೆ ಅವರು ಸಮಾಧಾನಪಡಿಸುವವರಾಗಿರುವರು ಇನ್ನೂ ಕೆಲವೊಮ್ಮೆ ಹಿಂಸೆಗೆ ಒಳಗಾಗುವರು ಎಂದು ಯೇಸು ಹೇಳುತ್ತಿಲ್ಲ. ಇಲ್ಲ ! ಯೇಸು ಹೇಳುತ್ತಿರುವ ಎಂಟು ಗುಣಗಳು ಎಲ್ಲಾ ವಿಶ್ವಾಸಿಗಳಲ್ಲಿ ಎಲ್ಲಾ ಸಮಯದಲ್ಲಿ ಕಂಡುಬರಬೇಕು.

ಯೇಸು ಹೊಗಳುವ ಗುಣಗಳೆಲ್ಲವೂ ಆತ್ಮಿಕ ಗುಣಗಳಾಗಿವೆ. ಆಶೀರ್ವಚನಗಳನ್ನು ದೇವರ ರಾಜ್ಯದ ದೃಷ್ಟಿಕೋನದಿಂದ ಅರ್ಥಮಾಡಿಕೊಳ್ಳಬೇಕೇ ಹೊರತು ಪ್ರಾಪಂಚಿಕವಾಗಿ ಅಥವಾ ಭೌತಿಕವಾಗಿ ಅರ್ಥಮಾಡಿಕೊಳ್ಳಬಾರದು. ಕೆಲವು ಸತ್ಯವೇದ ಶಾಸ್ತ್ರಜ್ಞರು ಹೀಗೆ ಘೋಷಿಸಿಕೊಳ್ಳುತ್ತಾರೆ: ಮತ್ತಾಯನ ಮೊದಲ ಮತ್ತು ನಾಲ್ಕನೆಯ ಆಶೀರ್ವಾದದ (ಆತ್ಮದಲ್ಲಿ ಬಡವರಾಗಿರುವವರು ದನ್ಯರು ಮತ್ತು ಈಗ ಹಸಿದವರಾದ ನೀವು ಧನ್ಯರು, ಲೂಕ 6:20–21) ಲೂಕನ ಆವೃತ್ತಿಯು ಯೇಸು ಶಾರೀರಿಕವಾದ ಬಡತನ ಹಾಗೂ ಹಸಿವೆಯನ್ನು ಉಲ್ಲೇಖಿಸಿದನು ಎಂಬುದನ್ನು ತೋರಿಸುತ್ತದೆ ಹಾಗೂ ಮತ್ತಾಯನು ತನ್ನ ಸುವಾರ್ತೆಯನ್ನು ಬರೆದಾಗ ಯೇಸುವಿನ ಮಾತುಗಳನ್ನು "ಆಧ್ಯಾತ್ಮಗೊಳಿಸಿದನು" ಎಂಬುದನ್ನು ತೋರಿಸುತ್ತದೆ. ಆದರೆ ಈ ಶಾಸ್ತ್ರಜ್ಞರು ಸರಿಯಾಗಿ ಹೇಳಿರಲು ಸಾಧ್ಯವಿಲ್ಲ. ಒಂದು ಭೌತಿಕ ಸಾಮ್ರಾಜ್ಯವನ್ನು ಸ್ಥಾಪಿಸುವುದರ ಆಲೋಚನೆಯನ್ನು ಯೇಸು ಯಾವಾಗಲೂ ತಿರಸ್ಕರಿಸಿದನು: ಆತನು ಕಲ್ಲುಗಳನ್ನು ರೊಟ್ಟಿಯಾಗಿ ಮಾಡಲು ತಿರಸ್ಕರಿಸಿದನು. ಆತನು ಐದು ಸಾವಿರ ಜನರಿಗೆ ಆಹಾರ ಒದಗಿಸಿದಾಗ ಜನರು ಆತನನ್ನು ಅರಸನನ್ನಾಗಿ ಮಾಡಬೇಕೆಂದು ಬಯಸಿದರು ಆದರೆ ಆತನು ಅವರಿಂದ ದೂರ ಹೊರಟು ಹೋದನು. ಯೇಸು ರೋಮನ್ ರಾಜ್ಯಪಾಲನಾದ ಪಿಲಾತನ ಮುಂದೆ ನಿಂತಾಗ ತನ್ನ ರಾಜ್ಯವು ಇಹಲೋಕಕ್ಕೆ ಸಂಬಂಧಿಸಿದ್ದಲ್ಲ ಎಂದು ಹೇಳಿದನು. ಹಾಗಾಗಿ ಯೇಸು ಆಶೀರ್ವಚನಗಳಲ್ಲಿ ತನ್ನ ಹಿಂಬಾಲಕರ ಆತ್ಮಿಕ ಗುಣಗಳ ಕುರಿತು ಉಲ್ಲೇಖಿಸುತ್ತಿದ್ದಾನೆ.

ಯೇಸು ತನ್ನ ಹಿಂಬಾಲಕರಿಗೆ ವಾಗ್ದಾನ ಮಾಡಿದ "ಆಶೀರ್ವಾದಗಳನ್ನು" ನಾವು ಹೇಗೆ ಅರ್ಥಮಾಡಿಕೊಳ್ಳಬೇಕು? "ಧನ್ಯರು" ಎಂಬ ಮತ್ತಾಯನು ಬಳಸಿದ ಗ್ರೀಕ್ ಪದವು "ಆಶೀರ್ವಾದ ಹೊಂದಿದವರು, ಭಾಗ್ಯವಂತರು, ಸಂತೋಷವಾಗಿರುವವರು" ಎಂಬ ಅರ್ಥವನ್ನು ಕೊಡುತ್ತದೆ. ಅನೇಕ ಸತ್ಯವೇದ ಮೀಮಾಂಸಕರು ಆಶೀರ್ವಚನಗಳು ಮಾನವನ ಸಂತೋಷ ಜೀವನಕ್ಕಾಗಿ ಯೇಸು ನೀಡಿದ ಔಷಧಿ ಚೀಟಿಯಾಗಿದೆ ಎಂದು ಅರ್ಥವಿವರಿಸುತ್ತಾರೆ: "ನೀವು ಹೀಗಿದ್ದರೆ ಅಥವಾ ನೀವು ಹೀಗೆ ಮಾಡಿದರೆ ಸಂತೋಷವಾಗಿರುವಿರಿ". ಈ ತಿಳುವಳಿಕೆಯು ಸರಿಯಾಗಿರಲು ಸಾಧ್ಯವಿಲ್ಲ. "ಸಂತೋಷವು" ಒಂದು ವೈಯಕ್ತಿಕ ಭಾವನೆಯನ್ನು ವರ್ಣಿಸುತ್ತದೆ. ಆದರೆ ಆಶೀರ್ವಚನಗಳಲ್ಲಿ ಯೇಸು ಒಬ್ಬ ವಿಶ್ವಾಸಿಗೆ ಆಗುವ ಭಾವನೆಗಳ ಕುರಿತು ವರ್ಣಿಸುತ್ತಿಲ್ಲ, ಬದಲಾಗಿ ಆತನು ತನ್ನ ಹಿಂಬಾಲಕರು ಯಾರು ಎಂಬ ಸಂಗತಿಯನ್ನು ಸೂಚಿಸುತ್ತಿದ್ದಾನೆ. ಅವರು ಏನು ಮಾಡಿದರೆ ಸಂತೋಷವಾಗಿರುವರು ಎಂದು ಆತನು ಹೇಳುತ್ತಿಲ್ಲ, ಬದಲಾಗಿ ದೇವರು ಅವರನ್ನು ಹೇಗೆ ನೋಡುತ್ತಾನೆ ಮತ್ತು ಅವರು ನಿಜವಾಗಲೂ ಯಾರಾಗಿದ್ದಾರೆ ಎಂಬುದನ್ನು ಹೇಳುತ್ತಿದ್ದಾನೆ – ಅವರು "ಧನ್ಯರು".

ಈ ಆಶೀರ್ವಾದವು "ಸಂತೋಷವಲ್ಲದಿದ್ದರೆ" ಮತ್ತೇನಾಗಿದೆ? ಪ್ರತಿಯೊಂದು ಆಶೀರ್ವಚನದ ಎರಡನೆಯ ಭಾಗವು ಯೇಸು ತನ್ನ ನಿಜವಾದ ಶಿಷ್ಯರ ಅಥವಾ ತನ್ನ ನಿಜವಾದ ಹಿಂಬಾಲಕರ ಕುರಿತು ಕೊಡುವ ಚಿತ್ರಣವನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯಮಾಡುತ್ತದೆ: ಅವರು ದೇವರ ರಾಜ್ಯಕ್ಕೆ ಬಾಧ್ಯರಾಗುವರು, ಅವರು ಆದರಣೆ ಹೊಂದುವರು, ಅವರು ಭೂಮಿಗೆ ಬಾಧ್ಯರಾಗುವರು. ನೀತಿವಂತಿಕೆಗಾಗಿ ಅವರಿಗಿರುವ ಹಸಿವೆ ಮತ್ತು ಬಾಯಾರಿಕೆಯು ತೃಪ್ತಿಯಾಗುವುದು. ಅವರು ಕರುಣೆ ಪಡೆಯುವರು ಅವರು ದೇವರ ಮಕ್ಕಳೆನಿಸಿಕೊಳ್ಳುವರು. ಒಬ್ಬ ನಿಜವಾದ ವಿಶ್ವಾಸಿಯ ಕುರಿತು ಯೇಸು ನೀಡಿರುವ ವರ್ಣನೆಯು ಹೀಗಿದೆ.

ಹಾಗಾಗಿ ಈ ಎಲ್ಲಾ ಆಶೀರ್ವಾದಗಳು ಒಂದಕ್ಕೊಂದು ಸೇರಿವೆ. ಎಂಟು ಗುಣಗಳು ಹೇಗೆ ಪ್ರತಿಯೊಬ್ಬ ವಿಶ್ವಾಸಿಯನ್ನು ವರ್ಣಿಸುತ್ತದೋ ಅದೇ ರೀತಿಯಾಗಿ ಎಂಟು ಆಶೀರ್ವಾದಗಳು ಪ್ರತಿಯೊಬ್ಬ ವಿಶ್ವಾಸಿಗೆ ಸಂಬಂಧಪಟ್ಟಿವೆ (ಅಥವಾ ಕೊಡಲ್ಪಟ್ಟಿವೆ). ಆ ಗುಣಗಳು ಜವಾಬ್ದಾರಿಗಳನ್ನು ವರ್ಣಿಸುತ್ತವೆ ಮತ್ತು ಆ ಎಂಟು ಆಶೀರ್ವಾದಗಳು ದೇವರ ರಾಜ್ಯದ ಪ್ರಜೆಯಾಗುವುದರೊಂದಿಗೆ ಸಿಗುವ ಲಾಭವನ್ನು ವರ್ಣಿಸುತ್ತವೆ. ದೇವರ ಆಳ್ವಿಕೆಯ ಅಡಿಯಲ್ಲಿ ಇರುವುದೆಂದರೆ ಏನು ಎಂಬುದನ್ನು ಆಶೀರ್ವಚನಗಳು ವರ್ಣಿಸುತ್ತವೆ.

ಈ ಆಶೀರ್ವಾದಗಳು ವರ್ತಮಾನಕ್ಕಾಗಿಯೋ ಅಥವಾ ಭವಿಷ್ಯತ್ತಿಗಾಗಿಯೋ? ಉತ್ತರ: ಎರಡಕ್ಕಾಗಿಯೂ ! ದೇವರ ರಾಜ್ಯವು ಒಂದು ವಾಸ್ತವಾಂಶವಾಗಿದ್ದು ನಾವು ಅದನ್ನು ಈಗಲೇ "ಪಡೆಯಬಹುದು", "ಬಾಧ್ಯರಾಗಬಹುದು" ಅಥವಾ "ಪ್ರವೇಶಿಸಬಹುದು" ಎಂಬುದನ್ನು ಯೇಸುವಿನ ಬೋಧನೆಯು ಸ್ಪಷ್ಟಪಡಿಸುತ್ತದೆ. ಅದೇ ರೀತಿಯಾಗಿ ನಾವು ಈಗಲೇ ಕರುಣೆಯನ್ನೂ ಆದರಣೆಯನ್ನೂ ಹೊಂದಿಕೊಳ್ಳಬಹುದು. ನಾವು ಈಗಲೇ ದೇವರ ಮಕ್ಕಳಾಗಬಹುದು. ನೀತಿವಂತಿಕೆಗಾಗಿ ನಮಗಿರುವ ಹಸಿವೆ ಮತ್ತು ಬಾಯಾರಿಕೆಯನ್ನು ಈ ಜೀವನದಲ್ಲೇ ತೃಪ್ತಿಪಡಿಸಿಕೊಳ್ಳಬಹುದು. ನಾವು ದೇವರನ್ನು ಕ್ರಿಸ್ತನಲ್ಲಿ ಕಾಣಬಹುದು (ಯೊಹಾನ 14:9) – ಮಾತ್ರವಲ್ಲದೆ, ನಾವು ಇಹಲೋಕದಲ್ಲಿ ಜೀವಿಸುತ್ತಿರುವಾಗಲೇ ನಮ್ಮ ಆತ್ಮೀಕ ಕಣ್ಣುಗಳಿಂದಲೂ ದೇವರನ್ನು ನೋಡಬಹುದು (1 ಯೊಹಾನ 3:6; 3 ಯೊಹಾನ 11). ನಮ್ಮ ಈ ಜೀವನದಲ್ಲಿಯೇ ನಾವು ಭೂಮಿಗೆ ಬಾಧ್ಯರಾಗಲು ಪ್ರಾರಂಭಿಸುತ್ತೇವೆ (1 ಕೊರಿ. 3:21–23 ರೊಂದಿಗೆ ಹೋಲಿಸಿರಿ). ಅದೇ ಸಮಯದಲ್ಲಿ ಆಶೀರ್ವಚನಗಳು "ಭವಿಷ್ಯಶಾಸ್ತ್ರಕ್ಕೂ" ಸಂಬಂಧಪಟ್ಟಿವೆ. ಅಂದರೆ ಅವುಗಳು ಭವಿಷ್ಯದಲ್ಲಿ ನೆರವೇರಲಿವೆ ಎಂಬುದಾಗಿದೆ. ನಾವು ಪ್ರಥಮ ಫಲಗಳನ್ನು ಈಗ ಅನುಭವಿಸುತ್ತಿದ್ದಾಗ್ಯೂ ಪೂರ್ಣವಾದ ಸುಗ್ಗಿಯು ಇನ್ನೂ ಮುಂದೆ ಬರಲಿದೆ.

## ಪದಗಳ ಮತ್ತು ಹೇಳಿಕೆಗಳ ಕುರಿತು ಟಿಪ್ಪಣಿಗಳು

*ಆತ್ಮದಲ್ಲಿ ಬಡವರಾಗಿರುವವರು* (ವ. 3): ಹಳೇ ಒಡಂಬಡಿಕೆಯಲ್ಲಿ "ಬಡತನ" ಎಂಬ ಪದವು ಆಗಾಗ್ಗೆ "ದೇವರ ಮೇಲೆ ದೀನತೆಯಿಂದ ಅವಲಂಬಿಸುವ" ಅರ್ಥವನ್ನು ಕೊಡುತ್ತದೆ. ಕೀರ್ತನೆ 34:6 ರಲ್ಲಿ ದಾವೀದನು (ತಾನು ಒಬ್ಬ ಐಶ್ವರ್ಯವಂತ ಹಾಗೂ ಬಲವುಳ್ಳ ಅರಸನಾಗಿದ್ದರೂ ಸಹ) ತನ್ನನ್ನು "ಈ ಬಡವನು" ಎಂದು ಕರೆದುಕೊಳ್ಳುತ್ತಾನೆ. ಆತನ ಸ್ವರವನ್ನು ಯೆಹೋವನು ಕೇಳಿ "ಎಲ್ಲಾ ಇಕ್ಕಟ್ಟುಗಳಿಂದ" ಆತನನ್ನು ರಕ್ಷಿಸಿದನು. ಹಾಗಾಗಿ "ಆತ್ಮದಲ್ಲಿ ಬಡವರಾಗಿರುವವರು" ಅಂದರೆ ನೀವು ದೇವರ ಮುಂದೆ ಆತ್ಮಿಕವಾಗಿ ಏನೂ ಅಲ್ಲ ಎಂಬುದನ್ನು ಅರಿಕೆ ಮಾಡುವುದಾಗಿದೆ. ಆಗ ಮಾತ್ರ ದೇವರ ರಾಜ್ಯವು ನಿಮಗೆ ಕೊಡಲ್ಪಡುವುದು.

*ದುಃಖಿಸುವವರು* (ವ. 4): ಎರಡನೆಯ ಆಶೀರ್ವಚನವು "ಸಂತೋಷವಾಗಿಲ್ಲದವರು ಸಂತೋಷವಾಗಿದ್ದಾರೆ" ಎಂದು ಹೇಳುವಂತೆ ತೋರುತ್ತದೆ. ಇದು ಯಾವುದೇ ಅರ್ಥವನ್ನು ಕೊಡುವುದಿಲ್ಲ. ಹಾಗಾದರೆ ಯೇಸು ಯಾವ ರೀತಿಯ "ದುಃಖವನ್ನು" ಅಥವಾ "ಕೊರಗನ್ನು" ಉಲ್ಲೇಖಿಸುತ್ತಿದ್ದಾನೆ? ಅದು "ಆತ್ಮಿಕವಾದ ದುಃಖವಾಗಿದೆ". ಅದನ್ನು ಎರಡು ರೀತಿಯಾಗಿ ವಿಂಗಡಿಸಬಹುದು: ಆತ್ಮಿಕವಾದ ದುಃಖವೆಂದರೆ, ಇತರರ ಪಾಪಗಳ ಕುರಿತು ಹಾಗೂ ಮುಖ್ಯವಾಗಿ ನಮ್ಮ ಪಾಪಗಳ ಕುರಿತು ಗೋಳಾಡುವುದಾಗಿದೆ. ತಮ್ಮ ಸ್ವಂತ

ಪಾಪಗಳ ಕುರಿತಾಗಿ ದುಃಖಿಸುವವರು ನಿಜವಾಗಲೂ "ಇಸ್ರಾಯೇಲ್ಯರ ಆದರಣೆಯಾದ" (ಲೂಕ 2:25) ಯೇಸುವಿನಿಂದ ಆದರಿಸಲ್ಪಡುವರು. ಪಾಪಿಯಾದ ಸ್ತ್ರೀಗೆ "ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ, ಸಮಾಧಾನದಿಂದ ಹೋಗು" (ಲೂಕ 7:48, 50) ಎಂದು ಹೇಳಿದ ಲೋಕ ರಕ್ಷಕನಾದ (ಯೋಹಾನ 4:42) ಯೇಸುವಿನಿಂದ ಅವರು ಆದರಣೆ ಹೊಂದಿಕೊಳ್ಳುವರು.

*ಸಾತ್ವಿಕರು* (ವ. 5): ಈ ಗ್ರೀಕ್ ಪದವು "ದೀನ, ಶಾಂತ, ವಿವೇಚನೆಯುಳ್ಳ, ವಿನಯಶೀಲ" ಎಂಬ ಅರ್ಥವನ್ನು ಕೊಡುತ್ತದೆ. ಮತ್ತು ತನ್ನ ಕುರಿತು ಸರಿಯಾದ ತೀರ್ಪನ್ನು ಮಾಡುವುದರ ಮೂಲಕ ಇತರರೊಂದಿಗೆ ದೀನವಾಗಿ ಮತ್ತು ಶಾಂತವಾಗಿ ನಡೆದುಕೊಳ್ಳುವ ಮನೋಭಾವನೆಯನ್ನು ಅದು ಸೂಚಿಸುತ್ತದೆ. ನಾವು ದೇವರ ಮುಂದೆ ಯಥಾರ್ಥರಾಗಿರುವುದು ಸುಲಭ (ನಾನು ದೇವರ ಮುಂದೆ ಪ್ರಾರ್ಥಿಸುವಾಗ "ನಾನೊಬ್ಬ ಘೋರ ಪಾಪಿ" ಎಂದು ನನ್ನನ್ನು ಕರೆದುಕೊಳ್ಳುತ್ತೇನೆ). ಆದರೆ ನಮ್ಮ ಕುರಿತು ಇತರರು ನಕಾರಾತ್ಮಕವಾಗಿ ಹೇಳುವುದನ್ನು ಸಹಿಸಿಕೊಳ್ಳುವುದು ಕಷ್ಟಕರ (ಒಬ್ಬ ವಿಶ್ವಾಸಿಯು ಆರಾಧನೆಯ ನಂತರ ನನ್ನ ಬಳಿಗೆ ಬಂದು "ನೀನು ಒಬ್ಬ ಘೋರ ಪಾಪಿ!" ಎಂದು ನನಗೆ ಹೇಳುವಾಗ ನನಗೆ ತುಂಬಾ ಕೋಪ ಬರುತ್ತದೆ). ಸಾತ್ವಿಕರು ಭೂಮಿಗೆ ಬಾಧ್ಯರಾಗುವರು ಎಂಬ ಯೇಸುವಿನ ಹೇಳಿಕೆಯು ಆಶ್ಚರ್ಯವನ್ನುಂಟುಮಾಡುತ್ತದೆ. "ಸಾತ್ವಿಕರು" ಈ ಪ್ರಪಂಚದಲ್ಲಿ ಮೇಲೆ ಬರಲು ಸಾಧ್ಯವಿಲ್ಲ, ಯಾಕೆಂದರೆ ಬಲಿಷ್ಟರು ಮಾತ್ರ ಲೋಕವನ್ನು ಆಳುತ್ತಾರೆ ಎಂದು ನಮ್ಮ ಅನುಭವ ಹೇಳುತ್ತದೆ. ಆದರೆ ಆತ್ಮಿಕವಾಗಿ ಸಾತ್ವಿಕರಾಗಿರುವವರು (ಒಂದು ವೇಳೆ ಈ ಲೋಕದಲ್ಲಿರುವ ಬಲಿಷ್ಠರು ಅವರನ್ನು ಕೀಳಾಗಿ ಕಂಡರೂ) ಕ್ರಿಸ್ತನೊಂದಿಗೆ ಜೀವಿಸುವುದು ಮತ್ತು ಆಳುವುದು ಏನೆಂಬುದನ್ನು ತಿಳಿದುಕೊಂಡಿದ್ದಾರೆ. ಹಾಗಾಗಿ ಅವರು ಭೂಮಿಯನ್ನು ಅನುಭವಿಸುವರು ಮತ್ತು ವಶಮಾಡಿಕೊಳ್ಳುವರು. ಯಾಕೆಂದರೆ ಅದು ಕ್ರಿಸ್ತನಿಗೆ ಸೇರಿದೆ. ನಂತರ "ನೂತನ ಭೂಮ್ಯಾಕಾಶದ" ದಿನದಂದು ಭೂಮಿಯನ್ನು ಅವರಿಗೆ ಬಾಧ್ಯವಾಗಿ ಕೊಡಲಾಗುವುದು.

*ಅವರು ಕರುಣೆ ಪಡೆಯುವರು* (ವ. 7): ಕರುಣೆಯಿಲ್ಲದ ಸೇವಕನ ಸಾಮ್ಯದಲ್ಲಿ ಕರುಣೆ ತೋರಿಸುವುದು ಮತ್ತು ಕರುಣೆ ಪಡೆದುಕೊಳ್ಳುವುದು ಒಂದಕ್ಕೊಂದು ನಿಕಟವಾದ ಸಂಬಂಧವನ್ನು ಹೊಂದಿದೆ ಎಂದು ಯೇಸು ಬೋಧಿಸಿದನು (ಮತ್ತಾಯ 18:21–35). ನಾವು ಇತರರ ಪಾಪಗಳ ಕುರಿತು ಕರುಣೆಯನ್ನು ತೋರಿಸದಿದ್ದರೆ ನಮ್ಮ ಪಾಪಕ್ಕಾಗಿ ನಾವು ಪ್ರಾಯಶ್ಚಿತಪಟ್ಟಿದ್ದೇವೆ ಎಂದು ಘೋಷಿಸಿಕೊಳ್ಳಲು ಸಾಧ್ಯವಿಲ್ಲ. ಹಾಗೆಯೇ ನಾವು ಇತರರಿಗೆ ಕರುಣೆಯನ್ನು ತೋರಿಸುವಾಗ ನಮ್ಮ ಸ್ವಂತ ಪಶ್ಚಾತ್ತಾಪವನ್ನು ಅಂದರೆ ದೇವರ ಕರುಣೆಯ ಅವಶ್ಯಕತೆಯು ನನಗಿದೆ ಎಂಬುದನ್ನು ನಾವು ಪ್ರದರ್ಶಿಸುತ್ತೇವೆ. ದೇವರು ನಮಗೆ ಕರುಣೆ ತೋರಿಸುತ್ತಾನೆ. ಹಾಗಾಗಿ ನಾವು ಕರುಣೆ ತೋರಿಸುವಾಗ ನಮಗೂ ಕರುಣೆ ದೊರಕುವುದು. ಅದರರ್ಥ ನಾವು ಕರುಣೆಯನ್ನು ಸಂಪಾದಿಸಿಕೊಳ್ಳಲು ಕರುಣೆಯನ್ನು ತೋರಿಸಬೇಕೆಂದಲ್ಲಾ, ಬದಲಾಗಿ ನಾವು ಪಶ್ಚಾತ್ತಾಪಪಡದ ಹೊರತು ದೇವರ ಕರುಣೆಯನ್ನು ಹೊಂದಿಕೊಳ್ಳಲು ಸಾಧ್ಯವಿಲ್ಲ.

*ಹೃದಯದಲ್ಲಿ ಶುದ್ಧರಾಗಿರುವವರು* (ವ. 8): ಬಹುಶಃ ಈ ಹೇಳಿಕೆಯ ಅರ್ಥವು "ಪೂರ್ಣಪ್ರಾಮಾಣಿಕ" ಎಂಬುದಾಗಿರಬಹುದು. ಹೃದಯದಲ್ಲಿ ಶುದ್ಧರಾಗಿರುವವರು ಸಂಪೂರ್ಣವಾಗಿ ಪ್ರಾಮಾಣಿಕರಾಗಿರುತ್ತಾರೆ. ಅವರಲ್ಲಿ ಯಾವುದೇ ಕಪಟತನವಾಗಲಿ ಅಥವಾ ವಂಚನೆಯಾಗಲಿ ಇರುವುದಿಲ್ಲ. ಅವರ ಆಲೋಚನೆ ಮತ್ತು ಉದ್ದೇಶಗಳು ಶುದ್ಧವಾಗಿರುತ್ತವೆ. ಹೃದಯದಲ್ಲಿ ಶುದ್ಧರಾಗಿರುವವರು ಮಾತ್ರ ದೇವರನ್ನು ನೋಡುವರು. ಅವರು ಈಗ ಆತನನ್ನು ನಂಬಿಕೆಯ ಕಣ್ಣುಗಳಿಂದ ನೋಡುತ್ತಿದ್ದಾರೆ. ಅವರು ಆತನ ಮಹಿಮೆಯನ್ನು ಭವಿಷ್ಯದಲ್ಲಿ ನೋಡಲಿದ್ದಾರೆ. ಪೂರ್ಣ ಪ್ರಾಮಾಣಿಕರ ಕಣ್ಣುಗಳು ಮಾತ್ರ ದೇವರ ಪ್ರಕಾಶಮಾನವಾದ ದರ್ಶನವನ್ನು ದೃಷ್ಟಿಸಲು ಸಾಧ್ಯ.

*ಸಮಾಧಾನಪಡಿಸುವವರು* (ವ. 9): ಈ ಆಶೀರ್ವಚನದ ಪ್ರಕಾರ ಪ್ರತಿಯೊಬ್ಬ ವಿಶ್ವಾಸಿಯು ಸಮಾಧಾನಪಡಿಸುವವನಾಗಿರಬೇಕು – ಸಮಾಜದಲ್ಲಿಯೂ ಹಾಗೂ ಸಭೆಯಲ್ಲಿಯೂ. ದೇವರು ಶಾಂತಿ ಮತ್ತು ಸಂಧಾನದ ಕರ್ತನಾಗಿದ್ದಾನೆ. ಹಾಗಾಗಿ ಸಂಧಾನಪಡಿಸುವ ಕಾರ್ಯವು ದೈವಿಕ ಕಾರ್ಯವಾಗಿದೆ. ಸಮಾಧಾನಪಡಿಸುವವರು "ದೇವರ ಮಕ್ಕಳೆನಿಸಿಕೊಳ್ಳುವರು" ಎಂದು ಯೇಸು ಹೇಳುತ್ತಾನೆ. ಅವರು ತಮ್ಮ ತಂದೆಯು ಮಾಡಿದ್ದನ್ನು ತಾವೂ ಸಹ ಮಾಡಲು ಬಯಸುವರು. ಅವರು ತಮ್ಮ ತಂದೆಯ ಪ್ರೀತಿಯಿಂದ ಜನರನ್ನು ಪ್ರೀತಿಸುತ್ತಾರೆ.

## ಪ್ರಶ್ನೆಗಳು

1. ಆಶೀರ್ವಚನಗಳಲ್ಲಿ ಯೇಸು ವರ್ಣಿಸಿರುವ ಜನರು ಯಾರು?
2. ಆಶೀರ್ವಚನಗಳಲ್ಲಿ ಯೇಸು ಹೊಗಳುವ ಗುಣಗಳ ಕುರಿತು ನಾವು ಏನನ್ನು ನೆನಪಿನಲ್ಲಿಟ್ಟುಕೊಳ್ಳಬೇಕು?
3. ಯೇಸು "ಧನ್ಯರು" ಎಂಬ ಪದವನ್ನು ಬಳಸಿದಾಗ ಏನನ್ನು ಉಲ್ಲೇಖಿಸಿದನು?
4. ಆಶೀರ್ವಚನಗಳ ಕಾಲಮಾನ ಯಾವುದು?

5. ಯೇಸು ಯಾಕೆ ತನ್ನ ಪರ್ವತ ಪ್ರಸಂಗವನ್ನು ಆಶೀರ್ವಚನಗಳೊಂದಿಗೆ ಪ್ರಾರಂಭಿಸುತ್ತಾನೆ?

6. ದೇವರ ರಾಜ್ಯವು ಯಾಕೆ "ಆತ್ಮದಲ್ಲಿ ಬಡವರಾಗಿರುವವರಿಗೆ" ಸೇರಿದೆ?

7. ದುಃಖಿಸುವವರು ಯಾವ ರೀತಿಯಲ್ಲಿ ಆದರಣೆಯನ್ನು ಹೊಂದುವರು?

8. ಕನ್ನಡ ಅನುವಾದಕರು ಗ್ರೀಕ್ ಪದವಾದ "ದೀನ" ಎಂಬುದಕ್ಕೆ ಬಳಸಿರುವ ಪದಗಳು ಒಂದೇ ಅರ್ಥವನ್ನು ಕೊಡುತ್ತವೋ? ಯಾಕೆ – ಯಾಕಿಲ್ಲ?

9. ಸಾತ್ವಿಕರು ಯಾಕೆ ಭೂಮಿಗೆ ಬಾಧ್ಯರಾಗುವರು?

10. ನೀವು ನೀತಿಗಾಗಿ ಹಸಿವೆ ಮತ್ತು ಬಾಯಾರಿಕೆಯುಳ್ಳವರಾಗಿದ್ದೀರೋ? ಹೇಗೆ ಎಂಬುದನ್ನು ವಿವರಿಸಿರಿ.

11. ಕರುಣೆಯುಳ್ಳವರು ಯಾಕೆ ಧನ್ಯರು?

12. ಕೊನೆಯ ಆಶೀರ್ವಚನವು (ಹಿಂಸೆಯ ಕುರಿತಾದದ್ದು) ಯಾವ ರೀತಿಯಲ್ಲಿ ಉಳಿದ ಆಶೀರ್ವಚನಗಳಿಗಿಂತ ವ್ಯತ್ಯಾಸವಾಗಿದೆ?

13. ಹಿಂದಿನ ಆಶೀರ್ವಚನಗಳಲ್ಲಿ ಸಾತ್ವಿಕರು, ಕರುಣೆಯುಳ್ಳವರು, ಹೃದಯದಲ್ಲಿ ಶುದ್ಧರಾಗಿರುವವರು ಮತ್ತು ನೀತಿಗಾಗಿ ಹಸಿದು ಬಾಯಾರುವವರು ಎಂದು ವರ್ಣಿಸಲಾಗಿರುವ ದೇವರ ಜನರು ಯಾಕೆ ಹಿಂಸಿಸಲ್ಪಡುತ್ತಾರೆ ಎಂದು ನಿಮಗೆ ಅನ್ನಿಸುತ್ತದೆ?

14. ಯೇಸು ತನ್ನ ಹಿಂಬಾಲಕರು ಹಿಂಸೆಯ ಅಡಿಯಲ್ಲಿ ಹೇಗೆ ಪ್ರತಿಕ್ರಿಯಿಸಬೇಕೆಂದು ಅಪೇಕ್ಷಿಸಿದನು? ಒಬ್ಬ ವಿಶ್ವಾಸಿಯು ಹೇಗೆ *ಪ್ರತಿಕ್ರಿಯಿಸಬಾರದು* ಎಂದು ಯೇಸು ಅಪೇಕ್ಷಿಸುತ್ತಾನೆಂದು ನೀವು ಯೋಚಿಸುತ್ತೀರಿ?

15. ನೀವು ಈ ಅಧ್ಯಯನದಿಂದ ಕಲಿತಂತಹ ಅತ್ಯಂತ ಪ್ರಾಮುಖ್ಯವಾದ ಸಂಗತಿಗಳು ಯಾವವು? ಒಂದು ಚಿಕ್ಕ ಪಟ್ಟಿಯನ್ನು ಮಾಡಿರಿ.

16. ಆಶೀರ್ವಚನಗಳ ಕನ್ನಡಿಯ ಮುಂದೆ ನೀವು ನಿಂತುಕೊಳ್ಳಿರಿ. ನೀವು ಆತ್ಮದಲ್ಲಿ ಬಡವರಾಗಿದ್ದೀರೋ? ನೀವು ಲೋಕದಲ್ಲಿರುವ ಪಾಪಕ್ಕಾಗಿ, ಅಂದರೆ ಸ್ವತಃ ನಿಮ್ಮ ಪಾಪಕ್ಕಾಗಿ ಮತ್ತು ಇತರರ ಪಾಪಕ್ಕಾಗಿ ದುಃಖಿಸುತ್ತೀರೋ? ನೀವು ನೀತಿಗಾಗಿ ಹಸಿದು ಬಾಯಾರುತ್ತೀರೋ? ನೀವು ಕರುಣೆಯುಳ್ಳವರಾಗಿದ್ದೀರೋ? ನೀವು ಶುದ್ಧ ಹೃದಯಯುಳ್ಳವರಾಗಿದ್ದೀರೋ? ನೀವು ಸಮಾಧಾನಪಡಿಸುವವರಾಗಿದ್ದೀರೋ? ನೀವು ಯೇಸುವಿನ ನಿಮಿತ್ತ ಹಿಂಸೆಗೊಳಗಾಗಿದ್ದೀರೋ? ನೀವು ದೇವರ ರಾಜ್ಯದ ಉತ್ತಮ ಪ್ರಜೆಯಾಗಲು ಪವಿತ್ರಾತ್ಮನ ಸಹಾಯವು ಯಾವ ಕ್ಷೇತ್ರಗಳಲ್ಲಿ (ಒಂದು ಅಥವಾ ಎರಡು) ಅವಶ್ಯವಿದೆಯೆಂದು ಗುರುತಿಸಿರಿ ಮತ್ತು ಆ ಕ್ಷೇತ್ರಗಳನ್ನು ಪ್ರಾರ್ಥನೆಯಲ್ಲಿ ದೇವರ ಮುಂದೆ ತನ್ನಿರಿ.

# ಅಧ್ಯಯನ 13: ನಮ್ಮ ಪ್ರಭಾವ

## ಪೀಠಿಕೆ

ಆಶೀರ್ವಚನಗಳು ವಿಶ್ವಾಸಿಗಳ ಗುಣವನ್ನು ವರ್ಣಿಸುತ್ತವೆ. ಈ ಲೋಕದಲ್ಲಿ ವಿಶ್ವಾಸಿಗಳ ಪ್ರಭಾವವನ್ನು ವರ್ಣಿಸಲು ಯೇಸು ಬಳಸುವ ಎರಡು ರೂಪಾಲಂಕಾರಗಳನ್ನು (ಉಪ್ಪು ಮತ್ತು ಬೆಳಕು) ನಾವು ಈ ಅಧ್ಯಯನದಲ್ಲಿ ಪರಿಶೀಲಿಸಲಿದ್ದೇವೆ.

ಆದರೆ ಆಶೀರ್ವಚನಗಳಲ್ಲಿ ವರ್ಣಿಸಲಾಗಿರುವ ವಿಶ್ವಾಸಿಗಳ ಗುಣದ ಹಾಗೂ ಈ ಲೋಕದಲ್ಲಿರುವ ವಿಶ್ವಾಸಿಗಳ ಪ್ರಭಾವದ ನಡುವೆ ಒಂದು ವಿರೋಧಭಾಸವಿದೆ. ಈ ಕಷ್ಟಕರವಾದ ಮತ್ತು ಮನಮರುಗದ ಪ್ರಪಂಚದಲ್ಲಿ ಹಿಂಸೆ ಅನುಭವಿಸುವ, ಬಡವರಾದ ಮತ್ತು ಸಾತ್ವಿಕರಾದ, ದುಃಖಿಸುವ ಮತ್ತು ಕನಿಕರಿಸುವ, ಸಮಾಧಾನಪಡಿಸುವ ಮತ್ತು ಶುದ್ಧ ಹೃದಯಯುಳ್ಳ ಜನರು ಯಾವುದೇ ಪ್ರಭಾವವನ್ನು ಬೀರಬಹುದೆಂದು ಯೇಸು ಹೇಗೆ ಹೇಳಲು ಸಾಧ್ಯ? ಆದರೆ ಯೇಸು ತಮಾಷೆ ಮಾಡುತ್ತಿಲ್ಲ. ತನ್ನ ಹಿಂಬಾಲಕರು ಈಗಾಗಲೇ ತಾವು ಜೀವಿಸುತ್ತಿರುವ ಲೋಕದಲ್ಲಿ ಪ್ರಭಾವವನ್ನು ಬೀರುತ್ತಿದ್ದಾರೆ ಮತ್ತು ಮುಂದಿನ ದಿನಗಳಲ್ಲಿಯೂ ಬೀರಬೇಕೆಂದು ಯೇಸು ಗಂಭೀರವಾಗಿ ಬೋಧಿಸುತ್ತಿದ್ದಾನೆ.

## ಓದಿರಿ

ಮತ್ತಾಯ 5:13–16

## ಪ್ರಾರಂಭಿಕ ಟಿಪ್ಪಣಿಗಳು

ಯೇಸು ಈ ಲೋಕದಲ್ಲಿರುವ ಕ್ರಿಸ್ತೀಯ ಪ್ರಭಾವದ ಗುಣಾತಿಶಯವನ್ನು ವಿವರಿಸಲು ಎರಡು ದೈನಂದಿನ ರೂಪಾಲಂಕಾರಗಳನ್ನು ಬಳಸುತ್ತಾನೆ: ಅವು ಯಾವುವೆಂದರೆ, ಉಪ್ಪು ಮತ್ತು ಬೆಳಕು. ಯೇಸು ಈ ರೂಪಾಲಂಕಾರಗಳನ್ನು ಬಳಸಿದ್ದರ ಹಿಂದೆ ಒಂದು ಮೂಲ ಸತ್ಯವಿದ್ದಿರಬೇಕು. ಆ ಸತ್ಯವೇ ದೇವರ ರಾಜ್ಯ (ಮತ್ತು ಅದರ ಪ್ರಜೆಗಳ) ಮತ್ತು ಈ ದುಷ್ಟಲೋಕದ (ಮತ್ತು ಅದರ ಪ್ರಜೆಗಳ) ನಡುವೆ ಇರುವ ಮೂಲಭೂತವಾದ ವ್ಯತ್ಯಾಸವಾಗಿದೆ:

ಭೂಮಿ – ಆದರೆ ನೀವು ಉಪ್ಪಾಗಿದ್ದಿರಿ.

ಲೋಕ – ಆದರೆ ನೀವು ಬೆಳಕಾಗಿದ್ದೀರಿ.

ಸಭೆ ಮತ್ತು ಲೋಕ ಎರಡು ವ್ಯತ್ಯಾಸವಾದ ಸಮುದಾಯವಾಗಿವೆ. ಅವೆರಡೂ ಒಂದಕ್ಕೊಂದು ಸಂಬಂಧಪಟ್ಟಿವೆ ಎಂಬುದು ಸತ್ಯವಾಗಿದ್ದರೂ ಅವೆರಡರ ಸಂಬಂಧವು ಅವುಗಳ ವ್ಯತ್ಯಾಸದ ಮೇಲೆ ಆತುಕೊಂಡಿದೆ. ಅವೆರಡು ಒಂದಕ್ಕೊಂದು ವ್ಯತ್ಯಾಸವಾಗಿರುವುದರಿಂದ ಅವುಗಳನ್ನು ಒಂದಕ್ಕೊಂದು ವಿರುದ್ಧವಾಗಿ ಹೋಲಿಸಬಹುದು.

ಮನೆಗಳಲ್ಲಿ ಉಪ್ಪನ್ನು ಹೇಗೆ ಬಳಸುತ್ತಿದ್ದರು ಎಂಬುದನ್ನು ಅರ್ಥಮಾಡಿಕೊಳ್ಳುವಾಗ ಅದರ ರೂಪಾಲಂಕಾರವು ಅರ್ಥವಾಗುತ್ತದೆ. ಹಾಗಾದರೆ ಹೊಸ ಒಡಂಬಡಿಕೆಯ ಕಾಲದಲ್ಲಿ ಉಪ್ಪು ಹೇಗೆ ಬಳಸಲಾಗುತ್ತಿತ್ತು? ಎರಡು ಉತ್ತರಗಳು ಹೀಗಿವೆ:

- ನಮ್ಮಲ್ಲಿ ಅನೇಕರು ಆಹಾರಕ್ಕೆ ರುಚಿಯನ್ನು ಕೊಡಲು ಉಪ್ಪನ್ನು ಬಳಸುತ್ತೇವೆ ಎಂದು ಯೋಚಿಸಬಹುದು. ಉಪ್ಪಿಲ್ಲದೇ ಆಹಾರಕ್ಕೆ ರುಚಿಯಿಲ್ಲ. ಯೇಸುವಿನ ಕಾಲದಲ್ಲಿಯೂ ಹೀಗೆ ಇತ್ತು.
- ಆದರೆ ಅನೇಕ ಶತಮಾನಗಳಿಂದ ಉಪ್ಪನ್ನು ಒಂದು ರಕ್ಷಣಾಸಾಧಕವಾಗಿ ಬಳಸಲಾಗುತ್ತಿದೆ. ಆಹಾರವು ಕೆಡದಂತೆ ಅದು ತಡೆಗಟ್ಟುತ್ತದೆ. ಪ್ರಾಚೀನ ಪ್ಯಾಲೆಸ್ತೇನ್‌ನಲ್ಲಿಯೂ ಸಹ ಹೀಗಿತ್ತು. ಇಂದಿಗೂ ಅನೇಕ ದೇಶಗಳಲ್ಲಿ ಅನೇಕ ತಿಂಗಳುಗಳವರೆಗೆ ಮೀನು ಮತ್ತು ಮಾಂಸವು ಕೆಡದಂತೆ ಉಪ್ಪಿನಲ್ಲಿ ಶೇಖರಿಸಿಡಲಾಗುತ್ತದೆ. ಭಾರತದಲ್ಲಿ ಉಪ್ಪಿನಕಾಯಿಯನ್ನು ಅನೇಕ ದಿನಗಳವರೆಗೆ ಶೇಖರಿಸಿಡಲಾಗುತ್ತದೆ.

ಪರ್ವತ ಪ್ರಸಂಗದಲ್ಲಿ ಯೇಸು ಮೇಲಿನ ಎರಡನೆಯ ಅಂಶವನ್ನು ಹೇಳಿದನೆಂದು ನಿಶ್ಚಯವಾಗಲೂ ತಿಳಿದುಕೊಳ್ಳಬಹುದು.

- ಈ ದುಷ್ಟ ಲೋಕವು ದೇವರಿಗೆ ರುಚಿಯಿಲ್ಲದ್ದಾಗಿದ್ದು ಆತನು ವಿಶ್ವಾಸಿಗಳ ಮೂಲಕ ಅದನ್ನು ರುಚಿಯಾಗ ಮಾಡಲು ಬಯಸಿದನೋ? ಈ ಆಲೋಚನೆ ಅರ್ಥವನ್ನು ಕೊಡುವುದಿಲ್ಲ.
- ಅಥವಾ ಈ ದುಷ್ಟ ಲೋಕವು ದಿನೇ ದಿನೇ ಕೆಡುತ್ತಿದ್ದು ಹೊರಗಿನ ಅಂಶವು ಮಾತ್ರ (ದೇವರ ಸ್ವಂತ ಜನರು) ಅದು ಕೆಡುವುದನ್ನು ತಡೆಗಟ್ಟಲು ಸಾಧ್ಯವೋ? ಈ ಆಲೋಚನೆಯು ಹೆಚ್ಚಿನ ಅರ್ಥವನ್ನು ಕೊಡುತ್ತದೆ.

ಎರಡೂ ರೂಪಾಲಂಕಾರಗಳಲ್ಲಿ ರಚನೆಯು ಒಂದೇ ಆಗಿದೆ. ಅವೆರಡೂ ಎರಡು ಭಾಗಗಳನ್ನು ಹೊಂದಿವೆ:

1. ಮೊದಲು ಒಂದು ಹೇಳಿಕೆ (ದೃಢೀಕರಣ) ಬರುತ್ತದೆ: ನೀವು ಭೂಮಿಗೆ ಉಪ್ಪಾಗಿದ್ದೀರಿ ಮತ್ತು ನೀವು ಲೋಕಕ್ಕೆ ಬೆಳಕಾಗಿದ್ದಿರಿ.
2. ನಂತರ ಒಂದು ಷರತ್ತು ಬರುತ್ತದೆ. ಆ ಷರತ್ತಿನ ಮೇಲೆ ಮೇಲಿನ ಹೇಳಿಕೆಯು ಆತುಕೊಂಡಿದೆ: ಉಪ್ಪು ತನ್ನ ಸಾರವನ್ನು ಕಳೆದುಕೊಳ್ಳಬಾರದು. ಬೆಳಕನ್ನು ಪ್ರಕಾಶಿಸುವಂತೆ ಇಡಬೇಕು.

ಸಮಾರೋಪವಾಗಿ ಹೇಳಲ್ಪಟ್ಟಿರುವುದೇನೆಂದರೆ, ಉಪ್ಪು ತನ್ನ ಸಾರವನ್ನು ಕಳೆದುಕೊಂಡರೆ ನಿಷ್ಪ್ರಯೋಜಕವಾಗುತ್ತದೆ. ಅದೇ ರೀತಿಯಾಗಿ ಬೆಳಕು ಮರೆಯಾಗಿಡಲ್ಪಟ್ಟರೆ ಅದು ನಿಷ್ಪ್ರಯೋಜಕವಾಗುತ್ತದೆ.

ದೇವರು ತನ್ನ ಕೃಪೆಯಿಂದ ಈ ಲೋಕದಲ್ಲಿ ವಿವಿಧ ರೀತಿಯ ನಿರ್ಬಂಧಕ ಪ್ರಭಾವಗಳನ್ನು ಇರಿಸಿದ್ದಾನೆ. ಉದಾಹರಣೆಗೆ, ಸರ್ಕಾರ (ಆಡಳಿತ ಮತ್ತು ಕಾನೂನು, ಕಾನೂನುಗಳನ್ನು ಜಾರಿಗೆ ತರಲು ನ್ಯಾಯಾಂಗ) ಮತ್ತು ಸಮಾಜ (ದಾಂಪತ್ಯ ಮತ್ತು ಕುಟುಂಬ). ಈ “ಜಾತ್ಯಾತೀತ”ನಿರ್ಬಂಧಗಳು ಜನರ ಜೀವಿತಗಳಮೇಲೆನಿಶ್ಚಯವಾಗಲೂ ಆರೋಗ್ಯಕರಪ್ರಭಾವವನ್ನುಬೀರುತ್ತವೆ.

ಆದರೆ ಈ ಮಾನವ ಸಮಾಜದ ಪ್ರಾಮುಖ್ಯವಾದ ನಿರ್ಬಂಧಗಳ ಜೊತೆಗೆ – ದೇವರು ತನ್ನ ಬಿಡುಗಡೆ ಹೊಂದಿದ, ನವೀಕರಿಸಲ್ಪಟ್ಟ ಹಾಗೂ ನೀತಿವಂತ ಜನರು ಪಾಪಮಯ ಸಮಾಜದಲ್ಲಿ ಅತ್ಯಂತ ಬಲವಾದ ಸಕಾರಾತ್ಮಕ ಪ್ರಭಾವವಾಗಬೇಕೆಂದು ಬಯಸುತ್ತಾನೆ. ವಿಶ್ವಾಸಿಗಳು ಈ ಲೋಕಕ್ಕೆ ಉಪ್ಪಾಗಿರಬೇಕೆಂದು ದೇವರು ಬಯಸುತ್ತಾನೆ. ಆದರೆ ಯೇಸುವಿನ ರೂಪಕಾಲಂಕಾರದಲ್ಲಿ ಉಪ್ಪಿನ ಪರಿಣಾಮಕಾರಿ ಶಕ್ತಿಯು ಷರತ್ತುಬದ್ಧವಾಗಿದೆ: ಅದು ತನ್ನ ಸಾರವನ್ನು ಕಳೆದುಕೊಳ್ಳಬಾರದು (ಪರ್ಯಾಯವಾಗಿ: ಅದು ಕಲುಷಿತಗೊಳ್ಳಬಾರದು).

ಅದೇ ರೀತಿಯಾಗಿ, ತಮ್ಮ ಬೆಳಕನ್ನು ಮರೆಮಾಡಬಾರದೆಂದು ತನ್ನ ಓದುಗರಿಗೆ ಯೇಸು ಹೇಳುತ್ತಾನೆ. ಅವರು ತಮ್ಮ ಬೆಳಕನ್ನು ಇತರರ ಮುಂದೆ ಪ್ರಕಾಶಿಸುವಂತೆ ಮಾಡಬೇಕು, ಆಗ ಜನರು ಅವರ ಒಳ್ಳೆಯ ಕ್ರಿಯೆಗಳನ್ನು ಕಂಡು ಪರಲೋಕದ ತಂದೆಯನ್ನು ಮಹಿಮೆಪಡಿಸುವರು.

ಈ ವಾಕ್ಯಭಾಗದಲ್ಲಿ ಯೇಸು ಬಳಸುವ ಉಪ್ಪು ಮತ್ತು ಬೆಳಕಿನ ರೂಪಕಾಲಂಕಾರವು ಇಂದಿನ ದಕ್ಷಿಣ ಭಾರತದಲ್ಲಿರುವ ವಿಶ್ವಾಸಿಗಳಾದ ನಮಗೆ ಇಹಲೋಕದಲ್ಲಿರುವ ನಮ್ಮ ಕ್ರಿಸ್ತೀಯ ಜವಬ್ಧಾರಿಗಳ ಕುರಿತು ಮೂರು ಮುಖ್ಯ ಪಾಠಗಳನ್ನು ಕಲಿಸುತ್ತವೆ:

1) ವಿಶ್ವಾಸಿಗಳ ಹಾಗೂ ಅವಿಶ್ವಾಸಿಗಳ ಮತ್ತು ಸಭೆಯ ಹಾಗೂ ಲೋಕದ ನಡುವೆ ಒಂದು ಮೂಲಭೂತವಾದ ವ್ಯತ್ಯಾಸವಿದೆ.
2) ಈ ವ್ಯತ್ಯಾಸವು ನಮ್ಮ ಮೇಲೆ ತರುವ ಜವಬ್ಧಾರಿಯನ್ನು ನಾವು ಅಂಗೀಕರಿಸಬೇಕು.
3) “ಉಪ್ಪು ಮತ್ತು ಬೆಳಕು” ಎಂಬ ರೂಪಕಾಲಂಕಾರವು ತಿಳಿಸುವಂತೆ ನಾವು ನಮ್ಮ ಕ್ರಿಸ್ತೀಯ ಜವಬ್ಧಾರಿಯನ್ನು ದ್ವಿಗುಣವಾಗಿ ಕಾಣಬೇಕು.

ಮೂಲಭೂತವಾದ ವ್ಯತ್ಯಾಸವನ್ನು ಬೆಳಕು ಮತ್ತು ಕತ್ತಲೆ ಹಾಗೂ ಉಪ್ಪು ಮತ್ತು ಕೊಳೆತುಹೋಗುವುದು/ರೋಗದ ನಡುವೆ ಇರುವ ವ್ಯತ್ಯಾಸದ ಮೂಲಕ ತಿಳಿದುಕೊಳ್ಳಬಹುದು. ವಿಶ್ವಾಸಿಗಳು ವ್ಯತ್ಯಾಸವಾದ ಜನರಾಗಿದ್ದಾರೆ ಎಂಬ ಆಲೋಚನೆಯ ಮೇಲೆ ಪರ್ವತ ಪ್ರಸಂಗವು ಆಧಾರಗೊಂಡಿದೆ. ಯೇಸು ತನ್ನ ಪ್ರಸಂಗದ ಮೂಲಕ ತನ್ನ ಹಿಂಬಾಲಕರಿಗೆ ವ್ಯತ್ಯಾಸವಾದ ಜನರಾಗಿರುವಂತೆ ಕರೆಯುತ್ತಾನೆ.

## ಪದಗಳ ಮತ್ತು ಭಾವಗಳ ಕುರಿತು ಟಿಪ್ಪಣಿ

*ಉಪ್ಪು ಸಪ್ಪಗಾದರೆ* (ವ. 13): ಪಾಲೆಸ್ತೇನಿನಲ್ಲಿದ್ದ "ಉಪ್ಪು" ಮರಳು ಮತ್ತು ಉಪ್ಪಿನ ಒಂದು ಮಿಶ್ರಣವಾಗಿತ್ತು. ಕೆಲವೊಮ್ಮೆ ಉಪ್ಪಿನ ಅಂಶವು ತೊಳೆದುಕೊಂಡುಹೋಗುವಾಗ ಕೇವಲ ಮರಳುಮಾತ್ರ ಉಳಿಯುತ್ತಿತ್ತು (ಅದು "ಉಪ್ಪಿನಂತೆಯೇ" ಕಾಣುತ್ತಿತ್ತು ಮತ್ತು ಅದನ್ನು "ಉಪ್ಪು" ಎಂದು ಸಹ ಕರೆಯಲಾಗುತ್ತಿತ್ತು). ಆದರೆ ಅದು ತನ್ನ ಸಾರವನ್ನು ಕಳೆದುಕೊಂಡು ನಿಷ್ಪ್ರಯೋಜಕವಾಗಿರುತ್ತಿತ್ತು.

## ಪ್ರಶ್ನೆಗಳು

1. "ಉಪ್ಪು ಮತ್ತು ಬೆಳಕು" ಎಂಬ ರೂಪಕಾಲಂಕಾರವು ನಮಗೆ ಲೋಕದ ಕುರಿತು ಏನನ್ನು ಹೇಳುತ್ತವೆ?
2. ಪಾಲೆಸ್ತೇನಿನಲ್ಲಿರುವ ಉಪ್ಪಿನ ಕುರಿತಾದ ಮಾಹಿತಿಯನ್ನು (ಮೇಲಿನ ಟಿಪ್ಪಣಿಯನ್ನು ನೋಡಿರಿ) ನೀವು ವಿಶ್ವಾಸಿಗಳಿಗೆ ಹೇಗೆ ಅನ್ವಯಿಸುವಿರಿ (ಮಾರ್ಕ 9:50 ರಲ್ಲಿರುವ ಯೇಸುವಿನ ಮಾತುಗಳನ್ನು ಹೋಲಿಸಿರಿ *ನಿಮ್ಮೊಳಗೆ ಉಪ್ಪು ಇರುವಂತೆ)?*
3. ವಿಶ್ವಾಸಿಗಳು ಅವಿಶ್ವಾಸಿಗಳೊಂದಿಗೆ ಸೇರಿಕೊಂಡು ಲೋಕದ ಮಲಿನತೆಗಳಿಂದ ಕಲುಷಿತಗೊಂಡರೆ ಏನಾಗುವುದು?
4. ಕ್ರೈಸ್ತ ವಿಶ್ವಾಸಿಗಳು "ಲೋಕಕ್ಕೆ ಬೆಳಕಾಗಿದ್ದಾರೆ" ಎಂಬ ಸಂಗತಿಯ ಹಿಂದಿರುವ ಯೇಸುವಿನ ಉದ್ದೇಶವನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?
5. ಜನರು ಕ್ರಿಸ್ತೀಯ ದಯೆಯನ್ನು ಕಾರ್ಯರೂಪದಲ್ಲಿ ಕಾಣುವಾಗ ಯಾಕೆ ದೇವರನ್ನು ಮಹಿಮೆಪಡಿಸುವರು?
6. ವಿಶ್ವಾಸಿಗಳ ಉಪ್ಪು ಸಪ್ಪಗಾಗಬಹುದಾದರೆ ಅವರಲ್ಲಿರುವ ಬೆಳಕು ಸಹ ಕತ್ತಲಾಗುವ ಸಾಧ್ಯತೆಯಿದೆ (ಮತ್ತಾಯ 6:23). ಇದು ಯಾವಾಗ ಸಂಭವಿಸುತ್ತದೆ ಎಂಬುದಕ್ಕೆ ಕೆಲವು ಉದಾಹರಣೆಗಳನ್ನು ಕೊಡಿರಿ.
7. ವ್ಯಕ್ತಿಗತವಾಗಿ ನೀವು ಹೇಗೆ ಈಗಾಗಲೇ ಇರುವುದಕ್ಕಿಂತಲೂ ಇನ್ನೂ ಉತ್ತಮವಾಗಿ "ಭೂಮಿಗೆ ಉಪ್ಪಾಗಿಯೂ" ಮತ್ತು "ಲೋಕಕ್ಕೆ ಬೆಳಕಾಗಿಯೂ" ಆಗಬಹುದು?
8. ನಿಮ್ಮ ಸಭೆ (ಅಥವಾ ನಿಮ್ಮ ಸತ್ಯವೇದ ಕಾಲೇಜ್) ಹೇಗೆ ಈಗಾಗಲೇ ಇರುವುದಕ್ಕಿಂತಲೂ ಇನ್ನೂ ಉತ್ತಮವಾಗಿ "ಭೂಮಿಗೆ ಉಪ್ಪಾಗಿಯೂ" ಮತ್ತು "ಲೋಕಕ್ಕೆ ಬೆಳಕಾಗಿಯೂ" ಆಗಬಹುದು?

# ಅಧ್ಯಯನ 14: ನಮ್ಮ ನೈತಿಕ ನೀತಿವಂತಿಕೆ

## ಪೀಠಿಕೆ

ಮತ್ತಾಯ 5 ರ ಉಳಿದ ಭಾಗದಲ್ಲಿ ವಿಶ್ವಾಸಿಗಳ ನೀತಿವಂತಿಕೆಯ ಕುರಿತು ಯೇಸು ತನ್ನ ಶಿಷ್ಯರಿಗೆ ಬೋಧಿಸುತ್ತಾನೆ. ವಿಶ್ವಾಸಿಗಳ ನೀತಿವಂತಿಕೆಯು ಯೆಹೂದ್ಯ ಶಾಸ್ತ್ರಿಗಳ ಹಾಗೂ ಫರಿಸಾಯರ ನೀತಿವಂತಿಕೆಗಿಂತ ಹೆಚ್ಚಾಗಿ ಇರದಿದ್ದರೆ ಅವರು ಪರಲೋಕ ರಾಜ್ಯಕ್ಕೆ ಸೇರಲಾರರು. ಹಾಗಾದರೆ ಯೇಸು ಇಲ್ಲಿ ಏನನ್ನು ಹೇಳುತ್ತಿದ್ದಾನೆ? ಹಳೇ ಒಡಂಬಡಿಕೆಯ ಆಜ್ಞೆಗಳನ್ನು ಹಾಗೂ ನಿಷೇಧಗಳನ್ನು ಯೆಹೂದ್ಯ ನಾಯಕರುಗಳು ಪಾಲಿಸುವುದಕ್ಕಿಂತಲೂ ಅಧಿಕವಾಗಿ ವಿಶ್ವಾಸಿಗಳು ಮಾಡಬೇಕೆಂದು ಆತನು ಅರ್ಥೈಸಿದನೋ? ನಾವು ಹಳೇ ಒಡಂಬಡಿಕೆಯ ನೇಮನಿಷ್ಠೆಗಳನ್ನೆಲ್ಲಾ ಪಾಲಿಸುವುದರ ಮೂಲಕ ಮತ್ತು ನಮ್ಮ ಒಳ್ಳೆಯ ಕ್ರಿಯೆಗಳ ಮೂಲಕ ನಾವು ದೇವರ ರಾಜ್ಯವನ್ನು ಪ್ರವೇಶಿಸಬಹುದೆಂದು ಆತನು ಅರ್ಥೈಸಿದನೋ? ನಾವು ಈ ಅಧ್ಯಯನದಲ್ಲಿ ಇಂತಹ ಪ್ರಶ್ನೆಗಳ ಕುರಿತು ಚರ್ಚಿಸಲಿದ್ದೇವೆ.

## ಓದಿರಿ

ಮತ್ತಾಯ 5:17–48

## ಪ್ರಾರಂಭಿಕ ಟಿಪ್ಪಣಿಗಳು

ಈ ವಾಕ್ಯಭಾಗಕ್ಕೆ ಕೆಳಕಂಡ ರಚನೆಯನ್ನು ನೀಡಬಹುದು:

1. ಕ್ರಿಸ್ತನು, ವಿಶ್ವಾಸಿ ಮತ್ತು ಧರ್ಮಶಾಸ್ತ್ರ (ವ. 17–20)
    1) ಕ್ರಿಸ್ತನು ಮತ್ತು ಧರ್ಮಶಾಸ್ತ್ರ (ವ. 17–18)
    2) ವಿಶ್ವಾಸಿ ಮತ್ತು ಧರ್ಮಶಾಸ್ತ್ರ (ವ. 19–20)
2. ಕ್ರಿಸ್ತೀಯ ನೈತಿಕ ನೀತಿವಂತಿಕೆಯ ಆರು ಉದಾಹರಣೆಗಳು (ವ. 21–48)
    1) ಕೋಪದಿಂದ ದೂರವಿರುವುದು (ವ. 21–26)
    2) ಶರೀರದಾಶೆಯಿಂದ ದೂರವಿರುವುದು (ವ. 27–30)
    3) ದಾಂಪತ್ಯ ಜೀವನದಲ್ಲಿ ನಂಬಿಗಸ್ತಿಕೆ (ವ. 31–32)
    4) ಮಾತಿನಲ್ಲಿ ಪ್ರಾಮಾಣಿಕತೆ (ವ. 33–37)
    5) ನಿಷ್ಕ್ರಿಯವಾಗಿದ್ದು ಪ್ರತೀಕಾರ ತೀರಿಸಿಕೊಳ್ಳದಿರುವುದು (ವ. 38–42)
    6) ಕ್ರಿಯಾತ್ಮಕವಾಗಿ ಪ್ರೀತಿಸುವುದು (ವ. 43–48)

ಯೇಸುವಿನ ಸೇವೆಯ ಪ್ರಾರಂಭದಿಂದಲೇ ಜನರು ಆತನ ಅಧಿಕಾರವನ್ನು ಕಂಡು ಬೆರಗಾಗಿದ್ದರು. ಹಾಗಾಗಿ ಮೋಶೆಯ ಧರ್ಮಶಾಸ್ತ್ರದ ಅಧಿಕಾರದೊಂದಿಗೆ ಯೇಸುವಿನ ಅಧಿಕಾರದ ಕುರಿತು ಸಹ ಜನರು ಆಲೋಚಿಸಿದ್ದು ಸಹಜವಾಗಿದೆ. ಯೆಹೂದ್ಯ ಶಾಸ್ತ್ರಿಗಳು ಧರ್ಮಶಾಸ್ತ್ರದ ಬೋಧಕರುಗಳಾಗಿದ್ದರು ಮತ್ತು ಅವರು ಮೋಶೆಯ ಧರ್ಮಶಾಸ್ತ್ರಕ್ಕೆ ಅಧೀನರಾಗಿದ್ದರು. ಅದನ್ನು ಅರ್ಥವಿವರಿಸುವ ಕಾರ್ಯಕ್ಕೆ ಅವರು ತಮ್ಮನ್ನೇ ಸಮರ್ಪಿಸಿಕೊಂಡಿದ್ದಾಗ್ಯೂ ಅವರಿಗೆ ತಮ್ಮದೇ ಆದ ಯಾವುದೇ ಅಧಿಕಾರವಿರಲಿಲ್ಲ. ಯೇಸು ವ್ಯತ್ಯಾಸವಾಗಿದ್ದನು. ಆತನು ತನ್ನ ಸ್ವಂತ ಅಧಿಕಾರದಿಂದ ಮಾತನಾಡಿದನು. ಹಿಂದೆದೂ ಯಾವುದೇ ಪೂರ್ವ ಪ್ರವಾದಿಗಳಾಗಲಿ ಅಥವಾ ಆಧುನಿಕ ಶಾಸ್ತ್ರಿಯಾಗಲಿ ಬಳಸದ ಒಂದು ಸೂತ್ರವನ್ನು ಆತನು ಉಪಯೋಗಿಸಿದನು: "ನಾನು ನಿಮಗೆ ಸತ್ಯವಾಗಿ ಹೇಳುತ್ತೇನೆ!" ಹಾಗಾಗಿ ಆತನು ಕೇವಲ ಪೂರ್ವಕಾಲದ ಅಧಿಕಾರಗಳನ್ನು ಉಲ್ಲೇಖಿಸುವುದು ಮಾತ್ರವಲ್ಲದೇ ತನ್ನ ಸ್ವಂತ ಹೆಸರಿನಲ್ಲಿ ಮಾತನಾಡುತ್ತಿದ್ದನು.

ಯೇಸು ಹಳೇ ಒಡಂಬಡಿಕೆಯನ್ನು ರದ್ದುಪಡಿಸಲು ಬರದೆ ಅದನ್ನು ನೆರವೇರಿಸಲು ಬಂದನು. ಆತನು ಇದನ್ನು ಹೇಳಿದಾಗ ಏನನ್ನು ಅರ್ಥೈಸಿದನು? ನಾವು ಮೊದಲ ಪ್ರಶ್ನೆಗೆ ಉತ್ತರಿಸುವಾಗ ಈ ಮುಖ್ಯವಾದ ಸಮಸ್ಯೆಯ ಕುರಿತು ಚರ್ಚಿಸಲಿದ್ದೇವೆ. ನಂತರ ಈ ಅಧ್ಯಯನದ ಉತ್ತರಗಳ ವಿಭಾಗದಲ್ಲಿರುವ ***ಪರ್ಯಾಲೋಚನೆಯ*** ಮೊದಲ ಭಾಗವನ್ನು ನೋಡೋಣ.

ವಿಶ್ವಾಸಿಗಳ ನೀತಿವಂತಿಕೆಯ ಗುಣಲಕ್ಷಣದ ಕುರಿತು ಮಾತನಾಡಿದ ನಂತರ ಯೇಸು ವಚನ 17–20 ರಲ್ಲಿರುವ ಮೂರು ಹೇಳಿಕೆಗಳನ್ನು (ಧರ್ಮಶಾಸ್ತ್ರದಲ್ಲಿ ಬರೆದಿರುವುದೆಲ್ಲವೂ ನೆರವೇರುವವರೆಗೆ ಅದು ನಾಶವಾಗುವುದಿಲ್ಲ; ಆತನು ಅದನ್ನು ನೆರವೇರಿಸಲು ಬಂದನು; ಶಾಸ್ತ್ರಿಗಳು ಮತ್ತು ಫರಿಸಾಯರು ಅವುಗಳನ್ನು ಕೈಗೊಂಡಿದ್ದಕಿಂತಲೂ ಹೆಚ್ಚಾಗಿ ತನ್ನ ಹಿಂಬಾಲಕರು ಅದನ್ನು ಕೈಗೊಳ್ಳಬೇಕು) ವಿವರಿಸಲು ಆರು ಸಮನಾಂತರ ವಾಕ್ಯವೃಂದಗಳನ್ನು ಮಂಡಿಸುತ್ತಾನೆ. ಪ್ರತಿಯೊಂದು ವಾಕ್ಯವೃಂದವು ಒಂದೇ ಸೂತ್ರದಿಂದ ಪ್ರಾರಂಭಗೊಂಡು ಒಂದು ವಿರೋಧತೆಯನ್ನು ಒಳಗೊಂಡಿದೆ: *... ಎಂದು ನಿಮ್ಮ ಪೂರ್ವಿಕರಿಗೆ ಹೇಳಿದ್ದನ್ನು ಕೇಳಿದ್ದೀರಷ್ಟೇ. ಆದರೆ ನಾನು ನಿಮಗೆ ಹೇಳುವುದೇನೆಂದರೆ* (ವ. 21–22). ನಮ್ಮ ಸತ್ಯವೇದಗಳಲ್ಲಿ ಆರು ವಾಕ್ಯವೃಂದಗಳಿಗೆ ಈ ರೀತಿಯ ಶೀರ್ಷಿಕೆಗಳಿವೆ: ಕೊಲೆ/ಕೋಪ, ವ್ಯಭಿಚಾರ/ಶರೀರದಾಶೆ, ವಿವಾಹ ವಿಚ್ಛೇದನೆ, ಆಣೆಗಳು, ಕಣ್ಣಿಗೆ ಕಣ್ಣು, ವೈರಿಗಳನ್ನು ಪ್ರೀತಿಸುವುದು.

ಯೇಸು ಯಾವುದಕ್ಕೆ ವಿರುದ್ಧವಾಗಿ ಮಾತನಾಡುತ್ತಿದ್ದನು ಎಂಬುದನ್ನು ಮೊದಲು ಅರ್ಥಮಾಡಿಕೊಳ್ಳದೆ ಈ ಆರು ಉದಾಹರಣೆಗಳನ್ನು ನಾವು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಯೇಸು ಯಾರ ವಿರುದ್ಧವಾಗಿ ತನ್ನನ್ನು ಹೋಲಿಸಿಕೊಂಡನು?

ಯೇಸು ಮೋಶೆಗೆ ವಿರುದ್ಧವಾಗಿ ತನ್ನನ್ನು ಹೋಲಿಸಿಕೊಂಡನು ಮತ್ತು ಮೋಶೆಗೆ ವಿರುದ್ಧವಾದ ಒಂದು ಹೊಸ ನೈತಿಕ ನೀತಿವಂತಿಕೆಯನ್ನು ಉದ್ಘಾಟಿಸಿದನು ಎಂಬುದಾಗಿ ಅನೇಕ ಸತ್ಯವೇದ ಶಾಸ್ತ್ರಜ್ಞರುಗಳು ಹೇಳುತ್ತಾರೆ. "ಹಳೇ ಒಡಂಬಡಿಕೆಯು ಏನನ್ನು ಕಲಿಸುತ್ತದೆಂದು ನೀವು ಬಲ್ಲಿರಿ ... ಆದರೆ ನಾನು ನಿಮಗೆ ಕಲಿಸುವುದೇನೆಂದರೆ" ಎಂಬ ರೀತಿಯಲ್ಲಿ ಯೇಸು ಹಳೇಯದ್ದನ್ನು ತಿರಸ್ಕರಿಸಿದನು ಎಂದು ಅವರು ಹೇಳುತ್ತಾರೆ.

ಆದರೆ ಈ ಸತ್ಯವೇದ ಶಾಸ್ತ್ರಜ್ಞರುಗಳು ತಪ್ಪಾಗಿದ್ದಾರೆ. ಯೇಸು ತದ್ವಿರೋಧಿಸಿದ್ದು ಧರ್ಮಶಾಸ್ತ್ರವನ್ನಲ್ಲ ಬದಲಾಗಿ ಧರ್ಮಶಾಸ್ತ್ರದ ಕೆಲವು ವಕ್ರತೆಗಳನ್ನು. ಆ ವಕ್ರತೆಗಳ ಅಪರಾಧಕ್ಕೆ ಶಾಸ್ತ್ರಿಗಳು ಮತ್ತು ಫರಿಸಾಯರು ಕಾರಣರಾಗಿದ್ದರು. ಯೇಸು ಶಾಸ್ತ್ರಿಗಳ ಮತ್ತು ಫರಿಸಾಯರ ವಿರುದ್ಧ ಧರ್ಮಶಾಸ್ತ್ರವನ್ನು ಅನುಮೋದಿಸಿದನು (ನೋಡಿರಿ ವ. 17–18). ಆತನು ಧರ್ಮಶಾಸ್ತ್ರದ ಅಧಿಕಾರವನ್ನು ದೃಢೀಕರಿಸಿದನು ಮತ್ತು ಅದರ ನಿಜವಾದ ಅರ್ಥವಿವರಣೆಯನ್ನು ನೀಡಿದನು.

ಶಾಸ್ತ್ರಿಗಳು ಮತ್ತು ಫರಿಸಾಯರು ಹಳೇ ಒಡಂಬಡಿಕೆಯ ಆಜ್ಞೆಗಳೊಂದಿಗೆ ಎರಡು ಸಂಗತಿಗಳನ್ನು ಮಾಡಿದರು:

1) ಅವರು ಧರ್ಮಶಾಸ್ತ್ರಕ್ಕೆ ಹೆಚ್ಚಿನ ಅಂಶಗಳನ್ನು ಸೇರಿಸಿ ಅದರ ಬೇಡಿಕೆಗಳನ್ನು ಕಡಿಮೆಗೊಳಿಸಿದರು.

2) ಅವರು ಧರ್ಮಶಾಸ್ತ್ರಕ್ಕೆ ಹೆಚ್ಚಿನ ಅಂಶಗಳನ್ನು ಸೇರಿಸಿ ಅದರ ಅನುಮತಿಗಳನ್ನು ವಿಶಾಲಪಡಿಸಿದರು.

ಈ ಎರಡೂ ಪ್ರವೃತ್ತಿಗಳನ್ನು ತಿರುಚುವುದೇ ಯೇಸುವಿನ ಉದ್ದೇಶವಾಗಿತ್ತು. ದೇವರ ಆಜ್ಞೆಗಳ ಪೂರ್ಣ ಅನ್ವಯಗಳನ್ನು ಯಾವುದೇ ಮಾನವ ನಿರ್ಮಿತ ಮಿತಿಗಳಿಂದ ಕಡಿಮೆಗೊಳಿಸದೆ ಅವುಗಳನ್ನು ಪಾಲಿಸಬೇಕೆಂದು ಯೇಸು ಒತ್ತಿ ಹೇಳಿದನು. ಅದೇ ರೀತಿಯಾಗಿ, ದೇವರು ಅನುಮತಿಸಿರುವ ಸಂಗತಿಗಳ ಮೇಲೆ ಆತನು ಇರಿಸಿರುವ ನಿರ್ಬಂಧಗಳನ್ನು ಸಹ ಅಂಗೀಕರಿಸಬೇಕು ಮತ್ತು ಅವುಗಳಿಗೆ ಯಾರೂ ಸಹ ಹೆಚ್ಚಿನದ್ದನ್ನು ಸೇರಿಸಬಾರದು.

## ಪದಗಳ ಮತ್ತು ಭಾವಗಳ ಟಿಪ್ಪಣಿಗಳು

*ಧರ್ಮಶಾಸ್ತ್ರವನ್ನಾಗಲಿ, ಪ್ರವಾದನೆಗಳನ್ನಾಗಲಿ* (ವ. 17): ಇದು ಇಡೀ ಹಳೇ ಒಡಂಬಡಿಕೆಯ ಕುರಿತು ಉಲ್ಲೇಖಿಸುತ್ತದೆ. ಅದನ್ನು ಚಿಕ್ಕದಾಗಿ "ಧರ್ಮಶಾಸ್ತ್ರ" ಎಂದೂ ಸಹ ಕರೆಯುವುದು ಸಾಮಾನ್ಯವಾಗಿತ್ತು (ವ. 18 ರಲ್ಲಿದ್ದಂತೆ).

*ಆದ್ದರಿಂದ* (ವ. 19): ಇಂಗ್ಲಿಷ್ ಎನ್.ಐ.ವಿ ಭಾಷಾಂತರದಲ್ಲಿ ಈ ಪದವನ್ನು ಕೈಬಿಡಲಾಗಿದೆ.

*ಹೇಳಿರುವುದನ್ನು ಕೇಳಿದ್ದೀರಿ* (ವ. 21, 27, 33, 38, 43; ಮತ್ತು *ಎಂದು ಹೇಳಿದೆಯಷ್ಟೆ* ವ. 31): ಯೇಸು ಹಳೇ ಒಡಂಬಡಿಕೆಯನ್ನು ಉಲ್ಲೇಖಿಸುವಾಗಲೆಲ್ಲಾ "ಬರೆದಿದೆ" ಎಂಬ ಭಾವವನ್ನು ಸಾಮಾನ್ಯವಾಗಿ ಬಳಸುತ್ತಾನೆ. ಹಾಗಾಗಿ "ಹೇಳಿರುವುದನ್ನು ಕೇಳಿದ್ದೀರಿ" ಎಂಬುದು "ಹಿರಿಯರ ಸಂಪ್ರದಾಯವನ್ನು" ಉಲ್ಲೇಖಿಸುತ್ತದೆ ಹೊರತು ಹಳೇ ಒಡಂಬಡಿಕೆಯನ್ನಲ್ಲ. ಆದರೆ ಎರಡೂ ಸನ್ನಿವೇಶಗಳಲ್ಲಿ

(ವ. 27 ಮತ್ತು 38) ಯೇಸು ವಾಸ್ತವಿಕವಾಗಿ ಹಳೇ ಒಡಂಬಡಿಕೆಯ ಧರ್ಮಶಾಸ್ತ್ರವನ್ನು ಉಲ್ಲೇಖಿಸುತ್ತಾನೆ. ನಂತರ ಆತನು ಯೆಹೂದ್ಯ ಶಾಸ್ತ್ರಿಗಳು ಈ ಆಜ್ಞೆಗಳ ಕುರಿತು ರೂಪಿಸಿದ್ದ ತಪ್ಪಾದ ಅರ್ಥವಿವರಣೆಗಳೊಂದಿಗೆ ವ್ಯವಹರಿಸಲು ಮುಂದಾಗುತ್ತಾನೆ.

*ಆಣೆಯಿಡಲೇಬೇಡಿರಿ ... ಆಕಾಶದ ಮೇಲೆ ... ಭೂಮಿಯ ಮೇಲೆ ... ಯೆರುಸಲೇಮಿನ ಮೇಲೆ ... ನಿನ್ನ ತಲೆಯ ಮೇಲೆ* (ವ. 34–36): ಫರಿಸಾಯರು ಆಣೆಯಿಡುವುದರ ಕುರಿತಾದ ಹಳೇ ಒಡಂಬಡಿಕೆಯ ಆಜ್ಞೆಗಳನ್ನು ನಿರ್ಬಂಧಿಸಲು ಮತ್ತು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು. ಹಾಗಾಗಿ ಅವರು ಈ ವಿವಿಧ ರೀತಿಯ ಸೂತ್ರಗಳನ್ನು ಬಳಸಿದರು.

*ಕಣ್ಣಿಗೆ ಕಣ್ಣು ಹಲ್ಲಿಗೆ ಹಲ್ಲು ಎಂದುಹೇಳಿರುವುದನ್ನು ನೀವು ಕೇಳಿದ್ದೀರಿ* (ವ. 38): ಇಲ್ಲಿ ಯೇಸು ವಾಸ್ತವಿಕವಾಗಿ ವಿಮೋ. 21:24 ನ್ನು ಉಲ್ಲೇಖಿಸುತ್ತಿದ್ದಾನೆ. ಈ ಆಜ್ಞೆಯ ಹಿಂದಿರುವ ಹಿನ್ನಲೆಯ ಪರಿಹಾರವು ಸಮನಾಗಿರಬೇಕು ಅದಕ್ಕಿಂತ ಮೀರಬಾರದು ಎಂಬುದೇ ಆಗಿದೆ. ಇದು ಗೋತ್ರಗಳ ನಡುವೆ ತಲೆಮಾರುಗಳವರೆಗೆ ದ್ವೇಷವು ಮುಂದುವರೆದು ಇಡೀ ಕುಟುಂಬಗಳೇ ನಾಶವಾಗುವುದನ್ನು ತಡೆಯುವ ಒಂದು ಮಾರ್ಗವಾಗಿತ್ತು. ಆದರೆ ಯೇಸುವಿನ ಕಾಲದಲ್ಲಿ ಯಾವುದಾದರೂ ಹಾನಿಗೆ (ಕೊಲೆಯನ್ನು ಹೊರತುಪಡಿಸಿ) ದಂಡ ವಿಧಿಸುವುದರ ಮೂಲಕವಾಗಿ ಪರಿಹಾರವು ಕಂಡುಕೊಳ್ಳಲ್ಪಡುತ್ತಿತ್ತು. ಹಾಗಾಗಿ ಶಾಸ್ತ್ರಿಗಳು ಮತ್ತು ಫರಿಸಾಯರು ಸ್ಪಷ್ಟವಾಗಿ ಈ ನಿಯಮವನ್ನು (ಅದರ ಸ್ಥಳವಾದ) ನ್ಯಾಯಾಲಯದ ಅಂಗಳದಿಂದ (ಅದರ ಸ್ಥಳವಲ್ಲದ) ವೈಯಕ್ತಿಕ ಸಂಬಂಧಗಳ ಅಂಗಳದವರೆಗೆ ವಿಸ್ತರಿಸಿದರು. ಅವರು ವೈಯಕ್ತಿಕ ಪ್ರತೀಕಾರವನ್ನು ಸಮರ್ಥಿಸಿಕೊಳ್ಳಲು ಅದನ್ನು ಬಳಸಿಕೊಂಡರು. ಧರ್ಮಶಾಸ್ತ್ರವು ಸ್ಪಷ್ಟವಾಗಿ ಅದನ್ನು ನಿಷೇಧಿಸಿದ್ದಾಗ್ಯೂ (ಯಾಜಕ. 19:18) ಅವರು ಹಾಗೆ ಮಾಡಿದರು. ಹಾಗಾಗಿ ಯೇಸು ಈ ತಪ್ಪಾದ ಉಪಯೋಗವನ್ನು ವಿರೋಧಿಸುತ್ತಾ, *ಆದರೆ ನಾನು ನಿಮಗೆ ಹೇಳುವುದೇನೆಂದರೆ* ... ಎಂದು ಬೋಧಿಸಿದನು (ವ. 39).

ನಿನ್ನ ನೆರೆಯವನನ್ನು ಪ್ರೀತಿಸಿ ನಿನ್ನ ವೈರಿಯನ್ನು ದ್ವೇಷಿಸು (ವ. 43): ಈ "ಆಜ್ಞೆಯು" ಫರಿಸಾಯರು ದೇವರ ವಾಕ್ಯಕ್ಕೆ ಎರಡು ಬದಲಾವಣೆಗಳನ್ನು ಮಾಡಿದ್ದರು ಎಂಬುದನ್ನು ತೋರಿಸುತ್ತದೆ: ಮೊದಲನೆಯದಾಗಿ, ಅವರು "ನಿನ್ನಂತೆಯೇ" ಎಂಬುದನ್ನು ಬಿಟ್ಟಿದ್ದರು (ಯಾಜಕ. 19:18). ಹಾಗೆ ಮಾಡುವುದರ ಮೂಲಕ ಅವರು ತಮ್ಮ ನೆರೆಯವರ ಕುರಿತು ತಮಗಿರಬೇಕಾದ ಪ್ರೀತಿಯ ಮಟ್ಟವನ್ನು ಸೀಮಿತಗೊಳಿಸಿದ್ದರು. ಎರಡನೇಯದಾಗಿ, ಅವರು "ನಿನ್ನ ವೈರಿಯನ್ನು ದ್ವೇಷಿಸು" ಎಂಬುದನ್ನು ಸೇರಿಸಿದ್ದರು. ಈ ಆಜ್ಞೆಯನ್ನು ನಾವು ಹಳೇ ಒಡಂಬಡಿಕೆಯಲ್ಲಿ ಕಾಣುವುದಿಲ್ಲ. ಅದನ್ನು ಸೇರಿಸುವುದರ ಮೂಲಕ ಯೆಹೂದ್ಯ ನಾಯಕರು ಉದ್ದೇಶಪೂರ್ವಕವಾಗಿ ಅವರ ನಡುವೆ ವಾಸಿಸುತ್ತಿದ್ದ ಪರದೇಶವಾಸಿಗಳ ಕುರಿತಾದ ಇತರೆ ಆಜ್ಞೆಗಳನ್ನು ಅಸಡ್ಡೆಮಾಡಿದರು (*ಒಬ್ಬ ಪರಕೀಯನು ನಿಮ್ಮ ದೇಶದಲ್ಲಿ ನಿನ್ನೊಂದಿಗೆ ಪ್ರವಾಸಿಯಾಗಿದ್ದರೆ ಅವನನ್ನು ಉಪದ್ರವಪಡಿಸಬೇಡಿರಿ. ಆದರೆ ನಿಮ್ಮಲ್ಲಿ ವಾಸವಾಗಿರುವ ಪರಕೀಯನು ನಿಮ್ಮೊಳಗೆ ಹುಟ್ಟಿದವನಂತಿರಲಿ. ನೀವು ಅವನನ್ನು ನಿಮ್ಮಂತೆಯೇ ಪ್ರೀತಿಸಬೇಕು.* ಯಾಜಕ 19:33–34).

## ಪ್ರಶ್ನೆಗಳು

1. ಹಳೇ ಒಡಂಬಡಿಕೆಯ ಕುರಿತು ತಾನು ಹೊಂದಿರುವ ಸಂಬಂಧದ ಕುರಿತು ಯೇಸು ಯಾವ ಎರಡು ಭಾವಗಳನ್ನು ಬಳಸುತ್ತಾನೆ? ನೀವು ಅವುಗಳನ್ನು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?
2. ಯೇಸು ಧರ್ಮಶಾಸ್ತ್ರದ (ಹಳೇ ಒಡಂಬಡಿಕೆಯ ಹಾಗೂ ಅದರ ಬೋಧನೆಯ) ಶಾಶ್ವತತೆಯ ಕುರಿತು ಏನನ್ನು ಹೇಳಿದನು?
3. ವಚನ 19 "ಆದ್ದರಿಂದ" ಎಂಬ ಪದದೊಂದಿಗೆ ಪ್ರಾರಂಭಿಸುತ್ತದೆ. ಈ ಪದವು ಧರ್ಮಶಾಸ್ತ್ರವನ್ನು ದೇವರ ರಾಜ್ಯದೊಂದಿಗೆ ಹೇಗೆ ಸಂಬಂಧಿಸುತ್ತದೆ ಎಂಬುದನ್ನುವಿವರಿಸಿರಿ.
4. ವಚನ 20 ರಲ್ಲಿ ಯೇಸು ಇನ್ನೂ ಮುಂದುವರೆಸುತ್ತಾ ದೇವರ ರಾಜ್ಯವನ್ನು ಪ್ರವೇಶಿಸಬೇಕಾದರೆ ಶಾಸ್ತ್ರಿಗಳು ಮತ್ತು ಫರಿಸಾಯರ ನೀತಿಗಿಂತ ಹೆಚ್ಚಿನ ನೀತಿವಂತಿಕೆಯನ್ನು (ಧರ್ಮಶಾಸ್ತ್ರ ಪಾಲನೆಯನ್ನು) ದೇವರು ಅಪೇಕ್ಷಿಸುತ್ತಾನೆ ಎಂದು ಹೇಳಿದನು. ಆದರೆ ಅದು ಹೇಗೆ ಸಾಧ್ಯ? ಯಾರಾದರೂ ಹೇಗೆ ಶಾಸ್ತ್ರಿಗಳು ಮತ್ತು ಫರಿಸಾಯರ ನೀತಿಗಿಂತ ಹೆಚ್ಚಿನ ನೀತಿವಂತಿಕೆಯನ್ನು ಹೊಂದಲು ಸಾಧ್ಯ? ಕ್ರೈಸ್ತ ನೀತಿವಂತಿಕೆಯು ಹೇಗೆ ಫರಿಸಾಯರ ನೀತಿಗಿಂತ ಹೆಚ್ಚಲು ಸಾಧ್ಯ? ಮತ್ತು ದೇವರ ರಾಜ್ಯವನ್ನು ಪ್ರವೇಶಿಸಲು ಈ ಉತ್ತಮ ನೀತಿವಂತಿಕೆಯನ್ನು ಹೇಗೆ ಷರತ್ತಾಗಿ ಮಾಡಲು ಸಾಧ್ಯ? ಯೇಸು ಇಲ್ಲಿ ಕ್ರಿಯೆಯಿಂದ ರಕ್ಷಣೆ ಎಂಬ ಸಿದ್ಧಾಂತವನ್ನು ಬೋಧಿಸುತ್ತಿಲ್ಲವೋ? ಹಾಗಾದರೆ ನಾವು ಯೇಸುವಿನ ಈ ಹೇಳಿಕೆಯನ್ನು ಹೇಗೆ ಅರ್ಥಮಾಡಿಕೊಳ್ಳಬೇಕೆಂದು ನಿಮಗೆ ಅನ್ನಿಸುತ್ತದೆ: *ನಾನು ನಿಮಗೆ ಹೇಳುತ್ತೇನೆ, ನಿಮ್ಮ ನೀತಿವಂತಿಕೆಯು ಶಾಸ್ತ್ರಿಗಳ ಮತ್ತು ಫರಿಸಾಯರ ನೀತಿವಂತಿಕೆಗಿಂತ ಹೆಚ್ಚಾಗಿ ಇರದಿದ್ದರೆ ನೀವು ದೇವರ ರಾಜ್ಯವನ್ನು ಪ್ರವೇಶಿಸಲಾರಿರಿ*?

5. ನಮ್ಮ ನೀತಿವಂತಿಕೆಯು ಶಾಸ್ತ್ರಿಗಳ ಮತ್ತು ಫರಿಸಾಯರ ನೀತಿವಂತಿಕೆಗಿಂತ ಹೆಚ್ಚಾಗಿ ಇರದಿದ್ದರೆ ನಾವು ದೇವರ ರಾಜ್ಯವನ್ನು ಪ್ರವೇಶಿಸಲಾರೆವು ಎಂದು ಹೇಳುವುದರ ಮೂಲಕ ಯೇಸು ಏನನ್ನು ಅರ್ಥೈಸಿದನೆಂದು ನಿಮಗೆ ಅನ್ನಿಸುತ್ತದೆ?

6. ನಾವು ಈ ವಾಕ್ಯಭಾಗದಲ್ಲಿ "ನಿಮ್ಮ ಪೂರ್ವಿಕರಿಗೆ ಹೇಳಿದ್ದನ್ನು ನೀವು ಕೇಳಿದ್ದೀರಷ್ಟೇ ... ಆದರೆ ನಾನು ನಿಮಗೆ ಹೇಳುವುದೇನೆಂದರೆ" ಎಂದು ಆಗಾಗ್ಗೆ ಕಾಣುವ ಸೂತ್ರವನ್ನು ವಿವರಿಸಿರಿ.

7. ಆರನೇಯ ಆಜ್ಞೆಯು *ಕೊಲೆ ಮಾಡಬಾರದು* ಎಂದು ಹೇಳುತ್ತದೆ (ವಿಮೋ. 20:13). ಈ ಆರನೇಯ ಆಜ್ಞೆಯ ಕುರಿತು ಯೇಸು ನೀಡಿದ ಅನ್ವಯವು ಹೇಗೆ ಶಾಸ್ತ್ರಿಗಳ ಮತ್ತು ಫರಿಸಾಯರ ಅನ್ವಯಕ್ಕಿಂತ ವಿಶಾಲವಾಗಿದೆ?

8. *ವ್ಯಭಿಚಾರ ಮಾಡಬಾರದು* ಎಂಬ ಏಳನೆಯ ಆಜ್ಞೆಯನ್ನು ಯೇಸು ಹೇಗೆ ಅರ್ಥವಿವರಿಸಿದನು ಎಂಬುದನ್ನು ವರ್ಣಿಸಿರಿ.

9. *ನಿನ್ನ ಬಲಗಣ್ಣು ನಿನ್ನ ಪಾಪಕ್ಕೆ ಕಾರಣವಾಗಿದ್ದರೆ, ಅದನ್ನು ನೀನು ಕಿತ್ತೆಸೆದುಬಿಡು; ಏಕೆಂದರೆ ನಿನ್ನ ಇಡೀ ದೇಹ ನರಕದಲ್ಲಿ ಎಸೆಯಲ್ಪಡುವುದಕ್ಕಿಂತ ನಿನ್ನ ಒಂದು ಅಂಗವು ನಾಶವಾಗುವುದು ನಿನಗೆ ಲೇಸು* (ವ. 29) ಎಂಬ ಯೇಸುವಿನ ಈ ಮಾತುಗಳನ್ನು ನೀವು ಹೇಗೆ ಅರ್ಥವಿವರಿಸುವಿರಿ.

10. ಆಣೆಗಳ ಕುರಿತಾದ ಯೇಸುವಿನ ಬೋಧನೆಯನ್ನು ನೀವು ಹೇಗೆ ಸಾರಾಂಶಗೊಳಿಸುವಿರಿ (ವ. 34–37)?

11. ಯೇಸು ಪ್ರತೀಕಾರದ ನಿಯಮವನ್ನು (ಕಣ್ಣಿಗೆ ಕಣ್ಣು ಹಲ್ಲಿಗೆ ಹಲ್ಲು) ತದ್ವಿರೋಧಿಸಲಿಲ್ಲ, ಯಾಕೆಂದರೆ ಅದು ಸತ್ಯವಾಗಿಯೂ ನ್ಯಾಯಸಮ್ಮತವಾಗಿಯೂ ಇತ್ತು. ಹಾಗಾದರೆ ಯೇಸು ವಾಸ್ತವಿಕವಾಗಿ ಯಾವ ಅಂಶವನ್ನು ಹೇಳಿದನು?

12. "ಕೆಡುಕನನ್ನು ಎದುರಿಸಬೇಡ" ಎಂಬುದರ ಅರ್ಥವನ್ನು ತಿಳಿಸಲು ಯೇಸು ಹೇಗೆ ವರ್ಣಿಸಿದನು?

13. ಜನರು ತಮ್ಮ ವೈರಿಗಳನ್ನು ದ್ವೇಷಿಸಬೇಕೆಂದು ಫರಿಸಾಯರು ಬೋಧಿಸಿದರು (ವ. 43). ಆದರೆ ತನ್ನ ಹಿಂಬಾಲಕರು ಏನು ಮಾಡಬೇಕೆಂದು ಯೇಸು ಅಪೇಕ್ಷಿಸಿದನು?

14. ನಿಮಗೆ ಈ ಅಧ್ಯಯನದಲ್ಲಿ ಅತ್ಯಂತ ಸವಾಲನ್ನೊಡ್ಡಿದ ಸಂಗತಿ ಯಾವುದು? ಯಾಕೆ? ನಿಮ್ಮ ಗುಂಪುಗಳಲ್ಲಿ ಹಂಚಿಕೊಳ್ಳಿರಿ.

# ಅಧ್ಯಯನ 15: ನಮ್ಮ ಧಾರ್ಮಿಕ ನೀತಿವಂತಿಕೆ

## ಪೀಠಿಕೆ

ಯೇಸು ಮತ್ತಾಯ 6 ರ ಮೊದಲ ಭಾಗದಲ್ಲಿ ನೀತಿವಂತಿಕೆಯ ಕುರಿತಾದ ತನ್ನ ಬೋಧನೆಯನ್ನು ಮುಂದುವರೆಸುತ್ತಾನೆ. ಆದರೆ ಆತನು ಒಬ್ಬ ವಿಶ್ವಾಸಿಯ ನೈತಿಕ ನೀತಿವಂತಿಕೆಯಿಂದ ಆತನ ಧಾರ್ಮಿಕ ನೀತಿವಂತಿಕೆಯ ಮೇಲೆ ಈಗ ಹೆಚ್ಚಿನ ಒತ್ತನ್ನು ಕೊಡುತ್ತಾನೆ. ಇದು ಕಾರ್ಯರೂಪದಲ್ಲಿ ಕಾಣಿಸುವ ನೀತಿವಂತಿಕೆಯಾಗಿದೆ. ಹಾಗಾಗಿ ಪರ್ವತ ಪ್ರಸಂಗದಲ್ಲಿ ಯೇಸು ನೀತಿವಂತಿಕೆಯ ಎರಡು ಆಯಾಮಗಳ ಕುರಿತು ಬೋಧಿಸುತ್ತಾನೆ: ನೈತಿಕ ನೀತಿವಂತಿಕೆ ಮತ್ತು ಧಾರ್ಮಿಕ ನೀತಿವಂತಿಕೆ. ಮತ್ತಾಯನು 5:6 ರಲ್ಲಿ (ನೈತಿಕ ನೀತಿವಂತಿಕೆಯನ್ನು ಉಲ್ಲೇಖಿಸುತ್ತಾ) ಮತ್ತು 6:1 ರಲ್ಲಿ (ಧಾರ್ಮಿಕ ನೀತಿವಂತಿಕೆಯನ್ನು ಉಲ್ಲೇಖಿಸುತ್ತಾ) ಅದೇ ಗ್ರೀಕ್ ಪದವನ್ನು ಉಪಯೋಗಿಸುವುದನ್ನು ಗಮನಿಸಿರಿ

ಯೇಸು ಬಹುತೇಕ ಧರ್ಮಗಳಲ್ಲಿ ಕಾಣಬಹುದಾದ ಧಾರ್ಮಿಕ ನೀತಿವಂತಿಕೆಯ ಮೂರು ಕ್ಷೇತ್ರಗಳನ್ನು ಪ್ರಸ್ತಾಪಿಸುತ್ತಾನೆ:

1) ದಾನಧರ್ಮ (6:1–4)

2) ಪ್ರಾರ್ಥನೆ (6:5–15)

3) ಉಪವಾಸ (6:16–18)

ಯೇಸು ಅದನ್ನು ಮಾಡುತ್ತಿರುವಾಗ ನಿಜವಾದ ವಿಶ್ವಾಸಿಗಳು ಯಾರು ಮತ್ತು ಅವರು ಯಾವ ರೀತಿ ಇರಬಾರದೆಂಬುದಕ್ಕೆ ಎರಡು ರೀತಿಯ ಜನರನ್ನು ತಿಳಿಸುತ್ತಾನೆ: ಫರಿಸಾಯರು ಮತ್ತು ಅನ್ಯರು. ಹಾಗಾಗಿ ಯೇಸುವಿನ ಹಿಂಬಾಲಕರು ಕಪಟಿಗಳಾದ ಫರಿಸಾಯರಂತೆ ಇರಬಾರದು (ವ. 5). ಅವರು ಅನ್ಯರಂತೆಯೂ ಇರಬಾರದು ಯಾಕೆಂದರೆ ಅವರ ಧರ್ಮವು ಯಾಂತ್ರಿಕವಾದದ್ದು ಮತ್ತು ಔಪಚಾರಿಕವಾದದ್ದು (ವ. 7–8).

## ಓದಿರಿ

ಮತ್ತಾಯ 6:1–18

## ಪ್ರಶ್ನೆಗಳು

1. ಪ್ರಾರ್ಥನೆ ಹಾಗೂ ಸಭೆಯ ಆರಾಧನೆಗಳಲ್ಲಿ ಭಾಗಿಯಾಗುವುದನ್ನು ಪಾಲಿಸುವುದಕ್ಕಿಂತ ಒಬ್ಬ ವಿಶ್ವಾಸಿಗೆ ಮುಖ್ಯವಾದದ್ದು ತಾಳ್ಮೆ ಮತ್ತು ಪ್ರಾಮಾಣಿಕತೆಯಾಗಿದೆ ಎಂದು ಹೇಳುವ ವಿಶ್ವಾಸಿಯನ್ನು ನೀವು ಹೇಗೆ ತಿದ್ದುವಿರಿ?
2. ದಾನಧರ್ಮ, ಪ್ರಾರ್ಥನೆ ಹಾಗೂ ಉಪವಾಸದ ಕುರಿತು ತನ್ನ ಶಿಷ್ಯರು ಯಾವ ಮನೋಭಾವನೆಯನ್ನು ಹೊಂದಿದ್ದರೆಂದು ಯೇಸು ತಿಳಿದಿದ್ದನು (ವ. 2, 5, 16)?
3. ಮತ್ತಾಯ 5:16 ರಲ್ಲಿ ಯೇಸು ಹೇಳಿದ ಸಂಗತಿಯ *(ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ*) ಹಾಗೂ 6:1 ರಲ್ಲಿ ಆತನು ಹೇಳಿದ ಸಂಗತಿಯ (*ಜನರು ನೋಡಲಿ ಎಂದು ಅವರ ಮುಂದೆ ನಿಮ್ಮ ದಾನಧರ್ಮಗಳನ್ನು ಮಾಡದಂತೆ ಜಾಗರೂಕರಾಗಿರಿ*) ನಡುವೆ ಒಂದು ತದ್ವಿರೋಧತೆಯಿದ್ದಂತೆ ತೋರುತ್ತದೆ. ನಿಮ್ಮ ಟಿಪ್ಪಣಿಗಳು?
4. ಫರಿಸಾಯರ ದಾನಧರ್ಮದಲ್ಲಿ ಯಾವ ದೋಷವಿತ್ತು?
5. ***"ನಿನ್ನ ಬಲಗೈ ಕೊಡುವುದು ನಿನ್ನ ಎಡಗೈಗೆ ತಿಳಿಯದಿರಲಿ"*** (ವ. 3) ಎಂದು ಯೇಸು ಹೇಳಿದಾಗ ಏನನ್ನು ಅರ್ಥೈಸಿದನು ಎಂದು ನಿಮಗೆ ಅನ್ನಿಸುತ್ತದೆ?

6. *"ನಿನ್ನ ತಂದೆ ನಿನಗೆ ಪ್ರತಿಫಲವನ್ನು ಕೊಡುವನು"* ಎಂದು ಯೇಸು ಹೇಳಿದಾಗ ಏನನ್ನು ಅರ್ಥೈಸಿರಬಹುದು? ದೇವರು ನಮ್ಮ ಹಣವನ್ನು (ಬಹುಶಃ ಬಡ್ಡಿಸಮೇತವಾಗಿ) ನಮಗೆ ಹಿಂದಿರುಗಿಸುತ್ತಾನೆ ಎಂದು ಯೇಸು ವಾಗ್ದಾನಮಾಡುತ್ತಿದ್ದಾನೆ ಎಂಬುದು ಇದರ ನಿಜವಾದ ಅರ್ಥವೋ?

7. ಪರ್ವತ ಪ್ರಸಂಗದಲ್ಲಿನ ಯೇಸುವಿನ ಬೋಧನೆಯ ಬೆಳಕಿನಡಿಯಲ್ಲಿ ನಿಮ್ಮ ಸ್ವಂತ "ಸತ್ಕ್ರಿಯೆಗಳನ್ನು" ಪರಿಶೀಲಿಸಿರಿ. ಬಹುಶಃ ನಿಮ್ಮ ಗುಂಪಿನಲ್ಲಿರುವ ಇತರರೊಂದಿಗೆ ನಿಮ್ಮ ಕೆಲವು ಸಮಾರೋಪಗಳನ್ನು ನೀವು ಹಂಚಿಕೊಳ್ಳಲು ಬಯಸಬಹುದು.

8. ಫರಿಸಾಯರ ಪ್ರಾರ್ಥನೆಯಲ್ಲಿ ಯಾವ ದೋಷವಿತ್ತೆಂದು ಯೇಸು ಹೇಳಿದನು (ವ. 5)?

9. ಫರಿಸಾಯರು *"ತಮ್ಮ ಪ್ರತಿಫಲವನ್ನು ಹೊಂದಿದ್ದಾಯಿತೆಂದು"* ಹೇಳಿದಾಗ ಯೇಸು ಏನನ್ನು ಉಲ್ಲೇಖಿಸಿದನು ಎಂದು ನಿಮಗೆ ಅನ್ನಿಸುತ್ತದೆ (ವ. 5)?

10. ಯೇಸು ವಚನ 6 ರಲ್ಲಿ ಯಾವ ರೀತಿಯ ಪ್ರಾರ್ಥನೆಯನ್ನು ಉಲ್ಲೇಖಿಸಿದನು?

11. ಅನ್ಯರ ಪ್ರಾರ್ಥನೆಯಲ್ಲಿ ಯಾವ ದೋಷವಿತ್ತೆಂದು ಯೇಸು ಹೇಳಿದನು (ವ. 7)?

12. ಯೇಸು ವಚನ 5–6 ಮತ್ತು 8 ರಲ್ಲಿ ಪ್ರಾರ್ಥನೆಯ ಕುರಿತು ನಮಗೆ ಏನನ್ನು ಕಲಿಸುತ್ತಾನೆ?

13. ಪರ್ವತ ಪ್ರಸಂಗದಲ್ಲಿನ ಯೇಸುವಿನ ಬೋಧನೆಯ ಬೆಳಕಿನಡಿಯಲ್ಲಿ ನಿಮ್ಮ ಸ್ವಂತ ಪ್ರಾರ್ಥನೆಯನ್ನು ಪರಿಶೀಲಿಸಿರಿ. ಬಹುಶಃ ನಿಮ್ಮ ಗುಂಪಿನಲ್ಲಿರುವ ಇತರರೊಂದಿಗೆ ನಿಮ್ಮ ಕೆಲವು ಸಮಾರೋಪಗಳನ್ನು ನೀವು ಹಂಚಿಕೊಳ್ಳಲು ಬಯಸಬಹುದು.

14. ನಾವು ಕರ್ತನ ಪ್ರಾರ್ಥನೆಯ ಮೊದಲ ವಾಕ್ಯಗಳಲ್ಲಿ ದೇವರ ಕುರಿತು ಏನನ್ನು ಅರ್ಥಮಾಡಿಕೊಳ್ಳುತ್ತೇವೆ?

15. ಕರ್ತನ ಪ್ರಾರ್ಥನೆಯಿಂದ ನಮ್ಮ ಪ್ರಾರ್ಥನಾ ಜೀವಿತದ ಪ್ರಾಧಾನ್ಯತೆಗಳ ಕುರಿತು ಏನನ್ನು ಅರ್ಥಮಾಡಿಕೊಳ್ಳುತ್ತೇವೆ?

16. ಕರ್ತನ ಪ್ರಾರ್ಥನೆಯ ಮೊದಲ ಮೂರು ವಿಜ್ಞಾಪನೆಗಳು ದೇವರ ಮಹಿಮೆಯ ಕುರಿತು ನಮಗಿರುವ ಕಾಳಜಿಯನ್ನು ವ್ಯಕ್ತಪಡಿಸುತ್ತವೆ. ಹೇಗೆ ಎಂಬುದನ್ನು ವಿವರಿಸಿರಿ.

17. ನಿನ್ನ ರಾಜ್ಯವು ಬರಲಿ; ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ ಎಂದು ನಾವು ಪ್ರಾರ್ಥಿಸುವಾಗ ವಾಸ್ತವಿಕವಾಗಿ ಎರಡು ದೃಷ್ಟಿಕೋನದಿಂದ ಪ್ರಾರ್ಥಿಸುತ್ತಿದ್ದೇವೆ. ಹೇಗೆ ಎಂಬುದನ್ನು ವಿವರಿಸಿರಿ.

18. "ನಮ್ಮ ಅನುದಿನದ ಆಹಾರ"ಕ್ಕಾಗಿ ಮಾಡುವ ಪ್ರಾರ್ಥನೆಯನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?

19. ನಮ್ಮ ಪರಲೋಕದ ತಂದೆಗೆ ಕ್ಷಮಾಪಣೆಗಾಗಿ ಪ್ರಾರ್ಥಿಸುವಾಗ ಯೇಸು ಹೇಳುವ ಷರತ್ತನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?

20. ಕೊನೆಯ ಎರಡು ವಿಜ್ಞಾಪನೆಗಳನ್ನು ಒಂದೇ ವಿಜ್ಞಾಪನೆಯ ಸಕಾರಾತ್ಮಕ ಹಾಗೂ ನಕಾರಾತ್ಮಕ ಅಂಶಗಳಾಗಿ ಅರ್ಥಮಾಡಿಕೊಳ್ಳಬಹುದು. ಹೇಗೆ ಎಂಬುದನ್ನು ವಿವರಿಸಿರಿ. ನೀವು ಹೇಗೆ ಈ ವಿಜ್ಞಾಪನೆಯನ್ನು ಸೂತ್ರೀಕರಿಸುವಿರಿ?

21. ಪ್ರಶ್ನೆ 14–19 ರ ನಿಮ್ಮ ಉತ್ತರಗಳ ಬೆಳಕಿನಲ್ಲಿ ಕರ್ತನ ಪ್ರಾರ್ಥನೆಯ ಕುರಿತು ಆಲೋಚಿಸಿರಿ. ನಿಮ್ಮ ಗುಂಪಿನಲ್ಲಿ ಎಲ್ಲರೊಂದಿಗೆ ಸೇರಿ ಅದನ್ನು ಮಾಡಿರಿ.

22. ಫರಿಸಾಯರ ಉಪವಾಸದಲ್ಲಿ ಯಾವ ದೋಷವಿತ್ತೆಂದು ಯೇಸು ಹೇಳಿದನು (ವ. 16)?

23. ತನ್ನ ಶಿಷ್ಯರು ಉಪವಾಸ ಮಾಡುವಾಗ *"ತಲೆಗೆ ಎಣ್ಣೆಹಚ್ಚಿಕೊಂಡುಮುಖ ತೊಳೆದುಕೊಳ್ಳಬೇಕೆಂದು"* ಹೇಳಿದಾಗ ಯೇಸು ಏನನ್ನು ಅರ್ಥೈಸಿದನು ಎಂದು ನಿಮಗೆ ಅನ್ನಿಸುತ್ತದೆ?

24. ಶಿಷ್ಯರ ಉಪವಾಸದ ಹಿನ್ನಲೆಯಲ್ಲಿ *"ನಿನ್ನ ತಂದೆ ನಿನಗೆ ಪ್ರತಿಫಲವನ್ನು ಕೊಡುವನು"* ಎಂದು ಹೇಳಿದಾಗ ಯೇಸು ಏನನ್ನು ಅರ್ಥೈಸಿದನು ಎಂದು ನಿಮಗೆ ಅನ್ನಿಸುತ್ತದೆ?

25. ಇಂದಿನ ದಿನಗಳಲ್ಲಿ ವಿದೇಶದಲ್ಲಿರುವ ಅನೇಕ ಸಭೆಗಳಲ್ಲಿ "ಉಪವಾಸ" ಎಂಬುದು ಕೇವಲ ಆಹಾರವನ್ನು ತ್ಯಜಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಸತ್ಯವೇದಾನುಸಾರವಾದ ಉಪವಾಸದ ನಿಜವಾದ ಉದ್ದೇಶಗಳನ್ನು ನೆರವೇರಿಸುವುದಕ್ಕೆ ಅಡ್ಡಿಯಾಗಿರುವ ಯಾವುದೇ ಸಂಗತಿಯಿಂದ ದೂರವಿರುವುದರ ಮೂಲಕ ವಿಶ್ವಾಸಿಗಳು "ಉಪವಾಸವಿರುತ್ತಾರೆ" (ಹಿಂದಿನಪ್ರಶ್ನೆಯ ಉತ್ತರವನ್ನುನೋಡಿರಿ).

ಅಂತಹ "ಉಪವಾಸವನ್ನು" ನೀವೂ ಸಹ ನಿಮ್ಮ ಭಾರತೀಯ ಸಭಾಹಿನ್ನಲೆಯಲ್ಲಿ ಮಾಡಲು ಸಾಧ್ಯವೋ? ಯಾಕೆ - ಯಾಕೆ ಇಲ್ಲ? ಇಂತಹ "ಉಪವಾಸವನ್ನು" ಮಾಡಲು ಪ್ರಯತ್ನಿಸಬಹುದಾದ ಕೆಲವು ಉದಾಹರಣೆಗಳನ್ನು ತಿಳಿಸಿರಿ.

# ಅಧ್ಯಯನ 16: ನಮ್ಮ ಮಹತ್ವಾಕಾಂಕ್ಷೆ

## ಪೀಠಿಕೆ

ಸಮಾಜದಲ್ಲಿ ಹಾಗೂ ಸಭೆಯಲ್ಲಿ ಆಗಾಗ್ಗೆ ಧಾರ್ಮಿಕ ವಿಷಯಗಳ (ಉದಾಹರಣೆಗೆ ಕಾಣಿಕೆ ಕೊಡುವುದು, ಪ್ರಾರ್ಥಿಸುವುದು ಮತ್ತು ಉಪವಾಸ) ಮತ್ತು ಧರ್ಮಾತೀತ ವಿಷಯಗಳ (ಉದಾಹರಣೆಗೆ ಹಣ, ಆಸ್ತಿ, ಆಹಾರ, ಪಾನೀಯ, ಉಡುಗೆ ಮತ್ತು ಜೀವನದ ಮಹತ್ವಾಕಾಂಕ್ಷೆ ಇವುಗಳ ಕುರಿತಾದ ಸಮಸ್ಯೆಗಳ) ನಡುವೆ ಗೆರೆ ಎಳೆಯಲಾಗುತ್ತದೆ.

ಆದರೆ ದೇವರು ಮಾನವ ಜೀವಿತದ ಈ ಎರಡೂ ಕ್ಷೇತ್ರಗಳ (ಧಾರ್ಮಿಕ ವಲಯ ಮತ್ತು ಧರ್ಮಾತೀತ ವಲಯದ) ಕುರಿತು ಚಿಂತಿಸುತ್ತಾನೆ. ದೇವರು ನಮ್ಮ ಕ್ರಿಸ್ತೀಯ ಜೀವನದ ವೈಯಕ್ತಿಕ ಹಾಗೂ ವೃತ್ತಿಪರ ಕ್ಷೇತ್ರಗಳೆರಡರಲ್ಲಿಯೂ ಆಸಕ್ತನಾಗಿದ್ದಾನೆ.

ಪರ್ವತ ಪ್ರಸಂಗದಲ್ಲಿ ಯೇಸು ವಿಶ್ವಾಸಿಯ ಜೀವಿತದ ಈ ಎಲ್ಲಾ ವಲಯಗಳಿಗೆ ಸವಾಲನ್ನು ಹಾಕುತ್ತಾನೆ. ಪುನಃ ಪುನಃ ಯೇಸು (ಅಂದು ಆತನನ್ನು ಹಿಂಬಾಲಿಸಿದ) ತನ್ನ ಶಿಷ್ಯರಿಗೆ (ಮತ್ತು ಇಂದು ಆತನನ್ನು ಹಿಂಬಾಲಿಸುತ್ತಿರುವ ನಮಗೆ) ವ್ಯತ್ಯಾಸವಾದ ಜನರಾಗಿರಬೇಕೆಂದು ಹೇಳುತ್ತಾನೆ. ನಾವು ಅವಿಶ್ವಾಸಿಗಳಿಗಿಂತ ಭಿನ್ನರಾಗಿರುವುದು ಮಾತ್ರವಲ್ಲದೆ ನಾವು ಜೀವಿಸುತ್ತಿರುವ ಸಮಾಜದ ಪ್ರಬಲವಾದ ಸಂಪ್ರದಾಯದಿಂದಲೂ ವ್ಯತ್ಯಾಸವಾಗಿರಬೇಕು. ನಾವು ಧಾರ್ಮಿಕ ವ್ಯಕ್ತಿಗಳಂತೆ ಕಪಟಿಗಳಾಗಿರಬಾರದು (ಆಗಿನ ಕಾಲದ ಫರಿಸಾಯರಂತೆ, 5:20; 6:1–18) ಮತ್ತು ಸಾಮಾನ್ಯ ಮಾನವನಂತೆ ನಾವು ಭೌತಿಕತೆಯುಳ್ಳವರಾಗಿರಬಾರದು (ಪರ್ವತ ಪ್ರಸಂಗದಲ್ಲಿರುವ ಅನ್ಯರಂತೆ, 6:19–34).

ಮತ್ತಾಯ 6 ರ ಎರಡನೆಯ ಭಾಗದ ಪ್ರತಿಯೊಂದು ಹಂತದಲ್ಲಿ ಯೇಸು ನಮ್ಮ ಮುಂದೆ ಒಂದು ಪರ್ಯಾಯವನ್ನು ಇರಿಸುತ್ತಾನೆ:

1) ಎರಡು ನಿಕ್ಷೇಪಗಳು: ಭೂಲೋಕದಲ್ಲಿ ಮತ್ತು ಪರಲೋಕದಲ್ಲಿ (ವ. 19–21)
2) ಎರಡು ದೈಹಿಕ ಸ್ಥಿತಿಗಳು: ಬೆಳಕು ಮತ್ತು ಕತ್ತಲೆ (ವ. 22–23)
3) ಎರಡು ಯಜಮಾನರು: ದೇವರು ಮತ್ತು ಧನ (ವ. 24)
4) ಎರಡು ಚಿಂತೆಗಳು: ನಮ್ಮ ದೇಹಗಳು ಮತ್ತು ದೇವರ ರಾಜ್ಯ (ವ. 25–34)

ಈ ಅಧ್ಯಯನದಲ್ಲಿ ನಾವು ಸರಿಯಾದದ್ದನ್ನು ಆರಿಸಿಕೊಳ್ಳುವಂತೆ ಯೇಸು ನಮಗೆ ಸಹಾಯ ಮಾಡಲಿದ್ದಾನೆ. ಆತನು ನಮಗೆ ತಪ್ಪಾದ ಮಾರ್ಗದಲ್ಲಿರುವ ಮೂರ್ಖತನವನ್ನು ಹಾಗೂ ಸರಿಯಾದ ಮಾರ್ಗದಲ್ಲಿರುವ ಜ್ಞಾನವನ್ನು ತೋರಿಸಲಿದ್ದಾನೆ. ಆತನು ಸುಳ್ಳು ಮತ್ತು ಸತ್ಯದ ನಡುವೆ ಇರುವ ವ್ಯತ್ಯಾಸವನ್ನು ತೋರಿಸಲಿದ್ದಾನೆ. ನಾವು ಅವುಗಳನ್ನು ಒಂದಕ್ಕೊಂದು ಹೋಲಿಸಿ ಸ್ವಂತವಾದ ಆಯ್ಕೆಯನ್ನು ಮಾಡಲು ನಮನ್ನು ಆಮಂತ್ರಿಸಲಿದ್ದಾನೆ.

## ಓದಿರಿ

ಮತ್ತಾಯ 6:19–34

## ಪ್ರಶ್ನೆಗಳು

1. ಯೇಸು 6:19–21 ರಲ್ಲಿ ವಾಸ್ತವಿಕವಾಗಿ ಏನನ್ನು ನಿಷೇಧಿಸಿದನು?
2. *"ಪರಲೋಕದಲ್ಲಿ ನಿಕ್ಷೇಪವನ್ನು"* ಎಂದು ಹೇಳಿದಾಗ ಯೇಸು ಏನನ್ನು ಉಲ್ಲೇಖಿಸಿದನು ಎಂದು ನಿಮಗನ್ನಿಸುತ್ತದೆ?
3. ಮತ್ತಾಯ 6:19–21 ರಲ್ಲಿರುವ ಯೇಸುವಿನ ಬೋಧನೆಯ ಬೆಳಕಿನಡಿಯಲ್ಲಿ ನಿಮ್ಮ ಸ್ವಂತ ಜೀವಿತವನ್ನು ಪರಿಶೀಲಿಸಿರಿ. ಬಹುಶಃ ನಿಮ್ಮ ಗುಂಪಿನಲ್ಲಿರುವ ಇತರರೊಂದಿಗೆ ನಿಮ್ಮ ಕೆಲವು ಸಮಾಲೋಚನೆಗಳನ್ನು ನೀವು ಹಂಚಿಕೊಳ್ಳಲು ಬಯಸಬಹುದು.

4. *“ಕಣ್ಣು ದೇಹಕ್ಕೆ ದೀಪವಾಗಿದೆ”* (ವ. 22) ಎಂಬ ರೂಪಾಲಂಕಾರವನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?

5. ಮತ್ತಾಯ 6:22–33 ರಲ್ಲಿ ಯೇಸು ಹೇಳಿದ ಅಂಶವನ್ನು ನೀವು ಹೇಗೆ ವಿವರಿಸುವಿರಿ?

6. ಮತ್ತಾಯ 6:22–33 ರಲ್ಲಿರುವ ಯೇಸುವಿನ ಬೋಧನೆಯ ಬೆಳಕಿನಡಿಯಲ್ಲಿ ನಿಮ್ಮ ಸ್ವಂತ ಜೀವಿತವನ್ನು ಪರಿಶೀಲಿಸಿರಿ. ಬಹುಶಃ ನಿಮ್ಮ ಗುಂಪಿನಲ್ಲಿರುವ ಇತರರೊಂದಿಗೆ ನಿಮ್ಮ ಕೆಲವು ಸಮಾರೋಪಗಳನ್ನು ನೀವು ಹಂಚಿಕೊಳ್ಳಲು ಬಯಸಬಹುದು.

7. ಹಿಂದಿನ ಎರಡು ಆಯ್ಕೆಗಳ ಹಿಂದೆ (ಎರಡು ನಿಕ್ಷೇಪಗಳು, ನಾವು ಎಲ್ಲಿ ಕೂಡಿಸುತ್ತೇವೆ, ಮತ್ತು ಎರಡು ನೋಟಗಳು, ನಾವು ಯಾವುದರ ಮೇಲೆ ನಮ್ಮ ಕಣ್ಣುಗಳನ್ನು ಇಟ್ಟಿದ್ದೇವೆ ಎಂಬುದರ ನಡುವಿನ ಆಯ್ಕೆ) ಯಜಮಾನನನ್ನು ಆಯ್ಕೆಮಾಡಿಕೊಳ್ಳುವ ಇನ್ನೂ ಮೂಲಭೂತವಾದ ಆಯ್ಕೆಯಿದೆ. ನಾವು ಯಾರನ್ನು ಸೇವಿಸಬೇಕೆಂದಿದ್ದೇವೆ (6:24)? ಹಾಗಾದರೆ ಯಜಮಾನನ ಕುರಿತು ಒಬ್ಬ ವಿಶ್ವಾಸಿಯು ಎದುರಿಸುವ ಆಯ್ಕೆ ಯಾವುದು?

8. ಮತ್ತಾಯ 6:24 ರಲ್ಲಿರುವ ಯೇಸುವಿನ ಬೋಧನೆಯ ಬೆಳಕಿನಡಿಯಲ್ಲಿ ನಿಮ್ಮ ಸ್ವಂತ ಜೀವಿತವನ್ನು ಪರಿಶೀಲಿಸಿರಿ. ಬಹುಶಃ ನಿಮ್ಮ ಗುಂಪಿನಲ್ಲಿರುವ ಇತರರೊಂದಿಗೆ ನಿಮ್ಮ ಕೆಲವು ಸಮಾರೋಪಗಳನ್ನು ನೀವು ಹಂಚಿಕೊಳ್ಳಲು ಬಯಸಬಹುದು.

9. ಮುಂದಿನ ವಾಕ್ಯಭಾಗವು (6:25–34) ಹೇಗೆ ಪ್ರಾರಂಭಿಸುತ್ತದೆ (ಮೊದಲ ಪದ ಅಥವಾ ಪದಗಳು)? ಅದರ ಮಹತ್ವವೇನು?

10. “ಮಹತ್ವಾಕಾಂಕ್ಷೆ” ಎಂಬ ಪದವನ್ನು ನಾವು ಜೀವನದಲ್ಲಿ “ಹುಡುಕುವ” ಸಂಗತಿ ಎಂದು ವ್ಯಾಖ್ಯಾನಿಸಬಹುದು. ಅದು ನಮ್ಮ ಜೀವಿತದಲ್ಲಿ ನಾವು ಇಟ್ಟುಕೊಳ್ಳುವ ಗುರಿ ಹಾಗೂ ಅವುಗಳನ್ನು ಸಾಧಿಸಲು ನಮ್ಮ ಉದ್ದೇಶಗಳನ್ನು ಸೂಚಿಸುತ್ತದೆ. ತನ್ನ ಶಿಷ್ಯರು ಒಂದು ಸಂಗತಿಯನ್ನು “ಮೊದಲು ಹುಡುಕಬೇಕೆಂದು” ಯೇಸು ಹೇಳಿದನು. ಹಾಗಾದರೆ 6:25–34 ರಲ್ಲಿ ಯೇಸು ನಮ್ಮ ಮುಂದೆ ಇಡುವ ಎರಡು ಪರ್ಯಾಯಗಳು ಯಾವವು?

11. ಯಾಕೆ “ಚಿಂತೆ” ಎಂಬುದು ಕ್ರಿಸ್ತೀಯ ನಂಬಿಕೆಗೆ ಸರಿಬೀಳದ ಸಂಗತಿಯಾಗಿದೆ (ವ. 30)?

12. ಯಾಕೆ “ಚಿಂತೆ” ಎಂಬುದು ಸಾಮಾನ್ಯ ಜ್ಞಾನಕ್ಕೆ ಸರಿಬೀಳದ ಸಂಗತಿಯಾಗಿದೆ (ವ. 34)?

13. “ಹುಡುಕಿರಿ” (ವ. 33) ಮತ್ತು “ಚಿಂತೆ” (ವ. 31) ಎಂಬ ಭಾವಗಳು ಯೇಸುವಿಗೆ ಒಂದೇ ಸಂಗತಿಯನ್ನು ಉಲ್ಲೇಖಿಸುವ ಪದಗಳಾಗಿವೆ. ನಾವು ಇದರಿಂದ ಯಾವ ಸಮಾರೋಪಗಳಿಗೆ ತಲುಪಬಹುದು?

14. ಹಿಂದಿನ ಪ್ರಶ್ನೆಯ ಉತ್ತರವನ್ನು ಕರ್ತನ ಪ್ರಾರ್ಥನೆಯೊಂದಿಗೆ ಹೋಲಿಸಿರಿ (ವ. 9–13). ನಿಮ್ಮ ಸಮಾರೋಪಗಳೇನು?

15. “ದೇವರ ರಾಜ್ಯವನ್ನು ಹುಡುಕಿರಿ” ಎಂಬ ಯೇಸುವಿನ ಪ್ರಬೋಧನೆಗೆ ನಾವು ಹೇಗೆ ವಿಧೇಯರಾಗಬಹುದು?

16. *ನೀವು ಮೊದಲು ದೇವರ ರಾಜ್ಯವನ್ನೂ ಆತನ ನೀತಿಯನ್ನೂ ಹುಡುಕಿರಿ* (ವ. 33) ಎಂದು ಯೇಸು ಹೇಳಿದಾಗ ಆತನು ತನ್ನ ಮನಸ್ಸಿನಲ್ಲಿ ಎರಡು ವಿಷಯಗಳನ್ನು (“ರಾಜ್ಯ” ಮತ್ತು “ನೀತಿವಂತಿಕೆ”) ಹೊಂದಿದ್ದನು ಎಂದು ನಿಮಗೆ ಅನ್ನಿಸುತ್ತದೋ? ಹೌದಾದರೆ, ಆತನು ತನ್ನ ಮನಸ್ಸಿನಲ್ಲಿ ಯಾವ ವಿಷಯವನ್ನು ಹೊಂದಿದ್ದನು?

17. ಮತ್ತಾಯ 6:25–34 ರಲ್ಲಿರುವ ಯೇಸುವಿನ ಬೋಧನೆಯ ಬೆಳಕಿನಡಿಯಲ್ಲಿ ನಿಮ್ಮ ಸ್ವಂತ ಜೀವಿತವನ್ನು ಪರಿಶೀಲಿಸಿರಿ. ಬಹುಶಃ ನಿಮ್ಮ ಗುಂಪಿನಲ್ಲಿರುವ ಇತರರೊಂದಿಗೆ ನಿಮ್ಮ ಕೆಲವು ಸಮಾರೋಪಗಳನ್ನು ನೀವು ಹಂಚಿಕೊಳ್ಳಲು ಬಯಸಬಹುದು.

# ಅಧ್ಯಯನ 17: ನಮ್ಮ ಸಂಬಂಧಗಳು

## ಪೀಠಿಕೆ

ಮತ್ತಾಯ 7ನೇ ಅಧ್ಯಾಯದ ವಾಕ್ಯಭಾಗಗಳು ಒಂದಕ್ಕೊಂದು ಹೇಗೆ ಸಂಬಂಧಿಸಿವೆ ಎಂಬುದನ್ನು ಕಾಣುವುದು ಅಷ್ಟು ಸುಲಭವಲ್ಲ. ಆದರೆ ನಾವು ಒಂದು ಸಾಮಾನ್ಯವಾದ ಪ್ರಧಾನ ವಿಷಯವನ್ನು ಕಾಣಬಹುದು – ಅದೇನೆಂದರೆ, ಸಂಬಂಧಗಳು.

ಪರ್ವತ ಪ್ರಸಂಗದ ಹಿನ್ನಲೆಯಲ್ಲಿ ನೋಡುವಾಗ ಈ ಪ್ರಧಾನ ವಿಷಯವು ಸಮಂಜಸವೆನಿಸುತ್ತದೆ. ಒಬ್ಬ ಕ್ರೈಸ್ತನ ಗುಣ, ಪ್ರಭಾವ, ನೀತಿವಂತಿಕೆ, ಭಕ್ತಿ ಮತು ಮಹತ್ವಾಕಾಂಕ್ಷೆಗಳನ್ನು ವರ್ಣಿಸಿದ ನಂತರ ಯೇಸು ಅಂತಿಮವಾಗಿ ಒಬ್ಬ ವಿಶ್ವಾಸಿಯ ಸಂಬಂಧಗಳ ಮೇಲೆ ಗಮನವನ್ನು ಕೇಂದ್ರೀಕರಿಸುತ್ತಾನೆ. ದೇವರ ರಾಜ್ಯದ ಮೌಲ್ಯಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿಕೊಳ್ಳಲು ಬಯಸುವ ಪ್ರತಿಯೊಬ್ಬ ವಿಶ್ವಾಸಿಯು ಇತರರೊಂದಿಗೆ ಹೊಂದಿರುವ ಸಂಬಂಧಗಳಲ್ಲಿ ಅದನ್ನು ಜಾರಿಗೆ ತರಬೇಕಾಗುತ್ತದೆ. ಕ್ರಿಸ್ತೀಯ ಜೀವನವು ಕೇವಲ ವ್ಯಕ್ತಿಗತ ಜೀವನವಲ್ಲ. ಅದನ್ನು ಒಂದು ಸಮಾಜದಲ್ಲಿ ಇತರರೊಂದಿಗೂ ಜೀವಿಸಬೇಕಾಗುತ್ತದೆ.

ಹಾಗಾಗಿ ಮತ್ತಾಯ 7 ರಲ್ಲಿ ಯೇಸು ಏಳು ಸಂಬಂಧಗಳನ್ನು ಪ್ರಸ್ತಾಪಿಸುತ್ತಾನೆ:

1) ನಮ್ಮ ಸಹೋದರರನು (ವ. 1–5)
2) ನಾಯಿಗಳು ಮತ್ತು ಹಂದಿಗಳು (ವ. 6)
3) ಪರಲೋಕದಲ್ಲಿರುವ ನಮ್ಮ ತಂದೆ (ವ. 7–11)
4) ಸಾಮಾನ್ಯವಾಗಿ ಎಲ್ಲರು (ವ. 12)
5) ನಮ್ಮ ಜೊತೆ ಪ್ರಯಾಣಿಕ (ವ. 13–14)
6) ಸುಳ್ಳು ಪ್ರವಾದಿಗಳು (ವ. 15–20)
7) ನಮ್ಮ ಕರ್ತನಾದ ಯೇಸು (ವ. 21–27)

ನಾವು ಈ ಅಧ್ಯಯನದಲ್ಲಿ ಮೊದಲ ಆರು ಸಂಬಂಧಗಳನ್ನು ನೋಡೋಣ. ಏಳನೇಯದನ್ನು ನಮ್ಮ ಕೊನೆಯ ಅಧ್ಯಯನದಲ್ಲಿ ನೋಡೋಣ.

ಮತ್ತಾಯ 7:13–14 ರಲ್ಲಿ ಯೇಸು ಹಿಂದೆ ಹೇಳಿದ್ದಕ್ಕಿಂತಲೂ ಹೆಚ್ಚಾಗಿ ಈ ಬಾರಿ ಆಯ್ಕೆಯ ಕುರಿತು ತನ್ನ ಪ್ರಸಂಗದಲ್ಲಿ ಒತ್ತಿ ಹೇಳುತ್ತಾನೆ. ವಿಶ್ವಾಸಿಗಳು

- ಎರಡು ರೀತಿಯ ನೀತಿವಂತಿಕೆಗಳ,
- ಎರಡು ರೀತಿಯ ಭಕ್ತಿಗಳ,
- ಎರಡು ನಿಕ್ಷೇಪಗಳ,
- ಎರಡು ಯಜಮಾನರುಗಳ, ಮತ್ತು
- ಎರಡು ಮಹತ್ವಾಕಾಂಕ್ಷೆಗಳ

ನಡುವೆ ಸರಿಯಾದದ್ದನ್ನು ಆರಿಸಿಕೊಳ್ಳಬೇಕು.

ಸಭೆಯು (ಇಹಲೋಕದ ಪ್ರಬಲ ಸಂಸ್ಕೃತಿಗಳಲ್ಲಿ ವ್ಯಕ್ತವಾಗುವಂತ) ಸೈತಾನನ ರಾಜ್ಯವನ್ನು ಆರಿಸಿಕೊಳ್ಳುವುದೋ ಅಥವಾ ಸಭೆಯು (ಪರ್ವತ ಪ್ರಸಂಗದಲ್ಲಿ ಯೇಸು ವರ್ಣಿಸಿದಂತ) ದೇವರ ರಾಜ್ಯವನ್ನು ಆರಿಸಿಕೊಳ್ಳುವುದೋ?

## ಓದಿರಿ

ಮತ್ತಾಯ 7:1–20

## ಪ್ರಶ್ನೆಗಳು

1. ಮತ್ತಾಯ 7 ನೇ ಅಧ್ಯಾಯವನ್ನು ಓದಿರಿ ಮತ್ತು ಈ ಏಳು ಸಂಬಂಧಗಳನ್ನು ಗುರುತಿಸಲು ಪ್ರಯತ್ನಿಸಿರಿ. ಬಹುಶಃ 5 ನೇ ಸಂಬಂಧದ ಕುರಿತು ನಿಮ್ಮ ಶಿಕ್ಷಕರ ಸಹಾಯ ಅವಶ್ಯವಾಗಬಹುದು.
2. ಮತ್ತಾಯ 7:1–5 ರಲ್ಲಿ ಯೇಸು ಯಾವ ಮೂರು ಅಂಶಗಳನ್ನು ಮಾಡುತ್ತಾನೆ?
3. "ತೀರ್ಪುಮಾಡಬೇಡಿರಿ" ಎಂಬ ಯೇಸುವಿನ ಹೇಳಿಕೆಯನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?
4. ಮತ್ತಾಯ 7:3–4 ರಲ್ಲಿ ಯೇಸು ಬಳಸಿರುವ ರೂಪಾಲಂಕಾರವನ್ನು ವಿವರಿಸಿರಿ. ಮತ್ತು ಆತನು ತಿಳಿಸುತ್ತಿರುವ ಅಂಶವೇನು?
5. ತನ್ನ ಸ್ವಂತ ಗಂಭೀರವಾದ ತಪ್ಪುಗಳನ್ನು ಪರಿಗಣಿಸದೆ ಜೊತೆ ವಿಶ್ವಾಸಿಯ ಸಣ್ಣಪುಟ್ಟ ಬಲಹೀನತೆಗಳ ಕುರಿತು ವ್ಯವಹರಿಸಲು ಬಯಸುವ ಒಬ್ಬ ವಿಶ್ವಾಸಿಯ ಮೌಲ್ಯಮಾಪನವನ್ನು ಯೇಸು ಹೇಗೆ ಮಾಡುತ್ತಾನೆ?
6. ಮತ್ತಾಯ 7:5 ರಲ್ಲಿ ನಾವು ಏನು ಮಾಡಬೇಕೆಂದು ಯೇಸು ಹೇಳುತ್ತಾನೆ?
7. ಈ ವಾಕ್ಯಭಾಗದಲ್ಲಿರುವ ಯೇಸುವಿನ ಬೋಧನೆಯ ಬೆಳಕಿನಡಿಯಲ್ಲಿ ನಿಮ್ಮ ಸ್ವಂತ ಜೀವಿತವನ್ನು ಪರಿಶೀಲಿಸಿರಿ.
8. ಯೆಹೂದ್ಯರ ಪ್ರಕಾರ ನಾಯಿಗಳು ಮತ್ತು ಹಂದಿಗಳು ಅಶುದ್ಧವಾದ ಪ್ರಾಣಿಗಳಾಗಿದ್ದವು. ಅವರು ಎಂದಿಗೂ ಸಹ ದೇವಾಲಯದ ಬಲಿಗಳ ಮಿಕ್ಕ ಆಹಾರವನ್ನು ನಾಯಿಗಳಿಗೆ ಹಾಕುತ್ತಿರಲಿಲ್ಲ. ಖಂಡಿತವಾಗಲೂ ಯಾರೂ ಸಹ ತಮ್ಮ ಮುತ್ತುಗಳನ್ನು ಹಂದಿಗಳ ಮುಂದೆ ಚೆಲ್ಲುವುದಿಲ್ಲ. ವಚನ 6 ರಲ್ಲಿ ಯೇಸು ಸ್ಪಷ್ಟವಾಗಿ "ನಾಯಿಗಳು, ಹಂದಿಗಳು ಮತ್ತು ಮುತ್ತುಗಳು" ಎಂಬ ಮೂರು ಪದಗಳನ್ನು ರೂಪಾಲಂಕರವಾಗಿ ಬಳಸುತ್ತಿದ್ದಾನೆ. ಹಾಗಾದರೆ ಆತನು "ನಾಯಿಗಳು, ಹಂದಿಗಳು ಮತ್ತು ಮುತ್ತುಗಳು" ಎಂಬುದನ್ನು ಹೇಳುವುದರ ಮೂಲಕ ಏನನ್ನು ಉಲ್ಲೇಖಿಸುತ್ತಿದ್ದಾನೆ?
9. ಮತ್ತಾಯ 7:7–8 ನ್ನು ಕ್ರಿಸ್ತೀಯ ವಿಶ್ವಾಸಿಗಳು ಆಗಾಗ್ಗೆ ಉಲ್ಲೇಖಿಸುತ್ತಾರೆ. ಆದರೆ ನಿಮ್ಮ ವೈಯಕ್ತಿಕ ಪ್ರಾರ್ಥನಾ ಜೀವಿತದಲ್ಲಿ ನೀವು ಅವುಗಳ ಕುರಿತು ಅನುಭವಿಸಿರುವ ಕಷ್ಟಗಳೇನು. ನಿಮ್ಮ ಗುಂಪುಗಳಲ್ಲಿ ಹಂಚಿಕೊಳ್ಳಿರಿ.
10. ದೇವರ ಹಾಗೂ ನಮ್ಮ ಪ್ರಾರ್ಥನಾ ಜೀವಿತದ ಕುರಿತು ಮತ್ತಾಯ 7:10–11 ನಮಗೆ ಏನನ್ನು ಹೇಳುತ್ತದೆ?
11. ಕ್ರೈಸ್ತ ವಿಶ್ವಾಸಿಗಳು ಪರಲೋಕದ ತಂದೆಯೊಂದಿಗೆ ಹೊಂದಿರುವ ಸಂಬಂಧದ ಕುರಿತು ಮತ್ತಾಯ 7:7–11 ರಲ್ಲಿರುವ ಯೇಸುವಿನ ಬೋಧನೆಯನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಪುನರಚಿಸಿರಿ.
12. ವಚನ 12 ಸುವರ್ಣ ನಿಯಮವನ್ನು ಹೊಂದಿದೆ. ಈ ನಿಯಮವು ಎಲ್ಲಾ ಜನರೊಂದಿಗೆ, ವಿಶ್ವಾಸಿಗಳೊಂದಿಗೆ ಮತ್ತು ಅವಿಶ್ವಾಸಿಗಳೊಂದಿಗೆ ನಾವು ಹೊಂದಿರುವ ನಮ್ಮ ಮನೋಭಾವನೆಯನ್ನು ಹಾಗೂ ನಡತೆಯನ್ನು ಮಾರ್ಗದರ್ಶಿಸಬೇಕು. ಈ ಸುವರ್ಣ ನಿಯಮವನ್ನು ಬಾಯಿಪಾಠ ಮಾಡಿ ನಿಮ್ಮ ಗುಂಪಿನಲ್ಲಿರುವ ಇತರರಿಗೆ ನೋಡದೆ ಹೇಳಿರಿ.
13. ಸುವರ್ಣ ನಿಯಮದ ಬೆಳಕಿನಡಿಯಲ್ಲಿ ನಿಮ್ಮ ಸ್ವಂತ ಜೀವಿತವನ್ನು ಪರಿಶೀಲಿಸಿರಿ. ನಿಮ್ಮ ಗುಂಪುಗಳಲ್ಲಿ ಹಂಚಿಕೊಳ್ಳಿರಿ.
14. ಮತ್ತಾಯ 7:13–14 ರಲ್ಲಿ ಯೇಸು ನಮ್ಮ ಕಣ್ಣುಗಳ ಮುಂದೆ ಯಾವ ಚಿತ್ರವನ್ನು ಬಿಡಿಸುತ್ತಾನೆ?
15. ನಿಮ್ಮ ಸ್ವಂತ ಸಭಾ ಅನ್ಯೋನ್ಯತೆಯು (ನೀವು ಮತ್ತು ನಿಮ್ಮ ಜೊತೆ ವಿಶ್ವಾಸಿಗಳು) ಕಿರಿದಾದ ಮಾರ್ಗದಲ್ಲಿ ನಡೆಯುವುದನ್ನು ಚಿತ್ರಿಸಿಕೊಳ್ಳಿರಿ. ನಿಮ್ಮ ದಕ್ಷಿಣ ಭಾರತದ ಸಾಂಸ್ಕೃತಿಕ ಹಾಗೂ ಧಾರ್ಮಿಕ ಹಿನ್ನಲೆಯಲ್ಲಿ ಆ ರೀತಿಯ ನಡೆಯು ತರುವ ಪರಿಣಾಮಗಳೇನು? ಮತ್ತು ನೀವು ಪರಿಗಣಿಸಬೇಕಾಗಬಹುದಾದ ಬದಲಾವಣೆಗಳು ಯಾವುದಾಗಿರಬಹುದು?
16. ಮತ್ತಾಯ 7:15 ರಲ್ಲಿ ಯೇಸು ಬಳಸಿರುವ ರೂಪಾಲಂಕಾರಗಳನ್ನು ವಿವರಿಸಿರಿ.
17. ನೀವು ಈ ರೂಪಾಲಂಕಾರಗಳನ್ನು ಸಭೆಯಲ್ಲಿರುವ ಸುಳ್ಳು ಬೋಧಕರಿಗೆ (ಮತ್ತು ಸುಳ್ಳು ಪ್ರವಾದಿಗಳಿಗೆ) ಹೇಗೆ ಅನ್ವಯಿಸುವಿರಿ?

18. ಮತ್ತಾಯ 7:16–19 ರಲ್ಲಿ ಯೇಸು ಬಳಸಿರುವ ರೂಪಾಲಂಕಾರಗಳನ್ನು ವಿವರಿಸಿರಿ.

19. ನೀವು ಈ ರೂಪಾಲಂಕಾರಗಳನ್ನು ಸಭೆಯಲ್ಲಿರುವ ಸುಳ್ಳು ಬೋಧಕರಿಗೆ (ಮತ್ತು ಸುಳ್ಳು ಪ್ರವಾದಿಗಳಿಗೆ) ಹೇಗೆ ಅನ್ವಯಿಸುವಿರಿ?

# ಅಧ್ಯಯನ 18: ನಾವು ಮಾಡಲೇಬೇಕಾದ ಆಯ್ಕೆ

## ಪೀಠಿಕೆ

ಈ ಅಧ್ಯಯನದೊಂದಿಗೆ ನಾವು ಯೇಸುವಿನ ಪರ್ವತ ಪ್ರಸಂಗದ ಅಂತ್ಯಕ್ಕೆ ಬಂದಿದ್ದೇವೆ. ಈ ಹಂತದಲ್ಲಿ ಯೇಸು ಯಾವುದೇ ಹೆಚ್ಚಿನ ಆದೇಶಗಳನ್ನು ಸೇರಿಸುವ ಅವಶ್ಯವಿರಲಿಲ್ಲ. ಬದಲಾಗಿ ತನ್ನ ಕೇಳುಗರು (ಶಿಷ್ಯರು ಮತ್ತು ಹಿಂಬಾಲಕರು) ತನ್ನ ಆದೇಶಗಳಿಗೆ ಪ್ರತಿಕ್ರಿಯಿಸುವರು ಎಂಬುದನ್ನು ಖಚಿತಪಡಿಸಿಕೊಳ್ಳುವ ಸಮಯ ಈಗ ಬಂದಿತ್ತು. ಅವರು ಈಗಿನ ಜಗತ್ತಿನಲ್ಲಿ ದೇವರ ರಾಜ್ಯದ ಮೌಲ್ಯಗಳನ್ನು ಪ್ರತಿಬಿಂಬಿಸುವ ಜೀವನಶೈಲಿಗೆ ತಮ್ಮನ್ನು ಸಮರ್ಪಿಸಿಕೊಳ್ಳಬೇಕೆಂದು ಆತನು ಬಯಸುತ್ತಾನೆ.

ಹಾಗಾಗಿ ಯೇಸು ನಮಗೆ ಮುಖಾಮುಖಿಯಾಗಿ ಕೇಳುತ್ತಾನೆ. ಆತನು ವಿಧೇಯತೆ ಮತ್ತು ಅವಿಧೇಯತೆಯ ನಡುವಿನ ಮೂಲಭೂತವಾದ ಆಯ್ಕೆಯನ್ನು ನಮ್ಮ ಮುಂದೆ ಇಡುತ್ತಾನೆ. ಆತನ ಬೋಧನೆಗೆ ಯಾವುದೇ ಷರತ್ತನ್ನು ಒಡ್ಡದೆ ಮನಸ್ಸು, ಚಿತ್ತ ಮತ್ತು ಜೀವಿತವನ್ನು ಸಮರ್ಪಿಸಬೇಕೆಂದು ಆತನು ಕರೆಯುತ್ತಾನೆ. ಇಂತಹ ರೀತಿಯ ಸಮರ್ಪಣೆಯು ನಮ್ಮ ಏಳನೆಯ ಸಂಬಂಧವನ್ನು, ನಮ್ಮ ಕರ್ತನೂ ರಕ್ಷಕನೂ ಆದ ಯೇಸುವಿನೊಂದಿಗಿನ ಸಂಬಂಧವನ್ನು ವ್ಯಾಖ್ಯಾನಿಸುತ್ತದೆ.

ಯೇಸು ಎರಡು ಸ್ವೀಕಾರರ್ಹವಲ್ಲದ ಪರ್ಯಾಯಗಳ ಕುರಿತು ನಮ್ಮನ್ನು ಎಚ್ಚರಿಸುತ್ತಾನೆ:

- ಯೇಸುವನ್ನು ಕೇವಲ ಮಾತಿನಲ್ಲಿ ಮಾತ್ರ ನಮ್ಮ ಕರ್ತನೆಂದು ಹೇಳಿಕೊಳ್ಳುವುದು ನಿಷ್ಪ್ರಯೋಜಕವಾದ ಪರ್ಯಾಯವಾಗಿದೆ (7:21–23).
- ಯೇಸುವಿನ ಹಾಗೂ ಆತನ ಜೀವನಶೈಲಿಯ ಕುರಿತು ಕೇವಲ ಬೌದ್ಧಿಕ ಜ್ಞಾನ ಮಾತ್ರ ಹೊಂದಿಕೊಳ್ಳುವುದೂ ಸಹ ನಿಷ್ಪ್ರಯೋಜಕವಾದ ಪರ್ಯಾಯವಾಗಿದೆ (7:24–27).

ಅದರ ಬದಲಾಗಿ ನಾವು ಯೇಸುವಿನ ಬೋಧನೆಯನ್ನು ಗಮನಕೊಟ್ಟು ಕೇಳಿಸಿಕೊಂಡು – ಅದಕ್ಕೆ ವಿಧೇಯರಾಗಬೇಕು.

## ಓದಿರಿ

ಮತ್ತಾಯ 7:21–29

## ಪ್ರಶ್ನೆಗಳು

1. ಮತ್ತಾಯ 7:21–23 ನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಪುನರಚಿಸಿರಿ ಮತ್ತು ಯೇಸು ತಿಳಿಸಿರುವ ಜನರು ಯಾಕೆ ದೇವರ ರಾಜ್ಯವನ್ನು ಪ್ರವೇಶಿಸಲಾರರು ಎಂಬುದನ್ನು ವಿವರಿಸಿರಿ.
2. ನಿಮ್ಮ ಸಭೆಯಲ್ಲಿರುವ ಎಂತಹ ರೀತಿಯ ವ್ಯಕ್ತಿಗೆ "ನಿಮ್ಮನ್ನು ನಾನೆಂದೂ ಅರಿಯೆನು. ಅನ್ಯಾಯ ಮಾಡುವವರೇ ನನ್ನಿಂದ ತೊಲಗಿ ಹೋಗಿರಿ" ಎಂದು ನ್ಯಾಯತೀರ್ಪಿನ ದಿನದಲ್ಲಿ ಯೇಸು ನೇರವಾಗಿ ಹೇಳುವನು ಎಂಬುದನ್ನು ವರ್ಣಿಸಿರಿ.
3. ಮತ್ತಾಯ 7:21–23 ರ ಬೆಳಕಿನಡಿಯಲ್ಲಿ ನಿಮ್ಮ ಸ್ವಂತ ಜೀವಿತವನ್ನು ಪರಿಶೀಲಿಸಿರಿ. ನಿಮ್ಮ ಗುಂಪುಗಳಲ್ಲಿ ಹಂಚಿಕೊಳ್ಳಿರಿ.
4. ಮತ್ತಾಯ 7:24–27 ನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಪುನರಚಿಸಿರಿ
5. ನಿಮ್ಮ ಸಭೆಯಲ್ಲಿರುವ ಎಂತಹ ರೀತಿಯ ವ್ಯಕ್ತಿಯು ಮರಳಿನ ಮೇಲೆ ಮನೆಯನ್ನು ಕಟ್ಟಿದ ಮೂರ್ಖನಂತಿದ್ದಾರೆ ಎಂಬುದನ್ನು ವರ್ಣಿಸಿರಿ.
6. ಈ ವಚನಗಳ ಬೆಳಕಿನಡಿಯಲ್ಲಿ ನಿಮ್ಮ ಸ್ವಂತ ಜೀವಿತವನ್ನು ಪರಿಶೀಲಿಸಿರಿ. ನಿಮ್ಮ ಗುಂಪುಗಳಲ್ಲಿ ಹಂಚಿಕೊಳ್ಳಿರಿ.

# ಉತ್ತರಗಳು – ದೇವರ ರಾಜ್ಯವನ್ನು ಅರ್ಥಮಾಡಿಕೊಳ್ಳುವುದು

# ಉತ್ತರಗಳು 1: ಅರಸನಾದ ದೇವರು

## ಶಿಕ್ಷಕರಿಗಾಗಿ

ನೀವು ಈ ಅಧ್ಯಯನವನ್ನು ಮುಗಿಸಲು ಎರಡು ಗಂಟೆಗಳು ಬೇಕಾಗಬಹುದು.

ಕೀರ್ತನೆ 145 ಒಂದು "ಒಗಟಾಗಿದೆ". ಅಂದರೆ ಅದರ ಅರ್ಥ ಪ್ರತಿಯೊಂದು ವಚನದ ಮೊದಲ ಅಕ್ಷರವು ಹಿಬ್ರೂ ಭಾಷೆಯ ವರ್ಣಮಾಲೆಯನ್ನು ಅನುಸರಿಸುತ್ತದೆ. ಹಿಬ್ರೂ ವರ್ಣಮಾಲೆಯಲ್ಲಿ ಒಟ್ಟು 22 ಅಕ್ಷರಗಳಿವೆ ಎಂಬುದನ್ನು ವಿದ್ಯಾರ್ಥಿಗಳಿಗೆ ತಿಳಿಸಿರಿ. ನಂತರ ಅವರಿಗೆ ಈ ಮೂರು ಪ್ರಶ್ನೆಗಳನ್ನು ಕೇಳಿರಿ:

1) ಈ ಕೀರ್ತನೆಯಲ್ಲಿ ನಾವು ಎಷ್ಟು ವಚನಗಳನ್ನು ಕಾಣಬಹುದು? ನಿಸ್ಸಂದೇಹವಾಗಲೂ, ಉತ್ತರ "22" ಆಗಿದೆ.
2) ನಿಮ್ಮ ಸತ್ಯವೇದಗಳಲ್ಲಿ ಹುಡುಕಿರಿ. ಎಷ್ಟು ವಚನಗಳನ್ನು ನೀವು ಕಂಡಿರಿ? ನಿಸ್ಸಂದೇಹವಾಗಲೂ, ಉತ್ತರ "21" ಆಗಿದೆ. ಒಂದು ವೇಳೆ ಯಾವುದಾದರೂ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿ ಪವಿತ್ರ ಬೈಬಲ್ ಅನುವಾದವನ್ನು ಬಳಸುತ್ತಿದ್ದರೆ ಅದರಲ್ಲಿ ಅನುವಾದಕರು 13 ನೇ ವಚನದ ನಂತರ ಒಂದು ವಚನವನ್ನು ಹೆಚ್ಚಾಗಿ ಸೇರಿಸಿದ್ದಾರೆ (ಹೊಸ 14 ನೇ ವಚನ). ಆಗ ಒಟ್ಟು ವಚನಗಳ ಸಂಖ್ಯೆಯು "22" ಆಗುತ್ತದೆ.
3) ಈ ವ್ಯತ್ಯಾಸಕ್ಕೆ ಪರಿಹಾರವೇನು? ನೀವು ವಿದ್ಯಾಥಿಗಳಿಗೆ ಉತ್ತರವನ್ನು ಕೊಡುವುದಕ್ಕಿಂತ ಮುಂಚೆ ಅವರು ಅದರ ಕುರಿತು ಆಲೋಚಿಸಲಿ ಮತ್ತು ಒಂದು ನಿಮಿಷಗಳ ಕಾಲ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಲಿ:

ನಿಮ್ಮ ಸತ್ಯವೇದಗಳಲ್ಲಿ ಒಂದು ವಚನವು ಕಳೆದು ಹೋಗಿದೆ! ಈ ವಚನವು ಅತೀ ಮುಂಚೆಯೇ ಕಳೆದುಹೋಗಿತ್ತು, ಹಾಗಾಗಿ ಯೆಹೂದ್ಯ ಶಾಸ್ತ್ರಜ್ಞರು ಹಿಬ್ರೂ ಬೈಬಲ್‌ನ್ನು ಸಂಯೋಜಿಸಿದಾಗ ಮೂಲ ಹಸ್ತಪ್ರತಿಗಳಲ್ಲಿ ಅದನ್ನು ಸೇರಿಸಲಿಲ್ಲ. ಆದರೆ ಈ ವಚನವು ಕಳೆದು ಹೋಗಿದೆ ಎಂಬುದನ್ನು ಸತ್ಯವೇದ ಶಾಸ್ತ್ರಜ್ಞರು ತಿಳಿದುಕೊಂಡಿದ್ದರು. ಮೊದಲು, ಕೀರ್ತನೆ ಪುಸ್ತಕವನ್ನು ಇತರೆ ಭಾಷೆಗಳಿಗೆ ಅನುವಾದಿಸಿದ ಹೊಸತರಲ್ಲಿ ಅದನ್ನು ಕಾಣಬಹುದು. ಅದನ್ನು 1940 ರ ಮೃತ ಸಮುದ್ರದ ಸುರುಳಿಗಳಲ್ಲಿಯೂ ಸಹ ಕಂಡುಬಂದಿತ್ತು. ಎರಡನೇಯದಾಗಿ, ಈ ಕೀರ್ತನೆಯು ಸ್ಪಷ್ಟವಾಗಿ ಒಂದು ಒಗಟಿನ ರೀತಿಯಲ್ಲಿದೆ, ಹಾಗಾಗಿ ದಾವೀದನು ಯಾವುದೋ ಒಂದು ಅಕ್ಷರವನ್ನು ಮಧ್ಯದಲ್ಲಿ ಕೈಬಿಡದೆ ಹಿಬ್ರೂ ವರ್ಣಮಾಲೆಯ ಎಲ್ಲಾ 22 ಅಕ್ಷರಗಳನ್ನು ಬಳಸಿದನೆಂದು ನಾವು ನಿರೀಕ್ಷಿಸಬಹುದು.

ಆ ಕಳೆದುಹೋಗಿರುವ ವಚನವು ಇದಾಗಿದೆ (ಪವಿತ್ರ ಬೈಬಲ್‌ನಲ್ಲಿ 14 ನೇ ವಚನ):

| | |
|---|---|
| *ಯೆಹೋವನು ತನ್ನ ಮಾತುಗಳಿಗೆ ನಂಬಿಗಸ್ತನೂ ಮತ್ತು ತನ್ನ ಎಲ್ಲಾ ಕಾರ್ಯಗಳಲ್ಲಿ ದಯೆ ತೋರುವವನೂ ಆಗಿದ್ದಾನೆ (ESV)* | *ಯೆಹೋವನು ತನ್ನ ಎಲ್ಲಾ ವಾಗ್ದಾನಗಳಿಗೆ ನಂಬಿಗಸ್ತನೂ ಮತ್ತು ತಾನು ಸೃಷ್ಟಿಸಿದವುಗಳಿಗೆಲ್ಲಾ ಪ್ರೀತಿ ತೋರಿಸುವವನೂ ಆಗಿದ್ದಾನೆ (NIV)* |

ಈ ವಚನಗಳನ್ನು ಬೋರ್ಡಿನ ಮೇಲೆ ಬರೆಯಿರಿ ಮತ್ತು ವಿದ್ಯಾರ್ಥಿಗಳು ಅದನ್ನು ತಮ್ಮ ಸತ್ಯವೇದಗಳಲ್ಲಿ ಬರೆದುಕೊಳ್ಳಲಿ. ನಾವು ಈ ಹೊಸ ವಚನವನ್ನು 14 ನೇ ವಚನ ಎಂದು ಕರೆಯೋಣ.

ವಿದ್ಯಾರ್ಥಿಗಳು ಒಮ್ಮೆಲೇ ಎಲ್ಲಾ 10 ಪ್ರಶ್ನೆಗಳನ್ನು ಉತ್ತರಿಸಲು ಅನುಮತಿಸಬೇಡಿರಿ! ಈ ರೀತಿಯಾಗಿ ಮಾಡುವುದು ಸೂಕ್ತ ಎಂಬುದು ನನ್ನ ಸಲಹೆ:

1) ವಿದ್ಯಾರ್ಥಿಗಳು 14 ನೇ ವಚನವನ್ನು "ಸೇರಿಸಿದ" ನಂತರ ಪ್ರಶ್ನೆ 1 ರಿಂದ 3ನ್ನು ತಮ್ಮ ಗುಂಪುಗಳಲ್ಲಿ ಉತ್ತರಿಸಲಿ. ಅವರ ಉತ್ತರಗಳನ್ನು ನೋಡಿರಿ ಮತ್ತು ಗೊಂದಲಕ್ಕೆ ಒಳಗಾದವರಿಗೆ ಸಹಾಯ ಮಾಡಿರಿ.
2) ವಿದ್ಯಾರ್ಥಿಗಳು ಪ್ರಶ್ನೆ 4 ಮತ್ತು 5 ನ್ನು ತಮ್ಮ ಗುಂಪುಗಳಲ್ಲಿ ಉತ್ತರಿಸಲಿ. ಅವರ ಉತ್ತರಗಳನ್ನು ನೋಡಿರಿ.

3) ವಿದ್ಯಾರ್ಥಿಗಳು ಪ್ರಶ್ನೆ 6 ನ್ನು ತಮ್ಮ ಗುಂಪುಗಳಲ್ಲಿ ಉತ್ತರಿಸಲಿ. ಅವರ ಉತ್ತರಗಳನ್ನು ನೋಡಿರಿ.

4) ವಿದ್ಯಾರ್ಥಿಗಳು ಪ್ರಶ್ನೆ 7 ರಿಂದ 9 ನ್ನು ತಮ್ಮ ಗುಂಪುಗಳಲ್ಲಿ ಉತ್ತರಿಸಲಿ. ಅವರ ಉತ್ತರಗಳನ್ನು ನೋಡಿರಿ.

5) ಅಂತಿಮವಾಗಿ ವಿದ್ಯಾರ್ಥಿಗಳು ಪ್ರಶ್ನೆ 10 ಮತ್ತು 11 ನ್ನು ತಮ್ಮ ಗುಂಪುಗಳಲ್ಲಿ ಉತ್ತರಿಸಲಿ. ಅವರ ಉತ್ತರಗಳನ್ನು ನೋಡಿರಿ.

6) ವಿದ್ಯಾರ್ಥಿಗಳು ಪ್ರಶ್ನೆ 4 ಮತ್ತು 5 ನ್ನು ತಮ್ಮ ಗುಂಪುಗಳಲ್ಲಿ ಉತ್ತರಿಸಲಿ. ಅವರ ಉತ್ತರಗಳನ್ನು ನೋಡಿರಿ.

ವಿದ್ಯಾರ್ಥಿಗಳು ಹೆಚ್ಚಿನ ಪ್ರಶ್ನೆಗಳಿಗೆ ಉತ್ತರಗಳನ್ನು ತರಗತಿಯ ಸಮಯದಲ್ಲಿ ಹುಡುಕುವುದು ಬೇಡ! ಅವರು ಅದನ್ನು ಗ್ರಂಥಾಲಯ ಸಮಯದಲ್ಲಿ ಮತ್ತು ಮನೆಗೆಲಸದ ಸಮಯದಲ್ಲಿ ಮಾಡಲಿ. ವಿದ್ಯಾರ್ಥಿಗಳು ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕಲೇಬೇಕು ಎನ್ನುವ ಯಾವ ಕಡ್ಡಾಯವು ನಿಶ್ಚಯವಾಗಲೂ ಇಲ್ಲ. ಪ್ರಶ್ನೆ 12 ನ್ನು ಎಲ್ಲರೂ ವೈಯಕ್ತಿಕವಾಗಿ ಉತ್ತರಿಸುವುದು ಸೂಕ್ತ. ಪ್ರಶ್ನೆ 13 ಮತ್ತು 14 ನ್ನು ವೈಯಕ್ತಿಕವಾಗಿ ಆಗಲಿ ಅಥವಾ ಗುಂಪಿನಲ್ಲಾಗಲಿ ಮಾಡಬಹುದು. ಪ್ರಶ್ನೆ 15 ಮತ್ತು 16 ನ್ನು ಗುಂಪಿನಲ್ಲಿ ಮಾಡುವುದೇ ಸೂಕ್ತ.

## ಉತ್ತರಗಳು

1. ಈ ಕೀರ್ತನೆಯನ್ನು ರಚಿಸಲು ವಿವಿಧ ಮಾರ್ಗಗಳುಂಟು:

   1) ಮೊದಲನೆಯದು ಯಾರು ಮಾತನಾಡಿದರು ಎಂಬುದರ ಮೇಲೆ ಹೀಗೆ ಆಧಾರಿತವಾಗಿದೆ:

      - ವಚನ 1–3 ರಲ್ಲಿ ಸ್ವತಃ ದಾವೀದನು ಮಾತನಾಡುತ್ತಾನೆ.
      - ವಚನ 4–7 ರಲ್ಲಿ ಒಂದು ಸಂತತಿಯ ನಂತರ ಇನ್ನೊಂದು ಸಂತತಿ ಮಾತನಾಡುತ್ತದೆ.
      - ವಚನ 8–21 ರಲ್ಲಿ ಎಲ್ಲರೂ ಮಾತನಾಡುತ್ತಾರೆ – ಆದರೆ ನಿಶ್ಚಯವಾಗಲೂ ದಾವೀದನು ಈ ಕೀರ್ತನೆಯ ಲೇಖಕನಾಗಿರುವುದರಿಂದ ಆತನೇ ಒಂದು ಸಂತತಿಯ ನಂತರ ಇನ್ನೊಂದು ಸಂತತಿಯ ಹಾಗೂ ಎಲ್ಲರ ಬಾಯಲ್ಲಿ ಈ ಮಾತುಗಳನ್ನು ಹಾಕುತ್ತಾನೆ. ಕವಿಗಳು ಆಗಾಗ್ಗೆ ಹೀಗೆ ಮಾಡುತ್ತಾರೆ.

   2) ಎರಡನೇಯದು ವಿಷಯಾಂಶದ ಮೇಲೆ ಹೀಗೆ ಆಧಾರಿತವಾಗಿದೆ:

      - ಪೀಠಿಕೆ, ವ. 1–2
      - ಯೆಹೋವನು ಮಹೋನ್ನತನು, ವ. 3–7,
      - ಯೆಹೋವನು ಕೃಪಾಳುವು, ವ. 8–13,
      - ಯೆಹೋವನು ನಂಬಿಗಸ್ಥನು, ವ. 13–20,
      - ಸಮಾರೋಪ, ವ. 21.

2. ಈ ಕೀರ್ತನೆಯಲ್ಲಿರುವ ಒಂದು ಕುತುಹಲಕಾರಿಯಾದ ವಿಶಿಷ್ಟತೆಯೇನೆಂದರೆ, ಈ ಕೀರ್ತನೆಯಲ್ಲಿ "ಸ್ತುತಿಸು" ಎಂಬುದನ್ನು ವ್ಯಕ್ತಪಡಿಸಲು ವಿವಿಧ ಪದಗಳನ್ನು (ಸಮಾನಾರ್ಥ ಪದಗಳನ್ನು) ಬಳಸಲಾಗಿದೆ. ನಾವು ಸತ್ಯವೇದವು ಅಥವಾ ಜೀವವುಳ್ಳ ವಚನ (JV) ಅನುವಾದದಲ್ಲಿ ಈ ಸಮಾನಾರ್ಥ ಪದಗಳನ್ನು ಕಾಣುತ್ತೇವೆ:

   - ಘನಪಡಿಸು (ಅದರ ಅರ್ಥ "ದೇವರು ಎಷ್ಟು ದೊಡ್ಡವನು ಎಂಬುದನ್ನು ಹೇಳುವುದಾಗಿದೆ"), ವ. 1
   - ಕೀರ್ತಿಸು / ಕೊಂಡಾಡು (ಅದರ ಅರ್ಥ "ದೇವರ ಉದಾರತೆಯ ಕುರಿತು ಹೊಗಳುವುದಾಗಿದೆ"), ವ. 1, 2, 10, 21
   - ಸ್ತುತಿಸು (ಅದರ ಅರ್ಥ "ದೇವರ ಶ್ರೇಷ್ಠತೆಯನ್ನು ಮಹಿಮೆಪಡಿಸುವುದಾಗಿದೆ"), ವ. 2, 3, 10, 21
   - ಹೊಗಳು (ಅದರ ಅರ್ಥ "ದೇವರ ಕುರಿತು ಪ್ರಶಂಸೆಯನ್ನು ವ್ಯಕ್ತಪಡಿಸುವುದು"), ವ. 4

- ಪ್ರಸಿದ್ಧಪಡಿಸು (ಅದರ ಅರ್ಥ "ಬಲವಾಗಿ ಪ್ರಕಟಪಡಿಸುವುದಾಗಿದೆ"), ವ. 4, 6
- ಧ್ಯಾನಿಸು (ಅದರ ಅರ್ಥ "ಆಳವಾಗಿ ಯೋಚಿಸುವುದಾಗಿದೆ"), ವ. 5
- ವರ್ಣಿಸು, ವ. 11
- ಪ್ರಕಟಿಸು, ವ. 7
- ಉತ್ಸಾಹ ಧ್ವನಿ ಮಾಡು, ವ. 7 (NIBV)
- ಹೇಳು, ವ. 6 (NIBV)
- ಸಾರುವುದು, ವ. 6 (NIBV)
- ತಿಳಿಯಪಡಿಸು, ವ. 4, 12 (NIBV)

ದಾವೀದನು ಯಾಕೆ ಇಷ್ಟೊಂದು ಸಮಾನಾರ್ಥ ಹೇಳಿಕೆಯನ್ನು ಬಳಸಿದನೆಂದರೆ ಬಹುಶಃ ದೇವರನ್ನು ಸಾಧ್ಯವಾದಷ್ಟು ಅತ್ಯಂತ ಬಲವಾಗಿ ಮತ್ತು ಸುಂದರವಾಗಿ ಸ್ತುತಿಸಲು ತನ್ನ ಎಲ್ಲಾ ಕಾವ್ಯಾತ್ಮಕ ಸಾಮರ್ಥ್ಯವನ್ನು ಸಂಪೂರ್ಣವಾಗಿ ಉಪಯೋಗಿಸಲು ಬಯಸಿರಬಹುದು. ದೇವರು ನಿಜವಾಗಲೂ ತನ್ನ ಎಲ್ಲಾ ಸ್ತುತಿಗೆ ಯೋಗ್ಯನು ಎಂದು ಆತನು ನಂಬಿದ್ದನು.

3. ದಾವೀದನು ಈ ಸ್ತುತಿಯ ಸುದೀರ್ಘತೆಯನ್ನು ವಿವರಿಸಲೂ ಸಹ ವಿವಿಧ ಹೇಳಿಕೆಗಳನ್ನು ಬಳಸಿದನು. ನಾವು ಈ ಹೇಳಿಕೆಗಳನ್ನು ಕಾಣುತ್ತೇವೆ:
   - ಯುಗಯುಗಾಂತರಗಳಲ್ಲಿ, ವ. 1, 2, 21 (JV)
   - ಎಂದೆಂದಿಗೂ, ವ. 1, 2, 21 (NIBV)
   - ತಲತಲಾಂತರ, ವ. 13
   - ಶಾಶ್ವತ, ವ. 13
4. ಮತ್ತೊಮ್ಮೆ ಈ ವಚನಗಳನ್ನು ನೋಡಿರಿ 1–7:
   1) ದೇವರನ್ನು ಯಾಕೆ ಸ್ತುತಿಸಲ್ಪಡಬೇಕೆಂಬುದಕ್ಕೆ ಕಾರಣಗಳ (ಅಥವಾ ಆತನ ಗುಣಗಳ) ಒಂದು ಪಟ್ಟಿಯು ಹೀಗಿದೆ:
      - ಯಾಕೆಂದರೆ ಆತನ ಮಹತ್ವವು ಅಗಮ್ಯವಾದದ್ದು (ವ. 3)
      - ಆತನ ಕೃತ್ಯಗಳ ನಿಮಿತ್ತ: ಆತನ ಅದ್ಭುತ ಕಾರ್ಯಗಳು, ಆತನ ಪರಾಕ್ರಮಗಳು ಮತ್ತು ಆತನ ಬಯಂಕರ ಕೃತ್ಯಗಳು (ವ. 4, 5, 6)
      - ಆತನ ಮಹಾ ಪ್ರಭಾವಯುಕ್ತವಾದ ಮಹಿಮೆಯ ನಿಮಿತ್ತ (ವ. 5)
      - ಆತನ ಮಹೋಪಕಾರದ ನಿಮಿತ್ತ (ವ. 7)
      - ಆತನ ನೀತಿವಂತಿಕೆಯ ನಿಮಿತ್ತ (ವ. 7)
   2) –
   3) –
5. ಹಿಂದಿನ ಸಂತತಿಗಳ ಸ್ತುತಿಯು ದಾವೀದನು ದೇವರಿಗೆ ಮೂರು ವ್ಯತ್ಯಾಸವಾದ ರೀತಿಯಲ್ಲಿ ಪ್ರತಿಕ್ರಿಯಿಸುವಂತೆ ಪ್ರೇರೇಪಿಸಿದವು (ವ 5–7, 21):

1) ದಾವೀದನು ದೇವರು ಮಾಡಿದ ಸಂಗತಿಯ ಕುರಿತು ಧ್ಯಾನಿಸುವುದರ ಮೂಲಕ ಪ್ರತಿಕ್ರಿಯಿಸಿದನು (ವ. 5).

2) ದಾವೀದನು ದೇವರು ಮಾಡಿದ ಸಂಗತಿಯ ಕುರಿತು ಸಾರುವುದರ ಮೂಲಕ ಪ್ರತಿಕ್ರಿಯಿಸಿದನು (ವ. 6).

3) ದಾವೀದನು ದೇವರು ಮಾಡಿದ ಸಂಗತಿಯ ಕುರಿತು ಉತ್ಸಾಹ ಧ್ವನಿಮಾಡುವುದರ (ಸಂತೋಷವಾಗಿ ಹಾಡುವುದರ) ಮೂಲಕ ಪ್ರತಿಕ್ರಿಯಿಸಿದನು (ವ. 7, 21).

6. ಮತ್ತೊಮ್ಮೆ ಈ ವಚನಗಳನ್ನು ನೋಡಿರಿ 8–13:

1) ಅರಸನಾದ ದೇವರ ಮತ್ತು ಆತನ ರಾಜ್ಯದ ಗುಣಲಕ್ಷಣದ ಕುರಿತು ನಾವು ಇವುಗಳನ್ನು ಕಲಿಯುತ್ತೇವೆ:

- ಅರಸನು ದಯೆಯು ಕನಿಕರವೂ ಉಳ್ಳವನಾಗಿದ್ದಾನೆ (ವ. 8, 9).
- ಅರಸನು ದೀರ್ಘಶಾಂತನೂ ಪ್ರೀತಿಪೂರ್ಣನೂ ಆಗಿದ್ದಾನೆ (ವ. 8).
- ಅರಸನು ಸರ್ವರಿಗೂ ಒಳ್ಳೆಯವನಾಗಿದ್ದಾನೆ (ವ. 9).
- ಅರಸನು ಪರಾಕ್ರಮಶಾಲಿಯಾಗಿದ್ದಾನೆ (ವ. 11).
- ಆತನ ರಾಜ್ಯವು ಪ್ರಭೆಯನ್ನೂ ಘನವನ್ನೂ ಹೊಂದಿದೆ (ವ. 11, 12).
- ಆತನ ರಾಜ್ಯವು ಶಾಶ್ವತವಾಗಿದೆ (ವ. 13).

2) –

7. ಮತ್ತೊಮ್ಮೆ ಈ ವಚನಗಳನ್ನು ನೋಡಿರಿ 13–20:

1) ಇಲ್ಲಿ ತಿಳಿಸಲಾಗಿರುವ ಜೀವಿಗಳು ಮತ್ತು ಜನರು ಯಾರು? ಮತ್ತು ದೇವರು ಅವರಿಗಾಗಿ ಏನು ಮಾಡಿದನು? ನಾನು ಮಾಡಿರುವ ಚಾರ್ಟ್ ಹೀಗಿದೆ:

| ಜೀವಿ/ವ್ಯಕ್ತಿ | ದೇವರು ಅವರಿಗಾಗಿ ಮಾಡಿದ್ದು |
|---|---|
| ಆತನ ಸೃಷ್ಟಿ, ವ. 9 | ಕರುಣಿಸುತ್ತಾನೆ, |
| ಬಿದ್ದವರು/ಕುಗ್ಗಿದವರು, ವ. 14 | ಎತ್ತುತ್ತಾನೆ / ಉದ್ಧರಿಸುತ್ತಾನೆ |
| ಎಲ್ಲರೂ, ವ. 15 | ಹೊತ್ತಿಗೆ ಸರಿಯಾಗಿ ಆಹಾರವನ್ನು ಕೊಡುತ್ತಾನೆ, |
| ಎಲ್ಲಾ ಜೀವಿಗಳು, ವ. 16 | ಇಷ್ಟವನ್ನು ಪೂರೈಸುತ್ತಾನೆ, |
| ತನ್ನ ಸೃಷ್ಟಿಯೆಲ್ಲಾ, ವ. 17 | ಪ್ರೀತಿ ತೋರಿಸುತ್ತಾನೆ, |
| ಯತಾರ್ಥವಾಗಿ ಆತನಲ್ಲಿ ಮೊರೆಯಿಡುವವರು, ವ. 18 | ಆತನು ಅವರಿಗೆ ಸಮೀಪವಾಗಿದ್ದಾನೆ, |
| ಆತನಲ್ಲಿ ಭಯಭಕ್ತಿಯುಳ್ಳವರು ವ. 19 | ಅವರ ಇಷ್ಟವನ್ನು ನೆರವೇರಿಸುತ್ತಾನೆ, |
| ಆತನಲ್ಲಿ ಭಯಭಕ್ತಿಯುಳ್ಳವರು ವ. 19 | ಅವರ ಮೊರೆಯನ್ನು ಕೇಳಿ ಅವರನ್ನು ರಕ್ಷಿಸುತ್ತಾನೆ, |

| | |
|---|---|
| ಆತನನ್ನು ಪ್ರೀತಿಸುವವರು, ವ. 20 | ಅವರನ್ನು ಕಾಪಾಡುತ್ತಾನೆ, |
| ದುಷ್ಟರು, ವ. 20 | ಅವರನ್ನು ನಾಶಮಾಡುತ್ತಾನೆ, |

2) –

8. ದಾವೀದನು ತನ್ನ ಈ ಕೀರ್ತನೆಯನ್ನು ಸಮಾರೋಪಗೊಳಿಸುವಾಗ ಯೆಹೋವನ ಗುಣಗಳನ್ನು ಮತ್ತು ಕೃತ್ಯಗಳನ್ನು ಸ್ತುತಿಸುವುದರ ಮೂಲಕ ಕೊಂಡಾಡುತ್ತಾನೆ (ವ 21).

9. –

10. –

11. –

## ಅವಲೋಕನ

ಕೀರ್ತನೆ 145 ರಲ್ಲಿ ದಾವೀದನು ಆತ್ಮಿಕ ಕಣ್ಣುಗಳಿಂದ ದೇವರನ್ನು ಹಾಗೂ ಆತನ ರಾಜ್ಯವನ್ನು ವರ್ಣಿಸುತ್ತಾನೆ. ಆತನು ಅವುಗಳನ್ನು ನಂಬಿಕೆಯ ಕಣ್ಣುಗಳಿಂದ – ಅಂದರೆ ಮೇಲ್ಮೈಯಲ್ಲಿ ತೋರುವ ಹಾಗೂ ಸಹಜವಾಗಿ ಕಾಣುವ ಸಂಗತಿಗಿಂತ ಮಿಗಿಲಾಗಿದ್ದನ್ನು – ಕಾಣುತ್ತಾನೆ.

ದಾವೀದನು ಇಸ್ರಾಯೇಲಿನ ಸಿಂಹಾಸನವನ್ನೇರುವ ಸಮಯ ಬಂದಾಗ ಮಾರ್ಗದಲ್ಲಿ ಅನೇಕ ಕಷ್ಟಗಳನ್ನು ಅನುಭವಿಸಿದನು. ಆತನು ಇನ್ನೂ ಯೌವ್ವನಸ್ಥನಾಗಿರುವಾಗಲೇ ದೇವರು ಆತನನ್ನು ಆರಿಸಿಕೊಂಡು ತನ್ನ ಪ್ರವಾದಿಯಾದ ಸಮುವೇಲನ ಮೂಲಕ ಅಭಿಷೇಕಿಸಿದನು. 15 ವರ್ಷಗಳ ನಂತರ ಆತನು ಯೆಹೂದದ ಅರಸನಾದನು. ಅದಾದ ನಂತರ ಆತನು ಇಡೀ ಇಸ್ರಾಯೇಲಿನ ಅರಸನಾಗಲು ಇನ್ನೂ 7 ವರ್ಷಗಳು ಬೇಕಾಯಿತು. ಇವುಗಳಲ್ಲಿ ಅನೇಕ ವರ್ಷಗಳ ಕಾಲ ಅರಸನಾದ ಸೌಲನ ಕೈಯಿಂದ ಕೊಲೆಯಾಗುವುದನ್ನು ತಪ್ಪಿಸಿಕೊಳ್ಳಲು ಒಬ್ಬ ನಿರಾಶ್ರಿತನಾಗಿ ಕಳೆದನು. ಅದಲ್ಲದೇ ದಾವೀದನು ಸಿಂಹಾಸನದಲ್ಲಿದ್ದಾಗಲೂ ಕೆಲವು ವರ್ಷಗಳ ಕಾಲ ನೆಮ್ಮದಿಯನ್ನು ಅನುಭವಿಸಲಾಗಲಿಲ್ಲ. ಆತನ ಸ್ವಂತ ಮಗನಾದ ಅಬ್ಷಾಲೋಮನು ತನ್ನ ಇನ್ನೊಬ್ಬ ಅಮ್ನೋನನನ್ನು ಕೊಂದನು. ಅಬ್ಷಾಲೋಮನು ನಂತರ ತನ್ನ ತಂದೆಯ ವಿರುದ್ಧ ತಿರುಗಿಬಿದ್ದನು. ಆಗ ಮತ್ತೊಮ್ಮೆ ದಾವೀದನು ತನ್ನ ಪ್ರಾಣವನ್ನು ಉಳಿಸಿಕೊಳ್ಳುವುದಕ್ಕಾಗಿ ಓಡಿ ಹೋಗಬೇಕಾಯಿತು. ಹಾಗಾಗಿ ದಾವೀದನು ಯುದ್ಧ ಮತ್ತು ರಕ್ತಪಾತ, ವಿಶ್ವಾಸಘಾತ ಮತ್ತು ವಂಚನೆ, ನಿರಾಶೆಗಳು ಮತ್ತು ಮರಣ ಇವೆಲ್ಲದರ ಪರಿಚಯವನ್ನು ಹೊಂದಿದ್ದನು. ಆತನು ವೈರಿಗಳ ಕೈಯಲ್ಲಿ ಹಿಂಸೆಯನ್ನು ಅನಿಭವಿಸಿದ್ದನು ಮತ್ತು ಬಹಿಷ್ಕಾರದ ಅಭಾವಗಳನ್ನು ಅನುಭವಿಸಿದ್ದನು. ಜೀವನವು ಕೆಲವೊಮ್ಮೆ ಕಷ್ಟಕರವಾಗಬಹುದು ಮತ್ತು ಇತಿಹಾಸದಲ್ಲಿ ನಡೆಯುವ ಘಟನೆಗಳ ಮೇಲಾಗಲಿ ಅಥವಾ ತನ್ನ ಜನರಿಗೆ ಸಂಭವಿಸುವುದರ ಮೇಲಾಗಲಿ ದೇವರಿಗೆ ಎಲ್ಲಾ ಕಾಲದಲ್ಲೂ ದೇವರಿಗೆ ಹತೋಟಿ ಇಲ್ಲದಿರುವಂತೆ ತೋರುತ್ತದೆ ಎಂಬುದನ್ನು ಆತನು ತಿಳಿದಿದ್ದನು. ಮಾನವನ ಬೀಳುವಿಕೆಯ ಪರಿಣಾಮಗಳನ್ನು ಹೊಂದಿರುವ ಜಗತ್ತಿನಲ್ಲಿ ಜೀವಿಸುತ್ತಿದ್ದೇನೆ ಎಂಬುದನ್ನು ಆತನು ಅರಿತುಕೊಂಡಿದ್ದನು. ಪಾಪ, ಹಿಂಸೆ ಮತ್ತು ಮರಣ ಇವೆಲ್ಲವೂ ಮಾನವನ ಅಸ್ಥಿತ್ವದ ಭಾಗಗಳು ಎಂಬುದನ್ನು ಆತನು ತಿಳಿದಿದ್ದನು.

ಆದರೆ ಕೀರ್ತನೆ 145 ರಲ್ಲಿ ಇವೆಲ್ಲವುಗಳನ್ನು ಮೀರಿದ್ದನ್ನು ಕಾಣುತ್ತಾನೆ. ಆತನು ನಿಜವಾಗಲೂ ದೇವರು ಯಾರು ಎಂಬುದನ್ನು ಕಾಣುತ್ತಾನೆ: ಆತನು ಸೃಷ್ಟಿಕರ್ತನು, ಪರಿಪಾಲಕನು, ವಿಮೋಚನು, ನ್ಯಾಯಾಧಿಪತಿ ಮತ್ತು ಅರಸನಾಗಿದ್ದಾನೆ. ದಾವೀದನ ಅರಸನು ದಯೆಯೂ ಮತ್ತು ಕನಿಕರವುಳ್ಳವನು, ದೀರ್ಘಶಾಂತನೂ ಮತ್ತು ಪ್ರೀತಿಪೂರ್ಣನೂ, ತಾನು ಸೃಷ್ಟಿಯೊಂದಿಗೆ ಮಾಡಿಕೊಂಡ ಒಡಂಬಡಿಕೆಗೂ ಹಾಗೂ ತನ್ನ ಜನರೊಂದಿಗೆ ಮಾಡಿಕೊಂಡ ಒಡಂಬಡಿಕೆಗೂ ನಂಬಿಗಸ್ಥನಾಗಿದ್ದಾನೆ.

ನಾವು ದಾವೀದನಿಂ ದ ಕಲಿತುಕೊಳ್ಳಬೇಕು. ನಾವೆಲ್ಲರೂ ನಮ್ಮ ದಿನನಿತ್ಯ ಜೀವನದ ಸಮಸ್ಯೆ ಮತ್ತು ಕಷ್ಟಗಳ ಮೇಲಿಟ್ಟಿರುವ ಕಣ್ಣುಗಳನ್ನು ಮೇಲೆತ್ತಿ ದೇವರು ನಿಜವಾಗಿಯೂ ಯಾರೆಂಬುದನ್ನು ನೋಡಬೇಕಾಗಿದೆ. ದೇವರು ನಮ್ಮ ಶ್ರೇಷ್ಠ ಅರಸನು ಆತನು ತನ್ನ ಸುಂದರವಾದ

ರಾಜ್ಯವನ್ನು ಆಳುತ್ತಾನೆ. ಇದನ್ನು ನಾವು ಅರಿತುಕೊಳ್ಳುವಾಗ ನಮ್ಮ ಹೃದಯ ಮತ್ತು ಬಾಯಿಗಳು ಸ್ತುತಿಯಿಂದ ಹೊರಸೂಸುವವು. ಅದಲ್ಲದೇ ನಾವು ಆತನಿಗೂ ಮತ್ತು ಆತನ ರಾಜ್ಯದ ನಿಯಮಗಳಿಗೂ ಯೋಗ್ಯವಾದ ಜೀವಿತಗಳನ್ನು ಜೀವಿಸುವಂತೆ ಉತ್ತೇಜನವನ್ನು ಹೊಂದಿಕೊಳ್ಳುವೆವು. ನಾವು ಅದನ್ನು ಮಾಡುವಾಗ, ನಮ್ಮ ಅರಸನು ಎಲ್ಲಾ ದುಷ್ಟತನವನ್ನು ನ್ಯಾಯತೀರಿಸಲು ಮತ್ತು ನಾಶಪಡಿಸಲು ಹಾಗೂ ತನ್ನಲ್ಲಿ ಭಯಭಕ್ತಿಯುಳ್ಳವರನ್ನು ವಿಮೋಚಿಸಲು ಮತ್ತು ರಕ್ಷಿಸಲು ಬರುವ ದಿನಕ್ಕಾಗಿ ಧೈರ್ಯದಿಂದ ಎದಿರು ನೋಡಬಹುದು. ಆ ದಿನದಲ್ಲಿ ನಮ್ಮ ಅರಸನ ರಾಜ್ಯವು ಎಲ್ಲರಿಗೂ ಪ್ರತ್ಯಕ್ಷವಾಗುವುದು. ಆ ದಿನವು ದೇವರ ನೂತನ ಭೂಮಿ ಮತ್ತು ನೂತನ ಆಕಾಶದ ದಿನವಾಗಿರುವುದು.

# ಉತ್ತರಗಳು 2: ದೇವರ ರಾಜ್ಯದ ತಪ್ಪಾದ ದೃಷ್ಟಿಕೋನ

## ಶಿಕ್ಷಕರಿಗಾಗಿ

ನೀವು ಹಾಗೂ ನಿಮ್ಮ ವಿದ್ಯಾರ್ಥಿಗಳು ಈ ಅಧ್ಯಯನವನ್ನು ಉತ್ತಮವಾಗಿ ಕಲಿಯಲು ಬಹುಶಃ ಎರಡು ಗಂಟೆಗಳು ಬೇಕಾಗಬಹುದು.

ಈ ಅಧ್ಯಯನವು ಒಬ್ಬ ಶಿಕ್ಷಕರಾದ ನಿಮಗೆ ಸವಾಲೆನಿಸಬಹುದು. ಮೊದಲು, ಇದು ಎರಡು–ಭಾಗವುಳ್ಳ ಸರಣಿಯ ಮೊದಲ ಭಾಗವಾಗಿದೆ. ಹಾಗಾಗಿ ಎರಡನೇಯ ಭಾಗವನ್ನು ಓದುವಾಗ ಮಾತ್ರ ಮೊದಲನೇಯ ಭಾಗವನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಧ್ಯ. ಅದರ ಪರಿಣಾಮವಾಗಿ, ಶಿಕ್ಷಕರಾದ ನೀವು ವಿದ್ಯಾರ್ಥಿಗಳಿಗೆ 2ನೇ ಅಧ್ಯಯನವನ್ನು ಕಲಿಸುವುದಕ್ಕಿಂತ ಮುಂಚೆ ಎರಡೂ ಅಧ್ಯಯನಗಳನ್ನು, ಅಂದರೆ ಅಧ್ಯಯನ 2 ಮತ್ತು 3ನ್ನು, ಚೆನ್ನಾಗಿ ಓದಿ ಸಿದ್ಧಪಡಿಸಿಕೊಳ್ಳಬೇಕು.

ಎರಡನೇಯದಾಗಿ, ಅದು ಹೊಂದಿರುವ "ದೈವಶಾಸ್ತ್ರವು" ಈಗಿನ ಯುಗದ ಹಾಗೂ ದೇವರ ರಾಜ್ಯದ ಕುರಿತು ತಪ್ಪಾದ (ಅಥವಾಭಾಗಶಃ ತಪ್ಪಾದ) ದೃಷ್ಟಿಕೋನವನ್ನು ಹೊಂದಿದೆ. ಆದರೆ ಅದು ತಪ್ಪಾದದ್ದು ಎಂಬುದು ನಿಮಗೆ ಗೊತ್ತಾಗದಿರಬಹುದು.

ಹೇಗಿದ್ದರೂ ನಿಮ್ಮ ತರಗತಿಯಲ್ಲಿ ಈ ತಪ್ಪಾದ ದೃಷ್ಟಿಕೋನವನ್ನು ಸರಿಯಾದದ್ದೆಂದು ಆಲೋಚಿಸುವ ಕನಿಷ್ಟ ಪಕ್ಷ ಒಂದು ಅಥವಾ ಎರಡು ವಿದ್ಯಾರ್ಥಿಗಳು ಇರುವುದು ಸಹಜ. ಉಳಿದ ವಿದ್ಯಾರ್ಥಿಗಳು ಬಹುಶಃ ಗೊಂದಲದಲ್ಲಿರುವುದು ಮತ್ತು ಯಾವುದು ತಪ್ಪು ಅಥವಾ ಯಾವುದು ಸರಿ ಎಂಬುದನ್ನು ಸ್ಪಷ್ಟವಾಗಿ ತಿಳಿಯದಿರುವುದು ಸಹಜ. ಹಾಗಾಗಿ ನಿಮಗಿರುವ ಮೂರನೇಯ ಸವಾಲು ವಿದ್ಯಾರ್ಥಿಗಳನ್ನು ಸರಿಯಾದ ತಿಳುವಳಿಕೆಗೆ ನಡೆಸುವುದಾಗಿದೆ – ಅವರು ಈ ಅಧ್ಯಯನವನ್ನು ಹಾಗೂ ಮುಂದಿನ ಅಧ್ಯಯನವನ್ನು ಮುಗಿಸಿದ ನಂತರ ಅದನ್ನು ಮಾಡಬಹುದು. ಅವರು ಸ್ವಂತವಾಗಿ ಆ ತಿಳುವಳಿಕೆಯನ್ನು ಹೊಂದಿಕೊಳ್ಳಬೇಕು. ಅದರ ಅರ್ಥ ನೀವು ಹೇಳಿಕೊಟ್ಟು ಅವರು ಕಲಿಯಬಾರದು. ಬದಲಾಗಿ ನೀವು ಸೂಕ್ಷ್ಮವಾಗಿ ಮತ್ತು ಜಾಗಾರೂಕವಾಗಿ ಅವರು ಸತ್ಯವನ್ನು ಕಂಡುಕೊಳ್ಳಲು ನಡೆಸಬೇಕು. ತಪ್ಪಾದ ದೃಷ್ಟಿಕೋನವು ಪ್ರತಿನಿಧಿಸುವ "ದೈವಶಾಸ್ತ್ರದಲ್ಲಿ" ದೊಡ್ಡ ಸಮಸ್ಯೆಗಳಿವೆ ಎಂಬುದನ್ನು ಅರಿತುಕೊಳ್ಳುವುದು ಮೊದಲ ಹೆಜ್ಜೆಯಾಗಿದೆ. ಈ ಅಧ್ಯಯನದ ಅಂತ್ಯದಲ್ಲಿ ವಿದ್ಯಾರ್ಥಿಗಳು ಈ ಅರಿಯುವಿಕೆಯನ್ನು ಹೊಂದಿದ್ದಾರೆಂಬುದನ್ನು ಖಚಿತಪಡಿಸಿಕೊಳ್ಳಿರಿ.

ವಿದ್ಯಾರ್ಥಿಗಳು ಈ ಅರಿಯುವಿಕೆಯನ್ನು ಹೊಂದಲು ಆರು ಪ್ರಶ್ನೆಗಳನ್ನು ರೂಪಿಸಲಾಗಿದೆ. ನಾನು ಈ ಕೆಳಗಿನ ಪ್ರಕ್ರಿಯೆಯನ್ನು ಸಲಹೆ ಸೂಚಿಸುತ್ತೇನೆ:

ವಿದ್ಯಾರ್ಥಿಗಳು ಪ್ರಶ್ನೆ 1 ಮತ್ತು 2ನ್ನು ತಮ್ಮ ಗುಂಪುಗಳಲ್ಲಿ ಚರ್ಚಿಸಲಿ. ಅವರ ಉತ್ತರಗಳನ್ನು ಪರಿಶೀಲಿಸಿರಿ.

ವಿದ್ಯಾರ್ಥಿಗಳು ಪ್ರಶ್ನೆ 3ನ್ನು ತಮ್ಮ ಗುಂಪುಗಳಲ್ಲಿ ಚರ್ಚಿಸಲಿ. ಅವರ ಉತ್ತರಗಳನ್ನು ಪರಿಶೀಲಿಸಿರಿ.

ವಿದ್ಯಾರ್ಥಿಗಳು ಪ್ರಶ್ನೆ 4–6ನ್ನು ತಮ್ಮ ಗುಂಪುಗಳಲ್ಲಿ ಚರ್ಚಿಸಲಿ. ಅವರ ಉತ್ತರಗಳನ್ನು ಪರಿಶೀಲಿಸಿರಿ.

ಈ ರೀತಿಯಾಗಿ ಹಂತ ಹಂತವಾಗಿ ಪ್ರಶ್ನೆಗಳನ್ನು ಉತ್ತರಿಸುವಾಗ "ಅಂತ್ಯದ" ಹಾಗೂ ದೇವರ ರಾಜ್ಯದ ಕುರಿತು ಯೆಹೂದ್ಯರು ಹೊಂದಿರುವ ದೃಷ್ಟಿಕೋನದ ಪರಿಣಾಮವಾಗಿ ಬಂದಿರುವ "ದೈವಶಾಸ್ತ್ರ" ಮತ್ತು ಕಾರ್ಯರೂಪದ ಸಮಸ್ಯೆಗಳ ಕುರಿತು ವಿದ್ಯಾರ್ಥಿಗಳು ತಿಳಿದುಕೊಳ್ಳುವವರಾಗಿದ್ದಾರೆ.

## ಉತ್ತರಗಳು

1. –

2. ಈ ರೀತಿಯಾದ ಬೋಧನೆಯಲ್ಲಿ ಕನಿಷ್ಟಪಕ್ಷ ಎರಡು ದೊಡ್ಡ ಸಮಸ್ಯೆಗಳಿವೆ:

    1) ಅದು ನಮ್ಮ ಸ್ವಂತ ಕ್ರಿಸ್ತೀಯ ಅನುಭವದಿಂದ ಪ್ರಮಾಣಿಕರಿಸಲ್ಪಟ್ಟಿಲ್ಲ

- ಇಹಲೋಕದಲ್ಲಿ ಸೈತಾನನು ಕಾರ್ಯಮಾಡುತ್ತಿರುವುದನ್ನು ನಾವು ಕಾಣಬಹುದು. ಯುದ್ಧಗಳು ನಡೆಯುತ್ತಿದೆ, ದಬ್ಬಾಳಿಕೆ ನಡೆಯುತ್ತಿದೆ, ಪಾಪವಿದೆ, ಹಿಂಸೆಯಿದೆ, ಮರಣವಿದೆ. ಇವೆಲ್ಲವುಗಳನ್ನು ಹೊರತುಪಡಿಸಿ ಪ್ರಕೃತಿ ವಿಕೋಪಗಳು ಸಹ ಉಂಟಾಗುತ್ತವೆ: ಬರಗಾಲ, ಪ್ರವಾಹ, ಭೂಕಂಪಗಳು, ಸುನಾಮಿಗಳು.

- ನಾವು ಸಹ ನಮ್ಮ ಜೀವಿತದಲ್ಲಿ ಪಾಪದೊಂದಿಗೆ ಹೊರಾಡುತ್ತಿದ್ದೇವೆ. ಪ್ರಬುದ್ಧ ವಿಶ್ವಾಸಿಗಳು ಮತ್ತು ಯಶಸ್ವಿ ಸಭಾಪಾಲಕರುಗಳೂ ಸಹ ಬಲಹೀನತೆ ಮತ್ತು ಪಾಪಗಳೊಂದಿಗೆ ಹೊರಾಡುವುದನ್ನು ಕಾಣುತ್ತೇವೆ.

- ನಾವು ಅನಾರೋಗ್ಯಕ್ಕೆ ಒಳಗಾಗುತ್ತೇವೆ. ಬಲವಾದ ವಿಶ್ವಾಸಿಗಳು ಸಹ ಕೆಲವೊಮ್ಮೆ ಅನಾರೋಗ್ಯದಿಂದ ನರಳುತ್ತಾರೆ.

- ಮಾನವ ಜೀವಿತದಲ್ಲಿ ಮರಣವೊಂದೇ ಖಚಿತವಾದ ಸಂಗತಿ ಎಂದು ತೋರುತ್ತದೆ.

2) ಅದು ನಮ್ಮನ್ನು ನಿರಾಶೆಗೆ ನಡೆಸುತ್ತದೆ:

- ಭಹುಶಃ ನಾವು ದೇವರೊಂದಿಗೆ ನಿರಾಶರಾಗಬಹುದು.

- ಅಥವಾ ನಮ್ಮ ನಂಬಿಕೆಯ ಕೊರತೆಯ ನಿಮಿತ್ತ ನಮ್ಮ ಬಗ್ಗೆ ನಾವು ನಿರಾಶರಾಗಬಹುದು.

- ಅಥವಾ ನಮ್ಮ ಸಭಾಪಾಲಕರ ಹಾಗೂ ಅವರ ಬೋಧನೆಯ ಬಗ್ಗೆ ನಿರಾಶರಾಗಬಹುದು.

- ಅಥವಾ ನಮ್ಮ ಸಭೆ ಮತ್ತು ಅದರ ಸಿದ್ದಾಂತಗಳ ಬಗ್ಗೆ ನಿರಾಶರಾಗಬಹುದು.

3. ದೇವರಾಜರವರು ಹೇಳುವಂತ ಮಾತುಗಳನ್ನು ನಾನು ಅನೇಕ ಬಾರಿ ಕೇಳಿದ್ದೇನೆ. ಭಹುಶಃ ನಾನು ಅನೇಕ ವರ್ಷಗಳ ಹಿಂದೆ ನೇರವಾಗಿಲ್ಲದಿದ್ದರೂ ಪರೋಕ್ಷವಾಗಿ ಬಳಸಿದ್ದೇನೆ. ಈ ರೀತಿಯಾಗಿ ಹೇಳುವುದರಲ್ಲಿ ಇರುವ ಸಮಸ್ಯೆಯೇನೆಂದರೆ ಅದು ಸತ್ಯವಲ್ಲ. ಕನಿಷ್ಠಪಕ್ಷ ಅದು ಪೂರ್ಣ ಸತ್ಯವಂತು ಅಲ್ಲವೇ ಅಲ್ಲ, ಉದಾಹರಣೆಗೆ:

- ಒಳ್ಳೆಯ ವಿಶ್ವಾಸಿಗಳಾಗಿದ್ದರೂ ಬಹಳ ಚಿಂತೆ ಮಾಡುವ ಅನೇಕರು ಪರಿಚಯವಿದ್ದಾರೆ. 50 ವರ್ಷಗಳಿಗಿಂತಲು ಹೆಚ್ಚಿನ ಕಾಲ ವಿಶ್ವಾಸಿಯಾಗಿರುವ ನಾನು ಸಹ ಕೆಲವೊಮ್ಮೆ ಚಿಂತಿಸುತ್ತೇನೆ.

- ಅನಾರೋಗ್ಯದಲ್ಲಿ ಬಳಲುತ್ತಿರುವ ಅನೇಕ ಒಳ್ಳೆಯ ವಿಶ್ವಾಸಿಗಳು ನನಗೆ ಗೊತ್ತಿದ್ದಾರೆ.

- ಪರೀಕ್ಷೆಗೆ ಮುಂಚೆ ಯಥಾರ್ಥವಾಗಿ ಪ್ರಾರ್ಥನೆ ಮಾಡಿದ್ದರೂ ಸಹ ಅನುತ್ತೀರ್ಣರಾಗಿರುವ ಅನೇಕ ವಿಶ್ವಾಸಿಗಳನ್ನು ನಾನು ಸಂದಿಸಿದ್ದೇನೆ.

- ನನ್ನ ಸಭೆಯಲ್ಲಿ ಅನೇಕ ಒಳ್ಳೆಯ ವಿಶ್ವಾಸಿಗಳು ಆರ್ಥಿಕವಾದ ಹೊರಾಟದಲ್ಲಿದ್ದಾರೆ. ನನ್ನ ಊರಿನಲ್ಲಿ ಯೇಸುವಿನ ಮೇಲೆ ನಂಬಿಕೆಯಿಡದ ಕೆಲವು ಅಗರ್ಭ ಶ್ರೀಮಂತರಿದ್ದಾರೆ. ಅವರೆಂದಿಗೂ ಸಭೆಗೆ ಹೋಗುವುದಿಲ್ಲ, ಬದಲಾಗಿ ಅವರು ತಮ್ಮ ಬಿಡುವಿನ ಸಮಯವನ್ನು ಕುಡಿಯುವುದರಲ್ಲಿ ಮತ್ತು ಪಾರ್ಟಿಗಳಿಗೆ ಹೋಗುವುದರಲ್ಲಿ ಕಳೆಯುತ್ತಾರೆ. ಹಾಗಾಗಿ ಕ್ರೈಸ್ತ ನಂಬಿಕೆಗೂ ಮತ್ತು ಆರ್ಥಿಕ ಯಶಸ್ಸಿಗೂ ನಡುವೆ ಬಲವಾದ ಸಂಬಂಧವಿಲ್ಲವೆಂಬುದು ತೋರುತ್ತದೆ!

  ಇಹಲೋಕದಲ್ಲಿ ನಮಗೆ ಒಂದು ಸುಗಮವಾದ ಮತ್ತು ಯಶಸ್ವಿ ಜೀವನವು ದೊರಕುವುದೆಂದು ಹೊಸ ಒಡಂಬಡಿಕೆಯು ವಾಗ್ದಾನ ಮಾಡಿಲ್ಲ. ಬದಲಾಗಿ ಯೇಸುವಿನ ಶಿಷ್ಯರಾದ ನಾವು ಸಮಸ್ಯೆಗಳು ಹಾಗೂ ಕಷ್ಟಗಳು ಬರುವುದೆಂದು ಎದರು ನೋಡಲು ತಿಳಿಸಲ್ಪಟ್ಟಿದ್ದೇವೆ. ನಮ್ಮ ಶತ್ರುವಾದ ಸೈತಾನನು ಗರ್ಜಿಸುವ ಸಿಂಹದಂತೆ ನಮ್ಮನ್ನು ನುಂಗಲು ಹುಡುಕುತ್ತಾ ತಿರುಗುತ್ತಿದ್ದಾನೆ (1 ಪೇತ್ರ 5:8). ಆದರೆ ಹೊಸ ಒಡಂಬಡಿಕೆಯು ವಿಶ್ವಾಸಿಗಳಿಗಾಗಿ ಅನೇಕ ಸಹಾಯದ ಮತ್ತು ಪ್ರೋತ್ಸಾಹದ ವಾಗ್ದಾನಗಳನ್ನು ಹೊಂದಿವೆ: ನಮ್ಮ ಶೋಧನೆ ಹಾಗೂ ಕಷ್ಟಗಳಲ್ಲಿ ಯೇಸು ನಮ್ಮೊಂದಿಗಿರುವೆನೆಂದು ವಾಗ್ದಾನ ಮಾಡಿದ್ದಾನೆ. ನಮ್ಮನ್ನು ಮಾರ್ಗದರ್ಶಿಸಲು ಮತ್ತು ಬಲಪಡಿಸಲು ಯೇಸು ನಮಗಾಗಿ ಪವಿತ್ರಾತ್ಮನನ್ನು ಕಳುಹಿಸಿದ್ದಾನೆ. ನಮ್ಮ ಸಹನೆಗೆ ಮೀರಿದ ಶೋಧನೆಯು ಎಂದಿಗೂ ಉಂಟಾಗುವುದಿಲ್ಲವೆಂದು ಪೌಲನು ವಾಗ್ದಾನ ಮಾಡುತ್ತಾನೆ. ಇಹಲೋಕದಲ್ಲಿನ ನಮ್ಮ ಜೀವಿತವು ಮುಕ್ತಾಯಗೊಳ್ಳುವಾಗ ನಮಗೊಂದು ಶ್ರೇಷ್ಠ ಭವಿಷ್ಯವಿದೆಯೆಂದು ಪೌಲನು ಹಾಗೂ ಯೇಸು ವಾಗ್ದಾನ

ಮಾಡುತ್ತಾರೆ. ನಮಗಾಗಿ ಪರಲೋಕದಲ್ಲಿ (ಅಲ್ಲಿ ಅನೀತಿವಂತಿಕೆಯಿಲ್ಲ, ಪಾಪವಿಲ್ಲ, ರೋಗವಿಲ್ಲ, ಮತ್ತು ಮರಣವಿಲ್ಲ) ಒಂದು ಅದ್ಭುತವಾದ ಸ್ವಾಸ್ಥ್ಯವೂ ಕಾಯುತ್ತಿದೆ.

4. ಸೀತಾ ನಿಶ್ಚಯವಾಗಲು ತನ್ನ ಪರೀಕ್ಷೆಯಲ್ಲಿ ಫೇಲ್ ಆಗಿದ್ದಕ್ಕೆ ಅಂತ್ಯಂತ ನಿರಾಸೆಪಡುವಳು. ಆಕೆಯ ಸ್ನೇಹಿತರಾಗಿ ನಾವು ಆಕೆಯನ್ನು ದೂಷಿಸಬಾರದು ಅಥವಾ ಆಕೆಯ ನಂಬಿಕೆಯಲ್ಲಿ ಕೊರತೆಯಿದೆ ಎಂದು ಹೇಳಬಾರದು. ಬದಲಾಗಿ ನಾವು ಆಕೆಯನ್ನು ಆಧರಿಸಬೇಕು ಮತ್ತು ಮಾರ್ಗದರ್ಶಿಸಬೇಕು. ಆಕೆಯು ಮತ್ತೊಮ್ಮೆ ಪ್ರಯತ್ನಿಸಬೇಕೆಂದು, ಇನ್ನೂ ಹೆಚ್ಚಾಗಿ ಓದಬೇಕೆಂದು – ಮತ್ತು ಅದಕ್ಕೆ ಬೇಕಾದ ಬಲವನ್ನು ದೇವರು ಕೊಡುವನೆಂಬ ಬರವಸೆಯಿಡಬೇಕೆಂದು ಆಕೆಯನ್ನು ಪ್ರೋತ್ಸಾಹಿಸಬೇಕು. ಯೇಸು ನಮ್ಮೊಂದಿಗಿದ್ದಾನೆ, ಅದರಲ್ಲೂ ವಿಶೇಷವಾಗಿ ನಿರುತ್ಸಾಹದ ಮತ್ತು ಕಷ್ಟದ ಸಮಯದಲ್ಲಿ ನಮ್ಮೊಂದಿಗಿದ್ದಾನೆ ಎಂಬುದನ್ನು ಆಕೆಗೆ ವಿವರಿಸಬೇಕು. ಆಕೆಯು ತನ್ನ ಸೋಲಿಗಾಗಿ ದೇವರನ್ನು ದೂಷಿಸದಂತೆ – ಅಥವಾ ಸ್ವತಃ ತನ್ನನ್ನು ದೂಷಿಸಿಕೊಳ್ಳದಂತೆ – ಆಕೆಗೆ ನಾವು ಸಹಾಯ ಮಾಡಬೇಕು. ಆಕೆಯು ತನ್ನ ಸೋಲನ್ನು ಒಂದು ವಿಶಾಲವಾದ ದೃಷ್ಟಿಕೋನದಿಂದ ನೋಡಲು ಆಕೆಗೆ ನಾವು ಸಹಾಯ ಮಾಡಬೇಕು.

ನಾವೆಲ್ಲರೂ ಒಂದಲ್ಲ ಒಂದು ಬಾರಿ ಸೋತಿದ್ದೇವೆ. ನಾವೆಲ್ಲರೂ ಒಂದು ಅಪರಿಪೂರ್ಣವಾದ ಜಗತ್ತಿನಲ್ಲಿ ಜೀವಿಸುತ್ತಿದ್ದೇವೆ ಹಾಗೂ ಕೆಲವೊಮ್ಮೆ ಶೋಧನೆ ಹಾಗೂ ನಿರಾಸೆಗಳನ್ನು ಎದುರಿಸುತ್ತೇವೆ. ಆದರೆ ದೇವರು ನಮಗೆ ಸಹಾಯ ಮಾಡಲು, ನಮ್ಮನ್ನು ಬಲಪಡಿಸಲು ಮತ್ತು ನಮ್ಮನ್ನು ಮಾರ್ಗದರ್ಶಿಸಲು ನಮ್ಮೊಂದಿಗಿದ್ದಾನೆ.

5. ರಾಧಮ್ಮನವರು ಸೌಖ್ಯರಾಗದೆ ಕ್ಯಾನ್ಸರ್‌ಗೆ ಬಲಿಯಾಗಿದ್ದಾರೆಂಬ ಸುದ್ದಿಯನ್ನು ಕೇಳುವಾಗ ಅವರ ಸೆಲ್ ಗ್ರೂಪ್ ಸದಸ್ಯರಿಗೆ ಬಹಳ ದುಃಖ ಮತ್ತು ನಿರಾಸೆಯಾಗಿರಬಹುದು. ಅವರೆಲ್ಲರೂ ದೇವರಲ್ಲಿ ಬರವಸೆಯಿಟ್ಟಿದ್ದರೂ, ಯೇಸುವಿನ ಮೂಲಕ ದೈವಿಕ ಸ್ವಸ್ಥತೆಯಲ್ಲಿ ಬರವಸೆಯಿತ್ತಿದ್ದರೂ ಮತ್ತು ತಾವು ಮಾಡಿದ ಪ್ರಾರ್ಥನೆಗಳ ಹೊರತಾಗಿಯೂ ಅವರಿಗೆ ದುಃಖವೆನಿಸಬಹುದು. ಅವರಿಗೆ ಜ್ಞಾನದಿಂದಲೂ ಹಾಗೂ ಸೂಕ್ಷ್ಮವಾಗಿಯೂ ಸಮಾಲೋಚನೆ ಕೊಡುವ ಅವಶ್ಯಕತೆಯಿದೆ. ನಾವು ಅವರ ದುಃಖದಲ್ಲಿ ಅವರನ್ನು ಆಧರಿಸಬೇಕು. ಅವರು ತಮಗೆ ನಂಬಿಕೆಯ ಕೊರತೆಯಿದೆ ಎಂದು ತಮ್ಮನ್ನೇ ದೂಷಿಸಿಕೊಳ್ಳದಂತೆ ನಾವು ಅವರಿಗೆ ಸಹಾಯ ಮಾಡಬೇಕು. ಅವರು ದೇವರಲ್ಲಿ ಹಾಗೂ ಆತನ ಸಾಮರ್ಥ್ಯದಲ್ಲಿ ಇಟ್ಟಿರುವ ನಂಬಿಕೆಯನ್ನು ಕಳಕೊಳ್ಳದಂತೆ ಸಹ ನಾವು ಅವರಿಗೆ ಸಹಾಯ ಮಾಡಬೇಕು. ಅವರು ದೇವರಲ್ಲಿ ದೈವಿಕ ಸ್ವಸ್ಥತೆಗಾಗಿ ಪ್ರಾರ್ಥಿಸುವಾಗ ಆತನಿಗೆ ಉತ್ತರಿಸಲು ಮನಸ್ಸಿದೆ ಎಂಬುದನ್ನು ಅವರು ಸಂಶಯಿಸದಂತೆ ನಾವು ಅವರಿಗೆ ಸಹಾಯ ಮಾಡಬೇಕು.

ನಾವೆಲ್ಲರೂ ಒಂದು ಅಪರಿಪೂರ್ಣವಾದ ಜಗತ್ತಿನಲ್ಲಿ ಜೀವಿಸುತ್ತಿದ್ದೇವೆ. ಹಾಗೂ ಹಿಂಸೆ ಮತ್ತು ಮರಣವು ನಾವು ವಿಶ್ವಾಸಿಗಳಾಗಿದ್ದರೂ ಅಥವಾ ಅವಿಶ್ವಾಸಿಗಳಾಗಿದ್ದರೂ ಮಾನವ ಜೀವನದ ಒಂದು ಭಾಗವಾಗಿದೆ ಎಂಬುದನ್ನು ಅವರು ಅರಿತುಕೊಳ್ಳುವಂತೆ ನಾವು ಅವರಿಗೆ ಸಹಾಯ ಮಾಡಬೇಕು.

6. ಪಾಸ್ಟರ್ ಪ್ರಕಾಶ್‌ರವರು ಮಾಡಿದ ಸಂಗತಿಯು ಸಂಪೂರ್ಣವಾಗಿ ತಪ್ಪಾಗಿದೆ. ಅವರ ಪಾಪಮಯ ಜೀವಿತವು ವಿಶ್ವಾಸಿಗಳಿಗೆ ಒಂದು ಮಾದರಿಯಲ್ಲ . ಅವರ ಸೇವೆಯಲ್ಲಿ ಆದ ಯಶಸ್ಸನ್ನು ಕಂಡು ಆಶ್ಚರ್ಯಪಡಬಹುದು. ಒಂದು ವೇಳೆ ಸಾರುವವನು ಅಪರಿಪೂರ್ಣನಾಗಿದ್ದರೂ ಸಹ ಯೇಸುವಿನ ಕುರಿತಾದ ಸುವಾರ್ತೆಯನ್ನು ಸಾರುವುದರಲ್ಲಿ ಬಲವಿದೆ.

ಪ್ರಕಾಶ್‌ರವರ ಸಭೆಯಲ್ಲಿ ನಡೆದ ಸಂಗತಿಯು ವಿಶ್ವಾಸಿಗಳನ್ನು ಗೊಂದಲಕ್ಕೂ ಹಾಗೂ ನಿರಾಸೆಗೂ ನಡೆಸಿರಬಹುದು. ಅವರು ದೇವರಲ್ಲಿ, ಸಭೆಯಲ್ಲಿ ಅಥವಾ ಸಭಾಪಾಲಕರುಗಳಲ್ಲಿ ಇಟ್ಟಿರುವ ನಂಬಿಕೆಯನ್ನು ಕಳಕೊಳ್ಳಬಾರದೆಂದರೆ ಅವರಿಗೆ ಒಂದು ಜ್ಞಾನವುಳ್ಳ ಕ್ರಿಸ್ತೀಯ ಸಮಾಲೋಚನೆಯನ್ನು ಕೊಡುವ ಅತ್ಯವಶ್ಯಕತೆಯಿದೆ.

ದೇವರು ಅವರ ಜೀವಿತದಲ್ಲಿ ಮಾಡಿರುವ ಕಾರ್ಯಗಳನ್ನು ನಾವು ಅವರಿಗೆ ನೆನಪಿಸಬೇಕು: ದೇವರು ಹೇಗೆ ಅವರನ್ನು ಅವರ ಪಾಪಮಯ ಜೀವಿತದಿಂದ ರಕ್ಷಿಸಿದನು, ಆತನು ಹೇಗೆ ಅವರ ಹೃದಯದಲ್ಲಿ ಶಾಂತಿಯನ್ನು ನೀಡಿದನು. ಆತನು ಹೇಗೆ ಭವಿಷ್ಯಕ್ಕಾಗಿ ಹಾಗೂ ನಿತ್ಯಜೀವಕ್ಕಾಗಿ ಅವರಿಗೆ ನಿರೀಕ್ಷೆಯನ್ನು ಕೊಟ್ಟನು. ಅವರು ಸಭೆಯ ಸದಸ್ಯರಾಗಿ ಅನುಭವಿಸಿದ್ದ ಆಶೀರ್ವಾದಗಳನ್ನು, ಆರಾಧನ ಕೂಟಗಳಲ್ಲಿ ಸಿಕ್ಕ ಆನಂದವನ್ನು, ಪಾರ್ಥನಾ ಕೂಟದಲ್ಲಿ ಸಿಕ್ಕ ಆಧರಣೆಯನ್ನು, ಇತರೆ ವಿಶ್ವಾಸಿಗಳ ಬೆಂಬಲ ಮತ್ತು ಸ್ನೇಹವನ್ನು, ಅವರ ಕುಟುಂಬ ಮತ್ತು ಮಕ್ಕಳ ಮೇಲೆ ದೇವರು ಸುರಿಸಿದ ಆಶೀರ್ವಾದಗಳನ್ನು ನಾವು ಅವರಿಗೆ ನೆನಪಿಸಬೇಕು.

ನಂತರ ದೇವರಿಂದಲೂ ಹಾಗೂ ಇತರೆ ವಿಶ್ವಾಸಿಗಳಿಂದಲೂ ದೂರವಿರುವ ಜೀವನದ ಪರಿಣಾಮಗಳನ್ನು ಅವರು ಕಾಣುವಂತೆ ಅವರಿಗೆ ಸಹಾಯ ಮಾಡಬೇಕು. ಅವರು ದೇವರ ಶಾಂತಿಯನ್ನು, ಆತನ ಒಳ್ಳೆಯತನವನ್ನು ಮತ್ತು ಆತನ ಮಾರ್ಗದರ್ಶನವನ್ನು ರುಚಿಸಿದ ನಂತರ ಆತನಿಲ್ಲದೇ ಹೇಗೆ ಬದುಕಲು ಸಾಧ್ಯ? ಆತನಿಲ್ಲದ ಜೀವನ ಹೇಗಿರಬಹುದು? ಅವರು ಸಭೆಯ ಆರಾಧನೆಗಳಲ್ಲಿ

ಪ್ರಾರ್ಥನಾ ಕೂಟಗಳಲ್ಲಿ ಪಡೆದ ಅನ್ಯೋನ್ಯತೆಯ ಆನಂದವನ್ನು ಅನುಭವಿಸಿದ ನಂತರ ಇತರೆ ವಿಶ್ವಾಸಿಗಳ ಅನ್ಯೋನ್ಯತೆಯಿಲ್ಲದ ಜೀವನ ಹೇಗಿರಬಹುದು? ದೇವರ ವಾಕ್ಯದ ನಿಧಿಯನ್ನು ಕಂಡುಕೊಂಡು ಪ್ರಶಂಸಿಸಿದ ನಂತರ ಒಳ್ಳೆಯ ಪ್ರಸಂಗಗಳಿಲ್ಲದೆ ಮತ್ತು ಸತ್ಯವೇದದ ಅಧ್ಯಯನಗಳ ಮೂಲಕ ಸಿಗುವ ಆತ್ಮೀಕ ಆಹಾರವಿಲ್ಲದೆ ಜೀವನ ಹೇಗಿರಬಹುದು?

ಹಾಗಾಗಿ ಅವರು ಇತರೇ ವಿಶ್ವಾಸಿಗಳ ಅನ್ಯೋನ್ಯತೆಯನ್ನು ಅನುಭವಿಸುವಂತೆ ಹಾಗೂ ಕ್ರಮವಾಗಿ ಆತ್ಮೀಕ ಆಹಾರವನ್ನು ಪಡೆದುಕೊಳ್ಳುವಂತೆ ಒಂದು ಹೊಸ ಸಭೆಯನ್ನು ಕಂಡುಕೊಳ್ಳಲು ನಾವು ಅವರಿಗೆ ಸಹಾಯ ಮಾಡಬೇಕು.

ಅಂತಿಮವಾಗಿ, ಕ್ರೈಸ್ತ ವಿಶ್ವಾಸಿಗಳಾಗಿ ನಾವು ಒಂದು ಅಪರಿಪೂರ್ಣವಾದ ಜಗತ್ತಿನಲ್ಲಿ ಜೀವಿಸುತ್ತಿದ್ದೇವೆಂಬುದನ್ನು ಅವರು ಅರಿತುಕೊಳ್ಳುವಂತೆ ನಾವು ಅವರಿಗೆ ಸಹಾಯ ಮಾಡಬೇಕು. ನಾವಿರುವಂತಹ ಜಗತ್ತಿನಲ್ಲಿ ಸಭಾಪಾಲಕರುಗಳಿಗೂ ಸಹ – ಅಧಿಕಾರ, ಹಣ ಮತ್ತು ಹೆಣ್ಣಿನ ಶೋಧನೆಯುಂಟಾಗುತ್ತದೆ. ಅವರಲ್ಲಿ ಕೆಲವರು ತಮ್ಮ ಸಭಾಪಾಲಕರುಗಳು ಬಿದ್ದಂತೆಯೇ ತಾವು ಸಹ ಬಿದ್ದು ಹೋಗಬಹುದು. ಆದರೆ ತನ್ನ ಜನರು ಶೋಧನೆ ಹಾಗೂ ಕಷ್ಟಗಳ ನಡುವೆಯು ಸಹ ತನಗೆ ನಂಬಿಗಸ್ಥರಾಗಿರಬೇಕೆಂದು ದೇವರು ಅಪೇಕ್ಷಿಸುತ್ತಾನೆ. ಅವರ ಸಭೆಯಲ್ಲಿ ನಡೆದ ಸಂಗತಿಯು ಆ ಸಭೆಯ ಜೀವನದಲ್ಲಿ ಹಾಗೂ ಸಭಾಪಾಲಕರ ಜೀವನದಲ್ಲಿ ಉಂಟಾದ ಒಂದು ಭಯಂಕರವಾದ ಸೋಲಾಗಿದೆ. ಆದರೆ ಸೈತಾನನು ಆ ಸೋಲನ್ನು ಊಪಯೋಗಿಸಿಕೊಂಡು ವಿಶ್ವಾಸಿಗಳೆಲ್ಲರನ್ನು ಬೀಳಿಸದಂತೆ ಅವರು ನೋಡಿಕೊಳ್ಳಬೇಕು. ಬದಲಾಗಿ ದೇವರು ಆ ಸೋಲನ್ನು ಉಪಯೋಗಿಸಿಕೊಂಡು ವಿಶ್ವಾಸಿಗಳನ್ನು ಬಲಪಡಿಸುವಂತೆ ಹಾಗೂ ಅವರ ಆತ್ಮೀಕ ಜೀವಿತಗಳಲ್ಲಿ ಅವರನ್ನು ಬೆಳೆಸುವಂತೆ ದೇವರನ್ನು ಅನುಮತಿಸಬೇಕು.

## ಅವಲೋಕನ

ಈ ಅಧ್ಯಯನವು ನಿಮ್ಮಲ್ಲಿ ಕೆಲವರಿಗೆ ಕಷ್ಟವೆನಿಸಿರಬಹುದು. ಕೆಲವೊಮ್ಮೆ ನೀವು ಗೊಂದಲಕ್ಕೂ ಸಹ ಒಳಗಾಗಿರಬಹುದು. ಆದರೆ ಇಂದು ಅನೇಕ ಕ್ರೈಸ್ತ ವಿಶ್ವಾಸಿಗಳು ಕೆಲವೊಮ್ಮೆ ನಂಬುವ "ಅಂತ್ಯದ" ಹಾಗೂ ದೇವರ ರಾಜ್ಯದ ಕುರಿತಾದ ಯೆಹೂದ್ಯ ದೃಷ್ಟಿಕೋನದಲ್ಲಿರುವ ಬಲಹೀನತೆಗಳನ್ನು ನೀವು ಅರಿತುಕೊಂಡಿರಬಹುದೆಂದು ನಾನು ಯತಾರ್ಥವಾಗಿ ನಿರೀಕ್ಷಿಸುತ್ತೇನೆ. ಈ ದೃಷ್ಟಿಕೋನವು ಅನೇಕ ಸತ್ಯವನ್ನು ಒಳಗೊಂಡಿದ್ದರೂ ಸಂಪೂರ್ಣ ಸತ್ಯವನ್ನು ಒಳಗೊಂಡಿಲ್ಲ. ಆದ್ದರಿಂದಲೇ ನಾನು ಅದನ್ನು "ತಪ್ಪಾದ" ದೃಷ್ಟಿಕೋನ ಎಂದು ಕರೆಯುತ್ತೇನೆ.

ಹಾಗಾದರೆ ಈಗ ನೀವು ದೇವರ ರಾಜ್ಯದ "ಸರಿಯಾದ" ದೃಷ್ಟಿಕೋನವನ್ನು, ಅಂದರೆ ಹೊಸ ಒಡಂಬಡಿಕೆಯಲ್ಲಿ ಕಾಣುವ ದೃಷ್ಟಿಕೋನವನ್ನು ನಮ್ಮ ಮುಂದಿನ ಅಧ್ಯಯನದಲ್ಲಿ ಕಲಿಯಲು ಉತ್ಸುಕರಾಗಿದ್ದಿರೆಂದು ನೆನೆಸುತ್ತೇನೆ.

# ಉತ್ತರಗಳು 3: ದೇವರ ರಾಜ್ಯದ ಒಂದು ಸರಿಯಾದ ದೃಷ್ಟಿಕೋನ

## ಶಿಕ್ಷಕರಿಗಾಗಿ

ನೀವು ವಿದ್ಯಾರ್ಥಿಗಳಿಗೆ ಈ ಅಧ್ಯಾಯನವನ್ನು ಕಲಿಸಲು ಕನಿಷ್ಠಪಕ್ಷ ಎರಡು ತಾಸುಗಳು ಬೇಕಾಗಬಹುದು. ಆದರೆ ಅವಸರ ಮಾಡಬೇಡಿರಿ. ಎಲ್ಲಾ ವಿದ್ಯಾರ್ಥಿಗಳು ಅಂತ್ಯಕಾಲದ ಮತ್ತು ದೇವರ ರಾಜ್ಯದ ಮುಖ್ಯ ಅಂಶಗಳನ್ನು ಕಲಿತುಕೊಂಡಿದ್ದಾರೆಂದು ಖಚಿತಪಡಿಸಿಕೊಳ್ಳಿರಿ.

ಅಧ್ಯಯನದಲ್ಲಿರುವ ಚಿತ್ರಣವು ತುಂಬಾ ಸರಳವಾಗಿದೆ. ಯಾಕೆಂದರೆ ಅದನ್ನು ಒಂದು ವೇಳೆ ವಿವರವಾಗಿ ಮಾಡಿದ್ದರೆ ಅದನ್ನು ಅರ್ಥಮಾಡಿಕೊಳ್ಳಲು ಕಷ್ಟಕರವಾಗಿರುತ್ತಿತ್ತು. ನಾನು ಅದರ ಕುರಿತು ನೀಡಿರುವ ಪಠ್ಯವು ಅದನ್ನು ವಿವರಿಸುತ್ತದೆ. ಮತ್ತು ಕ್ರಮೇಣವಾಗಿ ದೇವರ ರಾಜ್ಯದ ಬಂದಿರುವ ಮತ್ತು ಮುಂದೆ ಬರಲಿರುವ ದೃಷ್ಟಿಕೋನದ ಕುರಿತು ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳಲು ಬೇಕಾದ ಮಾಹಿತಿಯನ್ನು ಸೇರಿಸುತ್ತದೆ. ನೀವು ಈ ಚಿತ್ರದ ಕುರಿತು ಮತ್ತು ನನ್ನ ವಿವರಣೆಯ ಕುರಿತು ಸಾಕಷ್ಟು ಸಮಯವನ್ನು ಕಳೆಯುವುದು ಪ್ರಾಮುಖ್ಯವಾದದ್ದು. ಯಾಕೆಂದರೆ ಪ್ರತಿಯೊಬ್ಬ ವಿದ್ಯಾರ್ಥಿಯು ದೇವರ ರಾಜ್ಯದ ಒಂದು ಸರಿಯಾದ ದೃಷ್ಟಿಕೋನವನ್ನು ಹೊಂದಿಕೊಳ್ಳುವಂತಾಗಬೇಕು. ಮೊದಲ 9 ಪ್ರಶ್ನೆಗಳು ನೀವು ಅದನ್ನು ಸಾಧಿಸುವಂತೆ ನಿಮಗೆ ಸಹಾಯಕರವಾಗಬಹುದು.

ನೀವು ಈ ರೀತಿಯಾಗಿ ಆ ಪ್ರಶ್ನೆಗಳನ್ನು ಚರ್ಚಿಸಬೇಕೆಂಬುದು ನನ್ನ ಸಲಹೆಯಾಗಿದೆ:

1) ವಿದ್ಯಾರ್ಥಿಗಳು 1–9 ಪ್ರಶ್ನೆಗಳನ್ನು ಗುಂಪುಗಳಲ್ಲಿ ಚರ್ಚಿಸಲಿ. ಈ ಎಲ್ಲಾ ಪ್ರಶ್ನೆಗಳು ಅಧ್ಯಯನದಲ್ಲಿರುವ ಚಿತ್ರದ ಹಾಗೂ ಅದನ್ನು ವಿವರಿಸುವ ಪಠ್ಯದ ಮೇಲೆ ಆಧಾರಿತವಾಗಿವೆ. ಅವರ ಉತ್ತರಗಳನ್ನು ನೋಡಿರಿ. ಪ್ರತಿಯೊಬ್ಬರೂ ಉತ್ತರಗಳನ್ನು ಅರ್ಥಮಾಡಿಕೊಂಡಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಿರಿ.

2) ಪ್ರಶ್ನೆ 10 ನ್ನು ನೀವು ವಿದ್ಯಾರ್ಥಿಗಳೊಂದಿಗೆ ಚರ್ಚಿಸಿರಿ. ಪ್ರತಿಯೊಬ್ಬರೂ ಪ್ರಶ್ನೆಯನ್ನು ಮತ್ತು ಉತ್ತರವನ್ನು ಅರ್ಥಮಾಡಿಕೊಂಡಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಿರಿ.

3) ವಿದ್ಯಾರ್ಥಿಗಳು 11–14 ಪ್ರಶ್ನೆಗಳನ್ನು ಗುಂಪುಗಳಲ್ಲಿ ಚರ್ಚಿಸಲಿ. ಅವರ ಉತ್ತರಗಳನ್ನು ನೋಡಿರಿ. ಪ್ರತಿಯೊಬ್ಬರೂ ಉತ್ತರಗಳನ್ನು ಅರ್ಥಮಾಡಿಕೊಂಡಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಿರಿ. ಈ ಪ್ರಶ್ನೆಗಳನ್ನು ತರಗತಿಯಲ್ಲಾಗಲಿ ಅಥವಾ ಗ್ರಂಥಾಲಯದ / ಮನೆಗೆಲಸದ ಸಮಯದಲ್ಲಿ ಮಾಡಬಹುದು.

4) ಪ್ರಶ್ನೆ 15 ಅಧಿಕವಾದ ಪ್ರಶ್ನೆಯಾಗಿದೆ ಮತ್ತು ಇದನ್ನು ಪ್ರಭುದ್ಧ ವಿದ್ಯಾರ್ಥಿಗಳೊಂದಿಗೆ (ಅವರಿಗೆ ಸಮಯವಿರುವುದಾದರೆ) ಮಾತ್ರ ಚರ್ಚಿಸಿರಿ. ಅದನ್ನು ವೈಯಕ್ತಿಕವಾಗಿ ಅಥವಾ ಗುಂಪಾಗಿ ಮಾಡಬಹುದು. ವಿದ್ಯಾರ್ಥಿಗಳು ತಾವು ಕಲಿತಂತಹ ಸಂಗತಿಗಳನ್ನು ನಿಜ ಜೀವನದಲ್ಲಿ ಅಳವಡಿಸಿಕೊಳ್ಳಲು ನೀವು ಅವಕಾಶ ಕಲ್ಪಿಸಿಕೊಡುವುದಾದರೆ ಅತ್ಯುತ್ತಮವಾಗಿರುವುದು.

## ಉತ್ತರಗಳು

1. ಎರಡು ಚಿತ್ರಗಳ ನಡುವೆ ಇರುವ ಮುಖ್ಯ ವ್ಯತ್ಯಾಸವು ಅಂತ್ಯದ ಕುರಿತಾಗಿದೆ. ಯೇಸುವಿನ ಕಾಲದ ಯೆಹೂದ್ಯರು ಈಗಿನ ಯುಗದ ಅಂತ್ಯವು ಒಂದೇ ಹಂತದಲ್ಲಿ ಬರುವುದೆಂದು ನಂಬಿದ್ದರು (ಅಧ್ಯಯನ 2 ರಲ್ಲಿರುವ ಚಿತ್ರ). ಆದರೆ ಅಂತ್ಯವು ಎರಡು ಹಂತಗಳಲ್ಲಿ ಬರುತ್ತದೆ ಎಂದು ಹೊಸ ಒಡಂಬಡಿಕೆಯು ನಮಗೆ ಬೋಧಿಸುತ್ತದೆ (ಈ ಅಧ್ಯಯನದಲ್ಲಿರುವ ಚಿತ್ರ).
2. ಈಗಿನ ಯುಗವನ್ನು ಸೂಚಿಸುವ ಗೆರೆಯು ಉದ್ದವಾದ ಗೆರೆಯಿಂದ (ಅಂದರೆ ಅದು ಸಹಜ ಸ್ಥಿತಿಯನ್ನು ಬಿಂಬಿಸುತ್ತದೆ) ಚಿಕ್ಕ ಚಿಕ್ಕ ಗೆರೆಗೆ (ಅಂದರೆ ಅದು ಬಲಹೀನವಾದ ಅಥವಾ ನಾಶವಾಗುತ್ತಿರುವ ಸ್ಥಿತಿಯನು ಸೂಚಿಸುತ್ತದೆ) ಬದಲಾಗುತ್ತದೆ. ಈ ಬದಲಾವಣೆಯು ಅಂತ್ಯದ ಪ್ರಾರಂಭದಲ್ಲಿ, ಅಂದರೆ ಯೇಸುವಿನ ಸೇವೆ, ಹಿಂಸೆ ಮತ್ತು ಮರಣದೊಂದಿಗೆ, ಪುನರುತ್ಥಾನ ಮತ್ತು ಮಹಿಮಾಕರಣದೊಂದಿಗೆ ಮತ್ತು ಪವಿತ್ರಾತ್ಮನ ಸುರಿಸಲ್ಪಡುವಿಕೆಯೊಂದಿಗೆ ಸಂಭವಿಸಿತು.
3. ಈಗಿನ ಯುಗವನ್ನು ಸೂಚಿಸಲು ಬಳಸಲಾಗಿರುವ ಇನ್ನೂ ಎರಡು ಪದಗಳು ಯಾವವೆಂದರೆ, “ಸೈತಾನನ ಸಮಯ” ಮತ್ತು “ಶರೀರಭಾವದ ಸಮಯ”.

4. ಬರಲಿರುವ ಯುಗವನ್ನು ಸೂಚಿಸುವ ರೇಖೆಯು ಚಿಕ್ಕ ಚಿಕ್ಕ ಗೆರೆಗಳಿಂದ (ಅಂದರೆ ಅದು ಕಾಲಗಳ ನಡುವಿನ ಸಮಯವನ್ನು ಸೂಚಿಸುತ್ತದೆ) ಪ್ರಾರಂಭಿಸುತ್ತದೆ. ಈ ಗೆರೆಯು ಬಿಂಬಿಸುವುದೇನೆಂದರೆ, ದೇವರ ರಾಜ್ಯವು (ಅಥವಾ ಬರಲಿರುವ ಯುಗವು) ಯೇಸುವಿನೊಂದಿಗೆ ಆಗಮಿಸಿದ್ದರೂ ಅದು ಪೂರ್ಣ ಬಲದಿಂದ ಅದು ಆಗಮಿಸಿಲ್ಲ. ಈ ಚಿಕ್ಕ ಚಿಕ್ಕ ಗೆರೆಗಳು ನಂತರ ಉದ್ದವಾದ ಗೆರೆಯಾಗಿ ಬದಲಾಗುತ್ತದೆ. ಆಗ ಅಂತ್ಯವು ಯೇಸುವಿನ ಎರಡನೇಯ ಬರೋಣದಲ್ಲಿ ನೆರವೇರುತ್ತದೆ. ಈ ಉದ್ದವಾದ ಗೆರೆಯು ದೇವರ ರಾಜ್ಯವು ಪೂರ್ಣಬಲದಿಂದ ಬಂದಿದೆ ಎಂದು ಸೂಚಿಸುತ್ತದೆ.

5. ಎಡಗಡೆಯಲ್ಲಿರುವ ನೇರವಾದ ಗೆರೆಯು ಅಂತ್ಯದ ಪ್ರಾರಂಭವನ್ನು ಸೂಚಿಸುತ್ತದೆ. ಇದನ್ನು ಸೂಚಿಸಲು ಬಳಸಬಹುದಾದ ಇತರೇ ಎರಡು ಪದಗಳಾವವೆಂದರೆ, "ಯೇಸುವಿನ ಮೊದಲನೇಯ ಬರೋಣ" ಮತ್ತು "ಯೇಸುವಿನೊಂದಿಗೆ ಸ್ಪಷ್ಟವಾದ ರೀತಿಯಲ್ಲಿ ಬಂದ ದೇವರ ರಾಜ್ಯದ ಪ್ರಾರಂಭ".

6. ಬಲಗಡೆಯಲ್ಲಿರುವ ನೇರವಾದ ಗೆರೆಯು ಅಂತ್ಯದ ನೆರವೇರುವಿಕೆಯನ್ನು ಸೂಚಿಸುತ್ತದೆ. ಇದನ್ನು ಸೂಚಿಸಲು ಬಳಸಬಹುದಾದ ಇತರೇ ಎರಡು ಪದಗಳಾವವೆಂದರೆ, "ಯೇಸುವಿನ ಎರಡನೇಯ ಬರೋಣ" ಮತ್ತು "ಪೂರ್ಣ ಬಲದಲ್ಲಿ ದೇವರ ರಾಜ್ಯದ ಬರುವಿಕೆ".

7. ವಿಶ್ವಾಸಿಗಳಾದ ನಾವು ನಾಲ್ಕು ಗೊಡೆಗಳ ಮಧ್ಯೆ ನಿಂತುಕೊಂಡಿದ್ದೇವೆ ಎಂಬ ಹೇಳಿಕೆಯನ್ನು ಹೀಗೆ ವಿವರಿಸಬಹುದು: ಇಹಲೋಕದಲ್ಲಿ ಜೀವಿಸುತ್ತಿರುವ ವಿಶ್ವಾಸಿಗಳು ಒಂದು ರೂಪಕ ಅಲಂಕಾರವಾದ ನಾಲ್ಕು ಗೋಡೆಗಳುಳ್ಳ ಚೌಕಟ್ಟಿನಲ್ಲಿ ವಾಸಿಸುತ್ತಿದ್ದಾರೆ. ನಮ್ಮ ಹಿಂದೆ ಯೇಸುವಿನ ಮೊದಲನೇಯ ಬರೋಣಕ್ಕೆ ಸಂಬಂಧಿಸಿದ ಐತಿಹಾಸಿಕ ಘಟನೆಗಳಿವೆ. ನಮ್ಮ ಮುಂದೆ ಯೇಸುವಿನ ಎರಡನೇಯ ಬರೋಣಕ್ಕೆ ಸಂಬಂಧಿಸಿದ ಐತಿಹಾಸಿಕ ಘಟನೆಗಳಿವೆ. ನಮ್ಮ ಕೆಳಗೆ ಈ ದುಷ್ಟ ಜಗತ್ತಿನ ನಕರಾತ್ಮಕವಾದ ಆತ್ಮೀಕ ಶಕ್ತಿಗಳಿವೆ. ನಮ್ಮ ಮೇಲೆ ದೇವರ ರಾಜ್ಯದ ಸಕರಾತ್ಮಕವಾದ ಆತ್ಮೀಕ ಶಕ್ತಿಗಳಿವೆ.

   ಈ ಚೌಕಟ್ಟಿನ ನಾಲ್ಕು ಬದಿಗಳು ಒಂದಕ್ಕೊಂದು ಸಂಬಂಧಿಸಿವೆ. ಈ (ಸೈತಾನನು ಪ್ರತಿನಿಧಿಸುವ) ದುಷ್ಟ ಜಗತ್ತಿನ ಆತ್ಮೀಕ ಶಕ್ತಿಗಳು ಯೇಸುವಿನ ಮೊದಲನೇಯ ಬರೋಣಕ್ಕೆ ಸಂಬಂಧಿಸಿದ ಐತಿಹಾಸಿಕ ಘಟನೆಗಳ ಸಮಯದಲ್ಲಿ ಮಾರಣಾಂತಿಕ ಹಲ್ಲೆಯನ್ನು ಅನುಭವಿಸಿದವು. ಯೇಸುವಿನ ಎರಡನೇಯ ಬರೋಣಕ್ಕೆ ಸಂಬಂಧಿಸಿದ ಐತಿಹಾಸಿಕ ಘಟನೆಗಳ ಸಮಯದಲ್ಲಿ ಅವುಗಳು ಸಂಪೂರ್ಣವಾಗಿ ನಾಶವಾಗುವವು. ದೇವರ ರಾಜ್ಯದ ಆತ್ಮೀಕ ಶಕ್ತಿಗಳು ಮಾನವನ ಅಸ್ಥಿತ್ವವನ್ನು ಒಂದು ಹೊಸದಾದ ರೀತಿಯಲ್ಲಿ ಯೇಸುವಿನ ಮೊದಲನೇಯ ಬರೋಣಕ್ಕೆ ಸಂಬಂಧಿಸಿದ ಐತಿಹಾಸಿಕ ಘಟನೆಗಳ ಸಮಯದಲ್ಲಿ ಪ್ರವೇಶಿಸಿದವು. ಮತ್ತು ಯೇಸುವಿನ ಎರಡನೇಯ ಬರೋಣಕ್ಕೆ ಸಂಬಂಧಿಸಿದ ಐತಿಹಾಸಿಕ ಘಟನೆಗಳ ಸಮಯದಲ್ಲಿ ಅವುಗಳು ಮಾನವನ ಅಸ್ಥಿತ್ವವನ್ನು ಪೂರ್ಣ ಬಲದಿಂದ ಪ್ರವೇಶಿಸುವವು.

8. ನಾವು ಅಂತ್ಯ ದಿನಗಳಲ್ಲಿ ಜೀವಿಸುತ್ತಿದ್ದೇವೆ ಎಂಬ ಹೇಳಿಕೆಯನ್ನು ನಾನು ಹೀಗೆ ವಿವರಿಸುತ್ತೇನೆ: ಯೇಸುವಿನ ಮೊದಲನೇಯ ಬರೋಣದೊಂದಿಗೆ ಅಂತ್ಯ ಕಾಲವು ಪ್ರಾರಂಭವಾಯಿತು. ಯೇಸುವಿನ ಎರಡನೇಯ ಬರೋಣದೊಂದಿಗೆ ಅಂತ್ಯಕಾಲವು ಅಂತ್ಯವಾಗುತ್ತದೆ. ಹಾಗಾಗಿ ನಾವು ಯೇಸುವಿನ ಮೋದಲನೆಯ ಮತ್ತು ಎರಡನೆಯ ಬರೋಣದ ನಡುವೆ ಅಂದರೆ ಅಂತ್ಯಕಾಲದಲ್ಲಿ (ಅಥವಾ ಯುಗಾಂತ್ಯದಲ್ಲಿ) ಜೀವಿಸುತ್ತಿದ್ದೇವೆ. ಇದು ಸುವಾರ್ತೆಯ ಕಾಲವಾಗಿದೆ. ಇದು ಸಭೆಯ ಮತ್ತು ಸಭೆ ಬೆಳವಣಿಗೆಯ ಕಾಲವಾಗಿದೆ. ಇದು ಸುವಾರ್ತಿಕರಣದ ಮತ್ತು ಸೇವಾ ಪ್ರಯಾಣದ ಕಾಲವಾಗಿದೆ. ಇದು ಇಹಲೋಕದಲ್ಲಿ ದೇವರ ರಾಜ್ಯವು ವಿಸ್ತಾರವಾಗುವ ಕಾಲವಾಗಿದೆ. ಇದು ಕೃಪೆಯ ಮತ್ತು ರಕ್ಷಣೆಯ ಕಾಲವಾಗಿದೆ. ಇಂದಿಗೂ ಸಹ ಜನರು ದೇವರ ಕಡೆಗೆ ತಿರುಗಿಕೊಂಡು ಆತನ ರಾಜ್ಯವನ್ನು ಪ್ರವೇಶಿಸಬಹುದಾದ ಕಾಲವಾಗಿವೆ. ಇದು *ನಾವೆಲ್ಲರೂ ಕ್ರಿಸ್ತನ ಪರಿಪೂರ್ಣತೆಯ ಮಟ್ಟವನ್ನು* ಮುಟ್ಟಲಿಕ್ಕಾಗುವಂತಹ ಆತ್ಮೀಕ ಬೆಳವಣಿಗೆಯ ಕಾಲವಾಗಿದೆ, ಎಫೆಸ 4:13.

9. ದೇವರ ರಾಜ್ಯದ ಕುರಿತಾದ ಈಗ ಬಂದಿದೆ – ಮತ್ತು ಮುಂದೆಯು ಬರಲಿದೆ ಎಂಬ ಹೇಳಿಕೆಯನ್ನು ಹೀಗೆ ವಿವರಿಸಬಹುದು: ದೇವರ ರಾಜ್ಯವು ಯೇಸುವಿನೊಂದಿಗೆ ಈಗಾಗಲೇ ಬಂದಿದೆ. ಆದಾಗ್ಯೂ ಅದು ಇನ್ನೂ ಪೂರ್ಣ ಬಲದಿಂದ ಮತ್ತು ಮಹಿಮೆಯಿಂದ ಬಂದಿಲ್ಲ (ಯೇಸುವಿನ ಎರಡನೆಯ ಬರೋಣದಲ್ಲಿ ಬರಲಿದೆ). ಹಾಗಾಗಿ ದೇವರ ರಾಜ್ಯವು ಈಗಾಗಲೇ ಮನುಷ್ಯರ ಮದ್ಯದಲ್ಲಿ ಬಂದಿದೆ. ಆದಾಗ್ಯೂ ಅದು ಇನ್ನೂ ನೆರವೇರಿಲ್ಲ.

10. ರೋಮ 5:1 ಮತ್ತು ಗಲಾತ್ಯ 5:5 ರಲ್ಲಿ ಪೌಲನು ನೀತಿ ಎಂದು ಬಳಸುವ ಪದದಲ್ಲಿ ಈಗ ಬಂದಿದೆ – ಮತ್ತು ಮುಂದೆಯು ಬರಲಿದೆ ಎಂಬ ದೃಷ್ಟಿಕೋನವನ್ನು ನಾವು ಹೀಗೆ ಕಾಣುತ್ತೇವೆ:

- ರೋಮ 5:1 ರಲ್ಲಿ ಪೌಲನು ವಿಶ್ವಾಸಿಗಳು ಈಗಾಗಲೇ ನಂಬಿಕೆಯಿಂದ ನೀತಿವಂತರಾಗಿದ್ದಾರೆ ಎಂದು ಹೇಳುತ್ತಾನೆ. ಹಾಗಾಗಿ ನಾವು ಇಲ್ಲಿ ನಮ್ಮ ನೀತಿನಿರ್ಣಯದ ಮತ್ತು ದೇವರ ರಾಜ್ಯದ "ಈಗಾಗಲೇ ಬಂದಿರುವ" ದೃಷ್ಟಿಕೋನವನ್ನು ಕಾಣುತ್ತೇವೆ. ನಾವು ಯೇಸುವನ್ನು ನಮ್ಮ ಸ್ವಂತ ರಕ್ಷಕನಾಗಿ ಸ್ವೀಕರಿಸಿದಾಗ ಇದು ಸಂಭವಿಸಿತು.

- ಗಲಾತ್ಯ 5:5 ರಲ್ಲಿ ಪೌಲನು ವಿಶ್ವಾಸಿಗಳು ನೀತಿವಂತಿಕೆಗಾಗಿ ಕಾಯುತ್ತಿದ್ದಾರೆ ಮತ್ತು ನಿರೀಕ್ಷಿಸುತ್ತಿದ್ದಾರೆ ಎಂದು ಹೇಳುತ್ತಾನೆ. ಹಾಗಾಗಿ ನಾವು ಇಲ್ಲಿ ನಮ್ಮ ನೀತಿವಂತಿಕೆಯ/ ನೀತಿ ನಿರ್ಣಯದ ಮತ್ತು ದೇವರ ರಾಜ್ಯದ "ಮುಂದೆ ಬರಲಿರುವ" ದೃಷ್ಟಿಕೋನವನ್ನು ಕಾಣುತ್ತೇವೆ. ಯೇಸು ಮಹಿಮೆಯಲ್ಲಿ ಹಿಂತಿರುಗಿ ಬರುವಾಗ ಇದು ಸಂಭವಿಸುವುದು.

11. ಎಫೆಸ 1:7 ಮತ್ತು 4:40 ರಲ್ಲಿ ಪೌಲನು ವಿಮೋಚನೆ (ಬಿಡುಗಡೆ – JV) ಎಂದು ಬಳಸುವ ಪದದಲ್ಲಿ ಈಗ ಬಂದಿದೆ ಮತ್ತು ಮುಂದೆಯೂ ಬರಲಿದೆ ಎಂಬ ದೃಷ್ಟಿಕೋನವನ್ನು ನಾವು ಹೀಗೆ ಕಾಣುತ್ತೇವೆ.

    - ಎಫೆಸ 1:7 ರಲ್ಲಿ ಪೌಲನು ವಿಶ್ವಾಸಿಗಳು ಈಗಾಗಲೇ ವಿಮೋಚಿಸಲ್ಪಟ್ಟಿದ್ದಾರೆ ಎಂದು ಹೇಳುತ್ತಾನೆ. ನಾವು ಯೇಸುವನ್ನು ನಮ್ಮ ಸ್ವಂತ ರಕ್ಷಕನಾಗಿ ಸ್ವೀಕರಿಸಿದಾಗ ಇದು ಸಂಭವಿಸಿತು. ಹಾಗಾಗಿ ನಾವು ಇಲ್ಲಿ ವಿಮೋಚನೆಯ ಮತ್ತು ದೇವರ ರಾಜ್ಯದ "ಈಗಾಗಲೇ ಬಂದಿರುವ" ದೃಷ್ಟಿಕೋನವನ್ನು ಕಾಣುತ್ತೇವೆ.

    - ಎಫೆಸ 4:40 ರಲ್ಲಿ ಪೌಲನು ವಿಶ್ವಾಸಿಗಳು ವಿಮೋಚನೆಯ ದಿನಕ್ಕಾಗಿ ಪವಿತ್ರಾತ್ಮನ ಮುದ್ರೆಯನ್ನು ಹೊಂದಿದ್ದಾರೆ ಎಂದು ತಿಳಿಸುತ್ತಾನೆ. ಈ ವಿಮೋಚನೆಯು ಯೇಸು ಹಿಂತಿರುಗಿ ಬರುವಾಗ ಸಂಭವಿಸುವುದು. ಹಾಗಾಗಿ ನಾವು ಇಲ್ಲಿ ವಿಮೋಚನೆಯ ಮತ್ತು ದೇವರ ರಾಜ್ಯದ "ಮುಂದೆ ಬರಲಿರುವ" ದೃಷ್ಟಿಕೋನವನ್ನು ಕಾಣುತ್ತೇವೆ.

12. ರೋಮ 8:15 ಮತ್ತು 8:23 ರಲ್ಲಿ ಪೌಲನು ಪುತ್ರರ ಆತ್ಮನನ್ನು ಮತ್ತು ಪುತ್ರರ ಪದವಿಯನ್ನು (ಮಗನ ಭಾವ ಮತ್ತು ಪುತ್ರರ ಪದವಿ – JV) ಎಂದು ಬಳಸುವ ಪದದಲ್ಲಿ ಈಗ ಬಂದಿದೆ – ಮತ್ತು ಮುಂದೆಯು ಬರಲಿದೆ ಎಂಬ ದೃಷ್ಟಿಕೋನವನ್ನು ನಾವು ಹೀಗೆ ಕಾಣುತ್ತೇವೆ.

    - ರೋಮ 8:15 ರಲ್ಲಿ ಪೌಲನು ವಿಶ್ವಾಸಿಗಳು ಈಗಾಗಲೇ ಮಗನ ಆತ್ಮನನ್ನು (ಅಥವಾ ಪುತ್ರರ ಪದವಿಯನ್ನು) ಹೊಂದಿದ್ದಾರೆ ಎಂದು ತಿಳಿಸುತ್ತಾನೆ. ನಾವು ಯೇಸುವಿನ ಮೂಲಕ ಸಿಗುವ ರಕ್ಷಣೆಯನ್ನು ಅಂಗೀಕರಿಸಿದಾಗ ದೇವರು ನಮ್ಮ ತಂದೆಯಾದ ಸಮಯದಲ್ಲಿ ಸಂಭವಿಸಿತು. ಹಾಗಾಗಿ ನಾವು ಇಲ್ಲಿ ನಮ್ಮ ಪುತ್ರತ್ವದ ಮತ್ತು ದೇವರ ರಾಜ್ಯದ "ಈಗಾಗಲೇ ಬಂದಿರುವ" ದೃಷ್ಟಿಕೋನವನ್ನು ಕಾಣುತ್ತೇವೆ.

    - ರೋಮ 8:23 ರಲ್ಲಿ ಪೌಲನು ವಿಶ್ವಾಸಿಗಳು ಪುತ್ರರ ಪದವಿಯನ್ನು ಪಡೆಯುವುದಕ್ಕಾಗಿ ಆತುರದಿಂದ ಎದುರುನೋಡುತ್ತಿದ್ದಾರೆ ಎಂದು ತಿಳಿಸುತ್ತಾನೆ. ನಾವು ಭವಿಷ್ಯದಲ್ಲಿ ನಡೆಯಲಿಕ್ಕಿರುವ ಘಟನೆಯನ್ನು ಎದುರುನೋಡುತ್ತಿದ್ದೇವೆ. ಹಾಗಾಗಿ ನಾವು ಇಲ್ಲಿ ನಮ್ಮ ಪುತ್ರತ್ವದ ಮತ್ತು ದೇವರ ರಾಜ್ಯದ "ಮುಂದೆ ಬರಲಿರುವ" ದೃಷ್ಟಿಕೋನವನ್ನು ಕಾಣುತ್ತೇವೆ.

13. ಈಗ ಬಂದಿದೆ ಮತ್ತು ಮುಂದೆಯೂ ಬರಲಿದೆ ಎಂಬ ದೃಷ್ಟಿಕೋನದಲ್ಲಿ ಯೇಸು ಮತ್ತಾಯ 12:22–28 ರಲ್ಲಿ "ದೇವರ ರಾಜ್ಯ" ಎಂಬ ಪದವನ್ನು ಬಳಸುತ್ತಾನೆ ಮತ್ತು ಮತ್ತಾಯ 25:31–34 ರಲ್ಲಿ "ರಾಜ್ಯ" ಎಂಬ ಪದವನ್ನು ಬಳಸುತ್ತಾನೆ. ಇವೆರಡರ ನಡುವಿನ ಹೋಲಿಕೆಯು ಹೀಗಿದೆ:

    - ಮತ್ತಾಯ 12:28 ರಲ್ಲಿ ಯೇಸು ಫರಿಸಾಯರಿಗೆ ಮತ್ತು ಆತನ ಸೇವೆಯ ಕುರಿತು ಅವರಿಗಿದ್ದ ತಿಳುವಳಿಕೆಗೆ ಸವಾಲನ್ನು ಹಾಕುತ್ತಾನೆ: *ನಾನು ದೇವರ ಆತ್ಮನಿಂದ ದೆವ್ವಗಳನ್ನು ಬಿಡಿಸುವುದಾದರೆ ದೇವರ ರಾಜ್ಯವು ನಿಮ್ಮ ಬಳಿಗೆ ಬಂದಿದೆಯಲ್ಲಾ!* ಹಾಗಾಗಿ ಯೇಸು ಒಬ್ಬ ದೆವ್ವಪೀಡಿತ ಮನುಷ್ಯನನ್ನು ದೇವರ ಆತ್ಮನ ಮೂಲಕ ಬಿಡುಗಡೆಗೊಳಿಸಿದ್ದರಿಂದ ದೇವರ ರಾಜ್ಯವು ಈಗಾಗಲೇ ಬಂದಿದೆ ಎಂದು ಘೋಷಿಸಿಕೊಳ್ಳುತ್ತಿದ್ದಾನೆ (ವ. 22). ಅದರ ಪರಿಣಾಮವಾಗಿ ದೇವರ ರಾಜ್ಯವು ತನ್ನ ಸೇವೆಯ ಮೂಲಕ ಬಂದಿತೆಂದು ಯೇಸು ಹೇಳಿದನು. ಇದು ದೇವರ ರಾಜ್ಯದ ಈಗಾಗಲೇ ಬಂದಿರುವ ದೃಷ್ಟಿಕೋನವಾಗಿದೆ.

    - ಮತ್ತಾಯ 24–25 ರಲ್ಲಿ ಯೇಸು ತನ್ನ ಶಿಷ್ಯರಿಗೆ ಲೋಕಾಂತ್ಯದಲ್ಲಿ ಏನಾಗುವುದೆಂಬುದರ ಕುರಿತು ಬೋಧಿಸುತ್ತಿದ್ದಾನೆ (ಮತ್ತಾಯ 24:3 ನ್ನು ನೋಡಿರಿ). ಕುರಿಗಳ ಮತ್ತು ಆಡುಗಳ ಕುರಿತಾದ ವಾಕ್ಯಭಾಗವು (25:33–46) ಯೇಸುವಿನ ಎರಡನೇ ಬರೋಣದ ಕುರಿತಾಗಿದೆ (*ಮನುಷ್ಯಪುತ್ರನು ತನ್ನ ಮಹಿಮೆಯಲ್ಲಿ* . . . ಬರುವಾಗ, ವ. 31). ನಂತರ ಅರಸನು ನೀತಿವಂತರಿಗೆ

ಹೀಗೆ ಹೇಳುವನು (ವ. 37 ನ್ನು ಹೋಲಿಸಿರಿ) *ನನ್ನ ತಂದೆಯಿಂದ ಆಶೀರ್ವಾದ ಹೊಂದಿದವರೇ, ಬನ್ನಿರಿ. ಭೂಲೋಕಕ್ಕೆ ಅಸ್ತಿವಾರ ಹಾಕಿದಂದಿನಿಂದ ನಿಮಗೋಸ್ಕರಸಿದ್ಧ ಮಾಡಿದ ರಾಜ್ಯವನ್ನು ಆಸ್ತಿಯನ್ನಾಗಿ ಹೊಂದಿರಿ,* ವ. 34. ಇದು ಭವಿಷ್ಯದಲ್ಲಿ ಸಂಭವಿಸುವುದರಿಂದ ನಾವು ಇಲ್ಲಿ ದೇವರ ರಾಜ್ಯದ ಮುಂದೆ ಬರಲಿರುವ ದೃಷ್ಟಿಕೋನವನ್ನು ಕಾಣುತ್ತೇವೆ.

14. ಮತ್ತಾಯ 13:24–33 ರಲ್ಲಿ ನಾವು ದೇವರ ರಾಜ್ಯದ ಕುರಿತು ಮೂರು ಸಾಮ್ಯಗಳನ್ನು ಕಾಣುತ್ತೇವೆ (ಅಲ್ಲಿ ಮತ್ತಾಯನು ಪರಲೋಕ ರಾಜ್ಯ ಎಂಬ ಸಮಾನಾರ್ಥ ಪದವನ್ನು ಬಳಸುತ್ತಾನೆ). ಚಿತ್ರಣದ "ಕಾಲಗಳ ನಡುವಿನ ಸಮಯ" ಎಂಬ ಭಾಗದಲ್ಲಿ ನಾವು ಈ ಸಾಮ್ಯಗಳನ್ನು ಸೇರಿಸಬಹುದು:

- ಕಳೆಯನ್ನು ಕುರಿತ ಸಾಮ್ಯವು (ವ 24–30) ಸುಗ್ಗಿಯ ದಿನದವರೆಗೂ ಗೋಧಿ ಮತ್ತು ಕಳೆಯು ಒಟ್ಟಾಗಿ ಬೆಳೆಯುವುದರ ಕುರಿತಾಗಿದೆ. ಪರಲೋಕ ರಾಜ್ಯವು ಇದೇ ರೀತಿಯಾಗಿದೆ ಎಂದು ಯೇಸು ಹೇಳಿದನು. ಹಾಗಾಗಿ ಇದು ಯೇಸುವಿನ ಮೊದಲನೇಯ ಮತ್ತು ಎರಡನೇಯ ಬರೋಣದ ನಡುವಿನ ಕಾಲವನ್ನು ಸೂಚಿಸುತ್ತದೆ. ಚಿತ್ರಣದಲ್ಲಿ ಇದನ್ನು ಕಾಲಗಳ ನಡುವಿನ ಸಮಯ ಎಂದು ಕರೆಯಲಾಗಿದೆ. ಯೇಸುವಿನ ಎರಡನೇಯ ಬರೋಣದ ನಂತರ ದೇವರ ರಾಜ್ಯವು ಪೂರ್ಣ ಬಲದಲ್ಲಿ ಬಂದಿರುವುದು. ಆ ಸಮಯದಲ್ಲಾಗಲೇ ಎಲ್ಲಾ "ಕಳೆಗಳು" ದೇವರ ನ್ಯಾಯತೀರ್ಪಿನಲ್ಲಿ ಸುಟ್ಟು ನಾಶವಾಗುವವು.

- ಸಾಸಿವೆ ಕಾಳಿನ ಸಾಮ್ಯವು (ವ 31–32) ಒಂದು ಚಿಕ್ಕ ಸಾಸಿವೆ ಕಾಳು ಮರವಾಗಿ ಬೆಳೆಯುವುದರ ಕುರಿತಾಗಿದೆ. ಪರಲೋಕ ರಾಜ್ಯವು ಇದೇ ರೀತಿಯಾಗಿದೆ ಎಂದು ಯೇಸು ಹೇಳಿದನು. ಹಾಗಾಗಿ ಇದು ಯೇಸುವಿನ ಮೊದಲನೇಯ ಮತ್ತು ಎರಡನೇಯ ಬರೋಣದ ನಡುವಿನ ಕಾಲವನ್ನು ಸೂಚಿಸುತ್ತದೆ. ಚಿತ್ರಣದಲ್ಲಿ ಇದನ್ನು ಕಾಲಗಳ ನಡುವಿನ ಸಮಯ ಎಂದು ಕರೆಯಲಾಗಿದೆ. ಯೇಸುವಿನ ಎರಡನೇಯ ಬರೋಣದ ನಂತರ ದೇವರ ರಾಜ್ಯವು ಪೂರ್ಣ ಬಲದಲ್ಲಿ ಬಂದಿರುವುದು. ಆಗ ದೇವರ ರಾಜ್ಯವು ಬೆಳೆಯುದು ಮತ್ತು ವಿಸ್ತಾರವಾಗುವುದು ನಿಂತು ಹೋಗುತ್ತದೆ.

- ಹುಳಿ ಹಿಟ್ಟಿನ ಸಾಮ್ಯವು (ವ 33) ಸ್ವಲ್ಪ ಹುಳಿಯು ಇಡೀ ಹಿಟ್ಟನೆಲ್ಲಾ ಹುಳಿ ಮಾಡುವಷ್ಟು ಶಕ್ತಿಯನ್ನು ಹೊಂದಿದೆ ಎಂಬುದರ ಕುರಿತಾಗಿದೆ. ಪರಲೋಕ ರಾಜ್ಯವು ಇದೇ ರೀತಿಯಾಗಿದೆ ಎಂದು ಯೇಸು ಹೇಳಿದನು. ಹಾಗಾಗಿ ಇದು ಯೇಸುವಿನ ಮೊದಲನೇಯ ಮತ್ತು ಎರಡನೇಯ ಬರೋಣದ ನಡುವಿನ ಕಾಲವನ್ನು ಸೂಚಿಸುತ್ತದೆ. ಚಿತ್ರಣದಲ್ಲಿ ಇದನ್ನು ಕಾಲಗಳ ನಡುವಿನ ಸಮಯ ಎಂದು ಕರೆಯಲಾಗಿದೆ. ಯೇಸುವಿನ ಎರಡನೇಯ ಬರೋಣದ ನಂತರ, ದೇವರ ರಾಜ್ಯವು ಪ್ರವೇಶಿಸಲು ಇಹಲೋಕವು (ಅಂದರೆ ಸಾಮ್ಯದಲ್ಲಿರುವ "ಹಿಟ್ಟು") ಇರುವುದಿಲ್ಲ.

## ಅವಲೋಕನ

ಯೇಸು ಕ್ರಿಸ್ತನನ್ನು ನಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿರುವ ನಾವು ಈಗಾಗಲೇ ನಮ್ಮ ಜೀವಿತಗಳಲ್ಲಿ ಭವಿಷ್ಯವನ್ನು ಪಡೆದುಕೊಂಡಿದ್ದೇವೆ. ಈ ಭವಿಷ್ಯವು ದೇವರ ರಾಜ್ಯವಾಗಿದೆ ಮತ್ತು ಯೇಸುವಿನಲ್ಲಿ ಅದು ಈಗಾಗಲೇ ನಮ್ಮ ಬಳಿ ಬಂದಿದೆ. ಆದಾಗ್ಯೂ ಅದು ತನ್ನ ಪೂರ್ಣ ಬಲದಿಂದ ಮತ್ತು ಮಹಿಮೆಯಿಂದ ನಮ್ಮ ಬಳಿಗೆ ಇನ್ನೂ ಬಂದಿಲ್ಲ. ಅದು ಯೇಸುವಿನ ಎರಡನೇ ಬರೋಣದೊಂದಿಗೆ ಮಾತ್ರ ಬರಲಿದೆ. ಆ ದಿನದಂದು ದೇವರು ಎಲ್ಲಾ ದುಷ್ಟತನವನ್ನು ಅನೀತಿಯನ್ನು ನಾಶ ಮಾಡುವನು ಮತ್ತು ತನ್ನ ನೂತನ ಭೂಮ್ಯಾಕಾಶದೊಂದಿಗೆ ಎಲ್ಲವನ್ನು ಹೊಸದಾಗಿ ಮಾಡುವನು.

ಆದರೆ ನಾವು ಈಗಾಗಲೇ ಈ ಮಹಿಮೆಯ, ಈ ನೀತಿವಂತಿಕೆಯ ಮತ್ತು ಈ ಹೊಸ ಜೀವನದ ಮುನ್‌ರುಚಿಯನ್ನು ಅನುಭವಿಸಿದ್ದೇವೆ. ನಮ್ಮ ಓಟವನ್ನು ಓಡಲು ಈ ಪೂರ್ವಾನುಭವವು ನಮಗೆ ಬಲವನ್ನು ಕೊಡುತ್ತದೆ. ನಮ್ಮ ರಕ್ಷಕನು ಒಡೆಯನು ಆದ ಯೇಸುವಿನ ಮೇಲೆ ನಮ್ಮ ದೃಷ್ಟಿಯನ್ನಿಡಲು ಅದು ನಮಗೆ ಸಹಾಯ ಮಾಡುತ್ತದೆ. ಭವಿಷ್ಯದ ಈ ಪೂರ್ವಾನುಭವವು ನಾವು ಸರಿಯಾದ ದಿಕ್ಕಿನಲ್ಲಿ – ಅಂದರೆ ನಮಗಾಗಿ ಕಾಯುತ್ತಿರುವ ನಮ್ಮ ಶಾಶ್ವತವಾದ ಸ್ವಾಸ್ಥ್ಯವಿರುವ ಭವಿಷ್ಯದೆಡೆಗೆ ಓಡುವಂತೆಯೂ ಸಹ ಪ್ರೋತ್ಸಾಹ ಮಾಡುತ್ತದೆ. ಇದೇ ವಿಶ್ವಾಸಿಯ ——————————————————————————————————————————————————————————

# ಉತ್ತರಗಳು 4: ಅರಸನಾದ ಯೇಸು

## ಶಿಕ್ಷಕರಿಗಾಗಿ

ಬಹುಶಃ ಈ ಅಧ್ಯಯನವನ್ನು ಮುಗಿಸಲು ಎರಡು ತಾಸುಗಳು ಬೇಕಾಗಬಹುದು.

ಈ ಅಧ್ಯಯನವು ಎರಡು ಭಾಗಗಳನ್ನು ಹೊಂದಿದೆ:

ಮೊದಲು, ದೇವರ ರಾಜ್ಯ ಎಂಬ ಪದವನ್ನು ಹೊಸ ಒಡಂಬಡಿಕೆಯು ಯಾವ ಅರ್ಥದಲ್ಲಿ ಬಳಸುತ್ತದೆ ಎಂಬುದರ ಕುರಿತು ಒಂದು ಅಂತಿಮ ನೋಟ. ಅಧ್ಯಯನದ **"ಪೀಠಿಕೆ"** ಎಂಬ ಭಾಗದಲ್ಲಿ ಅದನ್ನು ಕಾಣಬಹುದು. ಇದರ ಕುರಿತು ವಿದ್ಯಾರ್ಥಿಗಳಿಗಿರುವ ತಿಳುವಳಿಕೆಯನ್ನು ಮೊದಲ ಮೂರು ಪ್ರಶ್ನೆಗಳು ಅಭಿವೃದ್ಧಿಪಡಿಸುತ್ತವೆ.

ಎರಡನೇಯದು, ಯೇಸು ಅರಸನೆಂದು ವರ್ಣಿಸಲಾಗಿರುವ ಹೊಸ ಒಡಂಬಡಿಕೆಯ ಮೂರು ವಾಕ್ಯಭಾಗಗಳ ಜೋಡಿಗಳು. ಆತನ ರಾಜತ್ವದ ಗುಣ ಮತ್ತು ವಿಸ್ತೀರ್ಣವನ್ನು ಅರ್ಥಮಾಡಿಕೊಳ್ಳಲು ಪ್ರಶ್ನೆ 4–18 ಸಹಾಯಮಾಡುತ್ತವೆ.

ಹೊಸ ಒಡಂಬಡಿಕೆಯಲ್ಲಿ ಯೇಸುವಿನ ರಾಜತ್ವದ ಕುರಿತು ಹಾಗೂ ದೇವರ ರಾಜ್ಯದ ಕುರಿತು ಹೇಳಬಹುದಾದ ಇನ್ನೂ ಅನೇಕ ಅಂಶಗಳಿವೆ ಎಂಬುದನ್ನು ಸ್ವತಃ ನೀವು ಮತ್ತು ನಿಮ್ಮ ವಿದ್ಯಾರ್ಥಿಗಳು ಅರಿತುಕೊಳ್ಳುವುದು ಪ್ರಾಮುಖ್ಯವಾಗಿದೆ. ಆದರೆ ಈ ನಾಲ್ಕನೇಯ ಅಧ್ಯಯನವು ಮತ್ತು ಈ ಪಠ್ಯಪುಸ್ತಕದ ಮೊದಲ ಭಾಗವು ಪೂರ್ಣಗೊಳ್ಳುತ್ತಿದ್ದಂತೆ ದೇವರ ರಾಜ್ಯದ ಕುರಿತು ನಿಮ್ಮ ವಿದ್ಯಾರ್ಥಿಗಳು ಒಂದು ಸತ್ಯವೇದಾನುಸಾರವಾದ ಸ್ವಸ್ಥ ತಿಳುವಳಿಕೆಯನ್ನು ಹೊಂದಿಕೊಂಡಿರಬೇಕು.

ಈ ಪಠ್ಯಪುಸ್ತಕದ ಎರಡನೇಯ ಭಾಗದಲ್ಲಿ (**ದೇವರ ರಾಜ್ಯದ ಕುರಿತು ಹೆಚ್ಚಿನ ವಿಷಯಗಳು**) ದೇವರ ರಾಜ್ಯದ ಕುರಿತಾದ ಇನ್ನೂ ಹೆಚ್ಚಿನ ದೃಷ್ಟಿಕೋನಗಳನ್ನು ಕಾಣಬಹುದು. ನಿಮಗೆ ಸಮಯದ ಅಭಾವವಿರುವುದಾದರೆ ಅದರ ಕೆಲವು ಅಧ್ಯಯನಗಳನ್ನು ಅಥವಾ ಎಲ್ಲಾ ಅಧ್ಯಯನಗಳನ್ನು ಬಿಟ್ಟು ನೇರವಾಗಿ ಈ ಪಠ್ಯಪುಸ್ತಕದ ಮೂರನೇಯ ಭಾಗಕ್ಕೆ (**ದೇವರ ರಾಜ್ಯದಂತೆ ಜೀವಿಸುವುದು**) ಹೋಗಬಹುದು.

ನೀವು ಪ್ರಶ್ನೆಗಳನ್ನು ಹೀಗೆ ಬಳಸಬೇಕೆಂಬುದು ನನ್ನ ಸಲಹೆಯಾಗಿದೆ:

## ಉತ್ತರಗಳು

1. ದೇವರ ರಾಜ್ಯ ಮತ್ತು ಕ್ರಿಸ್ತನ ರಾಜ್ಯ ಎಂಬ ಹೇಳಿಕೆಗಳನ್ನು ಹೊಸ ಒಡಂಬಡಿಕೆಯಲ್ಲಿ ಒಂದರಿಂದ ಮತ್ತೊಂದನ್ನು ಬೇರ್ಪಡಿಸಲಾಗದ ಸಂಗತಿಯಾಗಿದೆ. ಅವೆರಡು ಹೇಳಿಕೆಗಳು ಒಂದೇ ಸತ್ಯದ ಕುರಿತು ಉಲ್ಲೇಖಿಸುತ್ತದೆ – ಅದೇನೆಂದರೆ ತಂದೆಯಾದ ದೇವರ ಮತ್ತು ಮಗನಾದ ದೇವರ ಅಧಿಕಾರ ಮತ್ತು ಅಧಿಪತ್ಯ.

2. ರಾಜ್ಯ ಎಂಬ ಪದವು ಯಾಕೆ ಸುಲಭವಾಗಿ ತಪ್ಪು ತಿಳಿಯಲ್ಪಡುತ್ತದೆಂದರೆ ನಮ್ಮ ಆಧುನಿಕ ಭಾಷೆಗಳಲ್ಲಿ ಒಂದು ದೇಶವನ್ನು ಸೂಚಿಸಲು ಈ ಪದವನ್ನು ಬಳಸಲಾಗುತ್ತದೆ. ಆದರೆ ಹೊಸ ಒಡಂಬಡಿಕೆಯಲ್ಲಿ ಆ ಪದವು ಒಂದು ದೇಶವನ್ನು ಉಲ್ಲೇಖಿಸುವುದಿಲ್ಲ, ಬದಲಾಗಿ ಅಧಿಕಾರ ಮತ್ತು ಅಧಿಪತ್ಯವನ್ನು ಉಲ್ಲೇಖಿಸುತ್ತದೆ. ಹಾಗಾಗಿ ದೇವರ ರಾಜ್ಯ ಎಂದಾಗ ದೇವರು ಆಳುವ ಸ್ಥಳ ಅಥವಾ ದೇವರಿಗೆ ಅಧಿಕಾರ ಇರುವ ಸ್ಥಳ ಎಂದು ಅರ್ಥ ಮಾಡಿಕೊಳ್ಳಬೇಕು.

3. ಹೊಸ ಒಡಂಬಡಿಕೆಯಲ್ಲಿ ಬಳಸಲಾಗಿರುವ ದೇವರ ರಾಜ್ಯ ಎಂಬ ಹೇಳಿಕೆಯ ಮೂರು ವಿಷಯಾಂಶಗಳು ಹೀಗಿವೆ:

    1) ಸಾಮಾನ್ಯವಾದ ವಿಷಯಾಂಶ: ಅದು ಸಾಮಾನ್ಯವಾಗಿ ದೇವರ ಅಧಿಕಾರ ಮತ್ತು ಅಧಿಪತ್ಯವನ್ನು ಉಲ್ಲೇಖಿಸುತ್ತದೆ (ಸಮಯದ ಮೇಲೆ ಒತ್ತುಕೊಡುವುದಿಲ್ಲ).

    2) **"ಈಗ ಬಂದಿರುವ"** ವಿಷಯಾಂಶ: ದೇವರ ಅಧಿಕಾರ ಮತ್ತು ಅಧಿಪತ್ಯವು ಯೇಸುವಿನೊಂದಿಗೆ (ಅಂದರೆ ಆತನ ಸೇವೆ, ಹಿಂಸೆ ಮತ್ತು ಮರಣ, ಪುನರುತ್ಥಾನ ಮತ್ತು ಆರೋಹಣ, ಆತನಲ್ಲಿ ನಂಬಿಕೆ ಇಡುವವರಿಗೆ ಆತನು ಪವಿತ್ರಾತ್ಮನನ್ನು ಕಳುಹಿಸಿಕೊಟ್ಟದ್ದರೊಂದಿಗೆ) ಮಾನವ ಅಸ್ಥಿತ್ವವನ್ನು ಒಂದು ಹೊಸದಾದ ಮತ್ತು ಬಲವಾದ ರೀತಿಯಲ್ಲಿ ಪ್ರವೇಶಿಸಿದ್ದನ್ನು ಉಲ್ಲೇಖಿಸುತ್ತದೆ.

3) ಮುಂದೆ ಬರಲಿರುವ ವಿಷಯಾಂಶ: ಮಾನವ ಅಸ್ಥಿತ್ವದಲ್ಲಿರುವ ಈ ದೇವರ ಅಧಿಕಾರ ಮತ್ತು ಅಧಿಪತ್ಯವು ಇನ್ನೂ ಪರಿಪೂರ್ಣವಾಗಿಲ್ಲ. ಅದು ಯೇಸುವಿನ ಬರೋಣದೊಂದಿಗೆ, ದೇವರ ನ್ಯಾಯತೀರ್ಪಿನ ದಿನದೊಂದಿಗೆ ಮತ್ತು ದೇವರ ನೂತನ ಭೂಮ್ಯಾಕಾಶದೊಂದಿಗೆ ಪರಿಪೂರ್ಣವಾಗುವುದು.

4. ಯೋಹಾನ 6:14–15 ರಲ್ಲಿ ಯೇಸುವಿನ ಗುರುತಿನ ಕುರಿತು ಜನರಿಗಿದ್ದ ತಿಳುವಳಿಕೆಯು ಮತ್ತು ಇದಕ್ಕೆ ಯೇಸುವಿನ ಪ್ರತಿಕ್ರಿಯೆ ಹೀಗಿತ್ತು:

   ಯೇಸು 5000 ಜನರಿಗೆ ಆಹಾರಕೊಡುವ ಅದ್ಭುತವನ್ನು ("ಸೂಚಕಕಾರ್ಯವನ್ನು") ಮಾಡಿದ್ದನು, ಯೊಹಾನ 6:5–13. ಆಗ ಜನರು ಮೊಶೆಯಂತಹ ಪ್ರವಾದಿಯನ್ನು ಎಬ್ಬಿಸುವೆನೆಂಬ ಪ್ರವಾದನೆಯ ನೆರವೇರುವಿಕೆಯಾಗಿ ಯೇಸು ಒಬ್ಬ ಪ್ರವಾದಿಯಾಗಿದ್ದಿರಬಹುದೆಂದು ಆಲೋಚಿಸಿದರು (ದೇವರು ಮೊಶೆಯ ಮೂಲಕ ಅರಣ್ಯದಲ್ಲಿನ ಅಲೆದಾಟಗಳಲ್ಲಿ ಇಸ್ರಾಯೇಲರಿಗೆ ಆಹಾರವನ್ನು ಒದಗಿಸುವಂತೆ ಉಪಯೋಸಿದನು. *ನಿಮ್ಮ ಹಾಗಿರುವ ಪ್ರವಾದಿಯನ್ನು ಅವರ ಸಹೋದರರಲ್ಲಿಂದ ಅವರಿಗೆ ಎಬ್ಬಿಸುವೆನು, ನನ್ನ ವಾಕ್ಯಗಳನ್ನು ಅವನ ಬಾಯಲ್ಲಿ ಇಡುವೆನು ನಾನು ಅವನಿಗೆ ಅಜ್ಞಾಪಿಸುವುದನ್ನೆಲ್ಲಾ ಅವನು ಅವರಿಗೆ ಹೇಳುವನು* ಧರ್ಮೋ. 18:15 ಮತ್ತು 18.

   ಈಗ ಜನರು ತನ್ನನ್ನು ಅರಸನಾಗುವಂತೆ ಒತ್ತಾಯ ಮಾಡುವವರೆಂದು ಯೇಸು ಅರಿತುಕೊಂಡನು. ಮೆಸ್ಸಿಯನು ಒಬ್ಬ ಅರಸನಾಗಿರುವನು ಮತ್ತು ಆತನು ಒಂದು ಯೆಹೂದ್ಯ ರಾಜ್ಯವನ್ನು ಸ್ಥಾಪಿಸಿ ಯೆರೂಸಲೇಮಿನಿಂದ ಜನರನ್ನು ಆಳುವನೆಂದು ಯೆಹೂದ್ಯರು ನಿರೀಕ್ಷಿಸಿದ್ದರು ಎಂಬುದನ್ನು ಆತನು ತಿಳಿದಿದ್ದನು. ಆದರೆ ಆತನು ಸ್ಥಾಪಿಸಲು ಬಂದ ರಾಜತ್ವವು ಈ ರೀತಿಯದ್ದಾಗಿರಲಿಲ್ಲ. ಹಾಗಾಗಿ ಯೇಸು ಜನರಿಂದ ಮತ್ತು ಅವರ ಯೋಜನೆಗಳಿಂದ ತಪ್ಪಿಸಿಕೊಳ್ಳಲು ಬೆಟ್ಟಕ್ಕೆ ಹೋದನು.

5. ಯೇಸು ಅರಸನಂತೆ ಪ್ರವೇಶಿಸಿದ ಸಮಯದಲ್ಲಿ ಜನರ ಗುಂಪಿನಲ್ಲಿ ಉಂಟಾದ ನಿರೀಕ್ಷೆಗಳು ಏನಾಗಿದ್ದಿರಬಹುದೆಂದು ಅವರ ನಡುವಳಿಕೆಯಿಂದ ಸ್ಪಷ್ಟವಾಗುತ್ತದೆ:

   ಅವರು ಯೇಸುವನ್ನು ಒಬ್ಬ ಜಯಭರಿತ ಅರಸನನ್ನಾಗಿ ಕಂಡರು: ಅವರು ಖರ್ಜೂರದ ಗರಿಗಳನ್ನು ಬೀಸಿದರು, ಅದು ಶತ್ರುಗಳ ಮೇಲೆ ಸಿಕ್ಕ ಜಯದ ಸಂಕೇತವಾಗಿತ್ತು. ಹಾಗಾಗಿ ಯೇಸು ಯೆಹೂದ್ಯರ ರಾಜಕೀಯ ಶತ್ರುಗಳಾದ ರೋಮನ್ನರಿಂದ ಬಿಡಿಸಿ ತಮ್ಮ ರಾಜನಾಗುವನು ಎಂದು ಜನರು ಆಲೋಚಿಸಿದ್ದಿರಬಹುದು.

   ಅವರು ಒಂದು ಮೆಸ್ಸಿಯನ ಕುರಿತಾದ ಪಠ್ಯವನ್ನು ಉಲ್ಲೇಖಿಸಿದರು (ಕೀರ್ತನೆ 118:25–26) ಮತ್ತು ಅದಕ್ಕೆ *ಇಸ್ರಾಯೇಲಿನ ಅರಸನಿಗೆ ಶುಭವಾಗಲಿ* ಎಂಬ ಹೆಚ್ಚು ಪದಗಳನ್ನು ಸೇರಿಸಿದರು. ಹಾಗಾಗಿ ಮೆಸ್ಸಿಯನು ಒಬ್ಬ ಇಸ್ರಾಯೇಲ್ ಅರಸನಾಗಿರುವನೆಂದು ಅವರು ಸ್ಪಷ್ಟವಾಗಿ ನಿರೀಕ್ಷಿಸಿದ್ದರು.

6. ಯೇಸು ಅರಸನಂತೆ ಪ್ರವೇಶಿಸಿದ ಸಮಯದಲ್ಲಿ ಯೇಸುವಿನ ಕುರಿತು ಶಿಷ್ಯರಿಗಿದ್ದ ತಿಳುವಳಿಕೆಯು ಗೊಂದಲಮಯವಾಗಿದ್ದಿರಬಹುದು ಎಂದು ತೋರುತ್ತದೆ (ಯೋಹಾನ 12:12–16) ಅರಸನಾದ ದಾವೀದನ ರಾಜವಂಶದ ಸಾಲಿನಲ್ಲಿ ಮತ್ತು ರೂಪದಲ್ಲಿ ಒಬ್ಬ ಅರಸನು ಬರುವನೆಂದು ಜನರು ನಿರೀಕ್ಷಿಸಿದ್ದರು ಎಂಬ ವಿಷಯವನ್ನು ಶಿಷ್ಯರು ಚೆನ್ನಾಗಿ ತಿಳಿದಿದ್ದರು. ಅವರು ಯೇಸುವಿನ ನಡುವಳಿಕೆಯನ್ನು ನೋಡಿದ್ದರು (ಜನರು ಉತ್ಸಾಹ ಧ್ವನಿ ಮಾಡಿದಾಗ ಆತನು ಅವರನ್ನು ವಿರೋಧಿಸಲಿಲ್ಲ. ಅದಲ್ಲದೆ ಆತನು ಜಕರ್ಯನ ಪ್ರವಾಧನೆಯು ನೆರವೇರುವಂತೆ ಒಂದು ಕತ್ತೆಯ ಮೇಲೆ ಕುಳಿತು ಯೆರೂಸಲೇಮನ್ನು ಪ್ರವೇಶಿಸಿದನು (ಜಕರ್ಯ 9:9). ಅವರು ಯೇಸುವಿನ ಮಹಿಮಾಕರಣವಾದ ನಂತರ ಮಾತ್ರ ಆತನ ನಿಜವಾದ ರಾಜತ್ವದ ಗುಣಸ್ವರೂಪವನ್ನು ಅರ್ಥಮಾಡಿಕೊಂಡರು (ವ. 16).

7. ಯೇಸು ಪಿಲಾತನ ಮುಂದೆ ನ್ಯಾಯವಿಚಾರಿಸಲ್ಪಟ್ಟಾಗ ಯೇಸುವಿನ ಕುರಿತು ಜನರಿಗಿದ್ದ ತಿಳುವಳಿಕೆಯು ಕೆಲವೇ ದಿನಗಳ ಹಿಂದೆ ಯೇಸು ಯೆರೂಸಲೇಮನ್ನು ಪ್ರವೇಶಿಸಿದಾಗ ಅವರಿಗಿದ್ದ ತಿಳುವಳಿಕೆಗಿಂತ ಬಹಳ ವ್ಯತ್ಯಾಸವಾಗಿತ್ತು (ಯೋಹಾನ 18:38–40). ಯೆಹೂದ್ಯರನ್ನು ರೋಮನ್ನರಿಂದ ಬಿಡಿಸಿ ಅರಸನಾದ ದಾವೀದನಂತೆಯೇ ಇಸ್ರಾಯೇಲ್ ಸಾಮ್ರಾಜ್ಯವನ್ನು ಸ್ಥಾಪಿಸಲು ಬಂದ ಮೆಸ್ಸೀಯನು ಆತನಲ್ಲವೆಂದು ಈಗ ಅವರು ನಂಬಿದ್ದರು. ಅವರು ಪಿಲಾತನ ಮುಂದೆ ಯೇಸು "ಯೆಹೂದ್ಯರ ಅರಸನಾಗಿದ್ದನು" ಎಂಬುದನ್ನು ಅಲ್ಲಗಳೆದರು. ಅವರು ಯೇಸುವನ್ನು ಶಿಲುಬೆಗೆ ಹಾಕಬೇಕೆಂದು ಮತ್ತು ದಂಗೆಕೋರನಾದ ಬರಬ್ಬನನ್ನು ಬಿಡಿಸಬೇಕೆಂದು ಬಯಸಿದರು.

8. ಪಿಲಾತನು ನಡೆಸಿದ ವಿಚಾರಣೆಯಲ್ಲಿ ನಾವು ಯೇಸುವಿನ ರಾಜತ್ವವು ವ್ಯತ್ಯಾಸವಾದದ್ದೆಂಬುದನ್ನು ತಿಳಿದುಕೊಳ್ಳುತ್ತೇವೆ (ಯೋಹಾನ 18:28–37). ಯೇಸು ತಾನು ಒಬ್ಬ ಅರಸನೆಂದು ಮತ್ತು ತನಗೊಂದು ರಾಜ್ಯವಿದೆಯೆಂದು ಘೋಷಿಸಿಕೊಳ್ಳುತ್ತಾನೆ (ವ. 36–37). ಆತನು ಒಬ್ಬ ಅರಸನಾಗಲು ಜನಿಸಿದ್ದನು. ಆದರೆ ಆತನ ರಾಜ್ಯವು "ಈ ಲೋಕದ್ದಲ್ಲ". ಅದು ಇನ್ನೊಂದು ಸ್ಥಳದಿಂದ ಬಂದದ್ದಾಗಿದೆ.

9. ಪ್ರಶ್ನೆ 4–8 ನ್ನು ಗಮನಿಸುತ್ತಾ ಯೇಸು ಮತ್ತು ಆತನ ರಾಜ್ಯತ್ವದ ಕುರಿತು ನಾವು ಇದನ್ನು ಕಲಿತುಕೊಂಡೆವು:

   1) ಮೆಸ್ಸೀಯನ ಕುರಿತಾದ ಮತ್ತು ದಾವೀದನ ಸಾಲಿನಿಂದ ಒಬ್ಬ ಅರಸನು ಬರುವನೆಂಬ ಹಳೇ ಒಡಂಬಡಿಕೆಯ ಪ್ರವಾದನೆಗಳು ನಿಜವಾಗಲೂ ಯೇಸುವಿನ ಕುರಿತಾಗಿದ್ದವು.

   2) ಆದರೆ ಯೇಸುವಿನ ಕಾಲದಲ್ಲಿದ್ದ ಯೆಹೂದ್ಯರು (ಮತ್ತು ಸ್ವತಃ ಯೇಸುವಿನ ಶಿಷ್ಯರು) ಈ ಮೆಸ್ಸೀಯತ್ವದ ಮತ್ತು ಈ ರಾಜತ್ವದ ಗುಣಸ್ವರೂಪದ ಕುರಿತು ಹಾಗು ಯೇಸು ಸ್ಥಾಪಿಸಲಿದ್ದ ರಾಜ್ಯದ (ಅಂದರೆ ದೇವರ ರಾಜ್ಯದ) ಗುಣಸ್ವರೂಪದ ಕುರಿತು ತಪ್ಪು ತಿಳುವಳಿಕೆಯನ್ನು ಹೊಂದಿದ್ದರು.

   3) ಯೇಸು ನಿಜವಾಗಲೂ ಒಬ್ಬ ರಾಜನಾಗಿದ್ದನು (ಮತ್ತು ಈಗಲೂ ಒಬ್ಬ ರಾಜನಾಗಿದ್ದಾನೆ). ಆದರೆ ಯೇಹೂದ್ಯರು ಅಪೇಕ್ಷಿಸುತ್ತಿದ್ದ ಒಬ್ಬ ಇಹಲೋಕದ ಅರಸನು ಆತನಾಗಿರಲಿಲ್ಲ. ಆತನು ಒಂದು ವ್ಯತ್ಯಾಸವಾದ ರಾಜತ್ವವನ್ನು ಹೊಂದಿರುವ ಒಬ್ಬ ವ್ಯತ್ಯಾಸವಾದ ಅರಸನಾಗಿದ್ದು ಒಂದು ವ್ಯತ್ಯಾಸವಾದ ರಾಜ್ಯವನ್ನು ಆಳುತ್ತಾನೆ. ಆ ರಾಜ್ಯವು "ಈ ಲೋಕದ್ದಲ್ಲ". ಬದಲಾಗಿ ಒಂದು ಆತ್ಮೀಕ ರಾಜ್ಯವಾಗಿದೆ, ಅಂದರೆ ಒಂದು ದೈವೀಕ ರಾಜ್ಯವಾಗಿದೆ. ಅದು ಇನ್ನೊಂದು ಸ್ಥಳದಿಂದ ಬಂದದ್ದಾಗಿದೆ.

10. ನಾವು ಕೊಲೊಸ್ಸೆ 1:10–14 ರಲ್ಲಿ ದೇವ ಭಕ್ತರ ಬಾಧ್ಯತೆಯ ಹಾಗೂ ದೇವರ ರಾಜ್ಯದ ಕುರಿತು ಇವುಗಳನ್ನು ಕಲಿಯುತ್ತೇವೆ:

   1) ದೇವರು ನಮ್ಮಲ್ಲಿ ಮಾಡುವ ಕಾರ್ಯವೇ ನಮ್ಮ ಬಾಧ್ಯತೆಗಾಗಿ ನಮ್ಮನ್ನು ಸಿದ್ಧಪಡಿಸುತ್ತದೆ (ದೇವರಿಗೆ ಯೋಗ್ಯರಾಗಿ ಜೀವಿಸುವುದು, ಎಲ್ಲಾ ರೀತಿಯಲ್ಲಿ ಆತನನ್ನು ಮೆಚ್ಚಿಸುವುದು, ಒಳ್ಳೆಯ ಕ್ರಿಯೆಗಳ ಮೂಲಕ ಫಲವನ್ನು ಕೊಡುವುದು, ದೇವರ ಜ್ಞಾನದಲ್ಲಿ ಬೆಳೆಯುವುದು, ಸಹಿಸಿಕೊಳ್ಳುವುದು, ಪರಲೋಕ ತಂದೆಗೆ ಕೃತಜ್ಞತೆ ಸಲ್ಲಿಸುವುದು). ಯಾಕೆಂದರೆ ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸುವುದರ ಮೂಲಕ ಆತನು ನಮ್ಮನ್ನು ನಮ್ಮ ಬಾಧ್ಯತೆಗಾಗಿ ಅರ್ಹರನ್ನಾಗಿ ಮಾಡಿದ್ದಾನೆ.

   2) ನಮ್ಮ ಬಾಧ್ಯತೆಯು ಬೆಳಕಿನ ರಾಜ್ಯದಲ್ಲಿದೆ. ಹೊಸ ಒಡಂಬಡಿಕೆಯ ಹಿನ್ನಲೆಯು ದೇವರ ರಾಜ್ಯವು ಮತ್ತು ಆತನ ಮಗನಾದ ಯೇಸು ಕ್ರಿಸ್ತನ ರಾಜ್ಯವು ಒಂದೇ ಎಂದು ತೋರಿಸುತ್ತದೆ.

11. ಕೊಲೊಸ್ಸೆ 1:15–17 ರಲ್ಲಿ ಸೃಷ್ಟಿಯಲ್ಲಿನ ಕ್ರಿಸ್ತನ ಸರ್ವಶ್ರೇಷ್ಠತೆಯ ಅಥವಾ ರಾಜತ್ವದ ಕುರಿತು ಪೌಲನು ಬರೆಯುತ್ತಾನೆ. ಆತನ ಆರು ಅಂಶಗಳು ಹೀಗಿವೆ:

   1) ಕ್ರಿಸ್ತನು "ಅದೃಶ್ಯನಾದ ದೇವರ ಪ್ರತಿರೂಪನಾಗಿದ್ದಾನೆ" (ವ. 15). ರೋಮನ್ ನಾಣ್ಯದ ಮೇಲಿರುವ ಚಕ್ರವರ್ತಿಯ ರೂಪದೊಂದಿಗೆ ಹೋಲಿಸಿರಿ (ಮತ್ತಾಯ 22:20). ಅದರ ಮೇಲೆ ಕೇವಲ ಚಕ್ರವರ್ತಿಯ ಚಿತ್ರವಿದ್ದರೂ ಅದು ಸ್ವತಃ ಚಕ್ರವರ್ತಿಯನ್ನು ಪ್ರತಿನಿಧಿಸುವಂತದ್ದಾಗಿದೆ. ಹಾಗಾಗಿ ಅದು ಚಕ್ರವರ್ತಿಯ ಪ್ರತಿರೂಪವಾಗಿದೆ. ಹಾಗೆಯೇ ಯೇಸು ದೇವರ ಪ್ರತಿರೂಪವಾಗಿರುವುದರಿಂದ ಆತನೂ ದೇವರಾಗಿದ್ದಾನೆ. ಪೌಲನು ಇದೇ ರೀತಿಯ ಹೇಳಿಕೆಗಳನ್ನು 2 ಕೊರಿಂಥ 4:4 ರಲ್ಲಿ ಬಳಸುತ್ತಾನೆ.

   2) ಕ್ರಿಸ್ತನು "ಸರ್ವಸೃಷ್ಟಿಗೆ ಜೇಷ್ಠ ಪುತ್ರನಾಗಿದ್ದಾನೆ" (ವ. 15). ಸತ್ಯವೇದದಲ್ಲಿ ಜೇಷ್ಠನು ಎಂಬ ಪದವು ರೂಪಾಲಂಕಾರದ ಹಾಗೂ ಅಕ್ಷರಶಃ (ಅಂದರೆ ಒಂದು ಕುಟುಂಬದಲ್ಲಿ ಮೊದಲು ಹುಟ್ಟುವ ಮಗು: ಯೇಸು ಮರಿಯಳಿಗೆ ಹುಟ್ಟಿದ ಮೊದಲ ಮಗುವಾಗಿದ್ದರಿಂದ ಯೇಸು ಅಕ್ಷರಶಃವಾಗಿ ಜೇಷ್ಠಪುತ್ರನಾಗಿದ್ದಾನೆ) ಅರ್ಥವನ್ನು ಹೊಂದಿದೆ. ಇಲ್ಲಿ ಪೌಲನು ಬಳಸುತ್ತಿರುವ ಗ್ರೀಕ್ ಪದದ ರೂಪಾಲಂಕಾರಿಕ ಅರ್ಥವು "ಭಾಗ್ಯವಂತನು, ಮಹಿಮೆ ಹೊಂದಿದವನು" ಎಂಬುದಾಗಿದೆ. ಹಾಗಾಗಿ ಕ್ರಿಸ್ತನು ದೇವರ ಸಕಲ ಸೃಷ್ಟಿಯ ಮೇಲೆ ಒಡೆಯನಾಗಿದ್ದಾನೆ (ಅಥವಾ "ಅರಸನಾಗಿದ್ದಾನೆ") ಎಂದು ಪೌಲನು ಹೇಳುತ್ತಾನೆ.

   3) ಕ್ರಿಸ್ತನು ಸಕಲವನ್ನು ಸೃಷ್ಟಿಸಿದವನಾಗಿದ್ದಾನೆ (ವ. 16). ಆತನು ದೇವರ ಸೃಷ್ಟಿಯ ಕಾರ್ಯಕರ್ತನಾಗಿದ್ದಾನೆ, ಅಂದರೆ ಆತನು ಆದಿಯಲ್ಲಿದ್ದ ವಾಕ್ಯವಾಗಿದ್ದಾನೆ ಮತ್ತು ಎಲ್ಲವೂ ಆತನ ಮೂಲಕ ಉಂಟಾಯಿತು (ಯೋಹಾನ 1:1–3).

   4) ಕ್ರಿಸ್ತನು ಸಕಲ ಸೃಷ್ಟಿಯ ಧ್ಯೇಯವಾಗಿದ್ದಾನೆ (ವ. 16). ಎಲ್ಲವೂ ಆತನಿಗೋಸ್ಕರ ಸೃಷ್ಟಿಸಲ್ಪಟ್ಟಿತು. ಆತನೇ ಸೃಷ್ಟಿಯ ಉದ್ದೇಶವಾಗಿದ್ದಾನೆ.

5) ಕ್ರಿಸ್ತನು ಸೃಷ್ಟಿಗೇ ಮೊದಲೇ ಇದ್ದಾತನು (ವ. 17). ಆತನು "ಎಲ್ಲದಕ್ಕೂ ಮೊದಲು ಇದ್ದಾತನು", ಯೋಹಾನ 1:1–3 ರನ್ನು ಹೋಲಿಸಿರಿ.

6) ಕ್ರಿಸ್ತನು ಎಲ್ಲಾ ಸೃಷ್ಟಿಯನ್ನು ಎತ್ತಿಹಿಡಿಯುತ್ತಾನೆ (ವ. 17). "ಕ್ರಿಸ್ತನಲ್ಲಿ ಸಮಸ್ತವು ನೆಲೆಯಾಗಿದೆ", ಇಬ್ರಿಯರಿಗೆ 1:3 ರೊಂದಿಗೆ ಹೋಲಿಸಿರಿ.

12. ಕೊಲೊಸ್ಸೆ 1:18–20 ರಲ್ಲಿ ವಿಮೋಚನೆಯಲ್ಲಿನ ಕ್ರಿಸ್ತನ ಸರ್ವಶ್ರೇಷ್ಠತೆಯ ಅಥವಾ ರಾಜತ್ವದ ಕುರಿತು ಪೌಲನು ಬರೆಯುತ್ತಾನೆ. ಆತನ ಆರು ಅಂಶಗಳು ಹೀಗಿವೆ:

1) ಕ್ರಿಸ್ತನು "ಸಭೆಯೆಂಬ ದೇಹಕ್ಕೆ ಶಿರಸ್ಸಾಗಿದ್ದಾನೆ" (ವ. 18). ಸಭೆಯ ಮೇಲೆ ಕ್ರಿಸ್ತನು ಹೊಂದಿರುವ ನಾಯಕತ್ವವನ್ನು (ಮತ್ತು ಆತನ ಒದಗಿಸುವಿಕೆಯನ್ನು) ಈ ರೂಪಾಲಂಕಾರವು ಸೂಚಿಸುತ್ತದೆ.

2) ಕ್ರಿಸ್ತನೇ "ಆದಿಯಾಗಿದ್ದಾನೆ" (ವ. 18). ಸಭೆಯು ಒಂದು "ನೂತನ ಸೃಷ್ಟಿಯಾಗಿದೆ" ಎಂಬುದನ್ನು ಇದು ತೋರಿಸುತ್ತದೆ, 2 ಕೊರಿ. 5:17 ರೊಂದಿಗೆ ಹೋಲಿಸಿರಿ.

3) ಕ್ರಿಸ್ತನು "ಸತ್ತವರೊಳಗಿಂದ ಬಂದ ಜೇಷ್ಠನಾಗಿದ್ದಾನೆ" (ವ. 18). ಯೇಸು ಪುನರುತ್ಥಾನ ಶರೀರದೊಂದಿಗೆ ಸತ್ತವರೊಳಗಿಂದ ಎದ್ದು ಬಂದ ಮೊದಲ ವ್ಯಕ್ತಿಯಾಗಿದ್ದಾನೆ. 1 ಕೊರಿ. 15:20 ರಲ್ಲಿ ಪೌಲನು ಪುನರುತ್ಥಾನವನ್ನು ಉಲ್ಲೇಖಿಸುತ್ತಾ ಯೇಸು "ನಿದ್ರೆಹೊದವರಲ್ಲಿ ಪ್ರಥಮ ಫಲವಾಗಿದ್ದಾನೆ" ಎಂದು ಹೇಳುತ್ತಾನೆ.

4) ಕ್ರಿಸ್ತನು ಎಲ್ಲದರಲ್ಲಿಯೂ ಪ್ರಥಮ ಸ್ಥಾನವನ್ನು ಹೊಂದಿದ್ದಾನೆ (ವ. 18). ಇದರ ಅರ್ಥ ಯೇಸು ಸಕಲಕ್ಕೂ ಮೇಲಾಧಿಕಾರಿಯಾಗಿದ್ದಾನೆ (ಅಥವಾ ಅರಸನಾಗಿದ್ದಾನೆ).

5) ಕ್ರಿಸ್ತನಲ್ಲಿ ದೇವರ ಸರ್ವ ಸಂಪೂರ್ಣತೆಯು ವಾಸವಾಗಿದೆ (ವ. 19). ದೇವರು ಯೇಸುವಿನಲ್ಲಿ ವಾಸವಾಗಿದ್ದಾನೆ ಎಂಬುದನ್ನು ಸೂಚಿಸುತ್ತದೆ(ಯೆಹೆಜ್ಕೇಲ 4:4 ರಲ್ಲಿ ದೇವರು ತನ್ನ ಪ್ರಸನ್ನತೆಯಿಂದ ತನ್ನ ಆಲಯವನ್ನು ಹೇಗೆ ತುಂಬಿಸಿದನು ಎಂಬುದನ್ನು ಇದರೊಂದಿಗೆ ಹೋಲಿಸಿರಿ).

6) ಕ್ರಿಸ್ತನ ಮೂಲಕ ದೇವರು ಎಲ್ಲವುಗಳನ್ನು ತನ್ನೊಂದಿಗೆ ಸಂಧಾನಪಡಿಸಿಕೊಂಡಿದ್ದಾನೆ (ವ. 20). ಕ್ರೂಜೆಯ ಮೇಲಿನ ಕ್ರಿಸ್ತನ ತ್ಯಾಗಪೂರ್ವಕವಾದ ಮರಣದ ಮೂಲಕ ಇದು ಸಾಧಿಸಲ್ಪಟ್ಟಿದೆ.

13. ಕೊಲೊಸ್ಸೆ 1:15–18 ರಲ್ಲಿ ತಿಳಿಸಲ್ಪಟ್ಟಿರುವ ಕ್ರಿಸ್ತನ ಸರ್ವಶ್ರೇಷ್ಠತೆಯ ಅಥವಾ ರಾಜತ್ವದ ಕುರಿತಾದ ಪೌಲನ ದೈವಶಾಸ್ತ್ರದ ಒಂದು ಸಾರಾಂಶವು ಹೀಗಿದೆ. ದೇವರು ಸಕಲ ಸಂಗತಿಗಳ ಮೇಲೆ ಪರಮಶ್ರೇಷ್ಠನಾಗಿರುವಂತೆಯೇ ಯೇಸು ಸಕಲ ಸಂಗತಿಗಳ ಮೇಲೆ ಅಂದರೆ ದೇವರ ಸೃಷ್ಟಿಯ ಮೇಲೆಯೂ ಹಾಗೂ ಸಭೆಯ ಮೇಲೆಯೂ ಪರಮಶ್ರೇಷ್ಠನಾಗಿದ್ದಾನೆ (ಅಥವಾ ಅರಸನಾಗಿದ್ದಾನೆ). ಕ್ರಿಸ್ತನ ರಾಜ್ಯವು ಹಾಗೂ ದೇವರ ರಾಜ್ಯವು ಒಂದೇ ಆಗಿದೆ.

14. ನಾವು ಪ್ರಕಟನೆ 7:17 ರಲ್ಲಿ ಯೇಸುವಿನ ಕುರಿತು ಕಲಿಯುವುದೇನೆಂದರೆ, ಕುರಿಮರಿಯಾದ ಯೇಸು ದೇವರ ಸಿಂಹಾಸನದ ಮಧ್ಯದಲ್ಲಿದ್ದಾನೆ ಮತ್ತು ದೇವರ ರಾಜ್ಯದಲ್ಲಿ ವಿಶ್ವಾಸಿಗಳ ಕುರುಬನಾಗಿದ್ದಾನೆ. ಕೀರ್ತನೆ 23 ರಲ್ಲಿ ಅರಸನಾದ ದಾವೀದನು ಯೆಹೋವನು ನನಗೆ ಕುರುಬನಾಗಿದ್ದಾನೆ ಎಂದು ವರ್ಣಿಸುತ್ತಾನೆ ಮತ್ತು ಯೆಹೆಜ್ಕೇಲ 34:11–16 ರಲ್ಲಿ ದೇವರು ತನ್ನ ಜನರ ಕುರುಬನಾಗಿದ್ದಾನೆಂದು ದೇವರು ತನ್ನನ್ನೇ ವರ್ಣಿಸಿಕೊಳ್ಳುತ್ತಾನೆ. ನಂತರ ಅದೇ ಪ್ರವಾದನಾ ಗ್ರಂಥದಲ್ಲಿ ತನ್ನ ಜನರನ್ನು ಕಾಯುವುದಕ್ಕಾಗಿ ಅವರ ಮೇಲೆ ಒಬ್ಬನೇ ಕುರುಬನನ್ನು ಅಂದರೆ ತನ್ನ ಸೇವಕನಾದ ದಾವೀದನನ್ನು (ಅದು ಮೆಸ್ಸಿಯನ ಕುರಿತಾದ ಒಂದು ಪ್ರವಾದನೆಯಾಗಿದ್ದು ಅರಸನಾದ ದಾವೀದನ ಸಂತಾನದಲ್ಲಿ ಹುಟ್ಟಿದ ಯೇಸುವನ್ನು ಸೂಚಿಸುತ್ತದೆ) ನೇಮಿಸುವೆನೆಂದು ವಾಗ್ದಾನ ಮಾಡುತ್ತಾನೆ.

15. ನಾವು ಪ್ರಕಟನೆ 17:14 ಮತ್ತು 19:16 ರಲ್ಲಿ ಯೇಸುವಿನ ಕುರಿತು ಕಲಿಯುವುದೇನೆಂದರೆ, ಕುರಿಮರಿಯಾದ ಯೇಸು ಒಡೆಯರ ಒಡೆಯನು ಮತ್ತು ರಾಜರ ರಾಜನು ಆಗಿದ್ದಾನೆ. ಈ ಹೇಳಿಕೆಗಳು ದೇವರ ತ್ಯಾಗಪೂರ್ವಕವಾದ ಕುರಿಮರಿಯಾಗಿರುವ ಯೇಸುವಿನ ಸರ್ವಶ್ರೇಷ್ಠ ಸಾರ್ವಭೌಮತೆಯನ್ನು ಒತ್ತಿ ಹೇಳುತ್ತವೆ. ಪೌಲನು ಇದೇ ರೀತಿಯ ಹೇಳಿಕೆಗಳನ್ನು 1 ತಿಮೋಥಿ 6:15 ರಲ್ಲಿ ಕೊಡುತ್ತಾನೆ: *ಭಾಗ್ಯವಂತನಾದ ಏಕಾದಿಪತಿಯು ತನ್ನ ಸಮಯಗಳಲ್ಲೇ ಆತನನ್ನು ಪ್ರತ್ಯಕ್ಷಪಡಿಸುವನು. ಆತನು ರಾಜಾಧಿ ರಾಜನು ಒಡೆಯರ ಒಡೆಯನೂ ಆಗಿದ್ದಾನೆ.*

16. ಮೇಲಿನ ಉತ್ತರವನ್ನು ಗಮನಿಸಿರಿ.

17. ನಾವು ಪ್ರಕಟನೆ 22:1, 3 ರಲ್ಲಿ ಪರಲೋಕದಲ್ಲಿರುವ ಸಿಂಹಾಸನವು ದೇವರ ಮತ್ತು ಕುರಿಮರಿಯಾದಾತನ ಸಿಂಹಾಸನವಾಗಿದೆ ಎಂದು ವರ್ಣಿಸಲಾಗಿದೆ. ಹಾಗಾಗಿ ದೇವರು ಹಾಗೂ ಯೇಸು ಪರಲೋಕದ ಸಿಂಹಾಸನದ ಮೇಲೆ ಕುಳಿತಿದ್ದಾರೆ.

18. ಹಾಗಾದರೆ ನಾವು ಪ್ರಕಟನೆ ಪುಸ್ತಕದಲ್ಲಿರುವ ವಚನಗಳಿಂದ ಯೇಸುವಿನ ರಾಜ್ಯತ್ವದ ಕುರಿತು ಮತ್ತು ಆತನ ರಾಜ್ಯದ ಕುರಿತು ಕನಿಷ್ಠ ಎರಡು ಸಂಗತಿಗಳನ್ನು ಅರ್ಥಮಾಡಿಕೊಳ್ಳಬಹುದು:

    1) ತಂದೆಯಾದ ದೇವರು ಹಾಗೂ ಮಗನಾದ ದೇವರು ದೇವರ ರಾಜ್ಯದ ಅರಸನಾಗಿದ್ದಾನೆ.

    2) ದೇವರ ರಾಜ್ಯ / ತಂದೆ ಮತ್ತು ಯೇಸುವಿನ ರಾಜ್ಯ / ಕ್ರಿಸ್ತನು / ಕುರಿಮರಿಯದಾತನು ಇವೆಲ್ಲಾ ಪದಗಳು ಎರಡು ವ್ಯತ್ಯಾಸವಾದ ರಾಜ್ಯಗಳನ್ನು ಸೂಚಿಸದೆ ಒಂದೇ ರಾಜ್ಯವನ್ನು ಸೂಚಿಸುತ್ತದೆ.

# ಉತ್ತರಗಳು – ದೇವರ ರಾಜ್ಯದ ಕುರಿತು ಹೆಚ್ಚಿನ ವಿಷಯಗಳು

# ಉತ್ತರಗಳು 5: ದೇವರ ರಾಜ್ಯವು ಆಗಮಿಸುತ್ತದೆ

## ಶಿಕ್ಷಕರಿಗಾಗಿ

ನೀವು ವಿದ್ಯಾರ್ಥಿಗಳಿಗೆ ಈ ಅಧ್ಯಯನವನ್ನು ಕಲಿಸಲು ಕನಿಷ್ಠ ಪಕ್ಷ ಒಂದು ತಾಸು ಬೇಕಾಗಬಹುದು. ಗ್ರಂಥಾಲಯ ಮತ್ತು ಮನೆಗೆಲಸದ ಸಮಯವನ್ನು ಹೊರತುಪಡಿಸಿ ಮುಂದಿನ ದಿನದಲ್ಲಿ ನೀವು ಮತ್ತೊಮ್ಮೆ ಈ ಸಂಗತಿಗಳನ್ನು ನೆನಪಿಸಬೇಕಾಗಬಹುದು.

ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಚರ್ಚಿಸುವದಕ್ಕಿಂತ ಮೊದಲು ನೀವು ***ಪೀಠಿಕೆ*** ಮತ್ತು ಸತ್ಯವೇದದ ವಾಕ್ಯಭಾಗವನ್ನು ತರಗತಿಯಲ್ಲಿ ಅವರ ಮುಂದೆ ಓದಿರಿ.

ನೀವು ಈ ರೀತಿಯಾಗಿ ಪ್ರಶ್ನೆಗಳನ್ನು ಬಳಸಬೇಕೆಂಬುದು ನನ್ನ ಸಲಹೆಯಾಗಿದೆ:

1) ವಿದ್ಯಾರ್ಥಿಗಳು 1–8 ಪ್ರಶ್ನೆಗಳನ್ನು ಗುಂಪುಗಳಲ್ಲಿ ಚರ್ಚಿಸಲಿ. ಅವರ ಉತ್ತರಗಳನ್ನು ನೋಡಿರಿ.
2) ವಿದ್ಯಾರ್ಥಿಗಳು 9–12 ಪ್ರಶ್ನೆಗಳನ್ನು ಗುಂಪುಗಳಲ್ಲಿ ಚರ್ಚಿಸಲಿ. ಈ ಪ್ರಶ್ನೆಗಳನ್ನು ತರಗತಿಯಲ್ಲಾಗಲಿ ಅಥವಾ ಗ್ರಂಥಾಲಯದ / ಮನೆಗೆಲಸದ ಸಮಯದಲ್ಲಿ ಮಾಡಬಹುದು. ಅವರ ಉತ್ತರಗಳನ್ನು ನೋಡಿರಿ.
3) ಪ್ರಶ್ನೆ 13ನ್ನು ವೈಯಕ್ತಿಕವಾಗಿ ಉತ್ತರಿಸುವುದು ಸೂಕ್ತ. ಆದರೆ ತರಗತಿಯ ಸಮಯದಲ್ಲಿ ವಿದ್ಯಾರ್ಥಿಗಳು ಬರೆದಿರುವ ಉತ್ತರಗಳನ್ನು ನೀವು ಪರಿಶೀಲಿಸುವುದಾದರೆ ಅವರ ತಿಳುವಳಿಕೆಯನ್ನು ಅದು ಅಭಿವೃದ್ಧಿಪಡಿಸುವುದು.

ವಿದ್ಯಾರ್ಥಿಗಳು ಪರ್ಯಾಲೋಚನೆ ಎಂಬ ಭಾಗವನ್ನು ಮನೆಗೆಲಸವಾಗಿ ವೈಯಕ್ತಿಕವಾಗಿ ಓದಲು ಬಿಡಿರಿ. ನಂತರ ತರಗತಿಯಲ್ಲಿ ಅದರ ಕುರಿತು ವಿಚಾರಿಸಿರಿ. ವಿದ್ಯಾರ್ಥಿಗಳು ಆಗ ಅದರ ಕುರಿತು ಹಂಚಿಕೊಳ್ಳಲಿ ಮತ್ತು ಚರ್ಚಿಸಲಿ.

## ಉತ್ತರಗಳು

1. ನಾವು ಮತ್ತಾಯ 4:23–25 ಮತ್ತು ಮಾರ್ಕ 1:14–15 ರಲ್ಲಿ ದೇವರ ರಾಜ್ಯದ ಕುರಿತು ಈ ಅಂಶಗಳನ್ನು ಕಲಿಯುತ್ತೇವೆ:

   1) ಮತ್ತಾಯನು ಯೇಸುವಿನ ಸೇವೆಯ ಕುರಿತು ನಾಲ್ಕು ಮುಖ್ಯ ಪದಗಳನ್ನು ಉಲ್ಲೇಖಿಸುತ್ತಾನೆ:

      - ಆತನು *ಬೋಧಿಸಿದನು*: ಆತನು ದೇವರ ರಾಜ್ಯದ ಗುಣಲಕ್ಷಣ ಮತ್ತು ದೇವರ ರಾಜ್ಯದ ಪ್ರಜೆಗಳಾಗಿ ವಿಶ್ವಾಸಿಗಳು ಹೇಗೆ ಜೀವಿಸಬೇಕು ಎಂಬ ಸಂಗತಿಗಳ ಕುರಿತು ಬೋಧಿಸಿದನು. "ಪರ್ವತ ಪ್ರಸಂಗವು" ಇದೇ ವಿಷಯದ ಕುರಿತಾಗಿದೆ.
      - ಆತನು ದೇವರ ರಾಜ್ಯದ ಕುರಿತು *ಸಾರಿದನು*. ಆತನು ಈ ಲೋಕಕ್ಕೆ ಯಾವ ಉದ್ದೇಶದೊಂದಿಗೆ ಬಂದಿದ್ದನು ಮತ್ತು ತನ್ನ ಮರಣ ಹಾಗೂ ಪುನರುತ್ಥಾನದ ಮೂಲಕ ಏನನ್ನು ಸಾಧಿಸಬೇಕೆಂದಿದ್ದಾನೆ ಎಂಬುದರ ಕುರಿತಾದ "ಶುಭ ಸಂದೇಶವು" ಇದೇ ಆಗಿತ್ತು.
      - ಆತನು ಜನರಲ್ಲಿದ್ದ ಎಲ್ಲಾ ರೋಗ ಬಾಧೆಗಳನ್ನು *ಸೌಖ್ಯಪಡಿಸಿದನು*. ಸೌಖ್ಯಪಡಿಸುವಿಕೆಯು ದೇವರ ರಾಜ್ಯದ ಒಂದು ಪ್ರಾಮುಖ್ಯವಾದ ಸೂಚನೆಯಾಗಿತ್ತು. ಈಗಿನ ದುಷ್ಟ ಯುಗದ ಅಂತ್ಯವು ಯೇಸುವಿನೊಂದಿಗೆ ಬಂದಿತೆಂದು ಅದು ತೋರಿಸಿತು. ಈಗಿನ ಯುಗದ ಒಂದು ಗುಣಲಕ್ಷಣವು ರೋಗಬಾಧೆಯಾಗಿದೆ. ಇನ್ನೊಂದು ಕಡೆಯಲ್ಲಿ ಬರಲಿರುವ ಯುಗವು (ದೇವರ ರಾಜ್ಯವು) ಶಾಲೋಮ್‌ನ (ಅಂದರೆ ಆರೋಗ್ಯ, ಪೂರ್ಣತೆ ಮತ್ತು ಶಾಂತಿಯ) ಗುಣಲಕ್ಷಣಗಳನ್ನು ಹೊಂದಿರುವುದು.
      - ಆತನು ದೆವ್ವಪೀಡಿತರನ್ನು ಬಿಡಿಸಿದನು (ಮತ್ತಾಯನು ಇದರ ಕುರಿತು "ಸ್ವಸ್ಥಪಡಿಸಿದನು" ಎಂಬ ಪದವನ್ನು ಬಳಸುತ್ತಾನೆ). ದೆವ್ವಗಳನ್ನು ಓಡಿಸುವುದು ಸೈತಾನನ ಆಳ್ವಿಕೆಯು ಅಂತ್ಯಗೊಳ್ಳುತ್ತಿದೆ ಎಂಬುದನ್ನು ಪ್ರದರ್ಶಿಸಿತು.

ಯೇಸುವಿನ ಸೇವೆಯು (ಮತ್ತು ಅದರ ಪರಿಣಾಮವಾಗಿ ಬಂದ ದೇವರ ರಾಜ್ಯವು) ಕೇವಲ ಇಸ್ರಾಯೇಲ್ಯರಿಗೆ ಮಾತ್ರ ಸೀಮಿತವಾಗಿರಲಿಲ್ಲವೆಂದು ಮತ್ತಾಯನು ತನ್ನ ಓದುಗರಿಗೆ ತಿಳಿಸುತ್ತಾನೆ. ಅದು ಅನ್ಯಜನರನ್ನೂ ಒಳಗೊಂಡಿತ್ತು, ಈ ನಿರ್ದಿಷ್ಟ ಸನ್ನಿವೇಶದಲ್ಲಿ ಸಿರಿಯಾದ ಮತ್ತು ಯೊರ್ದಾನ್ ನದಿಯ ಪೂರ್ವದಲ್ಲಿದ್ದ ಹತ್ತು ಗ್ರೀಕ್ ಪಟ್ಟಣಗಳಾದ ಡೆಕಪೊಲಿಸ್‌ನ ಜನರನ್ನು ಒಳಗೊಂಡಿತ್ತು.

2) ದೇವರ ರಾಜ್ಯದ ಕುರಿತು ನಾಲ್ಕು ಅಂಶಗಳನ್ನು ಕಲಿತುಕೊಳ್ಳಲು ಮಾರ್ಕನು ನಮಗೆ ಸಹಾಯಮಾಡುತ್ತಾನೆ:

- ಅದು ಶುಭಸಂದೇಶವಾಗಿದೆ, ಅಂದರೆ "ಸುವಾರ್ತೆಯಾಗಿದೆ".
- ಅದು ಯೇಸುವಿನೊಂದಿಗೆ ಒಂದು ನೂತನ ರೀತಿಯಲ್ಲಿ ಆಗಮಿಸಿತು: "ಕಾಲವು ಬಂದಿದೆ"
- ಅದೇ ಸಮಯದಲ್ಲಿ ಅದು ಸಮೀಪವಾಗಿದೆ: ಯೇಸುವಿನ ಸೇವೆಯು ದೇವರ ರಾಜ್ಯದ, ಅಂದರೆ ದೇವರ ಆಳ್ವಿಕೆಯ ಗೋಚರವಾದ ವಿಸ್ತರಣೆಯನ್ನು ಪ್ರದರ್ಶಿಸಿತು. ಆದರೆ ಅದರ ಪೂರ್ಣ ಬಲ, ಪರಿಪೂರ್ಣತೆಯು ಇನ್ನೂ ಮುಂದೆ ಬರಲಿದೆ.
- ಮಾನವರು ದೇವರ ರಾಜ್ಯಕ್ಕೆ ಪ್ರತಿಕ್ರಿಯಿಸಬೇಕು. ತನ್ನ ಶ್ರೋತೃಗಳು ಪಶ್ಚಾತ್ತಾಪಪಟ್ಟು ಶುಭವಾರ್ತೆಯನ್ನು ನಂಬಬೇಕೆಂದು ಯೇಸು ಬಯಸಿದನು.

2. ನಾವು ಲೂಕ 5:1–11 ರಲ್ಲಿ ದೇವರ ರಾಜ್ಯದ ಅಧಿಕಾರವು (4:32 ರೊಂದಿಗೆ ಹೋಲಿಸಿರಿ) ಹೀಗೆ ಕಾರ್ಯಾತ್ಮಕವಾಗಿರುವುದನ್ನು ಕಾಣುತ್ತೇವೆ:

1) ಸಿಮೋನ್ ಪೇತ್ರನು ಕೇವಲ ಯೇಸು ಹೇಳಿದನೆಂಬ ಕಾರಣಕ್ಕಾಗಿ ಮತ್ತೊಮ್ಮೆ ಬಲೆಯನ್ನು ಬೀಸಿ ಆತನ ಆಜ್ಞೆಗೆ ವಿಧೇಯನಾದನು.

2) ಬೆಸ್ತರು ಅದ್ಭುತಕರವಾಗಿ ಹಿಡಿದ ಮೀನುಗಳ ಮೂಲಕ ಯೇಸು ಪ್ರಕೃತಿಯ ಮೇಲೆ ಅಧಿಕಾರ ಹೊಂದಿದ್ದಾನೆ ಎಂಬುದನ್ನು ಪ್ರದರ್ಶಿಸಿದರು.

3) ಯೇಸುವಿನ ಅಧಿಕಾರವನ್ನು ಕಂಡಾಗ ಸಿಮೋನ್ ಪೇತ್ರನಿಗೆ ತನ್ನ ಪಾಪಮಯ ಜೀವಿತದ ಅರಿವಾಯಿತು.

4) ಯೇಸುವಿನ ಮೊದಲ ಶಿಷ್ಯರುಗಳು ತಡಮಾಡದೆ ಆತನನ್ನು ಸೇರಿಕೊಂಡರು. ಅವರ ಜೀವನೋಪಾಯವಾದ ದೋಣಿಗಳನ್ನು ಬಿಟ್ಟು ಆತನ ಹಿಂದೆ ಬರಲು ಅವರು ಹಿಂಜರಿಯಲಿಲ್ಲ.

5) ಯೇಸು ಸಿಮೋನ್ ಪೇತ್ರ ಹಾಗೂ ಆತನ ಸಂಗಡಿಗರ ಕುರಿತು ಒಂದು ದೈವಿಕ ಉದ್ದೇಶವನ್ನು ಹೊಂದಿದ್ದನು. ಈಗಿನಿಂದ ಅವರು ದೇವರ ರಾಜ್ಯಕ್ಕಾಗಿ ಆತ್ಮಗಳನ್ನು ಹಿಡಿಯುವವರಾಗಿದ್ದರು.

3. ಯೇಸುವನ್ನು ಹಿಂಬಾಲಿಸಬೇಕೆಂದು ಆದಿಶಿಷ್ಯರು ಮಾಡಿದ ತೀರ್ಮಾನವನ್ನು ಅವರ ಸಂಬಂಧಿಕರು ಹಾಗೂ ಉದ್ಯೋಗಿಗಳು ಕೇಳಿಸಿಕೊಂಡಾಗ ಅವರಿಗೆ ಹೀಗನ್ನಿಸಿರಬಹುದು:

1) ತಮ್ಮ ಜೀವನೋಪಾಯವನ್ನು ಬಿಟ್ಟು ಶಿಷ್ಯರು ಮೂರ್ಖತನದ ಕೆಲಸ ಮಾಡಿದರೆಂದು ಮತ್ತು ಯೇಸುವನ್ನು ಹಿಂಬಾಲಿಸುವುದು ಅಪಾಯಕಾರಿಯೆಂದು ಅವರು ಯೋಚಿಸಿರಬಹುದು.

2) ತಮ್ಮ ಸ್ವಂತ ಜೀವನೋಪಾಯವೇ ಈಗ ಗಂಡಾಂತರಕ್ಕೆ ಸಿಲುಕಿದ್ದರಿಂದ ಅವರು ಕೋಪಗೊಂಡಿದ್ದಿರಬಹುದು ಅಥವಾ ಚಿಂತಾಕ್ರಾಂತರಾಗಿದ್ದಿರಬಹುದು:

- ಬಹುಶಃ ಮೀನಿನ ವ್ಯಾಪಾರದಲ್ಲಿ ತಮ್ಮೊಂದಿಗೆ ಕೆಲಸ ಮಾಡುತ್ತಿದ್ದ ಅವರ ಆಳುಗಳು ಸಹಾಯಕರು ತಮ್ಮ ಉದ್ಯೋಗವನ್ನು ಕಳಕೊಳ್ಳುವ ಗಂಡಾಂತರದಲ್ಲಿದ್ದರು.
- ಅವರ ಪೋಷಕರು ಮತ್ತು ಮಕ್ಕಳು ಊಟ ಬಟ್ಟೆಗಾಗಿ ಅವರನ್ನೇ ಅವಲಂಬಿಸಿದ್ದರಿಂದ ಈಗ ಅವರಿಗೆ ಏನಾಗಬಹುದು ಎಂಬ ಪ್ರಶ್ನೆ ಕಾಡುತ್ತಿತ್ತು.

4. ಯೇಸುವಿನೊಂದಿಗೆ ದೇವರ ರಾಜ್ಯವು ಆಗಮಿಸಿದಾಗ ಕಪೆರ್ನೌಮಿನ ಜನರಿಗೆ ಈ ಪ್ರಯೋಜನಗಳಾದವು (ಲೂಕ 4:31–41):

   1) ದೆವ್ವಪಿಡಿತರು ಬಿಡುಗಡೆ ಹೊಂದಿದ್ದನ್ನು ಅವರು ಕಂಡರು. ಅದರ ಪರಿಣಾಮವಾಗಿ ಸಭಾಮಂದಿರದ ಆರಾಧನೆಯು ಶಾಂತಕರವಾಯಿತು.

   2) ಅವರು ರೋಗಿಗಳು ಸೌಖ್ಯವಾದದನ್ನು ಕಂಡರು.

   3) ಅವರು ಇದುವರೆಗೂ ಕೇಳುತ್ತಿದ್ದ ಬೋಧನೆಗಿಂತ ಯೇಸುವಿನ ಬೋಧನೆಯು ವ್ಯತ್ಯಾಸವುಳ್ಳದೆಂದು ಅರಿತುಕೊಂಡರು. ಆತನ ಸಂದೇಶವು ಅಧಿಕಾರವುಳ್ಳದ್ದಾಗಿತ್ತು. ಆತನಿಗೆ ಸೈತಾನನ ಶಕ್ತಿಗಳ ಮೇಲೆ ಅಧಿಕಾರವಿತ್ತು.

5. ಯೇಸುವಿನಲ್ಲಿ ದೇವರ ರಾಜ್ಯದ ಆಗಮನವು ಕಪೆರ್ನೌಮಿನಲ್ಲಿದ್ದ ಈ ಬಲಿಷ್ಠ ಶಕ್ತಿಗಳಿಗೆ ಸವಾಲನ್ನು ಒಡ್ಡಿತು:

   1) ಯೇಸು ಶಿಷ್ಯರನ್ನು ಕರೆದಾಗ ಕುಟುಂಬದ ಕುರಿತು ಇದ್ದ ನಿಷ್ಠೆಯನ್ನು ಬಿಡಬೇಕಾಯಿತು.

   2) ಶಿಷ್ಯರು ತಮ್ಮ ಮೀನಿನ ವ್ಯಾಪಾರವನ್ನು ಬಿಟ್ಟಾಗ ವ್ಯವಹಾರಿಕ ನಿಷ್ಠೆಗಳನ್ನು ಮತ್ತು ಆರ್ಥಿಕ ಪ್ರಾಧಾನ್ಯತೆಗಳನ್ನು ಬಿಡಬೇಕಾಯಿತು.

   3) ಯೇಸುವಿನ ಮಾತುಗಳಲ್ಲಿದ್ದ ಅಧಿಕಾರವು ಪರಿಸಾಯರ ಮತ್ತು ಶಾಸ್ತ್ರಿಗಳ ಬೋಧನೆಗಳಿಗೆ ಸವಾಲನ್ನು ಒಡ್ಡಿದ್ದಿರಬಹುದು.

   4) ಯೇಸು ದೇವರ ರಾಜ್ಯದ ಪ್ರವೇಶವನ್ನು ಪ್ರದರ್ಶಿಸುತ್ತಾ ಸೈತಾನನಿಗೆ ಮತ್ತು ಆತನ ಅಂಧಕಾರ ಶಕ್ತಿಗಳಿಗೆ ಸವಾಲನ್ನು ಹಾಕಿದನು:

      - ದುರಾತ್ಮಪೀಡಿತರಿಗೆ ಬಿಡಗಡೆಯಾದವು

      - ರೋಗಿಗಳಿಗೆ ಸೌಖ್ಯವಾಯಿತು

6. ಮಾರ್ಕ 1:35–39 ರಲ್ಲಿರುವ ಯೇಸುವಿನ ಕ್ರಿಯೆಗಳು ದೇವರ ರಾಜ್ಯದ ಮೌಲ್ಯ ಮತ್ತು ಪ್ರಾಧಾನ್ಯತೆಗಳ ಕುರಿತು ಈ ಸಂಗತಿಗಳನ್ನು ಬಹಿರಂಗಪಡಿಸುತ್ತವೆ:

   1) ಪ್ರಖ್ಯಾತಿಯು ಪ್ರಾಮುಖ್ಯವಲ್ಲ. ಯೇಸು ಕಪೆರ್ನೌಮಿನಲ್ಲಿನ ತನ್ನ ಯಶಸ್ಸುಭರಿತ ಸೇವೆಯಿಂದ ದೊರಕಿದ ಪ್ರಖ್ಯಾತಿಯನ್ನು ಆನಂದಿಸುತ್ತಾ ಅಲ್ಲಿಯೇ ಉಳಿದುಕೊಳ್ಳಬಹುದಾಗಿತ್ತು. ಆದರೆ ಅದು ಆತನ ಪ್ರಾಧಾನ್ಯತೆಯಾಗಿರಲಿಲ್ಲ.

   2) ಪ್ರಾರ್ಥನೆಯು ಪ್ರಾಮುಖ್ಯವಾಗಿತ್ತು. ಪ್ರಾರ್ಥನೆಗಿಂತ ಸೇವೆಯು ಹೆಚ್ಚು ಪ್ರಾಮುಖ್ಯವಾದದ್ದು ಎಂದು ಯೇಸು ಹೇಳಬಹುದಿತ್ತು. ಆದರೆ ಆತನು ತನ್ನ ಪರಲೋಕದ ತಂದೆಯೊಂದಿಗೆ ಪ್ರಾರ್ಥನೆಯಲ್ಲಿ ಸಮಯ ಕಳೆಯಲು ತನ್ನ ಯಶಸ್ಸುಭರಿತ ಸೇವೆಯಿಂದ ತನ್ನನ್ನು ಪ್ರತ್ಯೇಕಿಸಿಕೊಂಡನು.

   3) ಸುವಾರ್ತೆಯನ್ನು ಸಾರುವುದರ ಅವಸರ. ಯೇಸು ಪ್ರಾರ್ಥನೆಯಲ್ಲಿ ದೇವರೊಂದಿಗೆ ಸಮಯವನ್ನು ಕಳೆದ ನಂತರ ತನ್ನ ಸುವಾರ್ತಾ ಸೇವೆಯನ್ನು ಮುಂದುವರೆಸಿದನು. ಸುವಾರ್ತೆಯು ಅತಿ ಬೇಗನೇ ಸಾರಲ್ಪಡಬೇಕೆಂಬುದನ್ನು ಆತನು ಅರಿತುಕೊಂಡಿದ್ದನು.

   4) ಸುವಾರ್ತೆಯು ಹೊಸ ಸ್ಥಳಗಳಿಗೆ ಮತ್ತು ಹೊಸ ಜನರಿಗೆ ತಲುಪಬೇಕೆಂಬುದರ ಪ್ರಾಮುಖ್ಯತೆ. ಯೇಸು ಕಪೆರ್ನೌಮಿನಲ್ಲಿಯೇ ಉಳಿದುಕೊಳ್ಳಬಹುದಾಗಿತ್ತು. ಆದರೆ ಆತನು ಹೊಸ ಹಳ್ಳಿಗಳಿಗೆ ಸುವಾರ್ತೆಯನ್ನು ಸಾರಲು ಮುಂದಾದನು. ಎಲ್ಲಾ ಜನರು ದೇವರ ರಾಜ್ಯದ ಶುಭ ಸಂದೇಶವನ್ನು ಕೇಳುವುದಕ್ಕಾಗಿ ಆತನು ಬಂದಿದ್ದನು.

   5) ಜನರ ಅವಶ್ಯಕತೆಗಳನ್ನು ಗುರುತಿಸುವುದರ ಸಾಮರ್ಥ್ಯ. ಇತರೆ ಸ್ಥಳಗಳಲ್ಲಿದ್ದ ಜನರಿಗೆ ಸೌಖ್ಯತೆಯ ಮತ್ತು ಬಿಡುಗಡೆಯ ಅವಶ್ಯಕತೆಯಿದ್ದುದ್ದನ್ನು ಯೇಸು ಚೆನ್ನಾಗಿ ಅರಿತಿದ್ದನು.

   6) ದೇವರ ಮಾರ್ಗ ದರ್ಶನದ ಅವಶ್ಯಕತೆ. ಯೇಸು ತಾನು ಮಾಡಿದ ಎಲ್ಲಾ ಸಂಗತಿಗಳಲ್ಲಿ ತನ್ನ ಪರಲೋಕದ ತಂದೆಯಿಂದ ಮಾರ್ಗದರ್ಶಿಸಲ್ಪಟ್ಟನು ಎಂಬುದನ್ನು ಈ ವಾಕ್ಯಭಾಗದಿಂದ ನಾವು ಅರ್ಥಮಾಡಿಕೊಳ್ಳುತ್ತೇವೆ.

7. ಯೇಸು ಲೂಕ 5:12–14 ರಲ್ಲಿರುವ ಕುಷ್ಠರೋಗಿಗೆ ಆತನ ಎಲ್ಲಾ ಅವಶ್ಯಕತೆಗಳನ್ನು ಸಂಧಿಸುವುದರ ಮೂಲಕ ಹೀಗೆ ಪೂರ್ಣವಾದ ಮರುಸಂಧಾನವನ್ನು ಅನುಗ್ರಹಿಸುತ್ತಾನೆ:

1) ಯೇಸು ಆತನ ಶಾರೀರಿಕ ಅವಶ್ಯಕತೆಗಳನ್ನು ನೀಗಿಸಿದನು.

2) ಯೇಸು ಆತನ ಭಾವನಾತ್ಮಕ ಅವಶ್ಯಕತೆಗಳನ್ನು ನೀಗಿಸಿದನು.

3) ಯೇಸು ಆತನ ಆತ್ಮಿಕ ಅವಶ್ಯಕತೆಗಳನ್ನು ನೀಗಿಸಿದನು.

4) ಯೇಸು ಆತನ ಸಾಮಾಜಿಕ ಅವಶ್ಯಕತೆಗಳನ್ನು ನೀಗಿಸಿದನು.

ಯೇಸುವನ್ನು ಭೇಟಿಯಾದ ಪರಿಣಾಮವಾಗಿ ಕುಷ್ಠರೋಗಿಯು ಸಾಮಾನ್ಯ ಜೀವನ ನಡೆಸಲಾಗುವಷ್ಟು ಸಂಪೂರ್ಣವಾಗಿ ಸ್ವಸ್ಥಮಾಡಲ್ಪಟ್ಟನು.

8. ಆ ಕುಷ್ಠರೋಗಿಯ ಅವಿಧೇಯತೆಯಿಂದ ಇದುವರೆಗೂ ಸುವಾರ್ತೆಯನ್ನು ಯೇಸುವಿನಿಂದ ಕೇಳಿರದ ಇತರೆ ಪಟ್ಟಣಗಳಲ್ಲಿದ್ದ ಜನರ ಮೇಲೆ ನಕಾರಾತ್ಮಕವಾದ ಪರಿಣಾಮ ಬೀರಿತು (ಯಾಕೆಂದರೆ ಯೇಸು ತನ್ನ ನಿರ್ವಹಿಸಲಾಗದ ಪ್ರಖ್ಯಾತಿಯ ನಿಮಿತ್ತ ನಿರ್ಜನ ಸ್ಥಳಗಳಿಗೆ ಹೋಗಿ ವಿಶ್ರಾಂತಿ ಪಡೆಯಬೇಕಾಯಿತು).

9. ಇಂದು ದಕ್ಷಿಣ ಭಾರತದಲ್ಲಿ ಯಾವ ಬಲಿಷ್ಠವಾದ ಶಕ್ತಿಗಳು ಹೆಚ್ಚಾಗಿ ದೇವರ ರಾಜ್ಯದ ಪ್ರಭಾವಕ್ಕೆ ವಿರುದ್ಧವಾಗಿ ನಿಂತಿವೆ (ಪ್ರಶ್ನೆ 5 ಕ್ಕೆ ನೀವು ಕೊಟ್ಟಿರುವ ಉತ್ತರವನ್ನು ಗಮನಿಸಿರಿ)?

ನೀವು ತಿಳಿಸಿರಬಹುದಾದ ಕೆಲವು ಬಲಿಷ್ಠವಾದ ಶಕ್ತಿಗಳು ಹೀಗಿರಬಹುದು (ನಿಶ್ಚಯವಾಗಲೂ ಇವುಗಳನ್ನು ಹೊರತುಪಡಿಸಿ ಇನ್ನೂ ಅನೇಕ ಬಲಿಷ್ಠವಾದ ಶಕ್ತಿಗಳಿರುವ ಸಾಧ್ಯತೆಗಳಿವೆ):

- ಜಾತಿ ಪದ್ಧತಿ (ಬಹುಶಃ ಕ್ರೈಸ್ತ ನಂಬಿಕೆಯನ್ನು ಜನರು "ಕೀಳು ಜಾತಿಯ ಧರ್ಮ" ಎಂದು ಸಮಾಜದಲ್ಲಿ ಕೀಳಾಗಿ ಕಾಣಬಹುದು)

- ಕುಟುಂಬ ನಿಷ್ಠೆ, ಕುಟುಂಬದ ಮೇಲೆ ಅವಲಂಬನೆ (ಯೌವನಸ್ಥ ವಿಶ್ವಾಸಿಗಳು ಸ್ವತಂತ್ರವಾದ ತೀರ್ಮಾನಗಳನ್ನು ಮಾಡಲು ಸುಲಭವಲ್ಲದಿರುವುದು, ಹಿಂದೂ ಧರ್ಮದವರನ್ನು ಮದುವೆಯಾಗುವಂತೆ ಒತ್ತಡ, ಒಂದು ನಿರ್ದಿಷ್ಟವಾದ ವಿದ್ಯಾಭ್ಯಾಸ ಅಥವಾ ಕೆಲಸವನ್ನು ಪಡೆಯುವಂತೆ ಒತ್ತಡ)

- ಸ್ನೇಹಿತರು ಮತ್ತು ಜಾತಿ ನಿಷ್ಠೆ (ಹಳೇ ಸ್ನೇಹಿತರನ್ನು ಕಳೆದುಕೊಳ್ಳುವುದು, ವ್ಯವಹಾರದಲ್ಲಿ ಪಾಲುಗಾರರನ್ನು ಕಳೆದುಕೊಳ್ಳುವುದು, ಸಾಮಾಜಿಕ ಮತ್ತು ಧಾರ್ಮಿಕ ಹಬ್ಬ ಹರಿದಿನಗಳಲ್ಲಿ ಭಾಗಿಯಾಗುವುದರ ಅವಕಾಶವನ್ನು ಕಳೆದುಕೊಳ್ಳುವುದು)

- ರಾಷ್ಟ್ರೀಯತೆ (ಬಹುಶಃ ಕ್ರೈಸ್ತ ನಂಬಿಕೆಯನ್ನು ಜನರು "ವಿದೇಶಿ ಧರ್ಮ" ಮತ್ತು ಕೆಲವೊಮ್ಮೆ "ಭಾರತ ವಿರೋಧಿಧರ್ಮ" ಎಂಬುದಾಗಿಯೂ ಕಾಣಬಹುದು)

- ಭೌತಿಕತೆ (ಜೀವನ ನಡೆಸಲು ಹೋರಾಟ, ಆರ್ಥಿಕ ಭದ್ರತೆಯ ಮೇಲೆ ಗಮನ, ಆಸ್ತಿ ಅಂತಸ್ತನ್ನು ಕೂಡಿಡುವ ಆಶೆ, ಗ್ರಾಹಕರನ್ನು ಕಳೆದುಕೊಳ್ಳುವುದು, ಕೆಲಸ ಕಳೆದುಕೊಳ್ಳುವುದು)

- ಧಾರ್ಮಿಕ ರಾಜಿ (ದೇವರನ್ನು ತಲುಪಲು ಜನರು ವಿವಿಧ ಧರ್ಮಗಳನ್ನು ಮಾಡಿಕೊಂಡಿದ್ದಾರೆ ಎನ್ನುವುದು, ಯಾವ ದೇವರಾದರೇನು ನಾನು ಒಬ್ಬ ಭಕ್ತಿವಂತನಾಗಿ ಜೀವಿಸಿದರೆ ಸಾಕು, ಯೇಸುವನ್ನೂ ಇತರೆ ದೇವರುಗಳ ಜೊತೆ ಆರಾಧಿಸುವುದು)

- "ಭಾರತೀಯ ಮಾರ್ಗ" (ಭ್ರಷ್ಟತನ, ರಾಜಕೀಯ, ರಾಜಿ, ತಿರುಚುವುದು, ಪ್ರಭಾವ, ವೈಯಕ್ತಿಕ ಸಂಪರ್ಕಗಳು, ಸ್ವಜನಪಕ್ಷಪಾತ, ಸುಳ್ಳು ಮತ್ತು ಅರ್ಧ ಸತ್ಯ, ಸ್ಥಾನ ಮತ್ತು ಅಧಿಕಾರದ ದುರುಪಯೋಗ)

10. –

11. –

12. –

13. –

## ಅವಲೋಕನ

ಈ ಅಧ್ಯಯನದಲ್ಲಿ ನಾವು ಯೇಸು ತನ್ನ ಕಾಲದಲ್ಲಿ ಪಾಲೆಸ್ತೇನಿನಲ್ಲಿ ಸಂಧಿಸಿದ ಜನರಿಗೆ ದೇವರ ರಾಜ್ಯವನ್ನು ಪರಿಚಯಿಸಿದಾಗ ಮಾಡಿದ ಆತನ ಸೇವೆಯನ್ನು ಮತ್ತು ಅಧಿಕಾರವನ್ನು ನೋಡಿದ್ದೇವೆ. ಆತನು ತನ್ನ ಹಿಂಸೆ ಮತ್ತು ಮರಣಕ್ಕಿಂತ ಮುಂಚೆ ತನ್ನ ಶಿಷ್ಯರಿಗೆ ಹೀಗೆ ಹೇಳಿದನು:*ನಾನು ನಿಮಗೆ ನಿಜವಾಗಿ ಹೇಳುತ್ತೇನೆ, ನನ್ನನ್ನು ನಂಬುವವನು ನಾನು ಮಾಡುವ ಕ್ರಿಯೆಗಳನ್ನು ತಾನು ಸಹ ಮಾಡುವನು. ಇವುಗಳಿಗಿಂತ ಮಹತ್ತಾದವುಗಳನ್ನು ಅವನು ಮಾಡುವನು. ಏಕೆಂದರೆ ನಾನು ನನ್ನ ತಂದೆಯ ಬಳಿಗೆ ಹೋಗುತ್ತೇನೆ* (ಯೋಹಾನ 14:12). ನಾವು ಯೇಸುವಿನ ಶಿಷ್ಯರ, ಪೌಲನ ಮತ್ತು ಆದಿಸಭೆಯ ವಿಶ್ವಾಸಿಗಳನ್ನು ಉಲ್ಲೇಖಿಸುತ್ತಾ "ಅಪೊಸ್ತಲರು ಮಾಡಿದ ಕಾರ್ಯಗಳ" ಕುರಿತಾದ ಅಪೊಸ್ತಲರ ಕೃತ್ಯಗಳ ಪುಸ್ತಕವನ್ನು ಓದುವಾಗ ಅವರೂ ಸಹ ಅಧಿಕಾರದೊಂದಿಗೆ ಸುವಾರ್ತೆಯನ್ನು ಸಾರಿದರು ಎಂಬುದನ್ನು ನೋಡುತ್ತೇವೆ. ಅವರೂ ಸಹ ರೋಗಿಗಳನ್ನು ಸ್ವಸ್ಥಪಡಿಸಿದರು ಮತ್ತು ದೆವ್ವಪೀಡಿತರನ್ನು ಬಿಡುಗಡೆಗೊಳಿಸಿದರು. ಹಾಗಾಗಿ ಅವರ ಸೇವೆಯು ಯೇಸುವಿನ ಸೇವೆಯ ಮುಂದುವರೆಯುವಿಕೆಯಾಗಿತ್ತು.

ಇಂದು ಸಭೆಯು ಮಾಡುತ್ತಿರುವ ಸೇವೆಯೂ ಸಹ ಕೇವಲ ದಕ್ಷಿಣ ಭಾರತದಲ್ಲಿ ಮಾತ್ರವಲ್ಲ ಬದಲಾಗಿ ಲೋಕದೆಲ್ಲೆಡೆ ಯೇಸುವಿನ ಸೇವೆಯ ಮುಂದುವರೆಯುವಿಕೆಯಾಗಿದೆ. ನಾವು ಧೈರ್ಯವಾಗಿ ಸುವಾರ್ತೆಯನ್ನು ಸಾರುತ್ತೇವೆ. ನಾವು ದೇವರು ಗುಣಪಡಿಸುವನೆಂಬ ಭರವಸೆಯೊಂದಿಗೆ ಯೇಸುವಿನ ಹೆಸರಿನಲ್ಲಿ ರೋಗಿಗಳಿಗಾಗಿ ಪ್ರಾರ್ಥಿಸುತ್ತೇವೆ. ದೆವ್ವಪೀಡಿತರು ಬಿಡುಗಡೆ ಹೊಂದುವಂತೆಯೂ ಸಹ ನಾವು ಯೇಸುವಿನ ಹೆಸರಿನಲ್ಲಿ ಪ್ರಾರ್ಥಿಸುತ್ತೇವೆ. ನಾವು ಇವುಗಳನ್ನು ನಮ್ಮ ಸ್ವಂತ ಶಕ್ತಿ ಮತ್ತು ಅಧಿಕಾರದಿಂದ ಮಾಡುತ್ತಿಲ್ಲ ಬದಲಾಗಿ ಯೇಸುವಿನ ಶಕ್ತಿ ಮತ್ತು ಅಧಿಕಾರದ ಮೇಲೆ ಇಟ್ಟಿರುವ ನಂಬಿಕೆ ಮತ್ತು ವಿಶ್ವಾಸದೊಂದಿಗೆ ಮಾಡುತ್ತೇವೆ. ಆತನೇ ನಮ್ಮನ್ನು ಕರೆದಿರುವ ಸೇವೆಯ ಮೂಲಕ ದೇವರ ರಾಜ್ಯದ ಅಧಿಕಾರವನ್ನು ನಿರೂಪಿಸುವವನಾಗಿದ್ದಾನೆ.

ಆದರೆ ಕೆಲವೊಮ್ಮೆ ನಮ್ಮ ಸೇವೆಯು ನಾವು ನಿರೀಕ್ಷಿಸಿದ ಮಟ್ಟವನ್ನು ತಲುಪುವುದಿಲ್ಲ. ಕೆಲವು ಜನರು ನಾವು ಸುವಾರ್ತೆಯನ್ನು ಸಾರುವಾಗ ತಮ್ಮ ಹೃದಯಗಳನ್ನು ಕಠಿಣಪಡಿಸಿಕೊಳ್ಳುತ್ತಾರೆ. ಇತರರು ನಮ್ಮ ವಿರುದ್ಧವಾಗಿ ಬಂದು ನಮ್ಮನ್ನು ಹಿಂಸಿಸುತ್ತಾರೆ. ನಾವು ಪ್ರಾರ್ಥಿಸಿದ ಕೆಲವರಿಗೆ ಸ್ವಸ್ಥವಾದಂತೆ ಕಾಣುವುದಿಲ್ಲ. ಕೆಲವೊಮ್ಮೆ ದೆವ್ವಪೀಡಿತರು ಬಿಡುಗಡೆ ಹೊಂದುವುದಿಲ್ಲ. ಕೆಲವು ವಿಶ್ವಾಸಿಗಳು ದೇವರಿಗೆ ಹಾಗೂ ಆತನ ರಾಜ್ಯಕ್ಕೆ ಗೌರವ ತರುವ ರೀತಿಯಲ್ಲಿ ತಮ್ಮ ಜೀವಿತಗಳನ್ನು ಜೀವಿಸುವುದಿಲ್ಲ. ಈ ರೀತಿಯ ಸಂಗತಿಗಳು ನಡೆಯುವಾಗ ನಾವು ಅತೀ ಸುಲಭವಾಗಿ ನಿರಾಶೆಗೊಳ್ಳುತ್ತೇವೆ. ನಮಗೆ ನಂಬಿಕೆಯ ಕೊರತೆಯಿದೆ ಎಂದು ನಮ್ಮನ್ನು ನಾವೇ ದೂಷಿಸಿಕೊಳ್ಳಬಹುದು.

ಈ ರೀತಿಯಾಗಿ ಭಾವಿಸುವವರಿಗೆ ಮತ್ತು ತಮ್ಮ ಸೇವೆಯ ಮೂಲಕ ದೇವರ ರಾಜ್ಯವು ಇನ್ನೂ ಹೆಚ್ಚಾಗಿ ನಿರೂಪಿಸಲ್ಪಡಬೇಕು ಎಂದು ಬಯಸುವವರಿಗೆ ನಾನು ಕೊಡುವ ಸಲಹೆ ಹೀಗಿದೆ:

1) ದೇವರ ರಾಜ್ಯದ ಈಗ ಬಂದಿರುವ – ಮುಂದೆ ಬರಲಿರುವ ಅಂಶವನ್ನು ನೆನಪಿಸಿಕೊಳ್ಳಿರಿ. ಯೇಸು ಮಾಡಿರುವ ಕಾರ್ಯಗಳ ನಿಮಿತ್ತ ಮತ್ತು ನಮ್ಮ ಜೀವಿತಗಳಲ್ಲಿರುವ ಪವಿತ್ರಾತ್ಮನ ಪ್ರಸನ್ನತೆಯ ನಿಮಿತ್ತ ಅದು ಈಗಾಗಲೇ ಬಂದಿದೆ. ಆದರೆ ಅದು ತನ್ನ ಪೂರ್ಣ ಬಲದಿಂದ ಹಾಗೂ ಅಧಿಕಾರದಿಂದ ಇನ್ನೂ ಬಂದಿಲ್ಲ ಅಥವಾ ಮುಂದೆ ಬರಲಿದೆ. ಯೇಸು ಮಹಿಮೆಯೊಂದಿಗೆ ಹಿಂತಿರುಗುವಾಗ ಮಾತ್ರ ಅದು ಸಂಭವಿಸಲಿದೆ.

2) ನಿಮ್ಮ ಜೀವನ ಮತ್ತು ಸೇವೆಯಲ್ಲಿ ದೇವರ ರಾಜ್ಯದ ಬಲ ಮತ್ತು ಅಧಿಕಾರವು ಇನ್ನೂ ಸ್ಪಷ್ಟವಾಗಿ ವ್ಯಕ್ತವಾಗುವಂತೆ ಪ್ರಾರ್ಥಿಸಿರಿ. ಜನರ ಕಿವಿಗಳು ತೆರೆಯಲ್ಪಡುವಂತೆ ಪ್ರಾರ್ಥಿಸಿರಿ. ಜನರ ಹೃದಯಗಳು ಸ್ಪಂದಿಸುವಂತೆ ಪ್ರಾರ್ಥಿಸಿರಿ. ಇನ್ನೂ ಅನೇಕ ಜನರು ಸ್ವಸ್ಥತೆಯನ್ನು ಹೊಂದುವಂತೆ ಪ್ರಾರ್ಥಿಸಿರಿ. ಇನ್ನೂ ಅನೇಕ ದೆವ್ವಪಿಡಿತರು ಬಿಡುಗಡೆ ಹೊಂದುವಂತೆ ಪ್ರಾರ್ಥಿಸಿರಿ. ಜನರ ಜೀವಿತಗಳು ಇನ್ನೂ ಅಧಿಕವಾಗಿ ರೂಪಾಂತರ ಹೊಂದುವಂತೆ ಪ್ರಾರ್ಥಿಸಿರಿ.

3) ನಿಮ್ಮ ಜೀವನ ಮತ್ತು ಸೇವೆಗಾಗಿ ದೇವರ ಮಾರ್ಗದರ್ಶನ ಹುಡುಕಿರಿ. ಬಹುಶಃ ನೀವು ಪ್ರಾರ್ಥನೆಯಲ್ಲಿ ಹೆಚ್ಚಿನ ಸಮಯವನ್ನು ಕಳೆಯಬೇಕಾಗಿರಬಹುದು. ಬಹುಶಃ ನೀವು ನಿಮ್ಮ ಜೀವಿತವನ್ನು ಮತ್ತೊಮ್ಮೆ ಕರ್ತನಿಗೆ ಸಮರ್ಪಿಸಬೇಕಾಗಿರಬಹುದು. ಬಹುಶಃ ದೇವರು ತನ್ನ ಮಹಿಮೆಗಾಗಿ ನಿಮ್ಮನ್ನು ಇನ್ನೂ ಉತ್ತಮವಾಗಿ ಬಳಸಿಕೊಳ್ಳುವಂತೆ ನಿಮ್ಮನ್ನು ಆತನ ಮುಂದೆ ತಗ್ಗಿಸಿಕೊಳ್ಳಬೇಕಾಗಿರಬಹುದು. ಬಹುಶಃ ನೀವು ವ್ಯತ್ಯಾಸವಾದ ರೀತಿಯಲ್ಲಿ ಕಾರ್ಯಮಾಡಬೇಕಾಗಿರಬಹುದು. ಬಹುಶಃ ನೀವು ಒಂದು ವ್ಯತ್ಯಾಸವಾದ ಸ್ಥಳದಲ್ಲಿ ಕೆಲಸ ಮಾಡಬೇಕಾಗಿರಬಹುದು.

4) ಯೇಸುವಿನಲ್ಲಿ ಭರವಸೆಯಿಡಿರಿ (ರೋಮಾ. 10:11; 15:13; 1 ಪೇತ್ರ 2:6). ಆತನು ನಂಬಿಗಸ್ತನು (1 ಕೊರಿ. 1:9; 1 ಥೆಸ. 5:24; 2 ತಿಮೋ. 2:13). ಆತನು ತನ್ನ ವಾಗ್ದಾನಗಳನ್ನು ನೆರವೇರಿಸುವವನಾಗಿದ್ದಾನೆ (ಇಬ್ರಿಯ. 10:23). ಆತನು ಎಂದಿಗೂ ನಿಮ್ಮನ್ನು ಎಂದಿಗೂ ಕೈ ಬಿಡುವುದಿಲ್ಲ ತೊರೆಯುವುದಿಲ್ಲ

5) ನಿಮಗಿಂತ ಹೆಚ್ಚಾಗಿ ಯೇಸುವಿನ ಮೇಲೆ ನಿಮ್ಮ ಗಮನವಿರಲಿ. ಯೇಸುವೇ ರಕ್ಷಕನಾಗಿದ್ದಾನೆ, ನೀವು ಯಾರನ್ನೂ ಅವರ ಪಾಪಗಳಿಂದ ರಕ್ಷಿಸಲಾರಿರಿ. ಯೇಸುವೇ ಗುಣಪಡಿಸುವವನಾಗಿದ್ದಾನೆ, ನೀವು ಯಾರನ್ನೂ ಅವರ ರೋಗಗಳಿಂದ ಗುಣಪಡಿಸಲಾರಿರಿ. ಯೇಸುವೇ ವಿಮೋಚಕನಾಗಿದ್ದಾನೆ, ನೀವು ಯಾರನ್ನೂ ಸೈತಾನನ ಶಕ್ತಿಗಳಿಂದ ಬಿಡಿಸಲಾರಿರಿ. ಯೇಸುವೇ ರೂಪಾಂತರಗೊಳಿಸುವವನಾಗಿದ್ದಾನೆ, ನೀವು ಯಾರ ಆತ್ಮಿಕ ಜೀವಿತವನ್ನೂ ರೂಪಾಂತರಗೊಳಿಸಲಾರಿರಿ. ದೇವರ ರಾಜ್ಯದ ಅರಸನು ಯೇಸುವೇ ಮತ್ತು ನೀವು ಕೇವಲ ಆತನ ದೀನ ಸೇವಕರಷ್ಟೇ ಎಂಬುದನ್ನು ಮರೆಯಬೇಡಿರಿ.

# ಉತ್ತರಗಳು 6: ದೇವರ ರಾಜ್ಯವು ಮೇರೆಗಳನ್ನು ದಾಟುತ್ತದೆ.

## ಶಿಕ್ಷಕರಿಗಾಗಿ

ನೀವು ವಿದ್ಯಾರ್ಥಿಗಳಿಗೆ ಈ ಅಧ್ಯಯನವನ್ನು ಕಲಿಸಲು ಕನಿಷ್ಠ ಪಕ್ಷ ಒಂದು ತಾಸು ಬೇಕಾಗಬಹುದು, ಗ್ರಂಥಾಲಯ ಮತ್ತು ಮನೆಗೆಲಸದ ಸಮಯವನ್ನು ಹೊರತುಪಡಿಸಿ. ಮುಂದಿನ ದಿನದಲ್ಲಿ ನೀವು ಮತ್ತೊಮ್ಮೆ ಈ ಸಂಗತಿಗಳನ್ನು ನೆನಪಿಸಬೇಕಾಗಬಹುದು.

ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಚರ್ಚಿಸುವದಕ್ಕಿಂತ ಮೊದಲು ನೀವು ***ಪೀಠಿಕೆ*** ಮತ್ತು ಸತ್ಯವೇದದ ವಾಕ್ಯಭಾಗವನ್ನು ತರಗತಿಯಲ್ಲಿ ಅವರ ಮುಂದೆ ಓದಿರಿ.

ನೀವು ಈ ರೀತಿಯಾಗಿ ಪ್ರಶ್ನೆಗಳನ್ನು ಬಳಸಬೇಕೆಂಬುದು ನನ್ನ ಸಲಹೆಯಾಗಿದೆ:

1) ವಿದ್ಯಾರ್ಥಿಗಳು 1–12 ಪ್ರಶ್ನೆಗಳನ್ನು ಗುಂಪುಗಳಲ್ಲಿ ಚರ್ಚಿಸಲಿ. ಅವರ ಉತ್ತರಗಳನ್ನು ನೋಡಿರಿ.

   ಈ ಪ್ರಶ್ನೆಗಳನ್ನು ತರಗತಿಯಲ್ಲಾಗಲಿ ಅಥವಾ ಗ್ರಂಥಾಲಯದ / ಮನೆಗೆಲಸದ ಸಮಯದಲ್ಲಿ ಮಾಡಬಹುದು.

2) ಪ್ರಶ್ನೆ 13 ನ್ನು ವೈಯಕ್ತಿಕವಾಗಿ ಗ್ರಂಥಾಲಯದ / ಮನೆಗೆಲಸದ ಸಮಯದಲ್ಲಿ ಉತ್ತರಿಸುವುದು ಸೂಕ್ತ. ಆದರೆ ಮರುದಿನ ತರಗತಿಯ ಸಮಯದಲ್ಲಿ ವಿದ್ಯಾರ್ಥಿಗಳು ಬರೆದಿರುವ ಉತ್ತರಗಳನ್ನು ನೀವು ಪರಿಶೀಲಿಸಿರಿ.

ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು ನಿಬಂಧ ಎಂಬ ಭಾಗವನ್ನು ಒಂದು ಪ್ರಾಜೇಕ್ಟ್ ಆಗಿ ಮಾಡುವಂತೆ ಕೇಳಿಕೊಳ್ಳಿರಿ. ಆದರೆ ಅದಕ್ಕಿಂತ ಮೊದಲು ಸಾಕಷ್ಟು ಸಂಪನ್ಮೂಲಗಳು (ಪುಸ್ತಕಗಳು ಅಥವಾ ವ್ಯಕ್ತಿಗಳು) ಲಭ್ಯವಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿರಿ. ನಂತರ ತರಗತಿಯಲ್ಲಿ ಅವಕಾಶ ಸಿಕ್ಕಾಗ ಅದರ ಕುರಿತು ವಿಚಾರಿಸಿರಿ. ಆದಾಗ್ಯೂ ಇದನ್ನು ಮಾಡಲೇಬೇಕೆನ್ನುವ ಯಾವ ನಿರ್ಬಂಧವಿಲ್ಲ.

## ಉತ್ತರಗಳು

1. ಫಿಲಿಪ್ಪನು ದೇವರ ರಾಜ್ಯದ ಕುರಿತು ಸಾರುವುದಕ್ಕಾಗಿ ಸಮಾರ್ಯದೊಳಗೆ ಪ್ರಯಾಣಿಸಿದಾಗ ಎದುರಿಸಿದ ಕೆಲವು ಪೂರ್ವಗ್ರಹಿಕೆಗಳು ಮತ್ತು ಭಯವು ಇವುಗಳಾಗಿರಬಹುದು (ಈ ಅಧ್ಯಯನದ ಪೀಠಿಕೆಯನ್ನು ನೋಡಿರಿ):

   1) ಸಮಾರ್ಯದವರು ಫಿಲಿಪ್ಪನನ್ನು ಹಗೆಮಾಡಬಹುದು ಮತ್ತು ಶಾರೀರಿಕವಾಗಿ ಹಾನಿಯನ್ನುಂಟುಮಾಡಬಹುದು.

   2) ಸಮಾರ್ಯದವರು ಫಿಲಿಪ್ಪನ ಯೆಹೂದ್ಯ ಹಿನ್ನಲೆಯನ್ನು ಅರಿತ ತಕ್ಷಣವೇ ಸುವಾರ್ತೆಗೆ ಕಿವಿಗೊಡದೇ ಇರಬಹುದು.

   3) ಸಮಾರ್ಯದವರು ತಮ್ಮ ಧಾರ್ಮಿಕ ಮತ್ತು ಸಾಂಸ್ಕೃತಿಕ ಹಿನ್ನಲೆಯ ನಿಮಿತ್ತವಾಗಿ ಸುವಾರ್ತೆಯ ಸಂದೇಶವನ್ನು ಅರ್ಥಮಾಡಿಕೊಳ್ಳದೇ ಇರಬಹುದು.

   4) ಫಿಲಿಪ್ಪನು ತಮ್ಮನ್ನು ಯೆಹೂದ್ಯರನ್ನಾಗಿ ಮತಾಂತರಗೊಳಿಸಲು ಬಂದಿರಬಹುದೆಂದು ಸಮಾರ್ಯದವರು ಫಿಲಿಪ್ಪನ ಉದ್ದೇಶದ ಕುರಿತು ಸಂಶಯಪಡಬಹುದು.

   5) ಫಿಲಿಪ್ಪನು ರಾಜಕೀಯ ಉದ್ದೇಶದೊಂದಿಗೆ ಯೆರೂಸಲೇಮಿನಲ್ಲಿರುವ ಯೆಹೂದ್ಯ ನಾಯಕರುಗಳ ಪರವಾಗಿ ಗೂಡಾಚಾರ ಕೆಲಸ ಮಾಡಲು ಬಂದಿರಬಹುದೆಂದು ಸಮಾರ್ಯದವರು ಯೋಚಿಸಬಹುದು.

   6) ಫಿಲಿಪ್ಪನು ಯಾವುದೋ ಒಂದು ದುರುದ್ದೇಶದೊಂದಿಗೆ ಸಮಾರ್ಯದವರಿಂದ ಹಣಗಳಿಸಲು ಬಂದಿರಬಹುದೆಂದು ಅವರು ಯೋಚಿಸಬಹುದು.

2. –

3. –

4. ಫಿಲಿಪ್ಪನ ಸಂದೇಶದ ವಿಶಯಾಂಶವನ್ನು ಹೀಗೆ ವಿವರಿಸಬಹುದು: ಆತನು ಕ್ರಿಸ್ತನನ್ನು ಪ್ರಚುರಪಡಿಸಿದನು (ವ. 5), ಅಂದರೆ

1) ದೇವರ ರಾಜ್ಯದ ಶುಭವಾರ್ತೆಯನ್ನು ಪ್ರಚುರಪಡಿಸಿದನು (ವ. 12) ಮತ್ತು

2) ಯೇಸುಕ್ರಿಸ್ತನ ನಾಮವನ್ನು ಪ್ರಚುರಪಡಿಸಿದನು (ವ. 12)

ಮತ್ತು ಆತನ ಸೇವೆಯ ಗುಣಲಕ್ಷಣಗಳನ್ನು ಹೀಗೆ ವಿವರಿಸಬಹುದು (ಅದು ಯೇಸುವಿನ ಪ್ರಾರಂಭದ ಸೇವೆಯನ್ನು ನೆನಪಿಸುತ್ತದೆ, ಹಿಂದಿನ ಅಧ್ಯಯನವನ್ನು ನೋಡಿರಿ):

1) ಫಿಲಿಪ್ಪನು ಯೇಸುವಿನ ಹಾಗೂ ದೇವರ ರಾಜ್ಯದ ಕುರಿತು ಸಾರಿದನು.

2) ಫಿಲಿಪ್ಪನು ರೋಗಿಗಳನ್ನು ಸ್ವಸ್ಥಪಡಿಸಿದನು ಮತ್ತು ದೆವ್ವಪಿಡಿತರನ್ನು ಬಿಡಿಸಿದನು.

3) ಫಿಲಿಪ್ಪನು ಮಾಡಿದ ಅದ್ಭುತಕಾರ್ಯಗಳು ಜನರು ಆತನ ಸುವಾರ್ತಾ ಸಂದೇಶವನ್ನು ಕೇಳುವಂತೆ ಮಾಡಿದವು.

4) ಆತನ ಸೇವೆಯು ಜನರಿಗೆ ಸಂತೋಷವನ್ನು ತಂದಿತು.

5. ಫಿಲಿಪ್ಪನ ಕೃತ್ಯಗಳು ಆತನ ಮಾತಿನಲ್ಲಿರುವ ಸತ್ಯತೆಯನ್ನು ಬಿಂಬಿಸಿದವು:

ಆತನು ಕೇವಲ ರಕ್ಷಣೆಯ ಬಲದ ಕುರಿತು ಹಾಗೂ ಯೇಸುವಿನ ನಾಮದಲ್ಲಿರುವ ಸ್ವಸ್ಥತೆ ಮತ್ತು ಬಿಡುಗಡೆಯ ಕುರಿತು ಮಾತನಾಡಲಿಲ್ಲ. ಆತನ ಕ್ರಿಯೆಗಳು (ಜನರನ್ನು ರಕ್ಷಣೆಯ ಸಂತೋಷಕ್ಕೆ ನಡೆಸುವುದು, ರೋಗಿಗಳನ್ನು ಸ್ವಸ್ಥಪಡಿಸುವುದು ಮತ್ತು ದೆವ್ವಪಿಡಿತರನ್ನು ಬಿಡಿಸುವುದು). ಯೇಸು ಎಂಬ ವ್ಯಕ್ತಿಯ ಮೂಲಕ ದೇವರ ರಾಜ್ಯವು ಆಗಮಿಸಿದೆ ಮತ್ತು ಅದು ಹೊಸ ಜನರಿಗೆ (ಎಲ್ಲಾ ವಿಧವಾದ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜೀಕ ಹಿನ್ನಲೆಯುಳ್ಳ ಜನರಿಗೆ) ವಿಸ್ತಾರಗೊಳ್ಳುತಿದೆ ಎಂಬ ಆತನ ಸಂದೇಶದ ಸತ್ಯತೆಯನ್ನು ಪ್ರದರ್ಶಿಸಿದವು.

6. ನಿಮ್ಮ ಸ್ವಂತ ಸಭೆಯು ಯೇಸುವಿನ ಸಲುವಾಗಿ ಇದೇ ರೀತಿಯ ಪೂರ್ವಗ್ರಹಿತತೆಗಳನ್ನು ಮತ್ತು ಭಯವನ್ನು ಎದುರಿಸಬೇಕಾಗಿ ಬಂದಾಗ ನಿಮ್ಮ ಮಾತಿನಲ್ಲಿರುವ ಸುವಾರ್ತೆಯ ಸತ್ಯತೆಯನ್ನು ಬಿಂಬಿಸಲು ಯಾವ ನಿರ್ದಿಷ್ಟವಾದ ಕೃತ್ಯಗಳನ್ನು ಮಾಡಬಹುದು?

ಬಹುಶಃ ನೀವು (ಸ್ವಸ್ಥತೆ, ಬಿಡುಗಡೆ ಮತ್ತು ಇತರೇ ಅದ್ಭುತಕಾರ್ಯಗಳ ಜೊತೆಗೆ) ಈ ಸಂಗತಿಗಳನ್ನು ತಿಳಿಸಿರಬಹುದು:

1) ನಿಮ್ಮ ಸಭೆಯು ಎಲ್ಲಾ ವಿಧವಾದ ಜಾತಿಯ, ಧಾರ್ಮಿಕ, ಸಾಂಸ್ಕೃತಿಕ, ಭಾಷಿಕ, ಆರ್ಥಿಕ ಮತ್ತು ಸಾಮಾಜೀಕ ಹಿನ್ನಲೆಯುಳ್ಳ ಜನರನ್ನು ಹೊಂದಿದೆ. ನಿಮ್ಮ ಸಭೆಯಲ್ಲಿ ಯೌವನಸ್ಥರಿಗೂ ಹಿರಿಯರಿಗೂ ಮದುವೆಯಾಗದವರಿಗೂ ಕುಟುಂಬಸ್ಥರಿಗೂ ಸ್ಥಳವಿದೆ. ಇದು ದೇವರ ರಾಜ್ಯದ ಬಲವು ಎಲ್ಲಾ ಮೇರೆಗಳನ್ನು ಮೀರುವಂತದ್ದೂ ಎಂಬುದನ್ನು ಪ್ರದರ್ಶಿಸುತ್ತದೆ.

2) ಎಲ್ಲಾ ವಿಶ್ವಾಸಿಗಳನ್ನೂ (ಅವರು ಯಾವುದೇ ಹಿನ್ನಲೆಯಿಂದ ಬಂದವರಾಗಿದ್ದರೂ ಸಹ) ಗೌರವದಿಂದ ಕಾಣಲಾಗುತ್ತದೆ.

3) ಎಲ್ಲಾ ವಿಶ್ವಾಸಿಗಳಿಗೂ (ಅವರು ಯಾವುದೇ ಹಿನ್ನಲೆಯಿಂದ ಬಂದವರಾಗಿದ್ದರೂ ಸಹ) ಸಮಾನವಾಗಿ ನಾಯಕತ್ವದ ಮತ್ತು ಸೇವೆಯ ಅವಕಾಶಗಳನ್ನು ಕೊಡಲಾಗುತ್ತದೆ.

4) ವಿಶ್ವಾಸಿಗಳು ನಮ್ಮ ದೇಶದಲ್ಲಿ ಸಹಜವಾಗಿ ಕಂಡುಬರುವ ಎಲ್ಲಾ ವಿಧವಾದ ಜಾತಿಯ, ಧಾರ್ಮಿಕ, ಸಾಂಸ್ಕೃತಿಕ, ಭಾಷಿಕ, ಆರ್ಥಿಕ ಮತ್ತು ಸಾಮಾಜೀಕ ಹಿನ್ನಲೆಯುಳ್ಳ ಜನರೊಂದಿಗೆ ಬೆರೆಯುತ್ತಾರೆ ಅಥವಾ ಅವರನ್ನು ತಮ್ಮ ಸ್ನೇಹಿತರನ್ನಾಗಿ ಮಾಡಿಕೊಳ್ಳುತ್ತಾರೆ.

5) ವಿಶ್ವಾಸಿಗಳ ಜೀವನಗಳೂ ಬದಲಾಗುತ್ತಿವೆ (ಅವರ ಜೀವಿತಗಳು ಪುನಃ ಕಟ್ಟಲ್ಪಡುತ್ತಿವೆ. ಭ್ರಷ್ಟರಾಗಿದ್ದವರು ಪ್ರಾಮಾಣಿಕರಾಗಿದ್ದಾರೆ, ದುರಾಶೆಯಿದ್ದವರು ಉದಾರಿಗಳಾಗಿದ್ದಾರೆ, ಗರ್ವಿಷ್ಠರಾಗಿದ್ದವರು ದೀನರಾಗಿದ್ದಾರೆ, ಪ್ರಾಪಂಚಿಕರಾಗಿದ್ದವರು ಆತ್ಮಿಕವಾಗಿದ್ದಾರೆ ... ಇತ್ಯಾದಿ)

6) ವಿಶ್ವಾಸಿಗಳು (ಸಭಾಪಾಲಕರು ಮತ್ತು ಇತರೇ ನಾಯಕರುಗಳನ್ನು ಒಳಗೊಂಡು) ಈಗಲೂ ಭಾರತೀಯರಂತೆ ವರ್ತಿಸುತ್ತಾರೆ (ಅಂದರೆ ಅವರು ವಿದೇಶಿಯರಂತೆ ವರ್ತಿಸದೇ ತಮ್ಮ ದೇಶದ ಕುರಿತು ಈಗಲೂ ಹೆಮ್ಮೆಯನ್ನು ವ್ಯಕ್ತಪಡಿಸುತ್ತಾ ಸ್ವದೇಶಿಯರೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ).

7. ರಕ್ಷಣೆ ಹೊಂದುವುದಕ್ಕಿಂತ ಮೊದಲು ಆಡಿದ ಮಂತ್ರವಾದಿಯಾದ ಸೀಮೋನನ ಮಾತುಗಳನ್ನು ಮತ್ತು ಕೃತ್ಯಗಳನ್ನು ಫಿಲಿಪ್ಪನು ಸಮಾರ್ಯದಲ್ಲಿ ತಂಗಿದ್ದಾಗ ಆಡಿದ ಮಾತುಗಳೊಂದಿಗೆ ಮತ್ತು ಕೃತ್ಯಗಳೊಂದಿಗೆ ಹೋಲಿಸಿದಾಗ ಇದನ್ನು ಕಾಣಬಹುದು:

1) ಸೀಮೋನನು ಮಾಟಮಂತ್ರ ಮತ್ತು ವಾಮಾಚಾರದ ಕೆಲಸವನ್ನು ಮಾಡುತ್ತಿದ್ದನು. ಫಿಲಿಪ್ಪನು ಸ್ವಸ್ಥತೆ ಮತ್ತು ಬಿಡುಗಡೆಯ ಕೆಲಸವನ್ನು ಮಾಡುತ್ತಿದ್ದನು.

2) ಸೀಮೋನನೇ ತನ್ನ ಸೇವೆಯ ಕೇಂದ್ರವಾಗಿದ್ದನು (ಆತನು ಹೊಗಳಿಕೊಳ್ಳುತ್ತಿದ್ದನು ಮತ್ತು ತಾನು ಒಬ್ಬ ದೊಡ್ಡ ವ್ಯಕ್ತಿ ಎಂದುಕೊಂಡಿದ್ದನು). ಫಿಲಿಪ್ಪನು ಯೇಸುಕ್ರಿಸ್ತನನ್ನು ತನ್ನ ಸೇವೆಯ ಕೇಂದ್ರವಾಗಿರಿಸಿದ್ದನು.

ಸಮಾರ್ಯದ ಜನರು ಇವರಿಬ್ಬರಿಗೂ ತೋರಿದ ಪ್ರತಿಕ್ರಿಯೆಯ ಹೋಲಿಕೆ ಹೀಗಿದೆ:

1) ಜನರು (ಪ್ರಾರಂಭದಲ್ಲಿ) ಸೀಮೋನನಿಂದಲೂ ಮತ್ತು (ನಂತರ) ಫಿಲಿಪ್ಪನಿಂದಲೂ ಪ್ರಭಾವಿತರಾಗಿದ್ದರು.

2) ಜನರು ಮೊದಲು ಸೀಮೋನನ್ನು ಹಿಂಬಾಲಿಸಿದರು ನಂತರ ಫಿಲಿಪ್ಪನನ್ನು ಹಿಂಬಾಲಿಸಿದರು.

3) ಆದರೆ ಫಿಲಿಪ್ಪನ ಸೇವೆಯು ಸೀಮೋನನ ಸೇವೆಗಿಂತ ಹೆಚ್ಚು ಬಲ, ಹೆಚ್ಚು ಮನವೊಲಿಸುವಂತಹ ಮತ್ತು ಪ್ರಾಮಾಣಿಕತೆ ಉಳ್ಳದ್ದಾಗಿರಬಹುದು ಯಾಕೆಂದರೆ ಸಮಾರ್ಯದವರು ಸೀಮೋನನನ್ನು ಬಿಟ್ಟು ಫಿಲಿಪ್ಪನನ್ನು ಹಿಂಬಾಲಿಸಿದರು.

8. –

9. ಯೆರೂಸಲೇಮಿನಲ್ಲಿದ್ದ ಅಪೊಸ್ತಲರು ಪೇತ್ರ ಮತ್ತು ಯೊಹಾನರನ್ನು ಸಮಾರ್ಯಕ್ಕೆ ಕಳುಹಿಸಿದ್ದರ ಹಿಂದೆ ಒಂದಕ್ಕಿಂತ ಹೆಚ್ಚು ಕಾರಣವಿರಬಹುದೆಂದು ನಾನು ಯೋಚಿಸುತ್ತೇನೆ:

1) ಅವರು ಸಮಾರ್ಯದಲ್ಲಿ ನಡೆದ ಉಜ್ಜೀವನದ ಸುದ್ದಿಯನ್ನು ಕೇಳಿದ್ದರು ಮತ್ತು ತಮ್ಮವರೇ ಪ್ರತ್ಯಕ್ಷವಾಗಿ ಅದರ ಕುರಿತು ಮಾಹಿತಿಯನ್ನು ತಿಳಿದುಕೊಳ್ಳಬೇಕೆಂದು ಬಯಸಿದರು.

2) ಸಮಾರ್ಯದವರು ಸುವಾರ್ತೆಯನ್ನು ಅಂಗೀಕರಿಸಿ ಯೇಸುವಿನ ಕಡೆಗೆ ತಿರುಗಿಕೊಳ್ಳುವರು ಎಂಬುದನ್ನು ಬಹುಶಃ ಅವರು ನಂಬಿರಲಿಲ್ಲ.

3) ಬಹುಶಃ ಅವರು ಫಿಲಿಪ್ಪನ ಸೇವೆಯ ಪ್ರಾಮಾಣಿಕತೆಯನ್ನು ದೃಢೀಕರಿಸಲು ಬಯಸಿರಬಹುದು.

4) ಸಮಾರ್ಯದವರು ಫಿಲಿಪ್ಪನ ಸೇವೆಯ ಮೂಲಕ ಪವಿತ್ರಾತ್ಮನನ್ನು ಪಡೆದಿದ್ದರು ಎಂಬುದನ್ನು ಅವರು ಬಹುಶಃ ಖಚಿತಪಡಿಸಿಕೊಳ್ಳಲು ಬಯಸಿರಬಹುದು.

10. –

11. ಈ ಕಥೆಯಲ್ಲಿ ಪವಿತ್ರಾತ್ಮನು ಒಂದು ಮುಖ್ಯ ಪಾತ್ರವನ್ನು ವಹಿಸುತ್ತಾನೆ (ಆ ಪಾತ್ರವನ್ನು ಸ್ಪಷ್ಟವಾಗಿ ಪ್ರಸ್ತಾಪಿಸದಿದ್ದಾಗ್ಯೂ):

1) ಎಲ್ಲಾ ಮೇರೆಗಳನು ್ನ ಮೀರುವುದು ಪವಿತ್ರಾತ್ಮನ ಕಾರ್ಯವಾಗಿದೆ (ಪಂಚಾಶತ್ತಮದ ಮೊದಲನೆಯ ದಿನದಲ್ಲಿ ನಡೆದ ಅದ್ಭುತಗಳಲ್ಲಿ ಇದು ಒಂದಾಗಿದೆ. ಆಗ ಜಗತ್ತಿನ "ಪ್ರತಿಯೊಂದು ಜನಾಂಗದಿಂದ ಬಂದ ದೇವಭಕ್ತಿಯುಳ್ಳ ಯೆಹೂದ್ಯರು" "ದೇವರ ಮಹತ್ಕಾರ್ಯಗಳನ್ನು" ತಮ್ಮ ಭಾಷೆಗಳಲ್ಲಿಯೇ ಕೇಳಿದರು ಅಪೊ.ಕೃತ್ಯ. 2:5–11). ಹಾಗಾಗಿ ಯೆಹೂದ್ಯರ ಮತ್ತು ಸಮಾರ್ಯದವರ ನಡುವೆ ಇದ್ದ ಮೇರೆಯನ್ನು ಸುವಾರ್ತೆಯು ದಾಟಿದಾಗ ಅದು ಪವಿತ್ರಾತ್ಮನ ಕಾರ್ಯವಾಗಿತ್ತು.

2) ಜನರು ಸುವಾರ್ತೆಯನ್ನು ಕೇಳಿಸಿಕೊಂಡು ಅದನ್ನು ಅಂಗೀಕರಿಸುವಂತೆ ಅವರ ಹೃದಯಗಳಲ್ಲಿ ಅಲಗು ನೆಟ್ಟಂತಾಗುವ ಅನುಭವವು ಪವಿತ್ರಾತ್ಮನ ಕಾರ್ಯವಾಗಿದೆ (ಪಂಚಾಶತ್ತಮದ ಮೊದಲ ದಿನದಂದು ಯೆರೂಸಲೇಮಿನಲ್ಲಿ ನಡೆದಂತೆಯೇ ಈ ಕಾರ್ಯವು ಸಮಾರ್ಯದಲ್ಲಿಯೂ ನಡೆಯಿತು, 1 ಥೆಸ. 1:5 ರೊಂದಿಗೆ ಹೋಲಿಸಿರಿ).

3) ಸಮಾರ್ಯದವರು ಯೇಸುವಿನ ಮೇಲೆ ನಂಬಿಕೆಯಿಟ್ಟು ರಕ್ಷಣೆ ಹೊಂದಿದಾಗ ಅನುಭವಿಸಿದ ಸಂತೋಷವು ಪವಿತ್ರಾತ್ಮನ ಕಾರ್ಯವಾಗಿತ್ತು (ರೋಮ 14:17; ಗಲಾತ್ಯ 5:22; 1 ಥೆಸ. 1:6 ರೊಂದಿಗೆ ಹೋಲಿಸಿರಿ).

4) ಸಮಾರ್ಯದವರ ನಡುವೆ ಪಿಲಿಪ್ಪನು ಮಾಡಿದ ಬಲವುಳ್ಳ ಸೇವೆಯು ಪವಿತ್ರಾತ್ಮನ ಕಾರ್ಯವಾಗಿತ್ತು (ರೋಮ 15:19; 1 ಕೊರಿ. 2:4 ರೊಂದಿಗೆ ಹೋಲಿಸಿರಿ).

5) ಅಪೊಸ್ತಲರು ಸಮಾರ್ಯದವರ ಮೇಲೆ ಕೈಗಳನ್ನು ಇರಿಸಿದಾಗ ಪವಿತ್ರಾತ್ಮನು ಅವರನ್ನು ಎಷ್ಟು ಬಲವಾದ ರೀತಿಯಲ್ಲಿ ತುಂಬಿಸಿದನೆಂದರೆ ಮಂತ್ರವಾದಿಯಾದ ಸಿಮೋನನು ಈ ವರವನ್ನು ಪಡೆದುಕೊಳ್ಳುವದಕ್ಕಾಗಿ ಹಣಕೊಡಲು ಸಿದ್ದನಿದ್ದನು ಇದೂ ಸಹ ಪವಿತ್ರಾತ್ಮನ ಕಾರ್ಯವಾಗಿತ್ತು.

ಅದೇ ರೀತಿಯಾಗಿ ದೇವರ ಜನರೆಲ್ಲರೂ ಆತನ ರಾಜ್ಯದ ಶುಭ ಸಂದೇಶವನ್ನು ಅನುಭವಿಸುವುದರಲ್ಲಿ ಪವಿತ್ರಾತ್ಮನು ಒಂದು ಮುಖ್ಯವಾದ ಪಾತ್ರವನ್ನು ವಹಿಸುತ್ತಾನೆ. ದೇವರ ರಾಜ್ಯದ ವಿಸ್ತರಣೆಯು ಪವಿತ್ರಾತ್ಮನ ಕಾರ್ಯವಾಗಿದೆ. ದೇವರ ರಾಜ್ಯವು ಬೆಳೆಯುತ್ತಾ ಎಲ್ಲಾ ಕಡೆಯಲ್ಲಿ ಹರಡಿಕೊಳ್ಳುವಾಗ ಅದು ಎಲ್ಲಾ ರೀತಿಯ ಮಾನವ ಮತ್ತು ಭೌಗೋಳಿಕ ಮೇರೆಗಳನ್ನು ಮೀರುವಂತದ್ದು ಪವಿತ್ರಾತ್ಮನ ಕಾರ್ಯವಾಗಿದೆ.

12. –

13. –

## ಅವಲೋಕನ

ಅಪೊಸ್ತಲರ ಕೃತ್ಯಗಳ ಪುಸ್ತಕವು ಪೇತ್ರ ಮತ್ತು ಪೌಲನ ಸೇವೆಗಳ ಕುರಿತು ಅನೇಕ ಕುತೂಹಲಕರ ಕಥೆಗಳನ್ನು ಒಳಗೊಂಡಿದೆ. ಇವುಗಳಲ್ಲಿರುವ ಅನೇಕ ಕಥೆಗಳು ಸುವಾರ್ತೆಯನ್ನು ಹೊಸ ಜನರಿಗೆ ಮತ್ತು ಹೊಸ ಭೌಗೋಳಿಕ ಪ್ರದೇಶಗಳಿಗೆ ತೆಗೆದುಕೊಂಡು ಹೋಗುವಂತೆ ಅವರು ಪವಿತ್ರಾತ್ಮನಿಂದ ಹೇಗೆ ಮಾರ್ಗದರ್ಶಿಸಲ್ಪಟ್ಟರು ಎಂಬುದನ್ನು ತೋರಿಸುತ್ತದೆ. ದೇವರ ರಾಜ್ಯವು ಪದೇ ಪದೇ ಮೇರೆಗಳನ್ನು ದಾಟುವುದನ್ನು ಕಾಣಬಹುದು.

ದೇವರ ರಾಜ್ಯವು ಮೇರೆಗಳನ್ನು ದಾಟುವುದರ ಕುರಿತು ಸಭಾ ಇತಿಹಾಸದಲ್ಲೂ ಸಾಕಷ್ಟು ಕುತೂಹಲಕರವಾದ ಮತ್ತು ಸವಾಲನ್ನೊಡ್ಡುವ ಕಥೆಗಳಿವೆ. ಯೇಸುವಿನ ಕುರಿತಾದ ಶುಭಸಂದೇಶವನ್ನು "ಎಲ್ಲಾ ದೇಶದ ಜನರ" (ಮತ್ತಾಯ 28:19) ಬಳಿಗೆ ಹೊತ್ತುಕೊಂಡು ಹೋಗಲು ದೇವರು ಇಂದಿಗೂ ಅನೇಕ ವ್ಯಕ್ತಿಗಳನ್ನು ಮತ್ತು ಸಭೆಗಳನ್ನು ಕರೆಯುತ್ತಾನೆ ಮತ್ತು ಸಮರ್ಥಗೊಳಿಸುತ್ತಾನೆ. ಯೇಸು ತನ್ನ ಶಿಷ್ಯರಿಗೆ ಹೀಗೆ ಹೇಳಿದನು, *ಪರಲೋಕ ರಾಜ್ಯವು ಈ ಸುವಾರ್ತೆಯು ಲೋಕದಲ್ಲೆಲ್ಲಾ ಸರ್ವಜನಾಂಗಗಳಿಗೆ ಸಾಕ್ಷಿಗಾಗಿ ಸಾರಲ್ಪಡುವುದು. ತರುವಾಯ ಅಂತ್ಯ ಬರುವುದು* (ಮತ್ತಾಯ 24:14).

## ನಿಬಂಧಗಳು

1. ಒಬ್ಬ ಮಿಷನರಿಯ (ಅಥವಾ ಎಲ್ಲಾ ಸಾಮಾಜಿಕ ಹಾಗೂ ಸಾಂಸ್ಕೃತಿಕ ಎಲ್ಲೆಗಳನ್ನು ಮೀರಿ ಸುವಾರ್ತೆಯನ್ನು ಸಾರುವುದರ ನಿಮಿತ್ತ ತನ್ನ ಮನೆಯನ್ನು ಬಿಟ್ಟು ವ್ಯತ್ಯಾಸವಾದ ಸ್ಥಳಕ್ಕೆ ಹೋದ ವ್ಯಕ್ತಿಯ) ಕುರಿತಾದ ಪುಸ್ತಕವನ್ನು (ಬಹುಶಃ ನಿಮ್ಮ ಕಾಲೇಜಿನ ಗ್ರಂಥಾಲಯದಲ್ಲಿ) ಹುಡುಕಿರಿ. ಆ ಪುಸ್ತಕವನ್ನು ಓದಿರಿ ಮತ್ತು ನಿಮ್ಮ ಸ್ನೇಹಿತರೊಂದಿಗೆ ಅಥವಾ ಸಹಪಾಠಿಗಳೊಂದಿಗೆ ಅದನ್ನು ಹಂಚಿಕೊಳ್ಳುವದಕ್ಕೆ ಅವಕಾಶವನ್ನು ಎದುರು ನೋಡಿರಿ.
2. ಎಲ್ಲಾ ಸಾಮಾಜಿಕ ಹಾಗೂ ಸಾಂಸ್ಕೃತಿಕ ಎಲ್ಲೆಗಳನ್ನು ಮೀರಿ ಸುವಾರ್ತೆಯನ್ನು ಸಾರುವುದರಲ್ಲಿ ಯಶಸ್ಸನ್ನು ಕಂಡ ಒಬ್ಬ ಸಭಾಪಾಲಕ ಅಥವಾ ಸಭಾಪಾಲಕಿಯ ಸಂದರ್ಶನವನ್ನು ನೋಡಿರಿ. ಒಂದು ಸಂಕ್ಷಿಪ್ತ ವರದಿಯನ್ನು ಬರೆದು ನಿಮ್ಮ ಸ್ನೇಹಿತರಿಗೆ ಅಥವಾ ಸಹಪಾಠಿಗಳಿಗೆ ಕೊಡಿರಿ (ಅಥವಾ ನೋಟಿಸ್ ಬೋರ್ಡ್ ಮೇಲೆ ಹಾಕಿರಿ).

# ಉತ್ತರಗಳು 7: ದೇವರ ರಾಜ್ಯವು ಬೆಳೆಯುತ್ತದೆ

## ಶಿಕ್ಷಕರಿಗಾಗಿ

ಈ ಅಧ್ಯಯನವನ್ನು ಮುಗಿಸಲು ಒಂದು ತಾಸು ಸಾಕಾಗಬಹುದು.

ಕೆಲವು ಟಿಪ್ಪಣಿಗಳು:

- ಕಳೆ ಎಂದರೆ ಚಿಕ್ಕ ಗಿಡವಾಗಿರುವಾಗ ಗೋಧಿಯಂತೆಯೇ ಕಾಣುವಂತಹ ಒಂದು ಹುಲ್ಲಾಗಿದೆ. ಅವು ಬೆಳೆಯುವಾಗ ಗೋಧಿಯ ತೆನೆಯೊಂದಿಗೆ ಸೇರಿಕೊಂಡು ಬೆಳೆಯುವುದರಿಂದ ಗೋಧಿಯನ್ನು ನಾಶಮಾಡದೆ ಅವುಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಹಾಗಾಗಿ ಅದನ್ನು ಸುಗ್ಗಿಯ ಕಾಲದಲ್ಲಿ ಮಾತ್ರ ಮಾಡಲಾಗುತ್ತದೆ.

- ಸಾಸಿವೆ ಕಾಳು ಅತ್ಯಂತ ಚಿಕ್ಕ ಬೀಜವಾಗಿದ್ದು ಅತ್ಯುತ್ತಮವಾದ ವಾತಾವರಣವಿದ್ದಲ್ಲಿ ಸುಮಾರು 3 ಮೀಟರ್ ಎತ್ತರ ಬೆಳೆಯಬಲ್ಲದು.

- ಹುಳಿ ಹಿಟ್ಟು ಸಾಮಾನ್ಯವಾಗಿ ಕೆಟ್ಟತನದ ಅಥವಾ ಅಶುದ್ಧತ್ವದ ಸಂಕೇತವಾಗಿ ಬಳಸಲಾಗುತ್ತದೆ. ಆದರೆ ಈ ಸಾಮ್ಯದಲ್ಲಿ ಅದು ಇಡೀ ಹಿಟ್ಟಿನ ಮೇಲೆ ಪರಿಣಾಮ ಬೀರುವ ಅದೃಶ್ಯ ಶಕ್ತಿಯಾಗಿ ಬಳಸಲಾಗಿದೆ.

ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ಉತ್ತರಿಸುವುದಕ್ಕಿಂತ ಮುಂಚೆ ***ಪೀಠಿಕೆ*** ಮತ್ತು ಸತ್ಯವೇದ ವಾಕ್ಯಭಾಗವನ್ನು ತರಗತಿಯಲ್ಲಿ ಓದಿರಿ.

ಮೊದಲ ಎರಡು ಪ್ರಶ್ನೆಗಳು ಪರಿಚಯ ಭಾಗದ ಮೇಲೆ ಆಧಾರಿತವಾಗಿದೆ. ಉಳಿದ ಪ್ರಶ್ನೆಗಳು ಈ ಅಧ್ಯಯನದ ನಾಲ್ಕು ಸಾಮ್ಯಗಳ ಮೇಲೆ ಆಧರಿತವಾಗಿದೆ.

## ಉತ್ತರಗಳು

1. "ದೇವರ ರಾಜ್ಯ" ಮತ್ತು "ಪರಲೋಕ ರಾಜ್ಯ" ಎಂಬ ಹೇಳಿಕೆಗಳ ನಡುವಿನ ಸಂಬಂಧವೇನೆಂದರೆ, ಅವುಗಳು ಸಮಾನಾರ್ಥ ಪದಗಳಾಗಿವೆ. ಹಾಗಾಗಿ ಅವುಗಳ ಅರ್ಥದಲ್ಲಿ ಯಾವ ವ್ಯತ್ಯಾಸವಿಲ್ಲ. ಹಾಗಾಗಿ ಮತ್ತಾಯನು "ದೇವರು" ಎಂಬ ಪದದ ಬದಲಾಗಿ "ಪರಲೋಕ" ಎಂಬ ಪದವನ್ನು ಬಳಸಿದ್ದರ ಹಿಂದೆ ಇರುವ ಕಾರಣವೇನೆಂದರೆ, ಯೆಹೂದ್ಯರು ದೇವರು ಎಂಬ ಪದವನ್ನು ಅತೀ ಪವಿತ್ರವೆಂದು ಎಣಿಸುತ್ತಿದ್ದರು ಮತ್ತು ಅವರನ್ನು ಬೇಸರಗೊಳಿಸಬಾರದೆಂಬುದು ಆತನ ಬಯಕೆಯಾಗಿತ್ತು.
2. ಬಿತ್ತುವವನ, ಕಳೆಯ, ಸಾಸುವೆ ಕಾಳಿನ ಮತ್ತು ಹುಳಿಹಿಟ್ಟಿನ ಈ ನಾಲ್ಕು ಸಾಮ್ಯಗಳಲ್ಲಿ ಇರುವ ಸಾಮಾನ್ಯವಾದ ಅಂಶವು ಯಾವುದೆಂದರೆ ಈಗಿನ ಯುಗದಲ್ಲಿ ಅಂದರೆ "ಸಭೆಯ ಯುಗದಲ್ಲಿ" ದೇವರ ರಾಜ್ಯವು ಅಭಿವೃದ್ಧಿಯಾಗುವುದಾಗಿದೆ. ದೇವರ ರಾಜ್ಯವು ಹರಡುತ್ತಿವೆ, ಬೆಳೆಯುತ್ತಿವೆ ಮತ್ತು ವಿಸ್ತಾರಗೊಳ್ಳುತ್ತಿವೆ ಎಂಬುದನ್ನು ಆ ಸಾಮ್ಯಗಳು ತೋರಿಸುತ್ತವೆ.
3. ಬಿತ್ತುವವನ ಸಾಮ್ಯದಿಂದ ನಾವು ದೇವರ ರಾಜ್ಯದ ಕುರಿತು ಈ ಸಂಗತಿಗಳನ್ನು ಕಲಿಯುತ್ತೇವೆ:
   1) ದೇವರ ರಾಜ್ಯದ ಸಂದೇಶವು ಜನರ ನಡುವೆ ಹರಡಿದೆ.
   2) ದೇವರ ರಾಜ್ಯದ ಸಂದೇಶದ ಕುರಿತು ಕೇಳುವ ಜನರು ವಿವಿಧ ಹಿನ್ನಲೆಯುಳ್ಳವರಾಗಿದ್ದಾರೆ. ಜನರು ಈ ಸಂದೇಶಕ್ಕೆ ವಿವಿಧ ರೀತಿಯಲ್ಲಿ ಸ್ಪಂದಿಸುತ್ತಾರೆ.
   3) ದೇವರ ರಾಜ್ಯದ ಸಂದೇಶವು ಅನೇಕ ಜನರ ಜೀವಿತಗಳಲ್ಲಿ ಫಲವನ್ನು ಕೊಡುವುದಿಲ್ಲ. ಇದಕ್ಕೆ ವ್ಯತ್ಯಾಸವಾದ ಕಾರಣಗಳಿವೆ.
   4) ಆದರೆ ದೇವರ ರಾಜ್ಯದ ಸಂದೇಶವನ್ನು ಸ್ವೀಕರಿಸುವ ಮತ್ತು ಅರ್ಥಮಾಡಿಕೊಳ್ಳುವ ವ್ಯಕ್ತಿಯ ಜೀವನದಲ್ಲಿ ಅದು ಹೆಚ್ಚು ಫಲವನ್ನು ಕೊಡುತ್ತದೆ.

4. ನೀವು ಸಿದ್ಧಪಡಿಸಿರುವ ಬಿತ್ತುವವನ ಸಾಮ್ಯವನ್ನು ಆಧರಿಸಿದ ಒಂದು ಚಾರ್ಟ್ ಹೀಗಿರಬಹುದು. ಆದರೆ ನಿಮ್ಮ ಸ್ವಂತ ಸಭೆಯ ಅನುಭವಗಳನ್ನು ಮೂರನೆಯ ಕಾಲಮ್‌ನಲ್ಲಿ ತುಂಬಿರಿ.

| **ನೆಲ** | **ಪ್ರತಿಕ್ರಿಯೆ** | **ಒಂದು ಉದಾಹರಣೆ (ವ್ಯಕ್ತಿ ಅಥವಾ ಜನರ ಗುಂಪು)** |
|---|---|---|
| ದಾರಿ ಮಗ್ಗಲು | ಸೈತಾನನು ಆ ಬೀಜಗಳನ್ನು ತೆಗೆದುಹಾಕುತ್ತಾನೆ – ಕೇಳುವವರು ಸಂದೇಶವನ್ನು ಅರ್ಥಮಾಡಿಕೊಳ್ಳುವುದಿಲ್ಲ | |
| ಬಂಡೆಯ ನೆಲ | ಬೀಜವು ಬೇರೂರುವುದಿಲ್ಲ – ಕಷ್ಟ ಮತ್ತು ಹಿಂಸೆಯು ಕೇಳುವವರನ್ನು ಬಿದ್ದುಹೋಗುವಂತೆ ಮಾಡುತ್ತದೆ | |
| ಮುಳ್ಳುಗಿಡದ ನಡುವೆ | ಗಿಡವು ಒಣಗಿಹೋಗುವುದು – ಈ ಜೀವನದ ಚಿಂತೆಗಳು ಮತ್ತು ಐಶ್ವರ್ಯದ ವ್ಯಾಮೋಹವು ಕೇಳುವವನನ್ನು ಫಲಕೊಡದಂತೆ ಮಾಡುತ್ತವೆ | |
| ಒಳ್ಳೆಯ ನೆಲ | ಹೇರಳವಾದ ಸುಗ್ಗಿಯನ್ನು ತಂದ ಒಳ್ಳೆಯ ಬೆಳೆ – ಕೇಳುವವನು ಸಂದೇಶಕ್ಕೆ ಕಿವಿಗೊಡುತ್ತಾನೆ ಮತ್ತು ಅದನ್ನು ಅರ್ಥಮಾಡಿಕೊಳ್ಳುತ್ತಾನೆ | |

5. ಬಿತ್ತುವವನ ಸಾಮ್ಯದ ಈ ಚಾರ್ಟ್‌ನಿಂದ ನನ್ನ ಸ್ವಂತ ಸೇವೆಯ ಕುರಿತು ನಾನು ಈ ಸಮಾರೋಪಗಳಿಗೆ ತಲುಪಿದ್ದೇನೆ:

   1) ಸುವಾರ್ತೆಯು ಎಲ್ಲಾ ಕಡೆಯಲ್ಲಿಯೂ ಬಿತ್ತಲ್ಪಡಬೇಕು. ಆದರೆ ಸುವಾರ್ತೆಯನ್ನು ಕೇಳುವ ಪ್ರತಿಯೊಬ್ಬರಿಂದಲೂ ನಾನು ಯಶಸ್ಸನ್ನು ಅಪೇಕ್ಷಿಸಲು ಸಾಧ್ಯವಿಲ್ಲ. ಅದಲ್ಲದೆ ಪ್ರಾರಂಭದಲ್ಲಿ ಸುವಾರ್ತೆಯ ಸಂದೇಶವನ್ನು ಸ್ವೀಕರಿಸುವವರಿಂದಲೂ ನಾನು ಯಶಸ್ಸನ್ನು ಅಪೇಕ್ಷಿಸಲು ಸಾಧ್ಯವಿಲ್ಲ.

   2) ಸಭೆಯ ಕಾಲದಲ್ಲಿ (ಅಂದರೆ ಯೇಸು ತನ್ನ ಭೂಲೋಕ ಸೇವೆಯ ಸಮಯದಲ್ಲಿ ಪರಿಚಯಿಸಿದ ದೇವರ ರಾಜ್ಯದ ಕಾಲ ಮತ್ತು ಯೇಸು ದೇವರ ರಾಜ್ಯವನ್ನು ಪರಿಪೂರ್ಣಗೊಳಿಸಲು ಮಹಿಮೆಯೊಂದಿಗೆ ಹಿಂತಿರುಗಿ ಬರುವ ಕಾಲದ ನಡುವಿನ ಸಮಯ) ಒಳ್ಳೆಯದರ ಮತ್ತು ಕೆಟ್ಟದರ ನಡುವೆ ಒಂದು ಹೋರಾಟವಿದೆ.

   3) ಸುವಾರ್ತಾ ಸಂದೇಶವು ಹರಡದಂತೆ ಮತ್ತು ಬೇರೂರದಂತೆ ಸೈತಾನನು ವಿವಿಧ ರೀತಿಯಲ್ಲಿ ತಡೆಯೊಡ್ಡಲು ನಿರಂತರವಾಗಿ ಪ್ರಯತ್ನಿಸುತ್ತಾನೆ: ಜನರು ರಕ್ಷಣೆಯ ಸಂದೇಶವನ್ನು ಅರ್ಥ ಮಾಡಿಕೊಳ್ಳದಂತೆ (ಅಥವಾ ತಪ್ಪಾಗಿ ಅರ್ಥೈಸಿಕೊಳ್ಳುವಂತೆ) ಮಾಡುತ್ತಾನೆ; ಬಲಹೀನ ವಿಶ್ವಾಸಿಗಳು ನಂಬಿಕೆಯಿಂದ ಬಿದ್ದುಹೋಗುವಂತೆ ಅವರಿಗೆ ಕಷ್ಟ ಮತ್ತು ಹಿಂಸೆಗಳನ್ನು ತರುತ್ತಾನೆ; ದೇವರ ರಾಜ್ಯದಲ್ಲಿ ಫಲಕೊಡಲು ಜನರು ತಮ್ಮನ್ನು ಸಮರ್ಪಿಸಿಕೊಳ್ಳದಂತೆ ಪ್ರಾಪಂಚಿಕ ವಿಷಯಗಳಲ್ಲಿ ಅವರ ಗಮನ ಸೆಳೆಯುತ್ತಾನೆ.

   4) ಅದರ ಪರಿಣಾಮವಾಗಿ ಜನರು ಸುವಾರ್ತೆಯ ಸಂದೇಶವನ್ನು ಅರ್ಥಮಾಡಿಕೊಳ್ಳುವಂತೆ ಮತ್ತು ಸ್ವೀಕರಿಸುವಂತೆ ನನ್ನ ಕೈಲಾದದನ್ನು ನಾನು ಮಾಡಬೇಕು. ನಾನು ದಣಿಯದೇ ಸುವಾರ್ತೆಯನ್ನು ಸಾರಬೇಕು ಮತ್ತು ವಿವರಿಸಬೇಕು. ವಿಶ್ವಾಸಿಗಳು

ತಮ್ಮ ನಂಬಿಕೆಯಲ್ಲಿ ಬೇರೂರುವಂತೆ ಮತ್ತು ಬಲವುಳ್ಳವರಾಗಿ ಬೆಳೆಯುವಂತೆ ನಾನು ಅವರಿಗೆ ಸಹಾಯ ಮಾಡಬೇಕು. ನಮಗೆ ಸೈತಾನನೆಂಬ ಒಬ್ಬ ಶತ್ರು ಇದ್ದಾನೆ. ಆತನು ಗರ್ಜಿಸುವ ಸಿಂಹದಂತೆ ಯಾರನ್ನಾದರೂ ನುಂಗಲು ಕಾಯುತ್ತಿದ್ದಾನೆ ಎಂಬುದನ್ನು ನಾನು ಅವರಿಗೆ ತಿಳಿಸಬೇಕು (1 ಪೇತ್ರ 5:8). ಹಾಗಾಗಿ ವಿಶ್ವಾಸಿಗಳು ನಂಬಿಕೆಯಲ್ಲಿ ಬೆಳೆಯುತ್ತಾ ಕ್ರಿಸ್ತನ ಪರಿಪೂರ್ಣತೆಯ ಮಟ್ಟವನ್ನು ಮುಟ್ಟುವಂತೆ ನಾನು ದಣಿಯದೇ ಅವರನ್ನು ಪ್ರೋತ್ಸಾಹಿಸಬೇಕು ಮತ್ತು ಬೋಧಿಸಬೇಕು (ಎಫೆಸ 4:13).

5) ಆದರೆ ಕೆಲವೊಮ್ಮೆ ನನ್ನ ಪ್ರಯತ್ನಗಳು ಸೋಲುವಾಗ ನಾನು ಕುಗ್ಗಿಹೋಗಬಾರದು. ನಾನು ನನ್ನ ಕರ್ತವ್ಯವನ್ನು ಮಾಡಿದ್ದೇನೆಂದು ನನ್ನ ಮನಸಾಕ್ಷಿ ಹೇಳಬೇಕು. ನಂತರ ನಾನು ಸೇವೆ ಮಾಡಿದ ಜನರೇ ದೇವರ ವಾಕ್ಯಕ್ಕೆ, ದೇವರ ರಕ್ಷಣೆಗೆ ಮತ್ತು ಪವಿತ್ರಾತ್ಮ ರೂಪಾಂತರಗೊಳಿಸುವ ಕ್ರಿಯೆಗೆ "ಸ್ವೀಕರಿಸುತ್ತೇನೆ" ಅಥವಾ "ಸ್ವೀಕರಿಸುವುದಿಲ್ಲ" ಎಂದು ಹೇಳಬಹುದು.

6. ಯೇಸುವಿನ ಕಾಲದಲ್ಲಿದ್ದ ಯೆಹೂದ್ಯರು ದೇವರ ರಾಜ್ಯವು ಪರಿಪೂರ್ಣವಾಗಿ ಏಕಕಾಲದಲ್ಲಿ ಆಗಮಿಸಿ ತಕ್ಷಣವಾಗಿ ಒಂದು ವ್ಯತ್ಯಾಸವಾದ ಜಗತ್ತನ್ನು ಉದ್ಘಾಟಿಸಬೇಕೆಂದು ನಿರೀಕ್ಷಿಸಿದ್ದರು. ದೇವರ ರಾಜ್ಯದ ಈ ಹಂತದಲ್ಲಿ ಒಳ್ಳೆ ಗೋಧಿ ಮತ್ತು ಕೆಟ್ಟ ಕಳೆಯು ಒಟ್ಟಾಗಿ ಬೆಳೆಯುತ್ತದೆ ಎಂಬುದನ್ನು ತೋರಿಸುವುದರ ಮೂಲಕ ಕಳೆಯ ಕುರಿತಾದ ಸಾಮ್ಯವು ಈ ತಪ್ಪು ತಿಳುವಳಿಕೆಯನ್ನು ತಿದ್ದುತ್ತದೆ. ಇದು ಯೇಸುವಿನ ಭೂಲೋಕ ಸೇವೆಯೊಂದಿಗೆ ಪ್ರಾರಂಭವಾದ ಸಭೆಯ ಕಾಲವಾಗಿದೆ (ಅಂದರೆ ಸುವಾರ್ತೆಯ ಅಥವಾ ಸುವಾರ್ತಾ ಸೇವೆಯ ಕಾಲವಾಗಿದೆ). ಅಂದಿನಿಂದ ದೇವರ ರಾಜ್ಯವು ಜನರ ನಡುವೆ ಬಂದಿದೆ, ಆದಾಗ್ಯೂ ತನ್ನ ಪೂರ್ಣ ಬಲದಿಂದ ಬಂದಿಲ್ಲ. ಆದರೆ ಈ ಕೆಟ್ಟ ಯುಗವು ತನ್ನ ಅಂತಿಮ ಹಂತವನ್ನು ತಲುಪುವಾಗ ದೇವರ ರಾಜ್ಯವು ಪೂರ್ಣ ಮಹಿಮೆಯೊಂದಿಗೆ ಬರುವುದು. ಆಗ ಎಲ್ಲಾ ಕೆಟ್ಟತನವು ("ಕಳೆ") ನಾಶವಾಗುವುದು ಮತ್ತು ಯೇಸುವಿನಲ್ಲಿ ನಂಬಿಕೆಯಿಡುವ ನಾವು ("ಗೋಧಿ") ರಕ್ಷಣೆ ಹೊಂದುವೆವು. ನಾವು ದೇವರ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವೆವು.

7. ಕಳೆಯ ಕುರಿತಾದ ಸಾಮ್ಯದಿಂದ ನಿಮ್ಮ ಸೇವೆಗಾಗಿ ದೇವರ ರಾಜ್ಯದ ಕುರಿತು ಕನಿಷ್ಠ ಈ ಸಂಗತಿಗಳನ್ನು ಕಲಿತುಕೊಳ್ಳಬಹುದು:

1) ಈ ಲೋಕದಲ್ಲಿ ಒಳ್ಳೆಯದು ಮತ್ತು ಕೆಟ್ಟದ್ದು ಒಟ್ಟಾಗಿ ಬೆಳೆಯುವಂತೆ ದೇವರು ಅನುಮತಿಸುತ್ತಾನೆ ಎಂಬುದನ್ನು ನಾವು ಅರಿತುಕೊಳ್ಳಬೇಕು. ಈ ಸ್ಥಿತಿಯು ದೇವರ ನ್ಯಾಯತೀರ್ಪಿನ ದಿನದವರೆಗೂ ಮುಂದುವರೆಯಲಿದೆ.

2) ದೇವರ ರಾಜ್ಯದ ಒಳ್ಳೆಯ ಬೀಜವನ್ನು ಬಿತ್ತುವವನು ಯೇಸು ಆಗಿದ್ದಾನೆ. ಆತನಲ್ಲಿ ನಂಬಿಕೆಯಿಡುವವರು ಒಳ್ಳೆಯ ಬೀಜವಾಗಿದ್ದಾರೆ. ವಿಷಭರಿತ ಕಳೆಯನ್ನು ಬಿತ್ತುವವನು ಸೈತಾನನಾಗಿದ್ದಾನೆ. ಆತನನ್ನು ಹಿಂಬಾಲಿಸುವವರು ಮತ್ತು ಯೇಸುವನ್ನು ಅಂಗೀಕಾರ ಮಾಡಿಕೊಳ್ಳದವರು ಕಳೆಯಾಗಿದ್ದಾರೆ.

3) ಕೆಲವೊಮ್ಮೆ ಸೈತಾನನ ವಿಷಭರಿತ ಕಳೆಯು ದೇವರ ರಾಜ್ಯದ ಒಳ್ಳೆಯ ಗೋಧಿಗೆ ಎಷ್ಟು ಸಮಾನವಾಗಿ ಹೋಲುತ್ತದೆಂದರೆ ಅವೆರಡರ ನಡುವಿನ ವ್ಯತ್ಯಾಸವನ್ನು ಗುರುತಿಸುವುದು ಅಸಾಧ್ಯವಾಗಿದೆ. ನಾವು ಕೆಟ್ಟದಾಗಿ ಕಾಣಿಸುವುದನ್ನು ನಾಶಮಾಡಬೇಕೆಂದು ಶೋಧಿಸಲ್ಪಡುವಾಗ ಈ ಸಂಗತಿಯನ್ನು ನೆನಪುಮಾಡಿಕೊಳ್ಳಬೇಕು. ಈ ರೀತಿಯಾಗಿ ಕೆಟ್ಟದನ್ನು ನ್ಯಾಯತೀರಿಸುವುದು ಮತ್ತು ನಾಶಮಾಡುವುದು ನಮ್ಮ ಕೆಲಸವಲ್ಲ ಅದು ಮನುಷ್ಯಕುಮಾರನ ಕೆಲಸವಾಗಿದೆ.

4) ದೇವರ ರಾಜ್ಯದ ಮಕ್ಕಳ ಮತ್ತು ಸೈತಾನನ ಮಕ್ಕಳ ನಡುವೆ ಇರುವ ವ್ಯತ್ಯಾಸವು ನ್ಯಾಯತೀರ್ಪಿನ ದಿನದಂದೂ ಸ್ಪಷ್ಟವಾಗುವುದು. ಆ ದಿನದಂದು ಕೆಟ್ಟದ್ದು ನಾಶವಾಗುವುದು ಮತ್ತು ಯೇಸುವಿಗೆ ಸೇರಿದವರಾದ ನಾವು ನಮ್ಮ ಬಾಧ್ಯತೆಯನ್ನು ಅಂದರೆ ದೇವರ ಬೆಳಕಿನ ರಾಜ್ಯವನ್ನು ಹೊಂದುವೆವು (ಕೊಲೊಸ್ಸೆ 1:12). ನಾವು ಈ ಸಭೆಯ ಯುಗದಲ್ಲಿ ದೇವರ ರಾಜ್ಯದ ವಿಸ್ತಾರಕ್ಕಾಗಿ ನಂಬಿಗಸ್ಥರಾಗಿ ಸೇವೆಮಾಡುತ್ತಿರುವಾಗ ಆ ದಿನಕ್ಕಾಗಿ ಧೈರ್ಯದಿಂದ ಎದುರುನೋಡಬಹುದು.

8. ಸಾಸಿವೆ ಕಾಳಿನ ಸಾಮ್ಯದಿಂದ ನಾವು ದೇವರ ರಾಜ್ಯದ ಕುರಿತು ನಾವು ಇದನ್ನು ಕಲಿಯುತ್ತೇವೆ: ದೇವರ ರಾಜ್ಯವು ಒಂದು ಚಿಕ್ಕ ಮತ್ತು ಗಮನಾರ್ಹವಲ್ಲದ ಪ್ರಾರಂಭದೊಂದಿಗೆ ಆರಂಭಿಸಿ ಒಂದು ದೊಡ್ಡ ಮಟ್ಟವನ್ನು ತಲುಪುತ್ತದೆ. ಇದು ಖಂಡಿತವಾಗಲೂ ಆದಿಸಭೆಯಲ್ಲಿ ನಡೆದ ಒಂದು ಘಟನೆಯಾಗಿದ್ದು ಸಭೆಯ ಇತಿಹಾಸದುದ್ದಕ್ಕೂ ಮುಂದುವರೆಯುತ್ತಾ ಬಂದಿದೆ. ಅದರೊಂದಿಗೆ ದೇವರ ರಾಜ್ಯವು ನಮ್ಮ ಸೇವೆಯ ಮೂಲಕವೂ ಬೆಳೆಯಬೇಕೆಂದು ನಾವು ಅಪೇಕ್ಷಿಸಬೇಕು. ಅನೇಕ ಜನರು ದೇವರ ಕಡೆಗೆ ತಿರುಗಿಕೊಳ್ಳುವರು ಎಂದು ನಾವು ನಿರೀಕ್ಷಿಸಬೇಕು. ನಮ್ಮ ಸೇವೆಯು ಹೊಸ ಸ್ಥಳಗಳಿಗೆ ಮತ್ತು ಹೊಸ ಜನರಿಗೆ ಬಹುಶಃ ಹೊಸ ದೇಶಗಳಿಗೂ ವಿಸ್ತಾರವಾಗುವುದೆಂದು ನಾವು ನಿರೀಕ್ಷಿಸಬೇಕು. ನಮ್ಮ ಸಭೆಯು ಕೇವಲ ಸಂಖ್ಯೆಯಲ್ಲಿ ಮಾತ್ರವಲ್ಲ ಆತ್ಮಿಕ ಪರಿಪಕ್ವತೆಯಲ್ಲಿಯೂ ಬೆಳೆಯಬೇಕೆಂದು ನಾವು ನಿರೀಕ್ಷಿಸಬೇಕು.

9. ಈ ತಿಳುವಳಿಕೆಯು ನಾವು ನಂಬಿಗಸ್ತರಾಗಿ ಸೇವೆ ಮಾಡುವಂತೆ ಮತ್ತು ನಮ್ಮ ಸೇವೆಯಲ್ಲಿ ಪ್ರಗತಿ ಮತ್ತು ಬೆಳವಣಿಗೆಯನ್ನು ನಾವು ನಿರೀಕ್ಷಿಸುವಂತೆ ನಮಗೆ ಸಹಾಯಕರವಾಗುತ್ತದೆ.

10. ದೇವರ ರಾಜ್ಯವು ನಾವು ಯಾವಾಗಲೂ ಕಾಣುವಂತಹ ಅಥವಾ ಅರ್ಥಮಾಡಿಕೊಳ್ಳುವಂತಹ ರೀತಿಗಿಂತಲೂ ಭಿನ್ನವಾದ ಮಾರ್ಗಗಳಲ್ಲಿ ಹರಡುವ ಮತ್ತು ಪ್ರವೇಶಿಸುವ ಸಾಮರ್ಥ್ಯವನ್ನು ಹೊಂದಿದೆ ಎಂಬುದನ್ನು ಹುಳಿ ಹಿಟ್ಟಿನ ಸಾಮ್ಯದಿಂದ ನಾವು ದೇವರ ರಾಜ್ಯದ ಕುರಿತು ಕಲಿಯುತ್ತೇವೆ.

11. ಈ ತಿಳುವಳಿಕೆಯು ನಮ್ಮ ಸೇವೆಯಲ್ಲಿ ನಮಗೆ ವಿವಿಧ ರೀತಿಯಲ್ಲಿ ಸಹಾಯಕರವಾಗಬಹುದು:

    1) ನಾವು ದೇವರ ರಾಜ್ಯಕ್ಕಾಗಿ ಮಾಡುತ್ತಿರುವ ಸೇವೆಯನ್ನು ಯಾವುದೇ ಫಲ ಕಾಣದಿದ್ದಾಗ್ಯೂ ಮುಂದುವರೆಸುವುದಕ್ಕಾಗಿ ನಂಬಿಗಸ್ತರಾಗಿರಲು ಅದು ನಮಗೆ ಸಹಾಯಮಾಡುತ್ತದೆ. ದೇವರು ನಮ್ಮ ಯಥಾರ್ಥವಾದ ಸೇವೆಯನ್ನು ತನ್ನ ರಾಜ್ಯದ ವಿಸ್ತರಣೆಗಾಗಿ ಉಪಯೋಗಿಸಿಕೊಳ್ಳುವುದರ ಮೂಲಕ ನಮ್ಮನ್ನು ಸನ್ಮಾನಿಸುತ್ತಾನೆ. ಒಂದು ವೇಳೆ ಅದನ್ನು ನಾವು ಕಾಣಬಹುದು ಅಥವಾ ಕಾಣದೆ ಹೋಗಬಹುದು.

    2) ನಾವು ದೇವರ ಮೇಲೆ ಇನ್ನೂ ಹೆಚ್ಚಾದ ಭರವಸೆ ಇಡುವಂತೆ ಅದು ನಮ್ಮನ್ನು ಪ್ರೋತ್ಸಾಹಿಸುತ್ತದೆ. ಆತನು ಎಲ್ಲವನ್ನೂ ನಿಯಂತ್ರಣದಲ್ಲಿಟ್ಟುಕೊಂಡಿದ್ದಾನೆ ಮತ್ತು ದೇವರ ರಾಜ್ಯದಲ್ಲಿ ಯಾವುದು ನಿಜವಾದ ವಿಸ್ತರಣೆ ಎಂಬುದು ಆತನಿಗೆ ತಿಳಿದದೆ.

    3) ನಾವು ಕಾಣಬಯಸುವ ಫಲವನ್ನು ನಮ್ಮ ಸೇವೆಯು ತರದಿದ್ದಾಗ ನಾವು ನಿರಾಶೆಗೊಳ್ಳದಂತೆ ಅದು ನಮಗೆ ಸಹಾಯ ಮಾಡುತ್ತದೆ.

    4) ಕಣ್ಣಿಗೆ ಕಾಣುವ ರೀತಿಯಲ್ಲಿ ಯಶಸ್ಸನ್ನು ಕಾಣದ ಇತರೆ ಸುವಾರ್ತಾ ಸೇವಕರ ಕುರಿತು ನಾವು ತೀರ್ಪುಮಾಡದಂತೆ ಅದು ನಮಗೆ ಸಹಾಯ ಮಾಡುತ್ತದೆ. ಒಬ್ಬನ ಆತ್ಮದಲ್ಲಾಗುವ ನಿಜವಾದ ಪರಿಣಾಮಗಳ ಕುರಿತು ನಮಗೆ ಏನೂ ತಿಳಿದಿಲ್ಲವಾದ್ದರಿಂದ ಅವರ ಕುರಿತು ತೀರ್ಪು ಹೊರಡಿಸಲು ಮತ್ತು ನಮ್ಮ ಸ್ವಂತ "ಯಶಸ್ಸುಭರಿತ" ಸೇವೆಯಲ್ಲಿ ಹೆಮ್ಮೆಪಟ್ಟುಕೊಳ್ಳಲು ನಾವು ಯಾರು?

# ಉತ್ತರಗಳು 8: ದೇವರ ರಾಜ್ಯದ ಎರಡು ಸವಾಲೊಡ್ಡುವ ಮೌಲ್ಯಗಳು

## ಶಿಕ್ಷಕರಿಗಾಗಿ

ಈ ಅಧ್ಯಯನವನ್ನು ಮುಗಿಸಲು ಒಂದು ಗಂಟೆ ಸಾಕಾಗಬಹುದು. ಒಂದು ವೇಳೆ ವಿದ್ಯಾರ್ಥಿಗಳು ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಬೇಕೆಂದು ನೀವು ಬಯಸುವುದಾದರೆ ಗ್ರಂಥಾಲಯದ ಸಮಯ ಅಥವಾ ಮನೆಗೆಲಸದ ಸಮಯವನ್ನು ತೆಗೆದುಕೊಳ್ಳಬೇಕಾಗಬಹುದು.

ನಿಶ್ಚಯವಾಗಲೂ ದೇವರ ರಾಜ್ಯದಲ್ಲಿ ಅನೇಕ ಸವಾಲನ್ನೊಡ್ಡುವ ಮೌಲ್ಯಗಳಿವೆ. ಈ ಅಧ್ಯಯನವು ಕೇವಲ ಎರಡರ ಕುರಿತು ಪ್ರಸ್ತಾಪಿಸುತ್ತದೆ, ಅವು ಯಾವವೆಂದರೆ ಅಪಾರವಾದ ಕೃಪೆ / ಉದಾರತೆ ಮತ್ತು ತ್ಯಾಗಪೂರ್ವಕ ಸೇವೆ

ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ಉತ್ತರಿ ಸುವುದಕ್ಕಿಂತ ಮುಂಚೆ ಅವರೊಂದಿಗೆ ***ಪೀಠಿಕೆ*** ಭಾಗವನ್ನು ಓದಿರಿ.

ದ್ರಾಕ್ಷೇತೋಟದಲ್ಲಿ ಕೆಲಸ ಮಾಡಿದ ಕೂಲಿಯಾಳುಗಳ ಸಾಮ್ಯದಲ್ಲಿರುವ "ಪರಲೋಕ ರಾಜ್ಯ" ಎಂಬ ಪದಬಳಕೆಯನ್ನು ಅಧ್ಯಯನ 7 ರಲ್ಲಿ ಕಾಣಬಹುದು.

ನೀವು ಪ್ರಶ್ನೆಗಳನ್ನು ಹೀಗೆ ಬಳಸಬೇಕೆಂಬುದು ನನ್ನ ಸಲಹೆಯಾಗಿದೆ:

1) ವಿದ್ಯಾರ್ಥಿಗಳು 1–4 ಮತ್ತು 7–9 ಪ್ರಶ್ನೆಗಳನ್ನು ತರಗತಿ ಸಮಯದಲ್ಲಿಯೇ ಗುಂಪುಗಳಲ್ಲಿ ಚರ್ಚಿಸಲಿ. ಅವರ ಉತ್ತರಗಳನ್ನು ನೋಡಿರಿ.
2) 5 ಮತ್ತು 6 ನೇ ಪ್ರಶ್ನೆಗಳನ್ನು ಗ್ರಂಥಾಲಯದ ಮತ್ತು ಮನೆಗೆಲಸದ ಸಮಯದಲ್ಲಿ ಮಾಡಬಹುದು. ಆದರೆ ಮರುದಿನ ತರಗತಿಯ ಸಮಯದಲ್ಲಿ ವಿದ್ಯಾರ್ಥಿಗಳು ಬರೆದಿರುವ ಉತ್ತರಗಳನ್ನು ನೀವು ಪರಿಶೀಲಿಸಿರಿ.
3) 5 ಮತ್ತು 6 ನೇ ಪ್ರಶ್ನೆಯು ಕ್ಲಿಷ್ಟಕರವಾಗಿದೆ ಮತ್ತು ವಿಶಾಲವಾಗಿದೆ. ಅವುಗಳನ್ನು ಚರ್ಚಿಸಲು ನಿಮಗೆ ಸಮಯ ಸಾಲದಾಗಬಹುದು. ಅವುಗಳನ್ನು ಸೂಕ್ತವಾಗಿ ಉತ್ತರಿಸದಿರುವುದಕ್ಕೆ ಸಮಯವಿಲ್ಲದಿರುವುದರಿಂದ ಅವುಗಳನ್ನು ಕೈಬಿಡುವುದು ಉತ್ತಮ. ನಾನು ನೀಡಿರುವ ಟಿಪ್ಪಣಿಗಳು ಹೆಚ್ಚಿನ ದೃಷ್ಟಿಕೋನವನ್ನು ಒದಗಿಸುತ್ತವೆಯೇ ಹೊರತು ಅವುಗಳು ಉತ್ತರಗಳನ್ನು ಒಳಗೊಂಡಿರುವುದಿಲ್ಲ.
4) ಪ್ರಶ್ನೆ 13 ನ್ನು ಐಚ್ಛಿಕವಾಗಿಸಿರಿ. ಅದನ್ನು ವಿದ್ಯಾರ್ಥಿಗಳು ವೈಯಕ್ತಿಕವಾಗಿ ಗ್ರಂಥಾಲಯದ / ಮನೆಗೆಲಸದ ಸಮಯದಲ್ಲಿ ಉತ್ತರಿಸುವುದು ಸೂಕ್ತ.

## ಉತ್ತರಗಳು

1. ದ್ರಾಕ್ಷೇತೋಟದ ಯಜಮಾನನು ತನ್ನ ಕೂಲಿಯಾಳುಗಳೊಂದಿಗೆ ವರ್ತಿಸಿದ ರೀತಿಯಲ್ಲಿ ಏನೋ ತಪ್ಪಿದೆ ಎಂಬುದು ನನ್ನ ಅಭಿಪ್ರಾಯ. ಆತನು ತನ್ನನ್ನು "ಔದಾರ್ಯವುಳ್ಳವನು" ಎಂದು ಕರೆದುಕೊಳ್ಳುತ್ತಾನೆ (ವ. 15). ಆದರೆ ಒಬ್ಬ ಉದಾರ ಮನಸ್ಸುಳ್ಳವನು ಹೆಚ್ಚಿನ ತಾಸು ಕೆಲಸ ಮಾಡಿದವರಿಗೆ ಹೆಚ್ಚಿನ ಸಂಬಳವನ್ನು ಕೊಡುತ್ತಿದ್ದನು ಎಂದು ನಾನು ಯೋಚಿಸುತ್ತೇನೆ.
2. ದೇವರ ರಾಜ್ಯದ ಮೌಲ್ಯಗಳ ಕುರಿತು ದ್ರಾಕ್ಷೇತೋಟದ ಯಜಮಾನನ ಗುಣವು ಪ್ರಕಟಿಸುವುದೇನೆಂದರೆ, ದೇವರ ರಾಜ್ಯದ ಮೌಲ್ಯಗಳು ನಮ್ಮ ಸಾಮಾನ್ಯವಾದ ಮಾನವ ಮೌಲ್ಯಗಳಿಗಿಂತ ಅತ್ಯಂತ ಭಿನ್ನವಾಗಿವೆ. ಈ ಸಾಮ್ಯವು ದೇವರ ರಾಜ್ಯದ ಅಪಾರವಾದ ಉದಾರತೆಯನ್ನು ಮತ್ತು ಅಪರಿಮಿತವಾದ ಕೃಪೆಯನ್ನು ಚಿತ್ರಿಸುತ್ತದೆ. ದೇವರ ಕೃಪೆಯನ್ನು ಸ್ವೀಕರಿಸುವವರಿಗೆಲ್ಲಾ ಅದು ಸಮಾನವಾಗಿ ದೊರಕುವುದು. ಒಟ್ಟಿನಲ್ಲಿ ಎಲ್ಲಾ ವಿಶ್ವಾಸಿಗಳು ಅದೇ ಪೂರ್ಣವಾದ ಮತ್ತು ಅದ್ಭುತಕರ ಬಾಧ್ಯತೆಯ ಉದಾರತೆಯನ್ನು – ಅಂದರೆ ದೇವರ ರಾಜ್ಯದಲ್ಲಿನ ನಿತ್ಯಜೀವವನ್ನು ಹೊಂದುವರು.
3. ದ್ರಾಕ್ಷೇತೋಟದ ಯಜಮಾನನು ತನ್ನ ಕೂಲಿಯಾಳುಗಳೊಂದಿಗೆ ವರ್ತಿಸಿದ ರೀತಿಯು ನಮ್ಮಲ್ಲಿ ಅನೇಕರಿಗೆ ಬೇಸರವನ್ನುಂಟುಮಾಡುವುದರ ಹಿಂದೆ ಇರುವ ಮಾನವ ಮೌಲ್ಯಗಳು "ಸಮಾನತೆ" ಮತ್ತು "ನಿಷ್ಪಕ್ಷಪಾತ" ಆಗಿವೆ. ಯಜಮಾನನು ಎಲ್ಲಾ ಕೂಲಿಯಾಳುಗಳಿಗೆ ಒಂದೇ ಕೂಲಿಯನ್ನು ಕೊಡುವುದರಲ್ಲಿ ಪಕ್ಷಪಾತವನ್ನು ತೋರಿಸಿದನು ಎಂದು ನಮಗೆ ಅನ್ನಿಸುತ್ತದೆ.

ಆತನು ಅವರೊಂದಿಗೆ ಸಮಾನವಾಗಿ ವರ್ತಿಸಿ ಇಡೀ ದಿನ ಕೆಲಸ ಮಾಡದ ಆಳುಗಳಿಗೆ ಕಡಿಮೆ ಕೂಲಿಯನ್ನು ಕೊಡಬೇಕಾಗಿತ್ತು ಎಂದು ನಮಗೆ ಅನ್ನಿಸುತ್ತದೆ. ಆದರೆ ಆ ಯಜಮಾನನು ಪಕ್ಷಪಾತಿಯಾಗಿರಲಿಲ್ಲ; ಆತನು ಅವರಿಗೆ ಕೊಟ್ಟ ಮಾತಿನಂತೆಯೇ ಎಲ್ಲರಿಗೂ ಒಂದು ದಿನದ ಕೂಲಿಯನ್ನು ಕೊಟ್ಟನು. ಇನ್ನೊಂದು ಕಡೆಯಲ್ಲಿ, ಆ ಯಜಮಾನನು ಹೆಚ್ಚು ಉದಾರತೆಯನ್ನು ತೋರಿಸಿದನು. ಅಪಾರವಾದ ಉದಾರತೆ ಮತ್ತು ಅಪರಿಮಿತವಾದ ಕೃಪೆಯು ದೇವರ ರಾಜ್ಯದ ಪ್ರಮುಖವಾದ ಮೌಲ್ಯಗಳಾಗಿವೆ.

4. –

5. ಒಂದು ಟಿಪ್ಪಣಿ: ಇದು ಒಂದು ಸವಾಲನ್ನೊಡ್ಡುವ ಪ್ರಶ್ನೆಯಾಗಿದೆ, ಯಾಕೆಂದರೆ (ಬಹುತೇಕ ವಿಶ್ವಾಸಿಗಳಂತೆ) ನಾವು ನಮ್ಮ ಸುತ್ತಲಿರುವ ಪ್ರಾಪಂಚಿಕ ಮೌಲ್ಯಗಳಿಂದ ಪ್ರಭಾವಿತರಾಗಿರುವುದರಿಂದ ಆ ಯಜಮಾನನು ತನ್ನ ಆಳುಗಳೊಂದಿಗೆ ನಡಕೊಂಡ ರೀತಿಯನ್ನು ಸಮರ್ಥಿಸಲು ಕಷ್ಟಕರವೆನಿಸುತ್ತದೆ. ಹಾಗಾಗಿ ನಾವು ಉದಾರತೆಯನ್ನು ತೋರಿಸಲು ಹೋರಾಡುತ್ತೇವೆ ಮತ್ತು ಅಪರಿಮಿತ ಕೃಪೆಯನ್ನು ಕಾರ್ಯರೂಪದಲ್ಲಿ ತೋರಿಸಲು ಅಸಾಧ್ಯವೆನಿಸಬಹುದು (ಸಭೆಯ ಹಿನ್ನಲೆಯಲ್ಲಿಯೂ ಸಹ).

6. ಕೆಲವು ಟಿಪ್ಪಣಿಗಳು: ಈ ಪ್ರಶ್ನೆಯನ್ನು ಉತ್ತರಿಸುವುದು ಬಹಳ ಕಷ್ಟ ಯಾಕೆಂದರೆ ದೇವರ ರಾಜ್ಯದ ಮೌಲ್ಯಗಳನ್ನು ಪ್ರತಿಬಿಂಬಿಸದ ಮೌಲ್ಯಗಳ ಮತ್ತು ಸಂಪ್ರದಾಯಗಳ ಮೇಲೆ ನಮ್ಮ ಆಧುನಿಕ ಸಮಾಜವು ಆಧಾರಗೊಂಡಿದೆ. ಈ ಲೋಕದಲ್ಲಿ ಯಾವ ಸರ್ಕಾರವಾದರೂ ದೇವರ ರಾಜ್ಯದ ಮೌಲ್ಯಗಳನ್ನು ಪೂರ್ಣವಾಗಿ ಪ್ರತಿಬಿಂಬಿಸುವುದನ್ನು ನಾವು ಎಂದಿಗೂ ನಿರೀಕ್ಷಿಸಲು ಸಾಧ್ಯವಿಲ್ಲ. ಆದರೆ ಹುಳಿಹಿಟ್ಟಿನ ಸಾಮ್ಯವು (ಅಧ್ಯಯನ 7 ನ್ನು ನೋಡಿರಿ) ದೇವರ ರಾಜ್ಯವು ಸಮಾಜದ ಮೇಲೆ ಪ್ರಭಾವವನ್ನು ಬೀರಬಹುದೆಂದು ಯೇಸು ನಿರೀಕ್ಷಿಸಿದನು ಎಂಬುದನ್ನು ತೋರಿಸುತ್ತದೆ ಮತ್ತು ಈ ಪ್ರಭಾವವು ವಿಶ್ವಾಸಿಗಳ ಕ್ರಿಯೆ ಮತ್ತು ಜೀವನಗಳ ಮೂಲಕ ಕಾಣಬೇಕೆಂದು ನಿರೀಕ್ಷಿಸಿದನು (ಅಧ್ಯಯನ 12 ರಲ್ಲಿ ಇದರ ಕುರಿತು ಹೆಚ್ಚಿನ ಅಂಶವನ್ನು ನೋಡಿರಿ). ಹಾಗಾಗಿ ಬಹುಶಃ ವ್ಯಕ್ತಿಗತವಾಗಿ ಮತ್ತು ಸಭೆಯಾಗಿ ನಾವು ನಮ್ಮ ಸುತ್ತಲಿರುವ ಜಗತ್ತಿನಲ್ಲಿ (ಶಾಲೆಗಳಲ್ಲಿ ಮತ್ತು ಕಾಲೇಜುಗಳಲ್ಲಿ, ಸಂಸ್ಥೆಗಳಲ್ಲಿ ಮತ್ತು ಸಮಾಜಗಳಲ್ಲಿ, ಸಾರ್ವಜನಿಕ ಜೀವನ ಮತ್ತು ರಾಜಕೀಯದಲ್ಲಿ, ಕಾನೂನು ಸಂಬಧಿತ ವೃತ್ತಿಗಳಲ್ಲಿ ಮತ್ತು ವ್ಯಾಪಾರದಲ್ಲಿ, ಸಾಮಾಜಿಕ ಮತ್ತು ವೈದ್ಯಕೀಯ ಸೇವೆಗಳಲ್ಲಿ . . . ಇತ್ಯಾದಿ) ಇನ್ನೂ ಹೆಚ್ಚಾಗಿ ಭಾಗಿಯಾಗಿ ನಾವು ನಂಬುವ ದೇವರ ರಾಜ್ಯದ ಮೌಲ್ಯಗಳು ನಮ್ಮ ಭಾರತ ಸಮಾಜದಲ್ಲಿ ಹರಡುವಂತೆ ಮಾಡಬೇಕು. ಆಗ ಅದರ ಫಲವಾಗಿ ಸಮಾಜದಲ್ಲಿ ಹೆಚ್ಚು ಉದಾರತೆ ಮತ್ತು ಕೃಪೆ ಕಂಡುಬರುತ್ತದೆ.

7. ತನ್ನ ಭವಿಷ್ಯದ ಕುರಿತು ಯೇಸುವು ನಿರೀಕ್ಷಿಸಿದ ಸಂಗತಿಯ ಹಾಗೂ ಜೆಬೆದಾಯನ ಹೆಂಡತಿಯು ತನ್ನ ಮಕ್ಕಳಿಗಾಗಿ ಅಪೇಕ್ಷಿಸಿದ ಭವಿಷ್ಯದ ನಡುವಿನ ಹೋಲಿಕೆ:

   1) ಯೇಸುವಿನ ಭವಿಷ್ಯ (ವ. 18–19): ಸಂಪೂರ್ಣವಾದ ತಿರಸ್ಕಾರ, ಅವಮಾನ, ಸಹಿಸಲಾರದ ನೋವು, ಭಯಂಕರವಾದ ಮತ್ತು ಕ್ರೂರವಾದ ಮರಣ.

   2) ತಾಯಿಯು ತನ್ನ ಮಕ್ಕಳಿಗಾಗಿ ಅಪೇಕ್ಷಿಸಿದ ಭವಿಷ್ಯ (ವ. 21): ಯೇಸುವಿನ ಬರಲಿರುವ ಮಹಿಮೆಯ ರಾಜ್ಯದಲ್ಲಿ ಪ್ರಮುಖ ಸ್ಥಾನಗಳು.

8. ತನ್ನ ಮರಣದ ಕುರಿತು ಯೇಸು ವರ್ಣಿಸಿದ ಸಂಗತಿಯು ದೇವರ ರಾಜ್ಯದ ಮೌಲ್ಯಗಳ ಕುರಿತು ಆಕೆಯು ಹೊಂದಿದ್ದ ತಿಳುವಳಿಕೆಯನ್ನು ಹೇಗೆ ಬದಲಾಯಿಸಿರಬಹುದು.

   ಯೇಸು ತನ್ನ ಶಿಷ್ಯರಿಗೆ ತಾನು ಯೆರುಸಲೇಮಿಗೆ ಸಾಯಲು ಹೋಗುತ್ತಿದ್ದೇನೆಂದು ಮತ್ತೊಮ್ಮೆ ಹೇಳಿ ಮುಗಿಸಿದ ತಕ್ಷಣವೇ ಆಕೆಯು ತನ್ನ ಮಕ್ಕಳ ಕುರಿತಾದ ಬೇಡಿಕೆಯೊಂದಿಗೆ ಬಂದಳು. ಹಾಗಾಗಿ ತನ್ನ ರಾಜ್ಯಕ್ಕೆ ಹಾಗೂ ತನ್ನ ಮಹಿಮೆಗೆ ನಡೆಸುವ ಮಾರ್ಗವು ಕ್ರೂಜೆಯ ಮಾರ್ಗವೇ ಆಗಿರಬೇಕೆಂದು ಆಕೆಯು ಅರ್ಥಮಾಡಿಕೊಂಡಿದ್ದಳು. ಆ ಮಾರ್ಗವು ಬಾಧೆ, ನೋವು, ತ್ಯಾಗ, ಹಿಂಸೆ, ಪಾಪವನ್ನು ಹೊರುವುದು ಮತ್ತು ಮರಣವನ್ನು ಒಳಗೊಂಡ ಮಾರ್ಗವಾಗಿತ್ತು.

   ಇಡೀ ಸನ್ನಿವೇಶದ ಬೆಳಕಿನಲ್ಲಿ ಆ ತಾಯಿಯ ಬೇಡಿಕೆಯು ಸ್ವಾರ್ಥಮಯ, ಸಂಕುಚಿತ ಮನೋಭಾವನೆಯುಳ್ಳ ಮತ್ತು ಮೂರ್ಖತನವಾಗಿ ಅನ್ನಿಸುತ್ತದೆ.

9. ಶ್ರೇಷ್ಠತೆಯನ್ನು ಹುಡುಕಬಾರದೆಂದು ಯೇಸು ತನ್ನ ಶಿಷ್ಯರಿಗೆ ನಿರುತ್ಸಾಹಗೊಳಿಸಲಿಲ್ಲ. ಆದರೆ ಶ್ರೇಷ್ಠತೆಯ ಕುರಿತು ಅವರಿಗಿದ್ದ ತಿಳುವಳಿಕೆಯನ್ನು ಆತನು ಸರಿಪಡಿಸಿದನು (ವ. 24–28):

ಶಿಷ್ಯರು ತಮ್ಮ ಶ್ರೇಷ್ಠತೆಯ ಮಾನದಂಡವನ್ನು ರೂಪಿಸಿಕೊಂಡಿದ್ದರು. ಅವರು ತಮ್ಮ ಪ್ರಜೆಗಳ ಮೇಲೆ ಅಧಿಕಾರವನ್ನು ಚಲಾಯಿಸಿದರು. ಅವರು ಅತ್ಯಂತ ಶ್ರೀಮಂತರು ಹಾಗೂ ಐಷಾರಾಮಿ ಜೀವನ ನಡೆಸುವವರೂ ಆಗಿದ್ದರು. ಅವರು ತಮ್ಮ ಅಧಿಕಾರವನ್ನು ಚಲಾಯಿಸಲು ಅನೇಕ ಆಳುಗಳನ್ನು ಹೊಂದಿದ್ದರು.

ಆದರೆ ಮನುಷ್ಯಪುತ್ರನಾದ ಯೇಸು ಅವರ ಶ್ರೇಷ್ಠತೆಯ ಮಾನದಂಡವಾಗಬೇಕೆಂದು ಬಯಸಿದನು. ದೇವರ ರಾಜ್ಯದಲ್ಲಿ ನಿಜವಾದ ಶ್ರೇಷ್ಠತೆಯನ್ನು ತ್ಯಾಗಪೂರ್ವಕ ಸೇವೆಯ ಆಧಾರದ ಮೇಲೆ ಮಾತ್ರ ಕಟ್ಟಲು ಸಾಧ್ಯ.

10. ದೇವರ ರಾಜ್ಯದ ಮೌಲ್ಯಗಳನ್ನು ಪ್ರತಿಬಿಂಬಿಸುವಂತಹ ವೃತ್ತಿಪರ ಮತ್ತು ಆರ್ಥಿಕ ಆಯ್ಕೆಗಳನ್ನು ಮಾಡಿಕೊಳ್ಳುವಂತೆ ಒಬ್ಬ ಸಭಾಪಾಲಕನು ತನ್ನ ವಿಶ್ವಾಸಿಗಳಿಗೆ ಮಾರ್ಗದರ್ಶಿಸುವಾಗ ಶ್ರೇಷ್ಠತೆಯ ಕುರಿತಾಗಿರುವ ಸತ್ಯವೇದಾನುಸಾರವಾದ ತಿಳುವಳಿಕೆಯು ಆತನಿಗೆ ಸಹಾಯಕವಾಗಬಲ್ಲದು. ಕೆಲವು ಉದಾಹರಣೆಗಳು ಹೀಗಿವೆ:

    1) ಉನ್ನತ ಶಿಕ್ಷಣ: ಭಾರತದಲ್ಲಿ **"ಶೈಕ್ಷಣಿಕ ಅರ್ಹತೆ"** ಅಂದರೆ ಒಬ್ಬ ವ್ಯಕ್ತಿ ಯಾವ ಪದವಿಯನ್ನು ಪೂರ್ಣಗೊಳಿಸಿದ್ದಾನೆ ಎಂಬುದು ಬಹಳ ಪ್ರಾಮುಖ್ಯವಾದ ಸಂಗತಿಯಾಗಿದೆ. ಆದರೆ ದೇವರ ರಾಜ್ಯದಲ್ಲಿ ವಿದ್ಯಾಭ್ಯಾಸವು ಯಾವ ಮಾನ್ಯತೆಯನ್ನು ಹೊಂದಿಲ್ಲ. ನಿಶ್ಚಯವಾಗಲೂ, ವಿದ್ಯಾಭ್ಯಾಸ ಪಡೆಯುವುದು ತಪ್ಪಾದ ಸಂಗತಿಯಲ್ಲ. ಆದರೆ ದೇವರ ರಾಜ್ಯದಲ್ಲಿ ಹೆಚ್ಚು ಉಪಯುಕ್ತನಾಗಲು ಅದು ಒಬ್ಬ ವ್ಯಕ್ತಿಯನ್ನು ಸಶಕ್ತಗೊಳಿಸದಿದ್ದರೆ ಅದಕ್ಕೆ ಸುರಿಯುವ ಹಣ ಮತ್ತು ಸಮಯವು ವ್ಯರ್ಥವಾದಂತೆ. ದೇವರ ರಾಜ್ಯದ ಮೌಲ್ಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಯೌವ್ವನಸ್ಥ ವಿಶ್ವಾಸಿಗಳು ತಮ್ಮ ಶೈಕ್ಷಣಿಕ ಆಯ್ಕೆಗಳನ್ನು ಮಾಡಿಕೊಳ್ಳುವಂತೆ ಒಬ್ಬ ಸಭಾಪಾಲಕನು ಮಾರ್ಗದರ್ಶಿಸಬೇಕು.

    2) ವೃತ್ತಿ: ಕೆಲವು ವೃತ್ತಿಗಳು ಸಮಾಜದಲ್ಲಿ ಹೆಚ್ಚು ಘನತೆಯುಳ್ಳದ್ದಾಗಿರುತ್ತವೆ, ಉದಾಹರಣೆಗೆ ವೈದ್ಯಕೀಯ ಡಾಕ್ಟರ್. ಯೌವ್ವನಸ್ಥ ವಿಶ್ವಾಸಿಗಳು ಸಮಾಜದಲ್ಲಿನ ಘನತೆಯನ್ನು ಬೆನ್ನಟ್ಟುತ್ತಾ ತಮ್ಮ ಆಯ್ಕೆಗಳನ್ನು ಮಾಡಿಕೊಳ್ಳಬಾರದೆಂದು ಸಭಾಪಾಲಕನು ಉತ್ತೇಜಿಸಬೇಕು. ಸಮಾಜದಲ್ಲಿನ ವರ್ಚಸ್ಸು ದೇವರ ರಾಜ್ಯದ ಮೌಲ್ಯವಲ್ಲ.

    3) ಕೆಲಸ: ಚಿಕ್ಕ ಪಟ್ಟಣದಲ್ಲಿ ಅಥವಾ ಹಳ್ಳಿಯಲ್ಲಿ ಮಾಡುವ ಅದೇ ಕೆಲಸಕ್ಕೆ ದೊಡ್ಡ ಪಟ್ಟಣಗಳಲ್ಲಿ ಹೆಚ್ಚು ಸಂಬಳ ಸಿಕ್ಕುತ್ತದೆ. ವಿಶ್ವಾಸಿಗಳು ಕೆಲಸಕ್ಕೆ ಸೇರಿಕೊಳ್ಳುವಾಗ ಕೇವಲ ಸಂಬಳವನ್ನು ಮಾತ್ರವಲ್ಲದೆ ಇತರೆ ಅಂಶಗಳನ್ನು ಸಹ ಪರಿಗಣಿಸುವಂತೆ ಸಭಾಪಾಲಕನು ಪ್ರೋತ್ಸಾಹಿಸಬೇಕು. ದೇವರ ರಾಜ್ಯದಲ್ಲಿ ಬಡವರಿಗೆ ಮತ್ತು ಅವಶ್ಯಕತೆಯಲ್ಲಿರುವವರಿಗೆ ಸಹಾಯ ಮಾಡುವುದು ಹೆಚ್ಚು ಸಂಬಳವನ್ನು ಸಂಪಾದಿಸುವುದಕ್ಕಿಂತ ಪ್ರಾಮುಖ್ಯವಾದದ್ದು.

    4) ಹಣ ಹೂಡಿಕೆ: ಅನೇಕ ಶ್ರೀಮಂತ ವಿಶ್ವಾಸಿಗಳು ಹಣ ಹೂಡುವುದರ ಕುರಿತು ಪ್ರಾಪಂಚಿಕ ಆಲೋಚನೆಯನ್ನು ಹೊಂದಿರುತ್ತಾರೆ. ಆದರೆ ಅವರು ಆತ್ಮಿಕ ದೃಷ್ಟಿಕೋನದ ಮೂಲಕ ಅದನ್ನು ಮಾಡುವಂತೆ ಮತ್ತು ನಿತ್ಯತ್ವದಲ್ಲಿ ಲಾಭವನ್ನು ತಂದುಕೊಡುವ ರೀತಿಯಲ್ಲಿ ಅದನ್ನು ಯೋಜಿಸುವಂತೆ ಸಭಾಪಾಲಕನು ಪ್ರೋತ್ಸಾಹಿಸಬೇಕು.

    5) ದಿನನಿತ್ಯದ ವೆಚ್ಚ: ಅನೇಕ ಬಾರಿ ವಿಶ್ವಾಸಿಗಳು ಹಣ ಖರ್ಚು ಮಾಡುವಾಗ ದುರಾಶೆಗಾಗಿ, ಸ್ವ–ತೃಪ್ತಿಗಾಗಿ, ಗರ್ವಕ್ಕಾಗಿ ಮತ್ತು ಶೋಕಿಗಾಗಿ ಮಾಡುತ್ತಾರೆ. ಆದರೆ ವಿಶ್ವಾಸಿಗಳು ದೇವರ ರಾಜ್ಯದ ಮೌಲ್ಯಗಳಾದ ಉದಾರತೆ, ದೀನತೆ, ಬಡವರಿಗೆ ಮತ್ತು ಅವಶ್ಯಕತೆಯಲ್ಲಿರುವವರಿಗೆ ಸಹಾಯ ಮಾಡುವುದು ಮತ್ತು ದೇವರ ಒದಗಿಸುವಿಕೆಯಲ್ಲಿ ಭರವಸೆ ಎಂಬವುಗಳ ಬೆಳಕಿನಲ್ಲಿ ತಮ್ಮ ಖರ್ಚುಗಳನ್ನು ಮಾಡಬೇಕು.

11. –

12. ಶ್ರೇಷ್ಠತೆಯ ಕಡೆಗೆ ಸಾಗುವ ಯೇಸುವಿನ ಮಾರ್ಗವನ್ನು ಹಿಂಬಾಲಿಸಲು ಬಯಸುವ ವ್ಯಕ್ತಿಯು ಪ್ರತಿದಿನ ಮಾಡಬಹುದಾದ ಕೆಲವು ಆಯ್ಕೆಗಳು ಹೀಗಿವೆ:

    1) ನಿಮ್ಮ ಸಮಯವನ್ನು ಕಳೆಯುವುದು: ದುಃಖದಲ್ಲಿ ಮತ್ತು ಒಂಟಿತನದಲ್ಲಿ ಇರುವ ಜನರೊಂದಿಗೆ ಅಥವಾ ನಿಮ್ಮ ಸಮಾಲೋಚನೆ ಅಥವಾ ಸಹಾಯದ ಅವಶ್ಯಕತೆಯಲ್ಲಿರುವವರಿಗೆ ನಿಮ್ಮ ಸಮಯವನ್ನು ಕೊಡಿರಿ.

    2) ನಿಮ್ಮ ಹಣವನ್ನು ಖರ್ಚುಮಾಡುವುದು: ಅನವಶ್ಯಕ ಸಂಗತಿಗಳಿಗೆ ನಿಮ್ಮ ಹಣವನ್ನು ಸುರಿಯಬೇಡಿರಿ. ನಿಮಗಿಂತ ಬಡವರಾದ ಜನರ ಅವಶ್ಯಕತೆಗಳನ್ನು ಅರಿತುಕೊಳ್ಳಿರಿ. ಅವರಿಗೆ ಉದಾರತೆಯನ್ನು ತೋರಿಸಿರಿ.

3) ನಿಮ್ಮ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದು: ದೇವರು ನಿಮಗೆ ನೀಡಿರುವ ವಸ್ತುಗಳನ್ನು ಮತ್ತು ಸಂಪನ್ಮೂಲಗಳನ್ನು ಇಲ್ಲದಿರುವವರು ಬಳಸಲು ಅನುಮತಿಸಿರಿ: ಉದಾಹರಣೆಗೆ ನಿಮ್ಮ ಸೈಕಲ್‌ನ್ನು ಅಥವಾ ಬೈಕ್/ಕಾರ್‌ನ್ನು ಬಳಸಲು ಕೊಡಿರಿ. ಅವರು ಮುಖ್ಯವಾದ ಕ್ರಿಕೆಟ್ ಮ್ಯಾಚ್‌ಗಳನ್ನು ನೋಡಲು ನಿಮ್ಮ ಮನೆಗೆ ಬರಲು ಅನುಮತಿಸಿರಿ. ಅವರ ಮನೆಯಲ್ಲಿ ಕಾರ್ಯಕ್ರಮವನ್ನು ಇಟ್ಟುಕೊಳ್ಳುವಾಗ ನಿಮ್ಮ ಮನೆಯ ಪಾತ್ರೆ ಸಾಮಾನುಗಳನ್ನು, ಕುರ್ಚಿಗಳನ್ನು ಅಥವಾ ಇತರೆ ಉಪಕರಣವನ್ನು ಬಳಸಲು ಕೊಡಿರಿ. ನೀವು ಪ್ರವಾಸತಾಣಗಳಿಗೆ ಹೋಗುವಾಗ ಅವರನ್ನೂ ಆಹ್ವಾನಿಸಿರಿ.

4) ಜನರೊಂದಿಗೆ ನ್ಯಾಯವಾಗಿ ನಡೆದುಕೊಳ್ಳುವುದು: ಅವಿದ್ಯಾವಂತರನ್ನು ಅಥವಾ ಹಳ್ಳಿ ಜನರನ್ನು / ಕೀಳು ಜಾತಿಯವರನ್ನು / ಒಳ್ಳೆಯ ಬಟ್ಟೆಯನ್ನು ಧರಿಸದಿದ್ದವರನ್ನು ಕೀಳಾಗಿ ಕಾಣಬಾರದು (ಅಥವಾ ಅಲಕ್ಷಿಸಬಾರದು). ಬೆಲೆಬಾಳುವ ಬಟ್ಟೆಗಳನ್ನು ಹಾಕುವ, ದೊಡ್ಡ ಮನೆ ಅಥವಾ ಕಾರ್ ಅಥವಾ ಉನ್ನತ ಶಿಕ್ಷಣ ಹೊಂದಿರುವ ಅಥವಾ ಸಮಾಜದಲ್ಲಿ ಉನ್ನತ ಸ್ಥಾನವನ್ನು ಹೊಂದಿರುವ ಜನರನ್ನು ಮುಖಸ್ತುತಿ ಮಾಡಬೇಡಿರಿ.

13. –

## ಅವಲೋಕನ

ನಿಶ್ಚಯವಾಗಲೂ ದೇವರ ರಾಜ್ಯದ ಇನ್ನೂ ಅನೇಕ ಇತರೆ ಮುಖ್ಯವಾದ ಮೌಲ್ಯಗಳಿವೆ. ಬಹುಶಃ ಅವುಗಳಲ್ಲಿ ಅತ್ಯಂತ ಮುಖ್ಯವಾದದ್ದು ಹಾಗೂ ಸ್ವತಃ ನಮ್ಮ ಒಳ್ಳೆಯ ಕುರುಬನಾದ ಯೇಸುವೇ ಮಾದರಿಯಾಗಿ ತೋರಿಸಿದ ಮೌಲ್ಯವು **"**ತ್ಯಾಗಪೂರ್ವಕವಾದ ಪ್ರೀತಿಯಾಗಿದೆ**"**. ***ನಾನೇ ಒಳ್ಳೆ ಕುರುಬನು. ಒಳ್ಳೆಯ ಕುರುಬನು ಕುರಿಗಳಿಗೋಸ್ಕರ ತನ್ನ ಪ್ರಾಣವನ್ನು ಕೊಡುತ್ತಾನೆ*** (ಯೋಹಾನ 10:11).

ತನ್ನ ಶಿಷ್ಯರು ತನ್ನ ಪ್ರೀತಿಯಲ್ಲಿ ನೆಲೆಗೊಳ್ಳಬೇಕೆಂದು ಯೇಸು ಹೇಳಿದನು: ***ತಂದೆಯು ನನ್ನನು ಪ್ರೀತಿಸಿದ ಹಾಗೇಯೇ ನಾನು ನಿಮ್ಮನ್ನು ಪ್ರೀತಿಸಿದ್ದೇನೆ. ನೀವು ನನ್ನ ಪ್ರೀತಿಯಲ್ಲಿ ನೆಲೆಗೊಂಡಿರ್ರಿ. ನಾನು ನನ್ನ ತಂದೆಯ ಆಜ್ಞೆಗಳನ್ನು ಕೈಕೊಂಡು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವಂತೆಯೇ ನೀವು ನನ್ನ ಆಜ್ಞೆಗಳನ್ನು ಕೈಗೊಂಡು ನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಳ್ಳುವಿರಿ. ನನ್ನ ಆನಂದವು ನಿಮ್ಮಲ್ಲಿ ಇರುವಂತೆಯೂ ಆ ನಿಮ್ಮ ಆನಂದವು ಪರಿಪೂರ್ಣವಾಗುವಂತೆಯೂ ನಾನು ಇವುಗಳನ್ನು ನಿಮಗೆ ಹೇಳಿದ್ದೇನೆ. ನಾನು ನಿಮ್ಮನ್ನು ಪ್ರೀತಿಸಿದ ಹಾಗೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬುದು ನನ್ನ ಆಜ್ಞೆಯಾಗಿದೆ. ಒಬ್ಬನು ತನ್ನ ಸ್ನೇಹಿತರಿಗಾಗಿ ತನ್ನ ಪ್ರಾಣವನ್ನೇ ಕೊಡುವಂತ ಪ್ರೀತಿಗಿಂತ ಮಹತ್ತಾದದ್ದು ಯಾವುದೂ ಇಲ್ಲ*** (ಯೋಹಾನ 15:9–13). ಪ್ರೀತಿಯು ಹೊಸ ಒಡಂಬಡಿಕೆಯ ಮೂಲಭೂತವಾದ **"**ಆಜ್ಞೆಯಾಗಿದೆ**"**. ಯೇಸು ತನ್ನಶಿಷ್ಯರಿಗೆ ಹೀಗೆ ಹೇಳಿದನು: ***ನಾನು ನಿಮಗೊಂದು ಹೊಸ ಆಜ್ಞೆಯನ್ನು ಕೊಡುತ್ತೇನೆ. ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು. ನಾನು ನಿಮ್ಮನ್ನು ಪ್ರೀತಿಸಿದ ಹಾಗೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು. ನಿಮಗೆ ಪರಸ್ಪರ ಪ್ರೀತಿ ಇದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳಿದುಕೊಳ್ಳುವರು*** (ಯೋಹಾನ 13:34–35), *ಮತ್ತು* ***ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬುದೇ ನಾನು ನಿಮಗೆ ಕೊಡುವ ಆಜ್ಞೆಯಾಗಿದೆ*** (ಯೋಹಾನ 15:17).

ಒಬ್ಬ ನಿಜವಾದ ವಿಶ್ವಾಸಿಯ ಗುರುತುಗಳಲ್ಲಿ ಮೊದಲನೇಯದು ಪ್ರೀತಿ ಎಂದು ಪೌಲನು ಹೇಳುತ್ತಾನೆ. ಆತನು ಆ ಗುರುತುಗಳನ್ನು ಪವಿತ್ರಾತ್ಮನ ಫಲ ಎಂದು ಕರೆಯುತ್ತಾನೆ: ***ಪವಿತ್ರಾತ್ಮನ ಫಲವೇನೆಂದರೆ – ಪ್ರೀತಿ ಸಂತೋಷ ಸಮಾಧಾನ ಧೀರ್ಘಶಾಂತಿ ದಯೆ ಉಪಕಾರ ನಂಬಿಕೆ ಸಾಧುತ್ವ ಶಮೆದಮೆ*** (ಗಲಾತ್ಯ 5:22–23). ಇದು ದೇವರ ರಾಜ್ಯದ ಮುಖ್ಯವಾದ ಮೌಲ್ಯಗಳ ಒಂದು ಶ್ರೇಷ್ಠವಾದ ಪಟ್ಟಿಯಾಗಿದೆ.

# ಉತ್ತರಗಳು 9: ದೇವರ ರಾಜ್ಯಕ್ಕಾಗಿ ಕಾಯುವುದು

## ಶಿಕ್ಷಕರಿಗಾಗಿ

ಈ ಅಧ್ಯಯನವನ್ನು ಮುಗಿಸಲು ಎರಡು ಗಂಟೆ ಸಾಕಾಗಬಹುದು. ಒಂದು ವೇಳೆ ವಿದ್ಯಾರ್ಥಿಗಳು ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಬೇಕೆಂದು ನೀವು ಬಯಸುವುದಾದರೆ ಗ್ರಂಥಾಲಯದ ಸಮಯ ಅಥವಾ ಮನೆಗೆಲಸದ ಸಮಯವನ್ನು ತೆಗೆದುಕೊಳ್ಳಬೇಕಾಗಬಹುದು.

ತಲಾಂತುಗಳ ಸಾಮ್ಯದ ಕುರಿತು ***ಟಿಪ್ಪಣಿ:*** ತಲಾಂತು ಅಂದರೆ ಒಂದು ದೊಡ್ಡ ಮೊತ್ತದ ಹಣವಾಗಿತ್ತು. ಒಬ್ಬ ಕೂಲಿಗಾರನು ಜೀವಮಾನವೆಲ್ಲಾ ಸಂಪಾದಿಸುವಷ್ಟು ಹಣಕ್ಕೆ ಸಮಾನವಾಗಿತ್ತು.

ಕುರಿಗಳು ಮತ್ತು ಆಡುಗಳ ಸಾದೃಶದ ಕುರಿತು ***ಟಿಪ್ಪಣಿಗಳು:***

1. ಅನೇಕ ಸತ್ಯವೇದ ಓದುಗರು ಈ ವಾಕ್ಯಭಾಗವನ್ನು ತಪ್ಪಾಗಿ ಅರ್ಥಮಾಡಿಕೊಳ್ಳುತ್ತಾರೆ. ಕೆಲವರು ಅದನ್ನು "ಸಮಾಜ ಸೇವೆಯ ಮೂಲಕ ರಕ್ಷಣೆ" ಎಂದು ಅರ್ಥವಿವರಿಸುತ್ತಾರೆ. ಅವರು ಹೇಳುವುದೇನೆಂದರೆ, ಕೆಲವರನ್ನು ನಿತ್ಯಶಿಕ್ಷೆಗಾಗಿಯೂ ಹಾಗೂ ಉಳಿದ ಕೆಲವರನ್ನು ನಿತ್ಯ ಜೀವನಕ್ಕಾಗಿ ಬೇರ್ಪಡಿಸುವದರ (25:46) ಹಿಂದಿನ ಕಾರಣವು ಬಡವರಿಗೆ ಹಾಗೂ ಅವಶ್ಯಕತೆಯಲ್ಲಿರುವವರಿಗೆ ಅವರು ದಯೆ ತೋರಿಸಿದರೋ ಇಲ್ಲವೋ ಎನ್ನುವುದರ ಮೇಲೆ ಆಧರಿತವಾಗಿದೆ. ಹೊಸ ಒಡಂಬಡಿಕೆಯ ಸಮಗ್ರ ದೈವಶಾಸ್ತ್ರವು ಅಂತಹ ಅರ್ಥವಿವರಣೆಯನ್ನು ನಿಷೇಧಿಸುತ್ತದೆ. ರಕ್ಷಣೆಯು ಕ್ರಿಯೆಗಳ ಮೂಲಕವಲ್ಲ ಬದಲಾಗಿ ಯೇಸುವಿನ ಮೇಲಿನ ನಂಬಿಕೆಯಿಂದಲೇ. "ಕುರಿಗಳ" ಮೇಲಿನ ಆಶೀರ್ವಾದವು ಮತ್ತು ಸ್ವಾಸ್ಥ್ಯವು ಅವರ ಒಳ್ಳೆಯ ಕ್ರಿಯೆಗಳ ನಿಮಿತ್ತವಾಗಿ ಸಿಕ್ಕ ಬಹುಮಾನವಲ್ಲ. ತಂದೆಯು ಮಗನ ತ್ಯಾಗಪೂರ್ವಕ ಮರಣದ ಮೂಲಕ ಮಾಡಿದ ಸಂಗತಿಯನ್ನು ಅವರು ಅಂಗೀಕರಿಸಿರುವುದರಿಂದ ಆಶೀರ್ವಾದವನ್ನು ಹೊಂದಿದ್ದಾರೆ. ಹಾಗಾಗಿ ಈಗ ಅವರು ತಮ್ಮ ಮನುಷ್ಯಕುಮಾರನು ಮಹಿಮೆಯಲ್ಲಿ ಬರುವುದನ್ನು ಎದುರು ನೋಡುತ್ತಿರುವಾಗ ತನ್ನ ಶಿಷ್ಯರು ಯಾವ ರೀತಿಯ ಜೀವಿತವನ್ನು ಜೀವಿಸಬೇಕೆಂದು ದೇವರು ಬಯಸುತ್ತಾನೆ ಎಂಬುದನ್ನು ಈ ಸಾದೃಶವು ತಿಳಿಸುತ್ತದೆ. ಬಡವರಿಗೆ ಹಾಗೂ ಅವಶ್ಯಕತೆಯಲ್ಲಿರುವವರಿಗೆ ಸೇವೆಯನ್ನು ಸಲ್ಲಿಸುವ ಜೀವಿತವನ್ನು ದೇವರು ಅವರಿಂದ ಅಪೇಕ್ಷಿಸಿದನು. ಅವರು ಪ್ರೀತಿ ಮತ್ತು ಕರುಣೆಯುಳ್ಳವರಾಗಿರಬೇಕೆಂದು ಆತನು ನಿರೀಕ್ಷಿಸಿದನು. ಯಾಕೆ? ಯಾಕೆಂದರೆ ಅವರು ನಿಜವಾಗಲೂ ಆತನಿಗೆ ಹಾಗೂ ದೇವರ ರಾಜ್ಯಕ್ಕೆ ಸಂಬಧಿಸಿದವರು ಎಂಬುದನ್ನು ಅದು ತೋರಿಸುತ್ತದೆ. ವಿಶ್ವಾಸಿಗಳು ತನ್ನಂತೆಯೇ ಇರಬೇಕೆಂದು ಯೇಸು ನಿರೀಕ್ಷಿಸುತ್ತಾನೆ. ಯೇಸು ಇದೇ ಅಂಶವನ್ನು ಪರ್ವತ ಪ್ರಸಂಗದಲ್ಲಿ ತಿಳಿಸುತ್ತಾನೆ: ನಾವು ಯೇಸುವನ್ನು ರಕ್ಷಕನಾಗಿ ಸ್ವೀಕರಿಸಿಕೊಂಡಿದ್ದೇವೆ ಮತ್ತು ದೇವರ ರಾಜ್ಯಕ್ಕೆ ಸೇರಿದವರಾಗಿದ್ದಾರೆ ಎಂಬುದನ್ನು ನಮ್ಮ ಜೀವಿತಗಳು ತೋರಿಸುತ್ತವೆ – ಕೇವಲ ಬಾಯಿಮಾತು ಸಾಕಾಗುವುದಿಲ್ಲ.

2. ದೇವರ ರಾಜ್ಯವು ಪೂರ್ಣಗೊಳ್ಳುವದಕ್ಕಿಂತ ಮುಂಚೆ ಸುವಾರ್ತೆಯು ಎಲ್ಲಾ ದೇಶದ ಜನರನ್ನು ತಲುಪಿರುವುದು (ಯೆಹೂದ್ಯರನ್ನು ಹಾಗೂ ಅನ್ಯಜನರನ್ನು) ಮತ್ತಾಯ 24:14 ನ್ನು (***"ಪರಲೋಕರಾಜ್ಯದ ಈ ಸುವಾರ್ತೆಯು ಲೋಕದಲ್ಲೆಲ್ಲಾ ಸರ್ವಜನಾಂಗಗಳಿಗೆ ಸಾಕ್ಷಿಗಾಗಿ ಸಾರಲ್ಪಡುವುದು. ತರುವಾಯ ಅಂತ್ಯ ಬರುವುದು"***) ಪ್ರಕಟನೆ 7:9 ರೊಂದಿಗೆ ಹೋಲಿಸಿರಿ (***"ಇದಾದನಂತರ ಯಾರೂ ಎಣಿಸಲಾಗದಂಥಮಹಾ ಜನಸಮೂಹವನ್ನು ಕಂಡೆನು. ಅವರು ಪ್ರತಿ ರಾಷ್ಟ್ರ, ಕುಲ, ಜನ ಮತ್ತು ಭಾಷೆಯವರಾಗಿದ್ದು ಯಜ್ಞದ ಕುರಿಮ್ಮರಿಯಾದಾತನ ಮುಂದೆಯೂ ಸಿಂಹಾಸನದ ಮುಂದೆಯೂ ನಿಂತಿದ್ದರು. ಅವರು ಬಿಳಿ ನಿಲುವಂಗಿಗಳನ್ನು ಧರಿಸಿದ್ದವರಾಗಿ ಕೈಗಳಲ್ಲಿ ಖರ್ಜೂರದ ಗರಿಗಳನ್ನು ಹಿಡಿದಿದ್ದರು"***).

***ಪೀಠಿಕೆಯನ್ನು*** ಓದಿರಿ ಮತ್ತು ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಉತ್ತರಿಸುವುದಕ್ಕಿಂತ ಮುಂಚೆ ಸತ್ಯವೇದ ವಾಕ್ಯಭಾಗಗಳನ್ನು ಒಟ್ಟಾಗಿ ಓದಿರಿ.

ನೀವು ಪ್ರಶ್ನೆಗಳನ್ನು ಹೀಗೆ ಬಳಸಬೇಕೆಂಬುದು ನನ್ನ ಸಲಹೆಯಾಗಿದೆ:

1) ವಿದ್ಯಾರ್ಥಿಗಳು 1–15 ಮತ್ತು 17–18 ಪ್ರಶ್ನೆಗಳನ್ನು ತರಗತಿ ಸಮಯದಲ್ಲಿಯೇ ಗುಂಪುಗಳಲ್ಲಿ ಚರ್ಚಿಸಲಿ. ಅವರ ಉತ್ತರಗಳನ್ನು ನೋಡಿರಿ. ಪರ್ಯಾಯವಾಗಿ ನೀವು ವಾಕ್ಯಭಾಗಗಳನ್ನು ಒಂದೊಂದಾಗಿ ಓದಿ ನಾಲ್ಕು ಸುತ್ತುಗಳಲ್ಲಿ ಹೀಗೆ ಪ್ರಶ್ನಿಸಬಹುದು: 1–6, 7–10, 11–15, 17–19.

2) ವಿದ್ಯಾರ್ಥಿಗಳು ಪ್ರಶ್ನೆ 19 ರ ಮೇಲೆ ಹೆಚ್ಚಿನ ಸಮಯವನ್ನು ಕಳೆಯದಂತೆ ನೋಡಿಕೊಳ್ಳಿರಿ. ಅವರು ಅದನ್ನು ಸವಾಲಾಗಿ ಸ್ವೀಕರಿಸಿದರೆ ಸಾಕು. ನಂತರ ಅವರು ಅದನ್ನು ಉತ್ತರಿಸಲು ನನ್ನ ಮೇಲಿನ ಟಿಪ್ಪಣಿಯನ್ನು ಬಳಸುವಂತೆ ಸಹಾಯ ಮಾಡಿರಿ.

3) 16, 20 ಮತ್ತು 21 ನೇ ಪ್ರಶ್ನೆಗಳನ್ನು ಗ್ರಂಥಾಲಯದ ಮತ್ತು ಮನೆಗೆಲಸದ ಸಮಯದಲ್ಲಿ ಮಾಡಬಹುದು. ಆದರೆ ಮರುದಿನ ತರಗತಿಯ ಸಮಯದಲ್ಲಿ ವಿದ್ಯಾರ್ಥಿಗಳು ಬರೆದಿರುವ ಉತ್ತರಗಳನ್ನು ನೀವು ಪರಿಶೀಲಿಸಿರಿ.

## ಉತ್ತರಗಳು

1. ಈ ಪಠ್ಯವನ್ನು ಸತ್ಯವೇದ ಅನುವಾದಗಳು ಹೀಗೆ ವಿಭಾಗಿಸುತ್ತವೆ:

    1) ***ಸತ್ಯವೇದವು*** (ಇಡೀ ವಾಕ್ಯಭಾಗಕ್ಕೆ ಒಂದೇ ಶೀರ್ಷಿಕೆಯಿದ್ದು. ಹೊಸ ವಾಕ್ಯವೃಂದಗಳು ಹೀಗಿವೆ):

    24:36–41 – "ಯಾವಾಗಲೂ ಸಿದ್ಧರಾಗಿರ್ರಿ"

    24:42–51 –"ಯೋಗ್ಯ ಮೇಲ್ವಿಚಾರಕ"

    25:1–13 –"ಹತ್ತುಮಂದಿ ಕನ್ನಿಕೆಯರ ಸಾಮ್ಯ"

    25:14–30 –"ದೇವರು ಕೊಟ್ಟಿರುವುದನ್ನು ಬಚ್ಚಿಡಬೇಡಿರಿ"

    25:31–46 –"ದೇವರನ್ನು ಸೇವಿಸುವುದು ಶ್ರೇಷ್ಟವಾದದ್ದು"

    2) ***ಪವಿತ್ರ ಗ್ರಂಥ*** (ಇಂಗ್ಲಿಷ್ ಭಾಷೆಯ NIV  ಮತ್ತು ESV ನಲ್ಲಿರುವ ವಿಭಾಗವನ್ನು ಮತ್ತು ಶೀರ್ಷಿಕೆಯನ್ನು ಹೊಂದಿದೆ, ಆದರೆ ಕೊನೆಯ ವಾಕ್ಯಭಾಗಕ್ಕೆ ESV ಯಲ್ಲಿ "ಅಂತಿಮ ನ್ಯಾಯತೀರ್ಪು" ಎಂಬ ಶೀರ್ಷಿಕೆಯನ್ನು ಕೊಡಲಾಗಿದೆ):

    24:36–51 –"ತಿಳಿಯದ ದಿನ ಹಾಗೂ ಗಳಿಗೆ"

    25:1–13 – "ಹತ್ತುಮಂದಿ ಕನ್ಯೆಯರ ಸಾಮ್ಯ"

    25:14–30 –"ತಲಾಂತುಗಳ ಸಾಮ್ಯ"

    25:31–46 –"ಕುರಿ ಆಡುಗಳ ಸಾಮ್ಯ"

    **3)** ***ಪವಿತ್ರ ಬೈಬಲ್:***

    24:36–44

    24:45–51

    25:1–13

    25:14–30

    25:31–46

2. ಮನುಷ್ಯಕುಮಾರನ ಬರೋಣಕ್ಕೆ ಮುಂಚೆ ಬರಲಿರುವ ದಿನಗಳನ್ನು ಹೋಲಿಸುವುದಕ್ಕಾಗಿ ಯೇಸು ನೋಹನ ದಿನಗಳನ್ನು ನೆನಪಿಸುತ್ತಾನೆ.

3. ತಾನು ಹಿಂದಿರುಗಿ ಬರುವ ದಿನವು ಯಾರಿಗೂ ತಿಳಿದಿಲ್ಲವಾದ್ದರಿಂದ ಯೇಸು ತನ್ನ ಶಿಷ್ಯರಿಗೆ ಎಚ್ಚರವಾಗಿರಬೇಕೆಂದು ಹೇಳುತ್ತಾನೆ.

4. ರಾತ್ರಿಯಲ್ಲಿ ಬರುವ ಕಳ್ಳನ ಕುರಿತು ಯೇಸು ಹೇಳಿದ ಅಂಶ: ಒಬ್ಬ ಕಳ್ಳನು ಯಾರೂ ನಿರೀಕ್ಷಿಸದ ಗಳಿಗೆಯಲ್ಲಿ ಅಂದರೆ ರಾತ್ರಿಯಲ್ಲಿ ಕದಿಯುವುದಕ್ಕೆ ಬರುವಂತೆ ಯೇಸು ಯಾರೂ ಅನಿರೀಕ್ಷಿತ ಗಳಿಗೆಯಲ್ಲಿ ಬರುವನು. ಹಾಗಾಗಿ ಶಿಷ್ಯರು ಯಾವಾಗಲೂ ಎಚ್ಚರವಾಗಿದ್ದು ಸಿದ್ಧರಾಗಿರಬೇಕು.

5. ಒಬ್ಬ ನಂಬಿಗಸ್ತ ಸೇವಕನ ಹಾಗೂ ಒಬ್ಬ ದುಷ್ಟ ಸೇವಕನ ನಡುವೆ ಇರುವ ಮುಖ್ಯವಾದ ವ್ಯತ್ಯಾಸ: ತನ್ನ ಯಜಮಾನನು ಉಪಸ್ಥಿತನಿಲ್ಲದಿದ್ದಾಗ್ಯೂ ಒಬ್ಬ ನಂಬಿಗಸ್ತನಾದ ಮತ್ತು ಬುದ್ಧಿವಂತ ಆಳು ತನ್ನ ಕೆಲಸವನ್ನು ಮುಂದುವರೆಸುವನು. ಆದರೆ ಒಬ್ಬ ದುಷ್ಟ ಆಳು ಯಜಮಾನನು ಬರುವುದು ತಡವಾದರೆ ತನ್ನ ಕರ್ತವ್ಯಗಳನ್ನು ಅಲಕ್ಷಿಸುವನು.

6. ಯೇಸುವು ಮತ್ತಾಯ 24:36–51 ರಲ್ಲಿ ಹೇಳಿರುವುದರ ಸಂಕ್ಷಿಪ್ತ ಸಾರಾಂಶ ಹೀಗಿದೆ:

   - ಮನುಷ್ಯಕುಮಾರನು ಹಿಂದಿರುಗುವ ದಿನದಂದು ಜನಜೀವನವು ಸರ್ವಸಾಮಾನ್ಯವಾಗಿರುವುದು.
   - ಆ ದಿನದಂದು ಎಲ್ಲರಿಗೂ ದೇವರ ರಾಜ್ಯದಲ್ಲಿ ಪ್ರವೇಶವಿರುವುದಿಲ್ಲ. ಕೆಲವರು ಹೊರಗಿರುವರು.
   - ಯೇಸು ನಿರೀಕ್ಷಿಸದ ಗಳಿಗೆಯಲ್ಲಿ ಬರುವುದರಿಂದ ವಿಶ್ವಾಸಿಗಳು ಯಾವಾಗಲೂ ಎಚ್ಚರವಾಗಿದ್ದು ಸಿದ್ಧರಾಗಿರಬೇಕು.
   - ಯೇಸು ಬರುವುದು ತಡವಾದರೂ ಸಹ ವಿಶ್ವಾಸಿಗಳು ನಂಬಿಗಸ್ತರಾಗಿರಬೇಕು. ಆತನು ಹಿಂದಿರುಗುವಾಗ ನಾವು ಕೆಲಸದಲ್ಲಿ ನಿರತರಾಗಿರಬೇಕೆಂದು ಆತನು ನಿರೀಕ್ಷಿಸುತ್ತಾನೆ.

7. ಹತ್ತುಮಂದಿ ಕನ್ಯೆಯರ ಸಾಮ್ಯವು ಯೇಸುವಿನ ಎರಡನೇಯ ಬರೋಣದಲ್ಲಿ "ಪರಲೋಕ ರಾಜ್ಯವು" (ದೇವರ ರಾಜ್ಯವನ್ನು ಸೂಚಿಸಲು ಮತ್ತಾಯನು ಬಳಸುವ ಪದ) ಹೇಗಿರುವುದು ಎಂಬುದರ ಕುರಿತಾಗಿದೆ ಎಂದು ಯೇಸು ಹೇಳಿದನು.

8. ಆ ದಿನಗಳಲ್ಲಿ ಮದುಮಗಳ ಗೆಳತಿಯರು ಮದುವೆಗಳಲ್ಲಿ ಪ್ರಾಮುಖ್ಯ ಪಾತ್ರವನ್ನು ವಹಿಸುತ್ತಿದ್ದರು. ಬುದ್ಧಿವಂತ ಕನ್ಯೆಯರು ಮದುವೆಯಲ್ಲಿ ತಾವು ವಹಿಸಬೇಕಾಗಿದ್ದ ಪಾತ್ರವನ್ನು ಅರ್ಥಮಾಡಿಕೊಳ್ಳುವುದರ ಮೂಲಕ ಹಾಗೂ ಮದುಮಗನ ಆಗಮನವು ತಡವಾದಾಗ್ಯೂ ಸಿದ್ಧರಾಗಿರುವುದರ ಮೂಲಕ ತಮ್ಮ ಜ್ಞಾನವನ್ನು ತೋರಿದರು. ಹಾಗಾಗಿ ಅವರು ತಮ್ಮ ದೀಪಗಳಲ್ಲಿ ಎಣ್ಣೆಯುಳ್ಳವರಾಗಿ ಬಂದರು. ಮದುಮಗನು ಆಗಮಿಸಿದಾಗ ಓಡಿ ಹೋಗಿ ಎಣ್ಣೆಯನ್ನು ತರಲು ಸಮಯವಿರುವುದಿಲ್ಲ ಎಂಬುದನ್ನು ತಿಳಿದಿದ್ದರು. ಆತನು ಯಾವ ಗಳಿಗೆಯಲ್ಲಾದರೂ ಬರಲಿದ್ದನು ಮತ್ತು ಅವರು ತಮ್ಮ ಕೆಲಸವನ್ನು ಮುಗಿಸಿಕೊಂಡು ಬರುವವರೆಗೆ ಆತನು ಕಾಯುತ್ತಿರಲಿಲ್ಲ.

9. ಮದುಮಗನ ನಿಷ್ಠುರತೆಯು ಇವುಗಳನ್ನು ಪ್ರದರ್ಶಿಸಿತು:

   1) ಮದುವೆಯ ಪ್ರಾಮುಖ್ಯತೆ
   2) ಮದುವೆಯಲ್ಲಿ ಮದುಮಗಳ ಗೆಳತಿಯರು ವಹಿಸಬೇಕಾಗಿದ್ದ ಪಾತ್ರದ ಪ್ರಾಮುಖ್ಯತೆ

10. ತನ್ನ ಎರಡನೇಯ ಬರೋಣದ ಸಮಯವನ್ನು ತನ್ನ ಶಿಷ್ಯರು ತಿಳಿಯದೇ ಇದ್ದದ್ದರಿಂದ ಅವರು ಎಚ್ಚರವಾಗಿರಬೇಕೆಂದು ಪ್ರಬೋಧಿಸುವುದರೊಂದಿಗೆ ಯೇಸು ಹತ್ತುಮಂದಿ ಕನ್ಯೆಯರ ಸಾಮ್ಯವನ್ನು ಸಮಾರೋಪಗೊಳಿಸುತ್ತಾನೆ.

11. ಗ್ರೀಕ್ ಪಠ್ಯದಲ್ಲಿ ಮುಕ್ತವಾಗಿ ತಿಳಿಸದಿದ್ದಾಗ್ಯೂ ಸಹ ತಲಾಂತುಗಳ ಸಾಮ್ಯವು ದೇವರ ರಾಜ್ಯದ ಕುರಿತಾಗಿದೆ. ಇದನ್ನು ಸ್ಪಷ್ಟಪಡಿಸುವುದಕ್ಕಾಗಿ ***ಪವಿತ್ರ ಗ್ರಂಥ*** ಅನುವಾದದಲ್ಲಿ "ದೇವರ ರಾಜ್ಯ" ಎಂಬ ಪದವನ್ನು ವಚನ 14 ರಲ್ಲಿಸೇರಿಸಲಾಗಿದೆ.

12. ಯಜಮಾನನು ತನ್ನ ಎಲ್ಲಾ ಆಳುಗಳಿಗೆ ಸಮನಾದ ಮೊತ್ತವನ್ನು ಕೊಡಲಿಲ್ಲ, ಯಾಕೆಂದರೆ ಅವರೆಲ್ಲರೂ ವ್ಯತ್ಯಾಸವಾದ ಸಾಮರ್ಥ್ಯಗಳನ್ನು ಹೊಂದಿದ್ದರು (25:15).

13. ತಮಗೆ ವಹಿಸಲ್ಪಟ್ಟ ಹಣವನ್ನು ಚೆನ್ನಾಗಿ ನಿರ್ವಹಿಸಿದರೆಂದು ಹೇಳುವುದರ ಮೂಲಕ ಯಜಮಾನನು ಮೊದಲ ಎರಡು ಆಳುಗಳನ್ನು ಹೊಗಳುತ್ತಾನೆ. ಹಾಗಾಗಿ ಅವರು ಒಳ್ಳೆಯ ನಂಬಿಗಸ್ತ ಆಳುಗಳಾಗಿದ್ದರು.

14. ಯಜಮಾನನು ಮೂರನೇಯ ಆಳಿನ ಮೇಲೆ ಕೋಪಗೊಂಡನು, ಯಾಕೆಂದರೆ ಆತನು ಅಪನಂಬಿಗಸ್ತನಾಗಿದ್ದನು (ದುಷ್ಟನಾಗಿದ್ದನು ಮತ್ತು ಸೋಮಾರಿಯಾಗಿದ್ದನು). ಆತನು ಎರಡು ರೀತಿಯಲ್ಲಿ ಸೋತಿದ್ದನು:

    1) ಆತನು ತನ್ನ ಯಜಮಾನನ ಗುಣವನ್ನು ಅರ್ಥಮಾಡಿಕೊಳ್ಳುವುದರಲ್ಲಿ ಸೋತಿದ್ದನು.

2) ಆತನು ತನ್ನ ಜವಾಬ್ದಾರಿಗಳನ್ನು ನಿರ್ವಹಿಸುವುದರಲ್ಲಿ ಸೋತಿದ್ದನು.

15. ಹತ್ತುಮಂದಿ ಕನ್ಯೆಯರ ಸಾಮ್ಯ ಮತ್ತು ತಲಾಂತುಗಳ ಸಾಮ್ಯವು ದೇವರ ರಾಜ್ಯವು ತನ್ನ ಪರಿಪೂರ್ಣತೆಯೊಂದಿಗೆ ಬರುವಾಗ ಹೇಗಿರುವುದು ಎಂಬುದರ ಕುರಿತು ಎರಡು ಸತ್ಯಗಳನ್ನು ಪ್ರದರ್ಶಿಸುತ್ತವೆ:

    1) ಯೇಸು ಹಿಂದಿರುಗುವಾಗ ಆತನ ಜನರು ಆನಂದಿಸುವರು ಮತ್ತು ಆತನ ವೈರಿಗಳು ಗೋಳಾಡುವರು.

    2) ಯೇಸು ಇಹಲೋಕದಲ್ಲಿನ ದೇವರ ಸೇವೆಯ ಸಮಯದಲ್ಲಿ ತನ್ನ ರಾಜ್ಯದ ಕುರಿತು ಪ್ರಕಟಿಸಿದಾಗ ಪಾಪಕ್ಷಮಾಪಣೆಯನ್ನು ಕೊಟ್ಟನು. ಆದರೆ ಆತನು ತನ್ನ ಎರಡನೇಯ ಬರೋಣದ ದಿನದಲ್ಲಿ ತನ್ನ ರಾಜ್ಯವನ್ನು ಪೂರ್ಣಗೊಳಿಸುವಾಗ ನ್ಯಾಯತೀರ್ಪನ್ನು ನೀಡುವನು.

16. –

17. ಯೇಸು ಈ ವಾಕ್ಯಭಾಗದಲ್ಲಿ ಒಂದು ಸಾದೃಶವನ್ನು ಬಳಸುತ್ತಾನೆ. ಅದರ ಅರ್ಥ ಆತನು ಜನರನ್ನು ಕುರಿಗಳಿಗೆ ಮತ್ತು ಆಡುಗಳಿಗೆ ಹೋಲಿಸುತ್ತಾನೆ. "ಕುರಿಗಳ" ರೀತಿಯ ಜನರ ಹಾಗೂ "ಆಡುಗಳ" ರೀತಿಯ ಜನರ ನಡುವಿನ ವ್ಯತ್ಯಾಸವು ಅವರು ತಮ್ಮ ಜೀವಮಾನಕಾಲದಲ್ಲಿ ಮಾಡಿದ ಸಂಗತಿಗಳ ಮೇಲೆ ಆಧರಿತವಾಗಿದೆ. "ಕುರಿಗಳು" ಹಸಿದವರಿಗೆ ಊಟವನ್ನು, ಬಾಯಾರಿದವರಿಗೆ ನೀರನ್ನು ನೀಡಿದವರಾಗಿದ್ದು ಅಪರಿಚಿತರನ್ನು ತಮ್ಮ ಮನೆಗೆ ಬರಮಾಡಿಕೊಂಡು, ಅವಶ್ಯಕತೆಯಲ್ಲಿರುವವರಿಗೆ ಬಟ್ಟೆಯನ್ನು ನೀಡಿ, ರೋಗಿಗಳಿಗೆ ಉಪಚಾರಮಾಡಿ, ಸೆರೆಯಲ್ಲಿರುವವರನ್ನು ಸಂಧಿಸಿದವರಾಗಿದ್ದಾರೆ. ಆದರೆ "ಆಡುಗಳು" ಇವುಗಳನ್ನು ಮಾಡಿರುವುದಿಲ್ಲ.

18. ದೇವರ ರಾಜ್ಯವನ್ನು ಅಂತಿಮವಾಗಿ ಪ್ರವೇಶಿಸುವ ಜನರು ಪ್ರೀತಿ, ಕನಿಕರ ಮತ್ತು ಕರುಣೆಯುಳ್ಳವರಾಗಿರಬೇಕೆಂದು ಯೇಸು ಅಪೇಕ್ಷಿಸುತ್ತಾನೆ (25:31–46). ವಿಶ್ವಾಸಿಗಳು ಹಸಿದವರಿಗೆ ಊಟವನ್ನು, ಬಾಯಾರಿದವರಿಗೆ ನೀರನ್ನು ನೀಡಿದವರಾಗಿದ್ದು ಅಪರಿಚಿತರನ್ನು ತಮ್ಮ ಮನೆಗೆ ಬರಮಾಡಿಕೊಂಡು, ಅವಶ್ಯಕತೆಯಲ್ಲಿರುವವರಿಗೆ ಬಟ್ಟೆಯನ್ನು ನೀಡಿ, ರೋಗಿಗಳಿಗೆ ಉಪಚಾರ ಮಾಡಿ, ಸೆರೆಯಲ್ಲಿರುವವರನ್ನು ಸಂಧಿಸಿದವರಾಗಿದ್ದಾರೆ.

19. ಸತ್ಯವೇದವನ್ನು ಓದುವ ಅನೇಕರು "ಕುರಿಗಳ ಮತ್ತು ಆಡುಗಳ" (25:31–46) ವಾಕ್ಯಭಾಗವನ್ನು ಓದುವಾಗ ಕಷ್ಟಪಡುತ್ತಾರೆ. ಯಾಕೆಂದರೆ ಅದು ಸುವಾರ್ತೆಗೆ ತದ್ವಿರೋಧವಾಗಿರುವ ರೀತಿಯಲ್ಲಿ ತೋರುತ್ತದೆ. ಅದರ ಬಗ್ಗೆ ನಾನು ಅರ್ಥಮಾಡಿಕೊಂಡಿರುವುದನ್ನು ***ಶಿಕ್ಷಕರಿಗಾಗಿ*** ಎಂಬ ಮೇಲಿನ ಭಾಗದಲ್ಲಿ ಮೊದಲ ಟಿಪ್ಪಣಿಯಲ್ಲಿ ತಿಳಿಸಿದ್ದೇನೆ.

20. –

21. ದೇವರ ರಾಜ್ಯವು ಪರಿಪೂರ್ಣಗೊಳ್ಳುವುದನ್ನು ಎದುರುನೋಡುತ್ತಿರುವ ವಿಶ್ವಾಸಿಗಳಿಗಾಗಿ ಯೇಸು ಕೊಡುವ ಪ್ರಭೋದನೆಗಳನ್ನು ನಾವು ಹೀಗೆ ಸಾರಾಂಶಗೊಳಿಸಬದುದು:

    1) ದೇವರ ರಾಜ್ಯದ ಕುರಿತಾದ ಸುವಾರ್ತೆಯನ್ನು ಸಾರಿರಿ!

    2) ಎಚ್ಚರವಾಗಿದ್ದು ಜಾಗರೂಕರಾಗಿರ್ರಿ!

    3) ಸಿದ್ಧರಾಗಿರ್ರಿ!

    4) ನಂಬಿಗಸ್ತರಾಗಿರ್ರಿ!

    5) ಯೇಸುವಿನಂತಿರ್ರಿ!

## ಅವಲೋಕನ

ಯೇಸು ತನ್ನ ಶಿಷ್ಯರು ತನ್ನ ಬರೋಣಕ್ಕಾಗಿಯೂ ಹಾಗೂ ಲೋಕದ ಅಂತ್ಯಕ್ಕಾಗಿಯೂ ಕಾಯುತ್ತಿರುವಾಗ ಜ್ಞಾನವಂತರಾಗಿರಬೇಕೆಂದು ಹೇಳುತ್ತಾನೆ. ಅವರು ಬುದ್ಧಿವಂತ ಕನ್ಯೆಯರಂತೆ ನಂಬಿಗಸ್ತ ಹಾಗೂ ಜ್ಞಾನವಂತ ಸೇವಕರಾಗಿರಬೇಕೆಂದು ಆತನು ಬಯಸಿದನು. ಸತ್ಯವೇದದ ದೃಷ್ಟಿಕೋನದಿಂದ ಒಬ್ಬ ಜ್ಞಾನವಂತನಿಗೆ ಕೆಲವು ಸಂಗತಿಗಳು ಗೊತ್ತಿದ್ದರೆ ಅಥವಾ ಒಂದು ವಿಷಯದ ಕುರಿತು ಒಳನೋಟ ಇದ್ದರೆ ಮಾತ್ರ ಸಾಲದು. ಜ್ಞಾನವು ವಿಧೇಯತೆಯನ್ನೂ ಸಹ ಒಳಗೊಳ್ಳಬೇಕು. ನಿಮಗೆ ತಿಳಿದಿರುವ ವಿಷಯವನ್ನು ಕಾರ್ಯರೂಪಕ್ಕೆ

ತರುವಾಗ ನೀವು ಜ್ಞಾನವಂತರಾಗುತ್ತೀರಿ. ಹಾಗಾದರೆ ತನ್ನ ಶಿಷ್ಯರು ತನ್ನ ಬರೋಣಕ್ಕಾಗಿ ಕಾಯುತ್ತಿರುವಾಗ ಏನನ್ನು ಮಾಡಬೇಕೆಂದು ಆತನು ಬಯಸಿದನು? ಅವರು ಎಲ್ಲೆಡೆ ಸುವಾರ್ತೆಯನ್ನು ಸಾರಬೇಕೆಂದು ಆತನು ಬಯಸಿದನು. ಅವರು ತಮ್ಮ ಪ್ರೀತಿಯ ಸೇವೆಯನ್ನು ನಂಬಿಗಸ್ತರಾಗಿ ಮುಂದುವರೆಸಬೇಕೆಂದು ಆತನು ಬಯಸಿದನು: ಹಸಿದವರಿಗೆ ಊಟವನ್ನು, ಬಾಯಾರಿದವರಿಗೆ ನೀರನ್ನು ನೀಡಬೇಕು. ಅಪರಿಚಿತರನ್ನು ತಮ್ಮ ಮನೆಗೆ ಬರಮಾಡಿಕೊಂಡು, ಅವಶ್ಯಕತೆಯಲ್ಲಿರುವವರಿಗೆ ಬಟ್ಟೆಯನ್ನು ನೀಡಿ, ರೋಗಿಗಳಿಗೆ ಉಪಚಾರ ಮಾಡಿ, ಸೆರೆಯಲ್ಲಿರುವವರನ್ನು ಸಂಧಿಸಬೇಕು.

ನಾವು ಈ ಅಧ್ಯಯನದಲ್ಲಿ ಪರಿಶೀಲಿಸಿರುವ ನಾಲ್ಕು ಕಥೆಗಳ / ಸಾಮ್ಯಗಳ ಭಾವನಾತ್ಮಕ ಕೇಂದ್ರವನ್ನು **"**ಎದುರು ನೋಡುವಿಕೆ ಮತ್ತು ನಂಬಿಗಸ್ತ ವಿಧೇಯತೆ**"** ಎಂದು ವರ್ಣಿಸಬಹುದು. ನಾವು ಯೇಸುವಿನ ಬರೋಣಕ್ಕಾಗಿ ಮತ್ತು ದೇವರ ರಾಜ್ಯದ ಪೂರ್ಣಗೊಳ್ಳುವಿಕೆಗಾಗಿ ಎದುರು ನೋಡುತ್ತಿದ್ದೇವೋ? ನಾವು ಆ ದಿನಕ್ಕಾಗಿ ಸಿದ್ಧರಾಗಿದ್ದೇವೋ? ಮನುಷ್ಯಕುಮಾರನನ್ನು ಎದುರುಗೊಳ್ಳಲು ಸಿದ್ಧರಿಲ್ಲದ ಜನರಿಗೆ ಆ ದಿನವು ನ್ಯಾಯತೀರ್ಪಿನ ಹಾಗೂ ಭಯದ ದಿನವಾಗಿರುವುದು. ಆದರೆ ಆತನನ್ನು ನಮ್ಮ ಸ್ವಂತ ರಕ್ಷಕನಾಗಿ ಸ್ವೀಕರಿಸಿರುವ ನಮಗೆ ಅದೊಂದು ಮಹಿಮೆಯುಳ್ಳ ಸಂತೋಷದ ಎದುರು ನೋಡತಕ್ಕ ದಿನವಾಗಿರುವುದು.

# ಉತ್ತರಗಳು 10: ಸಭೆ ಮತ್ತು ದೇವರ ರಾಜ್ಯ

## ಶಿಕ್ಷಕರಿಗಾಗಿ

ಈ ಅಧ್ಯಯನವನ್ನು ಮುಗಿಸಲು ಒಂದು ಗಂಟೆ ಸಾಕಾಗಬಹುದು. ಅದನ್ನು ಗ್ರಂಥಾಲಯದ ಸಮಯ ಅಥವಾ ಮನೆಗೆಲಸದ ಸಮಯದಲ್ಲಿ ಮಾಡಬಹುದು. ಆದರೆ ಮರುದಿನ ವಿದ್ಯಾರ್ಥಿಗಳಿಗಿರುವ ಪ್ರಶ್ನೆಗಳನ್ನು ಉತ್ತರಿಸಲು ಸ್ವಲ್ಪ ಸಮಯವನ್ನು ಮೀಸಲಿಡಿರಿ.

## ಉತ್ತರಗಳು

1. ಯೇಸು ಯೆರುಸಲೇಮ್ ಪಟ್ಟಣದ ಹೊರಗೆ ಸಮಾಧಿಯ ಬಳಿಯಲ್ಲಿದ್ದ ಸ್ತ್ರೀಯರ ಮೂಲಕ ತನ್ನ ಉಳಿದ ಹನ್ನೊಂದು ಶಿಷ್ಯರಿಗೆ (ಅವರನ್ನು ಆತನು ತನ್ನ "ಸಹೋದರರೆಂದು" ಕರೆದನು) ಗಲಿಲಾಯದಲ್ಲಿ ತನ್ನನ್ನು ಸಂಧಿಸಲು ಹೋಗಬೇಕೆಂದು ತಿಳಿಸಿದನು (ಮತ್ತಾಯ 28:8–10).

2. ಮತ್ತಾಯ 28:18–20 ರಲ್ಲಿ ಯೇಸು ತನ್ನ ಹನ್ನೊಂದು ಶಿಷ್ಯರಿಗೆ ಕೊಟ್ಟ ಪ್ರಭೋದನೆಯನ್ನು ಮಹಾ ಆದೇಶ ಎಂದು ಕರೆಯುತ್ತಾರೆ. ಅದನ್ನು ನಾವು ಮೂರು ಭಾಗಗಳಾಗಿ ಹೀಗೆ ರಚಿಸಬಹುದು:

    1) ಯೇಸುವಿನ ಅಧಿಕಾರಯುಕ್ತ ಹೇಳಿಕೆ. ದೇವರು ತನಗೆ ಭೂಲೋಕದಲ್ಲಿಯೂ ಪರಲೋಕದಲ್ಲಿಯೂ ಎಲ್ಲಾ ಅಧಿಕಾರ ನೀಡಿದ್ದಾನೆ ಎಂದು ಯೇಸು ಹೇಳಿದನು. ಹಾಗಾಗಿ ಶಿಷ್ಯರಿಗೆ ಈ ಮಹಾ ಆದೇಶವನ್ನು ನೀಡಲು ಯೇಸುವಿಗೆ ಅಧಿಕಾರವಿತ್ತು. ಅದು ದೇವರ ರಾಜ್ಯದ ಅರಸನಾದ ಹಾಗೂ ಅವರ ಪುನರುತ್ಥಾನನಾದ ಕರ್ತನ ಅಧಿಕಾರವಾಗಿತ್ತು.

    2) ಸ್ವತಃ ಮಹಾ ಆದೇಶವು. ಅವರು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಬೇಕೆಂದು ಅವರಿಗೆ ಹೇಳಲ್ಪಟ್ಟಿತು.

    3) ಯೇಸುವಿನ ಪ್ರಸನ್ನತೆಯ ವಾಗ್ದಾನ. ಹಾಗಾಗಿ ಶಿಷ್ಯರು ಸ್ವಂತವಾಗಿ ಮಹಾ ಆದೇಶವನ್ನು ನೆರವೇರಿಸುವ ಅವಶ್ಯವಿರಲಿಲ್ಲವೆಂಬುದನ್ನು ತಿಳಿದಿದ್ದರು. ಯೇಸು ಪವಿತ್ರಾತ್ಮನ ಮೂಲಕ ಅವರ ಸಂಗಡ ಇರುವನು. ಅದೇ ಯೇಸುವಿನ ಪ್ರಸನ್ನತೆಯು ನಮ್ಮೊಂದಿಗೂ ಸಹ ಇದೆ ಎಂಬ ಭರವಸೆಯೊಂದಿಗೆ ಯೇಸುವಿನ ಶಿಷ್ಯರಾದ ನಾವು ಈ ಮಹಾ ಆದೇಶವನ್ನು ನೆರವೇರಿಸುತ್ತಾ ಮುಂದುವರೆಯಬಹುದಾಗಿದೆ. ಆತನು ತನ್ನ ರಾಜ್ಯವನ್ನು ಪರಿಪೂರ್ಣಗೊಳಿಸಲು ಹಿಂದಿರುಗುವವರೆಗೂ ಲೋಕದ ಅಂತ್ಯದವರೆಗೂ ತನ್ನ ಸಭೆಯೊಂದಿಗಿರುವನು.

3. ಯೇಸು ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ ಎಂದು ತನ್ನ ಹನ್ನೊಂದು ಶಿಷ್ಯರಿಗೆ ಹೇಳಿದನು. ಅದರಲ್ಲಿ ಈ ಮೂರು ಹಂತಗಳು ಒಳಗೊಂಡಿವೆ ಎಂದು ಆತನು ಹೇಳಿದನು:

    1) ಹೋಗುವುದು: ಯೇಸುವಿನ ಹಿಂಬಾಲಕರು ಎಲ್ಲಾ ದೇಶಗಳಿಗೆ ಹೋಗಿ ದೇವರ ರಾಜ್ಯದ ಸುವಾರ್ತೆಯನ್ನು ಸಾರಬೇಕೆಂದು ಹೇಳಲ್ಪಟ್ಟರು.

    2) ದೀಕ್ಷಾಸ್ನಾನ ಮಾಡಿಸುವುದು: ಯೇಸುವಿನ ಹಿಂಬಾಲಕರು ದೇವರ ರಾಜ್ಯದ ಸುವಾರ್ತೆಯನ್ನು ಅಂಗೀಕರಿಸಿದವರಿಗೆ ದೀಕ್ಷಾಸ್ನಾನ ಮಾಡಿಸಬೇಕೆಂದು ಹೇಳಲ್ಪಟ್ಟರು. ಸಭೆಯು ದೀಕ್ಷಾಸ್ನಾನ ಹೊಂದಿದವರ ಗುಂಪಾಗಿದೆ.

    3) ಬೋಧಿಸುವುದು: ಯೇಸುವಿನ ಹಿಂಬಾಲಕರು ನಂಬಿದವರಿಗೆ (ವಿಶ್ವಾಸಿಗಳು, ದೀಕ್ಷಾಸ್ನಾನ ಹೊಂದಿದವರು, ಸಭೆ) ಯೇಸು ಮೊದಲ ಶಿಷ್ಯರಿಗೆ ಆಜ್ಞಾಪಿಸಿದ್ದೆಲ್ಲವನ್ನು ಪಾಲಿಸಬೇಕೆಂದು ಬೋಧಿಸಲು ಹೇಳಲ್ಪಟ್ಟರು. ಈ ಬೋಧನೆಯನ್ನು ನಾವು ಹೊಸ ಒಡಂಬಡಿಕೆಯ ಮೊದಲ ನಾಲ್ಕು ಸುವಾರ್ತೆಗಳಲ್ಲಿ ಕಾಣುತ್ತೇವೆ. ಯೇಸುವಿನ ಬೋಧನೆಗಳನ್ನು ಹೊಸ ಒಡಂಬಡಿಕೆಯ ಪತ್ರಿಕೆಗಳಲ್ಲಿ ಸಭೆಯ ಅಪೊಸ್ತಲರುಗಳು ವಿವರಿಸಿರುವುದನ್ನು ಹಾಗೂ ಕಾರ್ಯರೂಪಕ್ಕೆ ತಂದಿರುವುದನ್ನು ನಾವು ಕಾಣುತ್ತೇವೆ.

4. –

5. ಯೇಸು ತನ್ನ ಶಿಷ್ಯರಿಗೆ ಪವಿತ್ರಾತ್ಮನ ವರಕ್ಕಾಗಿ ಯೆರೂಸಲೇಮಿನಲ್ಲಿ ಕಾದುಕೊಂಡಿರ್ರಿ ಎಂದು ಹೇಳಿದನು. ಆತನು ಅದನ್ನು ಪವಿತ್ರಾತ್ಮನ ದೀಕ್ಷಾಸ್ನಾನ ಎಂದು ಕರೆದನು (ಅ. ಕೃ. 1:4–8).

6. ಅಪೊ.ಕೃತ್ಯ. 1:4–8 ರಲ್ಲಿ ಯೇಸು, ದೇವರ ರಾಜ್ಯ, ಪವಿತ್ರಾತ್ಮ ಮತ್ತು ಶಿಷ್ಯರ ನಡುವೆ ನಿಕಟವಾದ ಸಂಬಂಧವಿದೆ ಎಂದು ನಾವು ಕಾಣುತ್ತೇವೆ:

   1) ಇಸ್ರಾಯೇಲ್ ರಾಜ್ಯವನ್ನು ಪುನಃಸ್ಥಾಪಿಸುವ ಸಮಯ ಬಂದಿತೋ ಎಂದು ಶಿಷ್ಯರು (ತಮ್ಮ ಕರ್ತನಾದ) ಯೇಸುವಿಗೆ ಕೇಳಿದರು. ಹಾಗಾಗಿ ಯೇಸು ದೇವರ ರಾಜ್ಯದ, ಅಂದರೆ ತನ್ನ ಇಹಲೋಕದಲ್ಲಿನ ಸೇವೆಯಲ್ಲಿ ಪರಿಚಯಿಸಿದ ರಾಜ್ಯದ ಕರ್ತನಾಗಿದ್ದಾನೆ (ಅಥವಾ ಅರಸನಾಗಿದ್ದಾನೆ).

   2) ಯೇಸುವಿನ ಉತ್ತರವು ಆ ಘಟನೆಯ (ದೇವರ ರಾಜ್ಯದ ಪರಿಪೂರ್ಣತೆಯನ್ನು ಉಲ್ಲೇಖಿಸುತ್ತಾ) ಸಮಯವು ಇನ್ನೂ ಬಂದಿಲ್ಲವೆಂಬುದನ್ನು ತಿಳಿಸುತ್ತದೆ. ಮೊದಲು ಶಿಷ್ಯರು ಪವಿತ್ರಾತ್ಮನ ಬಲವನ್ನು ಹೊಂದಿಕೊಳ್ಳಬೇಕಾಗಿತ್ತು. ಅದು ಪಂಚಾಶತ್ತಮ ದಿನದ ಮೊದಲ ದಿನದಂದು ಸಂಭವಿಸಿತು (ಅಪೊ.ಕೃತ್ಯ. 2 ನ್ನು ನೋಡಿರಿ). ಆಗ ಮಾತ್ರ ಅವರು ಯೇಸುವಿನ ಕುರಿತು ಲೋಕದ ಅಂತ್ಯದವರೆಗೂ ಸಾಕ್ಷೀಕರಿಸಲು (ಮತ್ತು ಆತನ ರಾಜ್ಯದ ಶುಭವಾರ್ತೆಯನ್ನು ಸಾರಲು) ಶಕ್ತರಾಗುವರು.

   3) ಹಾಗಾಗಿ ದೇವರ ರಾಜ್ಯವನ್ನು ಎಲ್ಲಾ ದೇಶಗಳಿಗೆ ಸಾರಿದ ನಂತರ ಅದು ಪರಿಪೂರ್ಣಗೊಳ್ಳುವುದು ಎಂಬುದನ್ನು ನಾವು ಇದರಿಂದ ಸಮಾರೋಪಗೊಳಿಸಬಹುದು. ಈ ಸಾರುವಿಕೆಯನ್ನು ಪವಿತ್ರಾತ್ಮನ ಬಲದಿಂದ ಯೇಸುವಿನ ಶಿಷ್ಯರ ಮೂಲಕ ಮಾಡಲ್ಪಡುವುದು.

7. ಅಪೊಸ್ತಲರ ಕೃತ್ಯಗಳು ಲೂಕನ ಬರೆದ ಸುವಾರ್ತೆಯ ಮುಂದುವರೆದ ಭಾಗವಾಗಿದೆ ಎಂದು ಅನೇಕ ಸತ್ಯವೇದ ಶಾಸ್ತ್ರಜ್ಞರು ಕಾಣುತ್ತಾರೆ, ಅದನ್ನು ಅವರು ಕತೆಯ ಎರಡನೇಯ ಭಾಗದಂತೆ (ಅಪೊ.ಕೃತ್ಯ. 1:1 ರಲ್ಲಿರುವ ಲೂಕನ ಪೀಠಿಕೆಯನ್ನು ನೋಡಿರಿ) ಮಾತ್ರವಲ್ಲದೇ ದೈವಶಾಸ್ತ್ರವಾಗಿಯೂ ಎರಡನೇಯ ಭಾಗವೆಂದು ಕಾಣುತ್ತಾರೆ. ನಾನು ಅವರೊಂದಿಗೆ ಒಪ್ಪುತ್ತೇನೆ. ಲೂಕನು ಬರೆದ ಸುವಾರ್ತೆಯಲ್ಲಿ ಯೇಸು ಹೇಗೆ ತನ್ನ ಇಹಲೋಕದಲ್ಲಿನ ಸೇವೆಯ (ಆತನ ಬೋಧನೆಗಳ, ಆತನ ಅದ್ಭುತಗಳ, ಆತನ ಹಿಂಸೆ, ಮರಣ ಮತ್ತು ಪುನರುತ್ಥಾನದ) ಮೂಲಕ ಒಂದು ನೂತನ ರೀತಿಯಲ್ಲಿ ದೇವರ ರಾಜ್ಯವನ್ನು ಪರಿಚಯಿಸಿದನು ಎಂಬುದನ್ನು ಓದುತ್ತೇವೆ. ಪ್ರಾಚೀನ ಜಗತ್ತಿನಲ್ಲಿ ಹೇಗೆ ದೇವರ ರಾಜ್ಯವು ಹರಡಿತು ಎಂಬುದನ್ನು ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ಲೂಕನು ವಿವರಿಸುತ್ತಾನೆ. ಯೇಸು ಪವಿತ್ರಾತ್ಮನ ಮೂಲಕ ಆದಿಸಭೆಯೊಂದಿಗೆ ಇದ್ದದ್ದರಿಂದ ಅದು ಸಾಧ್ಯವಾಯಿತು. ಹಾಗಾಗಿ ಲೂಕನ ಸುವಾರ್ತೆಯ ಹಾಗೂ ಅಪೊಸ್ತಲರ ಕೃತ್ಯಗಳ ಪುಸ್ತಕದ ನಡುವೆ ಒಂದು ಬಲವಾದ ದೈವಶಾಸ್ತ್ರೀಯ ಸಂಬಂಧವಿದೆ.

8. 1 ಕೊರಿ. 12:27 ಮತ್ತು ಎಫೆಸ 1:23 ರ ಮೂಲಕ ಪೌಲನು ಸಭೆಯನ್ನು ಒಂದು ದೇಹವಾಗಿ ಕಾಣುತ್ತಾನೆ ಮತ್ತು ಯೇಸು ಅದರಲ್ಲಿ ನೆಲೆಸಿದ್ದಾನೆ ಎಂಬುದನ್ನು ನಾವು ಕಲಿಯುತ್ತೇವೆ. ಸ್ಥಳೀಯ ಸಭೆಯೂ ಸಹ (ಕೊರಿಂಥ ಪಟ್ಟಣದಲ್ಲಿದ್ದ ಸಭೆಯ ಉದಾಹರಣೆ) ಯೇಸುವಿನ ದೇಹವಾಗಿದೆ ಎಂದು ಆತನು ಹೇಳುತ್ತಾನೆ ಮತ್ತು ಸ್ಥಳೀಯ ಸಭೆಯ ಪ್ರತಿಯೊಬ್ಬ ಸದಸ್ಯನೂ ಸಹ ಕ್ರಿಸ್ತನ ದೇಹದ ಅಂಗವಾಗಿದ್ದಾನೆ. ಪೌಲನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸಭೆಯು ಕ್ರಿಸ್ತನ ಪರಿಪೂರ್ಣತೆಯ ಸಾಕಾರವಾಗಿದೆ ಎಂದು ಎಫೆಸ 1:23 ರಲ್ಲಿ ಹೇಳುತಾನೆ.

9. ಮೇಲಿನ ಪ್ರಶ್ನೆಯ ಉತ್ತರದಿಂದ ನಾವು ಸಭೆಯ ಹಾಗೂ ದೇವರ ರಾಜ್ಯದ ಕುರಿತು ಈ ಸಮಾರೋಪಗಳನ್ನು ಮಾಡಬಹುದು:

   1) ಸಭೆಯು ಇತಿಹಾಸದ ಈ ಕಾಲದಲ್ಲಿ ಮತ್ತು ಯೇಸು ಹಿಂತಿರುಗಿ ಬರುವವರೆಗೂ ಯೇಸು ಕ್ರಿಸ್ತನ ಹಾಗೂ ಆತನ ರಾಜ್ಯದ ಪ್ರತಿನಿಧಿ ಮಾತ್ರವಲ್ಲದೆ ಆತನ ದೇಹವೂ ಸಹ ಆಗಿದೆ.

   2) ಆದರೆ ಸಭೆಯು ಸಮಗ್ರವಾಗಿ ಮಾತ್ರವಲ್ಲದೆ ಸಭೆಯ ಪ್ರತಿಯೊಬ್ಬ ಸದಸ್ಯನೂ ಸಹ (ಪ್ರತಿಯೊಬ್ಬ ವಿಶ್ವಾಸಿ, ಕ್ರಿಸ್ತನ ಹಿಂಬಾಲಕ/ಕಿ, ಶಿಷ್ಯನು/ಳು) ಇತಿಹಾಸದ ಈ ಕಾಲದಲ್ಲಿ ಮತ್ತು ಯೇಸು ಹಿಂತಿರುಗಿ ಬರುವವರೆಗೂ ಯೇಸು ಕ್ರಿಸ್ತನ ಹಾಗೂ ಆತನ ರಾಜ್ಯದ ಪ್ರತಿನಿಧಿಯಾಗಿದ್ದಾರೆ.

   3) ಹಾಗಾದರೆ ನಾವು ಸಭೆಯಾಗಿ ಹಾಗೂ ವೈಯಕ್ತಿಕವಾಗಿ ಯೇಸುವನ್ನು ಮತ್ತು ಆತನ ರಾಜ್ಯವನ್ನು ಪ್ರತಿನಿಧಿಸುತ್ತೇವೆ? ಕೆಲವು ಸಲಹೆಗಳು ಹೀಗಿವೆ:

      - ಯೇಸು ತನ್ನ ಇಹಲೋಕದಲ್ಲಿನ ಸೇವೆಯಲ್ಲಿ ಪ್ರಾರಂಭಿಸಿದ್ದನ್ನು ಮುಂದುವರೆಸುತ್ತಾ ನಾವು ದೇವರ ರಾಜ್ಯದ ಸುವಾರ್ತೆಯನ್ನು ಸಾರಬೇಕು.

- ಯೇಸು ತನ್ನ ಇಹಲೋಕದಲ್ಲಿನ ಸೇವೆಯಲ್ಲಿ ಪ್ರಾರಂಭಿಸಿದ್ದನ್ನು ಮುಂದುವರೆಸುವವರಾಗಿ ರೋಗಿಗಳನ್ನು ವಾಸಿಮಾಡುತ್ತಾ, ದೆವ್ವಪೀಡಿತರನ್ನು ಬಿಡುಗಡೆಗೊಳಿಸುತ್ತಾ ಪವಿತ್ರಾತ್ಮನು ನಮ್ಮ ಮೂಲಕ ಕಾರ್ಯಮಾಡಲು ನಾವು ಅನುಮತಿಸಬೇಕು.
- ಯೇಸು ತನ್ನ ಇಹಲೋಕದಲ್ಲಿನ ಸೇವೆಯಲ್ಲಿ ಪ್ರಾರಂಭಿಸಿದ್ದನ್ನು ಮುಂದುವರೆಸುತ್ತಾ ನಾವು ನಮ್ಮ ಜೀವಿತಗಳ ಹಾಗೂ ನಮ್ಮ ಸೇವೆಗಳ ಮೂಲಕ ದೇವರ ಪ್ರೀತಿ ಮತ್ತು ದಯೆಯನ್ನು ವ್ಯಕ್ತಪಡಿಸಬೇಕು.
- ನಾವು ದೇವರ ರಾಜ್ಯಕ್ಕೆ ಯೋಗ್ಯವಾದ ಜೀವಿತವನ್ನು, ಅಂದರೆ ದೇವರಿಗೆ ಮೆಚ್ಚಿಕೆಯಾಗುವ ಶುದ್ಧೀಕರಿಸಲ್ಪಟ್ಟ ಜೀವನವನ್ನು ಹಾಗೂ ದೇವರ ರಾಜ್ಯದ ಮೌಲ್ಯಗಳನ್ನು ಮತ್ತು ನಿಯಮಗಳನ್ನು ವ್ಯಕ್ತಪಡಿಸುವ ಜೀವನವನ್ನು ಜೀವಿಸಬೇಕು.
- ನಾವು ಬೆಳವಣಿಗೆಯನ್ನು ಮತ್ತು ವಿಸ್ತರಣೆಯನ್ನು ನಿರೀಕ್ಷಿಸಬೇಕು.

## ಅವಲೋಕನ

ದೇವರ ರಾಜ್ಯವು ಬೆಳೆಯುತ್ತಿದೆ ಮತ್ತು ವಿಸ್ತಾರಗೊಳ್ಳುತ್ತಿದೆ. ಗಲಿಲಾಯದ ಬೆಟ್ಟದ ಮೇಲೆ ಹನ್ನೊಂದು ಶಿಷ್ಯರಿಂದ ಪ್ರಾರಂಭವಾದದ್ದು ಬೆಳೆಯುತ್ತಾ ವಿಸ್ತಾರವಾಯಿತು. ಇಂದು ನೂರಾರು ದೇಶಗಳ ಕೋಟ್ಯಾನು ಜನರು ಯೇಸುವನ್ನು ತಮ್ಮ ಸ್ವಂತ ಕರ್ತನನ್ನಾಗಿ ಹಾಗೂ ರಕ್ಷಕನನ್ನಾಗಿ ಅಂಗೀಕರಿಸಿದ್ದಾರೆ. ಆದರೆ ಈ ಬೆಳವಣಿಗೆ ಮತ್ತು ವಿಸ್ತರಣೆಯು ಲೋಕದ ಅಂತ್ಯದವರೆಗೂ ಮುಂದುವರೆಯಬೇಕು.

ಇದು ಕ್ರಿಸ್ತನ ದೇಹವಾದ ಸ್ರಾವರ್ತಿಕ ಸಭೆಯ ಕೆಲಸವಾಗಿದೆ. ಆದರೆ ದೇವರ ರಾಜ್ಯವನ್ನು ವಿಸ್ತರಿಸುವ, ದೇವರ ರಾಜ್ಯವನ್ನು ಸಾರುವ, ದೇವರ ರಾಜ್ಯದ ನಿಯಮಗಳನ್ನು ಜೀವಿಸುವ ಸಭೆಯ ಕೆಲಸಕ್ಕೆ ಅದರ ಪ್ರತಿಯೊಬ್ಬ ಸದಸ್ಯನೂ ತನ್ನ ಕೊಡುಗೆ ನೀಡಬೇಕೆಂದು ನಮ್ಮ ಕರ್ತನೂ ಅರಸನೂ ಆದ ಯೇಸು ಬಯಸುತ್ತಾನೆ. ಇವೆಲ್ಲವನ್ನೂ ಪವಿತ್ರಾತ್ಮನ ಬಲ ಹಾಗೂ ಮಾರ್ಗದರ್ಶನದಿಂದ ಮಾಡಬೇಕು.

ಸಭೆಯ ಕಾಲವು ಅಂತ್ಯವಾಗುವವರೆಗೆ ಈ ಸಭೆಯ ಕೆಲಸವು ಮುಂದುವರೆಯಬೇಕು. ಯೇಸು ಕ್ರಿಸ್ತನು ಮಹಿಮೆಯೊಂದಿಗೆ ಹಿಂದಿರುಗುವಾಗ ಮಾತ್ರ ಈ ಕೆಲಸವು, ಅಂದರೆ ಬೆಳವಣಿಗೆ ಮತ್ತು ವಿಸ್ತರಣೆಯು ಅಂತ್ಯಗೊಳ್ಳುವುದು. ಆ ದಿನದಲ್ಲಿ ದೇವರ ರಾಜ್ಯವು ಪರಿಪೂರ್ಣಗೊಳ್ಳುವುದು.

# ಉತ್ತರಗಳು – ದೇವರ ರಾಜ್ಯದಂತೆ ಜೀವಿಸುವುದು

# ಉತ್ತರಗಳು 11: ಪರ್ವತ ಪ್ರಸಂಗ

## ಶಿಕ್ಷಕರಿಗಾಗಿ

ಈ ಅಧ್ಯಯನವನ್ನು ಮುಗಿಸಲು ಒಂದು ಗಂಟೆ ಸಾಕಾಗಬಹುದು. ಅದನ್ನು ಹೀಗೆ ಬಳಸಬಹುದು:

1) ಈ ಅಧ್ಯಯನದ ಪಠ್ಯವನ್ನು ವಿದ್ಯಾರ್ಥಿಗಳು ಮನೆಗೆಲಸದ ಸಮಯದಲ್ಲಿ ಓದಲಿ. ಆದರೆ ಆದರೆ ಅವರು ಯಾವುದೇ ಪ್ರಶ್ನೆಗಳನ್ನು ಉತ್ತರಿಸುವುದು ಬೇಡ.

2) ಮರುದಿನ ಅವರು ಎಲ್ಲಾ ಪ್ರಶ್ನೆಗಳನ್ನು ತರಗತಿ ಸಮಯದಲ್ಲಿಯೇ ಗುಂಪುಗಳಲ್ಲಿ ಚರ್ಚಿಸಲಿ. ಅವರ ಉತ್ತರಗಳನ್ನು ನೀವು ಪರಿಶೀಲಿಸುವ ಅವಶ್ಯವಿಲ್ಲ, ಯಾಕೆಂದರೆ ಎಲ್ಲಾ ಉತ್ತರಗಳು ಪಠ್ಯದಲ್ಲಿಯೇ ಇವೆ. ನನ್ನ ಕೆಳಗಿನ ಎರಡು ಅಂಶಗಳನ್ನು (ಯೇಸುವಿನ ಅಧಿಕಾರದ ಮತ್ತು ಆತನ ಪ್ರಸಂಗದ "ಶ್ರೋತೃಗಳ" ಕುರಿತು) ವಿದ್ಯಾರ್ಥಿಗಳು ಅರ್ಥಮಾಡಿಕೊಂಡಿದ್ದಾರೋ ಎಂಬುದನ್ನು ನೀವು ಖಚಿತಪಡಿಸಿಕೊಂಡರೆ ಸಾಕು.

ಯೇಸುವಿನ ಅಧಿಕಾರದ ಕುರಿತಾದ ಈ ಅಧ್ಯಯನದ ಕೊನೆಯ ಭಾಗವು "ಸಿದ್ಧಾಂತಗಳಿಗೆ" ಸಂಬಂಧಪಟ್ಟದ್ದು. ಆದರೆ ಯೇಸು ತನ್ನ ಪ್ರಾರಂಭದ ಹಿಂಬಾಲಕರಿಗೆ (ಪರ್ವತ ಪ್ರಸಂಗವನ್ನು ಕೇಳಿದವರಿಗೆ ಹಾಗೂ ಮತ್ತಾಯನ ಸುವಾರ್ತೆಯ ಪ್ರಾರಂಭದ ಓದುಗರಿಗೆ) ಅಧಿಕಾರಯುಕ್ತವಾಗಿ ಮಾತನಾಡಲು ತಾನು ಅಧಿಕಾರ ಹೊಂದಿದ್ದನು ಎಂಬುದನ್ನು ಅವರಿಗೆ ಸ್ಪಷ್ಟಪಡಿಸಿದ್ದನ್ನು ವಿದ್ಯಾರ್ಥಿಗಳು ಅರಿತುಕೊಳ್ಳುವುದು ಪ್ರಾಮುಖ್ಯವಾಗಿದೆ. ಆತನ ಅಧಿಕಾರವು ಯೆಹೂದ್ಯ ಬೋಧಕರುಗಳ ಅಧಿಕಾರಕ್ಕಿಂತಲೂ ಮಿಗಿಲಾದದ್ದಾಗಿತ್ತು. ಅದು ದೈವಿಕ ಅಧಿಕಾರವಾಗಿತ್ತು.

ಪರ್ವತ ಪ್ರಸಂಗವು ಯೇಸುವಿನ ಶಿಷ್ಯರಿಗೆ, ಹಿಂಬಾಲಕರಿಗೆ, ಅಂದರೆ ಆತನಲ್ಲಿ ನಂಬಿಕೆಯಿಟ್ಟಿದ್ದ ಜನರಿಗೆ ಮಾಡಲ್ಪಟ್ಟಿತ್ತು ಎಂಬುದನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಂಡಿದ್ದಾರೆಂಬುದನ್ನು ಖಚಿತಪಡಿಸಿಕೊಳ್ಳಿರಿ. ಪರ್ವತ ಪ್ರಸಂಗವು ಜನರಿಗೆ ಸಾಮಾನ್ಯವಾಗಿ ನೀಡಿದ ಸಂದೇಶವಾಗಿದೆ ಎಂದು ತಿಳಿದುಕೊಳ್ಳಬಾರದು. ಬದಲಾಗಿ ಅದು ಯೇಸು ತನ್ನ ಹಿಂಬಾಲಕರಿಂದ ಅಂದರೆ ಈಗಾಗಲೇ ದೇವರ ರಾಜ್ಯವನ್ನು ಪ್ರವೇಶಿಸಿರುವ ಜನರು ಅದರ ಪ್ರಜೆಗಳಾಗಿ ಇಹಲೋಕದಲ್ಲಿ ತಮ್ಮ ಗುರುತನ್ನು, ಪಾತ್ರವನ್ನು ಮತ್ತು ಮನೋಭಾವನೆಯನ್ನು ಅರ್ಥಮಾಡಿಕೊಳ್ಳಬೇಕೆಂದು ನಿರೀಕ್ಷಿಸಿದ ಸಂಗತಿಯ ವಿವರಣೆಯಾಗಿದೆ.

ಹಾಗಾಗಿ ಮುಂದಿನ ಅಧ್ಯಯನಗಳಲ್ಲಿರುವ ಅಂಶಗಳನ್ನು ಅವಿಶ್ವಾಸಿಗಳಿಗೆ ಸುವಾರ್ತೆ ಸಾರುವುದಕ್ಕಾಗಿ ಬಳಸಬಾರದು. ಬದಲಾಗಿ ಈಗಾಗಲೇ ಸುವಾರ್ತೆಯನ್ನು ಅಂಗೀಕರಿಸಿರುವ ಜನರೊಂದಿಗೆ ಬಳಸಬೇಕು. ಅದು ವಿಶ್ವಾಸಿಗಳಿಗೆ, ಅಂದರೆ ನಮ್ಮ ಸಭೆಯ ಸದಸ್ಯರುಗಳಿಗೆ ಸೂಕ್ತವಾಗಿದೆ. ಅವರು ತಮ್ಮ ಕ್ರಿಸ್ತೀಯ ಗುರುತನ್ನು ಮತ್ತು ದೇವರ ರಾಜ್ಯಕ್ಕೆ ಸೇರಿದವರಾದ ಹಾಗೂ ಯೇಸುವಿನ ಎರಡನೇಯ ಬರೋಣದೊಂದಿಗೆ ಪರಿಪೂರ್ಣಗೊಳ್ಳಲಿರುವ ರಾಜ್ಯವನ್ನು ಎದುರುನೋಡುತ್ತಿರುವ ತಮ್ಮ ಮೇಲೆ ಯೇಸು ಇರಿಸಿರುವ ನಿರೀಕ್ಷೆಗಳನ್ನು ಅರ್ಥಮಾಡಿಕೊಳ್ಳುವಂತೆ ಅದು ಸಹಾಯ ಮಾಡುತ್ತದೆ.

ಪ್ರಶ್ನೆಗಳಿಗೆ ಸುಲಭವಾಗಿ ಅಧ್ಯಯನದ ಪಠ್ಯದಲ್ಲಿಯೇ ಉತ್ತರಗಳನ್ನು ಕಂಡುಕೊಳ್ಳಬಹುದು.

## ಉತ್ತರಗಳು

1. ಈ ಪ್ರಸಂಗವನ್ನು "ಪರ್ವತ ಪ್ರಸಂಗ" ಎಂದು ಕರೆಯುತ್ತೇವೆ, ಯಾಕೆಂದರೆ ಯೇಸು ಮಾತನಾಡುವುದಕ್ಕಿಂತ ಮುಂಚೆ ಪರ್ವತವನ್ನೇರಿ ಕುಳಿತನು ಎಂದು ಮತ್ತಾಯನು ತಿಳಿಸುತ್ತಾನೆ.

2. ಮತ್ತಾಯದಲ್ಲಿನ "ಪರ್ವತ ಪ್ರಸಂಗ" ಮತ್ತು ಲೂಕನ "ಬಯಲು ಪ್ರಸಂಗ" ಇವೆರಡೂ ಯೇಸು ನೀಡಿದ ಒಂದೇ ಪ್ರಸಂಗದ ಎರಡು ದಾಖಲೆಗಳಾಗಿವೆ ಎಂದು ನೀವು ಯೋಚಿಸುತ್ತಿರೋ?

   1) ಒಂದು ವೇಳೆ ನಿಮ್ಮ ಉತ್ತರವು ಹೌದು ಎಂದಾದ್ದಲ್ಲಿ, ನಿಮ್ಮ ಅಂಶಗಳು ಹೀಗಿರಬಹುದು:

      - ಅವುಗಳು ಹೆಚ್ಚು ಕಡಿಮೆ ಒಂದೇ ವಿಷಯಾಂಶವನ್ನು ಹೊಂದಿವೆ.

- ಅವುಗಳೆರಡೂ ಯೇಸುವಿನ ಸೇವೆಯ ಪ್ರಾರಂಭದಲ್ಲಿ ನಡೆದ ಸಂಗತಿಗಳಾಗಿವೆ.

- ಅವುಗಳ ನಡುವೆ ಇರುವ ವ್ಯತ್ಯಾಸವನ್ನು ಸುಲಭವಾಗಿ ವಿವರಿಸಬಹುದು:

  - ಎರಡೂ ಸುವಾರ್ತೆಗಳಲ್ಲಿರುವ ವಾಕ್ಯಭಾಗವು ಒಂದು ಉದ್ದವಾದ ಪ್ರಸಂಗದ ಸಾರಾಂಶಗಳಾಗಿವೆ.

  - ಯೇಸು ಅರಾಮಿಕ್ ಭಾಷೆಯಲ್ಲಿ ಮಾತನಾಡಿದನು, ಆದರೆ ಲೂಕ ಮತ್ತು ಮತ್ತಾಯ ಗ್ರೀಕ್ ಭಾಷೆಯಲ್ಲಿ ಬರೆದರು.

  - ಲೂಕನು ಹೇಳುವ "ಬಯಲು" ಮತ್ತಾಯನು ಹೇಳಿದ "ಪರ್ವತದ" ಮೇಲಿದ್ದ ಒಂದು ಸ್ಥಳವಾಗಿರಬಹುದು.

2) ನಿಮ್ಮ ಉತ್ತರವು "ಇಲ್ಲ" ಎಂದಾದ್ದಲ್ಲಿ, ನಿಮ್ಮ ಅಂಶಗಳುಹೀಗಿರಬಹುದು:

- ಎರಡೂ ಪಠ್ಯಗಳ ನಡುವೆ ಅನೇಕ ವ್ಯತ್ಯಾಸಗಳಿವೆ.

- ಮತ್ತಾಯನು ಬರೆದ ಸುವಾರ್ತೆಯಲ್ಲಿ "ಪರ್ವತ" ಎಂದಿರುವಾಗ ಲೂಕನು ಬರೆದ ಸುವಾರ್ತೆಯಲ್ಲಿ "ಬಯಲು" ಎಂದುಬರೆದಿದೆ.

- ಯೇಸು ಒಂದೇ ವಿಷಯದ ಕುರಿತು ಅನೇಕ ಬಾರಿ ಪ್ರಸಂಗ ಮಾಡಿರಬಹುದು. ಹಾಗಿದ್ದಲ್ಲಿ ಅವುಗಳು ಎರಡು ವ್ಯತ್ಯಾಸವಾಗಿ ಕೊಡಲ್ಪಟ್ಟ ಸಂದೇಶಗಳಾಗಿರುವ ಸಾಧ್ಯತೆಗಳಿವೆಯಲ್ಲಾ?

3. ಯೇಸು ಪರ್ವತ ಪ್ರಸಂಗವನ್ನು ಶಿಷ್ಯರಿಗೆ, ತನ್ನಲ್ಲಿ ನಂಬಿಕೆಯಿಟ್ಟ ಹಾಗೂ ತನ್ನನ್ನು ಹಿಂಬಾಲಿಸುತ್ತಿದ್ದ ಜನರಿಗೆ ನೀಡಿದನು.

4. ಪರ್ವತ ಪ್ರಸಂಗವು ಕ್ರಿಸ್ತನ ಹಿಂಬಾಲಕರು ಇಹಲೋಕದಲ್ಲಿ ಹೇಗೆ ಜೀವಿಸಬೇಕೆಂಬುದರ ಕುರಿತು ಇರುವ "ಪ್ರನಾಳಿಕೆಯಾಗಿದೆ".

5. ಯೇಸು ಪರ್ವತ ಪ್ರಸಂಗದುದ್ದಕ್ಕೂ ಕ್ರಿಸ್ತೀಯ ಜೀವನಶೈಲಿಯನ್ನು ಯೆಹೂದ್ಯ ಧಾರ್ಮಿಕ ನಾಯಕರುಗಳ ಜೀವನಶೈಲಿ ಹಾಗೂ ಬೋಧನೆಗಳಿಗೆ ವಿರುದ್ಧವಾಗಿ ಹೋಲಿಸುತ್ತಾನೆ. ಅದು ಮಾತ್ರವಲ್ಲದೆ ಆತನು ಕ್ರಿಸ್ತೀಯ ಜೀವನಶೈಲಿಯನ್ನು ಅನ್ಯಜನರ ಧಾರ್ಮಿಕ ಜೀವನಕ್ಕೆ ವಿರುದ್ಧವಾಗಿಯೂ ಸಹ ಹೋಲಿಸುತ್ತಾನೆ.

6. ಪರ್ವತ ಪ್ರಸಂಗಕ್ಕೆ ಇರುವ ಒಂದು ಪ್ರಾಮುಖ್ಯವಾದ ಹಳೇ ಒಡಂಬಡಿಕೆಯ ಹಿನ್ನಲೆಯು ದೇವರ "ಪರಿಶುದ್ಧ" ಜನಾಂಗದ ಕುರಿತಾಗಿದೆ. ಇಸ್ರಾಯೇಲ್ಯರು ಮೋಶೆಯ ನಾಯಕತ್ವದಡಿಯಲ್ಲಿ ಸಿನಾಯಿ ಪರ್ವತದ ಬಳಿಯಲ್ಲಿ ದೇವರ "ಪರಿಶುದ್ಧ" ಜನಾಂಗವಾಗಿ ಪ್ರತ್ಯೇಕಿಸಲ್ಪಟ್ಟರು. ಪರ್ವತ ಪ್ರಸಂಗವು ದೇವರ ರಾಜ್ಯದ ಹೊಸ ಒಡಂಬಡಿಕೆಯ ದೃಷ್ಟಿಕೋನದ ಮೂಲಕ ದೇವರ "ಪರಿಶುದ್ಧ" ಜನಾಂಗವಾಗಿರುವುದು ಎಂದರೇನು ಎಂಬುದನ್ನು ತೋರಿಸುತ್ತದೆ.

7. ದೇವರು ಇಸ್ರಾಯೇಲ್ಯರಿಗೆ ಸೀನಾಯಿ ಪರ್ವತದಲ್ಲಿ ಕೊಟ್ಟ ಧರ್ಮಶಾಸ್ತ್ರದ ಹಾಗೂ ಪರ್ವತ ಪ್ರಸಂಗದ ನಡುವೆ ಒಂದು ಸಂಬಂಧವಿದೆ:

   - ಹಳೇ ಒಡಂಬಡಿಕೆಯ ಧರ್ಮಶಾಸ್ತ್ರವು ದೇವರು ತಮ್ಮ ಮೇಲೆ ಇಟ್ಟಿದ್ದ ನಿರೀಕ್ಷೆಯನ್ನು ದೇವಜನರಿಗೆ ತಿಳಿಸಿತು.

   - ಪರ್ವತ ಪ್ರಸಂಗವು ದೇವರು ತಮ್ಮ ಮೇಲೆ ಇಟ್ಟಿರುವ ನಿರೀಕ್ಷೆಯನ್ನು ದೇವರ ರಾಜ್ಯದ ಹೊಸ ಒಡಂಬಡಿಕೆಯ ದೃಷ್ಟಿಕೋನದ ಮೂಲಕ ದೇವಜನರಿಗೆ ತಿಳಿಸುತ್ತದೆ.

8. ಪರ್ವತ ಪ್ರಸಂಗದ ಹೊಸ ಒಡಂಬಡಿಕೆಯ ಹಿನ್ನಲೆಯು ಯೇಸುವಿನ ಸೇವೆಯಾಗಿದೆ. ಆತನು ತನ್ನ ಬಲವಾದ ಸೇವೆಯ ಮೂಲಕ ದೇವರ ರಾಜ್ಯವು ತನ್ನೊಂದಿಗೆ ಆಗಮಿಸಿತು ಎಂದು ಸಾರಿದನು. ಆತನು ತನ್ನ ಪರ್ವತ ಪ್ರಸಂಗದ ಮೂಲಕ ದೇವರ ರಾಜ್ಯವನ್ನು ಅಂಗೀಕರಿಸಿರುವವರು ಹೇಗೆ ತಮ್ಮ ಜೀವಿತಗಳನ್ನು ಜೀವಿಸಬೇಕೆಂದು ಬೋಧಿಸಿದನು.

9. ದೇವರ ರಾಜ್ಯದ ಜೀವನವು ಈ ಲೋಕದಲ್ಲಿರುವ ಜೀವನಕ್ಕಿಂತ ವ್ಯತ್ಯಾಸವಾಗಿದೆ, ಯಾಕೆಂದರೆ ಈ ಲೋಕವು ಮಾನವನ ಬೀಳುವಿಕೆಯ ಶಾಪದಡಿಯಲ್ಲಿದೆ ಮತ್ತು ಸೈತಾನನ ಪ್ರಭಾವದ ಅಡಿಯಲ್ಲಿದೆ. ಅದಕ್ಕೆ ವಿರುದ್ಧವಾಗಿ ದೇವರ ರಾಜ್ಯದ ಜೀವನವು ಸೈತಾನನು ನಾಶಮಾಡಲ್ಪಟ್ಟಾಗ ಉಂಟಾಗಲಿರುವ ನೂತನ ಭೂಮ್ಯಾಕಾಶದ ಭವಿಷ್ಯವನ್ನು ಪ್ರತಿಬಿಂಬಿಸುತ್ತದೆ.

10. ಇಂದು ಕ್ರೈಸ್ತ ವಿಶ್ವಾಸಿಗಳಿಗೆ ಪರ್ವತ ಪ್ರಸಂಗವು ಸಮಂಜಸವಾಗಿದೆ, ಯಾಕೆಂದರೆ ದೇವರ ರಾಜ್ಯದ ಬೆಳಕಿನಲ್ಲಿ ಯೇಸುವಿನ ಮೊದಲ ಹಾಗೂ ಎರಡನೆಯ ಬರೋಣದ ನಡುವೆ ಮಾನವನ ಜೀವನವನ್ನು ಹೇಗೆ ಜೀವಿಸಬೇಕೆಂದು ಅದು ಪ್ರದರ್ಶಿಸುತ್ತದೆ. ಹಾಗಾಗಿ ಇಂದು ಕ್ರೈಸ್ತ ವಿಶ್ವಾಸಿಗಳು ಯೇಸುವಿನ ಶಿಷ್ಯರು ಜೀವಿಸಿದಂತೆಯೇ ಈ ಎರಡು ಬರೋಣಗಳ ನಡುವೆ ಜೀವಿಸುತ್ತಿದ್ದಾರೆ. ಹಾಗಾಗಿ ಯೇಸು ಅವರಿಗೆ ಹೇಳಿದ ಸಂಗತಿಗಳು ನಮಗೂ ಸಹ ಸಮಂಜಸವಾಗಿವೆ.

11. –

12. ಪರ್ವತ ಪ್ರಸಂಗವು ಸುವಾರ್ತೆಗೆ ತದ್ವಿರೋಧವಾಗಿದೆ ಎಂದು ಹೇಳುವುದು ತಪ್ಪು, ಯಾಕೆಂದರೆ "ಕ್ರಿಯೆಗಳಿಂದ ರಕ್ಷಣೆಯೇ ಹೊರತು ಕೃಪೆಯಿಂದಲ್ಲ" ಎಂದು ಅದು ಬೋಧಿಸಿದಂತಾಗುತ್ತದೆ.

    ಪರ್ವತ ಪ್ರಸಂಗದ ಒಂದು ಸೂಕ್ಷ್ಮವಾದ ಅಧ್ಯಯನವು ಇದನ್ನು ನಮಗೆ ತೋರಿಸಿಕೊಡುತ್ತದೆ. ಯೇಸು ತನ್ನ ಪ್ರಸಂಗದಲ್ಲಿ ಹೇಳಿದ ಮೊದಲ ವಾಕ್ಯವೇ (ಪರ್ವತ ಪ್ರಸಂಗದ ಮೊದಲ ಆಶೀರ್ವಚನ) ಕೃಪೆಯಿಂದಲೇ ರಕ್ಷಣೆ ಹೊರತು ಕ್ರಿಯೆಗಳಿಂದಲ್ಲ ಎಂಬುದನ್ನು ಬೋಧಿಸುತ್ತದೆ.

13. ಪರ್ವತ ಪ್ರಸಂಗದಲ್ಲಿ "ನೀತಿವಂತಿಕೆಯು" ಬಹಳ ಪ್ರಾಮುಖ್ಯವಾದ ವಿಷಯವಾಗಿದೆ. ಆದರೆ ನಮ್ಮ ಸ್ವಂತ ಪುಣ್ಯಕ್ರಿಯೆಗಳಿಂದ ರಕ್ಷಣೆಯು ಬರುತ್ತದೆ ಅಥವಾ ನಮ್ಮ ನೀತಿವಂತ ಜೀವನದ ನಿಮಿತ್ತ ನಮಗೆ ರಕ್ಷಣೆಯಾಗುತ್ತದೆ ಎಂದು ಯೇಸು ಬೋಧಿಸುತ್ತಿಲ್ಲ. ಬದಲಾಗಿ ಅದು ಹೀಗಿದೆ: ದೇವರ ಕೃಪೆಯಿಂದ ರಕ್ಷಣೆ ಹೊಂದಿ ನೀತಿವಂತನಾಗಿ ಮಾಡಲ್ಪಟ್ಟ ವ್ಯಕ್ತಿಯು ನೀತಿವಂತ ಗುಣಗಳುಳ್ಳ ಜೀವಿತವನ್ನು ಜೀವಿಸುತ್ತಾನೆ. ಹಾಗಾಗಿ ತನ್ನ ಕೃಪೆಯಿಂದ ರಕ್ಷಣೆ ಹೊಂದಿದ ವಿಶ್ವಾಸಿಯು ನೀತಿವಂತನಾಗಿ/ಳಾಗಿ ಜೀವಿಸಬೇಕೆಂದು ದೇವರು ನಿರೀಕ್ಷಿಸುತ್ತಾನೆ.

14. ಯೇಸು ತಮ್ಮ ಶಾಸ್ತ್ರಿಗಳಂತೆ ಬೋಧಿಸದೇ ಅಧಿಕಾರವುಳ್ಳವನಾಗಿ ಬೋಧಿಸಿದ್ದರಿಂದ ಜನರು ಆತನ ಬೋಧನೆಯನ್ನು ಕೇಳಿ ಅತ್ಯಾಶ್ಚರ್ಯಪಟ್ಟರು. ಏಳು ಕ್ಷೇತ್ರಗಳಲ್ಲಿ ಯೇಸುವಿನ ಅಧಿಕಾರವು ಯೆಹೂದ್ಯ ಬೋಧಕರುಗಳ ಅಧಿಕಾರಕ್ಕಿಂತ ವಿಭಿನ್ನವಾಗಿತ್ತು:

    1) ಯೇಸುವಿಗೆ ದೈವಿಕ ಅಧಿಕಾರವಿತ್ತು. ಅವರಿಗಿರಲಿಲ್ಲ.
    2) ಯೇಸು ಮೆಸ್ಸೀಯನಾಗಿದ್ದನು (ಕ್ರಿಸ್ತನು). ಅವರು ಆಗಿರಲಿಲ್ಲ.
    3) ಯೇಸು ಒಡೆಯನಾಗಿದ್ದನು. ಅವರು ಆಗಿರಲಿಲ್ಲ.
    4) ಯೇಸು ರಕ್ಷಕನಾಗಿದ್ದನು. ಅವರು ಆಗಿರಲಿಲ್ಲ.
    5) ಯೇಸು ನ್ಯಾಯಾಧಿಪತಿಯಾಗಿದ್ದನು. ಅವರು ಆಗಿರಲಿಲ್ಲ.
    6) ಯೇಸು ಒಂದು ಅಪೂರ್ವವಾದ ರೀತಿಯಲ್ಲಿ ದೇವರ ಮಗನಾಗಿದ್ದನು. ಅವರು ಆಗಿರಲಿಲ್ಲ.
    7) ಯೇಸು ದೇವರಾಗಿದ್ದನು. ಅವರು ಆಗಿರಲಿಲ್ಲ.

# ಉತ್ತರಗಳು 12: ನಮ್ಮ ಆಶೀರ್ವಾದಗಳು

## ಶಿಕ್ಷಕರಿಗಾಗಿ

ಎರಡು ವೈಯಕ್ತಿಕ ಪ್ರಶ್ನೆಗಳನ್ನು (ಪ್ರಶ್ನೆ 15 ಮತ್ತು 19) ವಿದ್ಯಾರ್ಥಿಗಳು ಮನೆಗೆಲಸದ ಸಮಯದಲ್ಲಿ ಉತ್ತರಿಸಲು ನೀವು ಅನುಮತಿಸುವುದಾದರೆ ಈ ಅಧ್ಯಯನವನ್ನು ಮುಗಿಸಲು ಒಂದು ಗಂಟೆ ಸಾಕಾಗಬಹುದು. ಆಶೀರ್ವಚನಗಳ ಮೂಲಕ ಯೇಸು ತನ್ನ ಶ್ರೋತೃಗಳಿಗೆ ತಿಳಿಸಿದ ಮುಖ್ಯ ಅಂಶಗಳನ್ನು ಅರ್ಥಮಾಡಿಕೊಳ್ಳಲು ಉಳಿದ ಪ್ರಶ್ನೆಗಳು ಸಹಾಯಕವಾಗಬೇಕು.

ಸಮಯವಿದ್ದಲ್ಲಿ ಪ್ರಶ್ನೆ 15 ಮತ್ತು 16 ನ್ನು ಒಂದು "ಚಿಕ್ಕ ಆತ್ಮಿಕ ಕೂಟವಾಗಿ" ಮಾಡಬಹುದು. ***ಪೀಠಿಕೆಯ*** ಮುಖ್ಯ ಅಂಶಗಳನ್ನು ಸಾರಾಂಶಗೊಳಿಸುವುದರ ಮೂಲಕ ನಾಯಕನು ಆ ಕೂಟವನ್ನು ಪ್ರಾರಂಭಿಸಬೇಕು.

## ಉತ್ತರಗಳು

1. ಆಶೀರ್ವಚನಗಳಲ್ಲಿ ಯೇಸು ವರ್ಣಿಸಿರುವ ಜನರು ಆತನಲ್ಲಿ ನಂಬಿಕೆಯಿಟ್ಟಿರುವ ಆತನ ಹಿಂಬಾಲಕರಾಗಿದ್ದಾರೆ.
2. ಆಶೀರ್ವಚನಗಳಲ್ಲಿ ಯೇಸು ಹೊಗಳುವ ಗುಣಗಳು ಆತ್ಮಿಕವಾದದ್ದು ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಅವುಗಳನ್ನು ನಾವು ಮಾನವ ದೃಷ್ಟಿಕೋನದಿಂದಾಗಲಿ ಅಥವಾ ಪ್ರಾಪಂಚಿಕ ದೃಷ್ಟಿಕೋನದಿಂದಾಗಲಿ ಅರ್ಥಮಾಡಿಕೊಳ್ಳದೆ ದೇವರ ರಾಜ್ಯದ ದೃಷ್ಟಿಕೋನದಿಂದ ಅರ್ಥಮಾಡಿಕೊಳ್ಳಬೇಕು.
3. ಯೇಸು "ಧನ್ಯರು" ಎಂಬ ಪದವನ್ನು ಬಳಸಿದಾಗ ಆತನು ದೇವರ ರಾಜ್ಯದ ಪ್ರಜೆಗಳ "ಧನ್ಯತೆಯನ್ನು" ಉಲ್ಲೇಖಿಸುತ್ತಾನೆ. ಒಬ್ಬ ವಿಶ್ವಾಸಿಯಾಗಿರುವುದರ ಅರ್ಥವೇನೆಂಬುದನ್ನು ಆ ಹೇಳಿಕೆಯು ವರ್ಣಿಸುತ್ತದೆ. ಒಬ್ಬ ವಿಶ್ವಾಸಿಯು ಒಂದು ಷರತ್ತನ್ನು ಪಾಲಿಸುವಾಗ ಆತನಲ್ಲಿ/ಆಕೆಯಲ್ಲಿ ಉಂಟಾಗುವ ಅನುಭವದ ಕುರಿತು ಅದು ಉಲ್ಲೇಖಿಸುತ್ತಿಲ್ಲ.
4. ಆಶೀರ್ವಚನಗಳ ಕಾಲಮಾನವು ???ದೃಷ್ಟಿಕೋನವುಳ್ಳದ್ದಾಗಿದೆ. ಆಶೀರ್ವಚನಗಳ ವಾಗ್ದಾನಗಳು ಇಂದಿನ ವಾಸ್ತವಿಕವಾಗಿದೆ, ಯಾಕೆಂದರೆ ಯೇಸು ಬಂದನು ಹಾಗೂ ದೇವರ ರಾಜ್ಯವನ್ನು ಪರಿಚಯಿಸಿದನು. ಆದರೆ ಆಶೀರ್ವಚನಗಳ ನೆರವೇರುವಿಕೆಯ ಸಮಯವು ಯೇಸು ಹಿಂತಿರುಗಿ ಬರುವ ಹಾಗೂ ದೇವರ ರಾಜ್ಯವು ಪರಿಪೂರ್ಣಗೊಳ್ಳುವ ಕಾಲಕ್ಕೆ ಸೇರಿದ್ದಾಗಿದೆ.
5. ಯೇಸು ತನ್ನ ಪರ್ವತ ಪ್ರಸಂಗವನ್ನು ಆಶೀರ್ವಚನಗಳೊಂದಿಗೆ ಪ್ರಾರಂಭಿಸುತ್ತಾನೆಂದು ನಾನು ನೆನೆಸುತ್ತೇನೆ, ಯಾಕೆಂದರೆ ತನ್ನ ಪ್ರಸಂಗವನ್ನು ಕೇಳಿದ ಜನರು ದೇವರ ರಾಜ್ಯದ ಪ್ರಜೆಗಳಿಗಿರುವ ಸೌಭಾಗ್ಯವನ್ನು ಅರಿತವರಾಗಬೇಕೆಂದು ಆತನು ಬಯಸಿದನು. ಆ ಅರಿವಿಕೆಯಿಂದ ಮಾತ್ರ ಅವರು ಆತನ ಉಳಿದ ಬೋಧನೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದು.
6. ದೇವರ ರಾಜ್ಯವು "ಆತ್ಮದಲ್ಲಿ ಬಡವರಾಗಿರುವವರಿಗೆ" ಸೇರಿದೆ. ಇವರು ದೇವರ ಮುಂದೆ ತಮ್ಮನ್ನು ತಗ್ಗಿಸಿಕೊಳ್ಳುವವರು ಹಾಗೂ ಅವರು ತಮ್ಮಲ್ಲೇ ಏನೂ ಅಲ್ಲದವರಾಗಿದ್ದೇವೆ ಎಂಬುದನ್ನು ಅರಿಕೆ ಮಾಡುವವರಾಗಿದ್ದಾರೆ. ದೇವರ ರಾಜ್ಯವು ಶ್ರೀಮಂತರಿಗಲ್ಲ ಬದಲಾಗಿ ಬಡವರಿಗೆ; ಬಲವಂತರಿಗಲ್ಲ ಬದಲಾಗಿ ಬಲಹೀನರಿಗೆ; ಬಲಿಷ್ಠ ಸೈನಿಕರಿಗಲ್ಲ ಬದಲಾಗಿ ಚಿಕ್ಕಮಕ್ಕಳಿಗೆ; (ತಾವು "ಆತ್ಮದಲ್ಲಿ ಶ್ರೀಮಂತರಾಗಿದ್ದೇವೆ" ಎಂದುಕೊಳ್ಳುವ) ಫರಿಸಾಯರಿಗಲ್ಲ ಬದಲಾಗಿ ಸುಂಕದವರಿಗೆ ಹಾಗೂ ವೇಶ್ಯೆಯರಿಗೆ ಕೊಡಲ್ಪಟ್ಟಿದೆ.
7. ದುಃಖಿಸುವವರು ಆದರಣೆಯನ್ನು ಹೊಂದುವರು ಎಂದು ಯೇಸು ಹೇಳಿದಾಗ ಆತನು "ಆತ್ಮಿಕ ದುಃಖ" ವನ್ನು ಕುರಿತು ಉಲ್ಲೇಖಿಸುತ್ತಾನೆ. ಅದು ಇಹಲೋಕದ ಪಾಪದ ಕುರಿತು ನಿರ್ದಿಷ್ಟವಾಗಿ ನಮ್ಮ ಸ್ವಂತ ಪಾಪಗಳ ಕುರಿತು ದುಃಖಿಸುವುದಾಗಿದೆ. ದೇವರ ರಾಜ್ಯದ ಪ್ರಜೆಗಳು ತಮ್ಮ "ಆತ್ಮಿಕ ದುಃಖ" ವನ್ನು ಇಸ್ರಾಯೇಲಿನ ಆದರಣೆಯೂ ಲೋಕರಕ್ಷಕನೂ ಆದ ಯೇಸುವಿನ ಮುಂದೆ ತೋಡಿಕೊಂಡು ಪಾಪಕ್ಷಮಾಪಣೆಯನ್ನು ಹೊಂದಿಕೊಂಡಿದ್ದಾರೆ. ಹಾಗಾಗಿ ಅವರಿಗೆ ನಿಜವಾದ ಆದರಣೆ ದೊರಕಿದೆ.
8. –
9. ಸಾತ್ವಿಕರು ಭೂಮಿಗೆ ಬಾಧ್ಯರಾಗುವರು ಯಾಕೆಂದರೆ ಅವರು ತಮ್ಮನ್ನು ದೇವರ ಮುಂದೆ ತಗ್ಗಿಸಿಕೊಂಡು ಯೇಸು ಕ್ರಿಸ್ತನ ಮೂಲಕ ಆತನ ರಕ್ಷಣೆಯನ್ನು ಹೊಂದಿಕೊಂಡಿದ್ದಾರೆ. ಭೂಮಿಯು ಈಗ ಅವರ ರಕ್ಷಕನಾದ ಕ್ರಿಸ್ತನಿಗೆ ಸೇರಿದೆ. ದೇವರ ರಾಜ್ಯವು ಯೇಸುವಿನ

ಬರೋಣದ ಸಮಯದಲ್ಲಿ ಪರಿಪೂರ್ಣಗೊಳ್ಳುವಾಗ ಒಂದು "ನೂತನ ಭೂಮ್ಯಾಕಾಶವು" ಉಂಟಾಗುವುದು. ನೂತನ ಭೂಮಿಯು ದೇವರ ರಾಜ್ಯದ ಪ್ರಜೆಗಳಾದ ಸಾತ್ವಿಕರ ಸ್ವಾಸ್ಥ್ಯವಾಗುತ್ತದೆ.

10. –

11. ಕರುಣೆಯುಳ್ಳವರು ಧನ್ಯರು ಯಾಕೆಂದರೆ ಅವರು ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ದೇವರ ಕರುಣೆಯನ್ನು ಅನುಭವಿಸಿದವರಾಗಿದ್ದಾರೆ. ಹಾಗಾಗಿ ಈಗ ಅವರು ಇತರರಿಗೆ ಕರುಣೆಯನ್ನು ತೋರಿಸುವವರಾಗಿದ್ದಾರೆ. ಅವರು ಇತರರಿಗೆ ಕರುಣೆಯನ್ನು ತೋರಿಸುವುದು ಅವರು ದೇವರ ರಾಜ್ಯದ ಧನ್ಯ ಪ್ರಜೆಗಳು ಹಾಗೂ ದೇವರ ಕರುಣೆಯನ್ನು ಅನುಭವಿಸಿದವರು ಎಂಬುದನ್ನು ಪ್ರಕಟಿಸುತ್ತದೆ.

12. ಕೊನೆಯ ಆಶೀರ್ವಚನವು (ಹಿಂಸೆಯ ಕುರಿತಾದದ್ದು) ರೀತಿಯಲ್ಲಿ ಉಳಿದ ಆಶೀರ್ವಚನಗಳಿಗಿಂತ ವ್ಯತ್ಯಾಸವಾಗಿದೆ, ಯಾಕೆಂದರೆ ಅದು "ದ್ವಿಗುಣ ಆಶೀರ್ವಾದವಾಗಿದೆ". ಮೊದಲು ಯೇಸು "ಹಿಂಸೆಯನ್ನು ಅನುಭವಿಸುವವರಿಗೆ" ಒಂದು ಸಾಮಾನ್ಯವಾದ ವಾಗ್ದಾನವನ್ನು ಮಾಡುತ್ತಾನೆ. ನಂತರ ಆತನು "ನಿಮಗೆ" ಎಂಬ ಪದವನ್ನು ಬಳಸುವುದರ ಮೂಲಕ ತನ್ನ ವಾಗ್ದಾನವನ್ನು ವ್ಯಕ್ತಿಗತಗೊಳಿಸುತ್ತಾನೆ.

13. ನಾವು ಇಹಲೋಕದಲ್ಲಿ ಜೀವಿಸುವ ಕಾಲವೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ದೇವಜನರು ಹಿಂಸಿಸಲ್ಪಡುತ್ತಾರೆ ಎಂದು ನನಗೆ ಅನ್ನಿಸುತ್ತದೆ. ಹಿಂಸೆ ಎಂಬುದನ್ನು ಎರಡು ಸಂಧಾನವಾಗಲಾರದ ಮೌಲ್ಯಗಳ ನಡುವಿನ ಘರ್ಷಣೆಯಾಗಿ ಅರ್ಥಮಾಡಿಕೊಳ್ಳಬಹುದು. ಬಿದ್ದುಹೋಗಿರುವ ಹಾಗೂ ಅನೀತಿವಂತ ಲೋಕದ ಜನರು ದೇವಜನರು ಹಸಿದು ಬಾಯಾರುವ ನೀತಿವಂತಿಕೆಯನ್ನು ಕಹಿಯಾಗಿ ಕಾಣುತ್ತಾರೆ. ನಾವು ಹಿಂಬಾಲಿಸಲು ಬಯಸುವ ಕ್ರಿಸ್ತನನ್ನು ಅವರು ತಿರಸ್ಕರಿಸಿರುವುದರಿಂದ ಅವರು "ಸಾತ್ವಿಕರು, ಕರುಣೆಯುಳ್ಳವರು ಮತ್ತು ನಿರ್ಮಲರನ್ನು" ಕೀಳಾಗಿ ಕಾಣುತ್ತಾರೆ.

14. ಯೇಸು ತನ್ನ ಹಿಂಬಾಲಕರು ಹಿಂಸೆಯ ಅಡಿಯಲ್ಲಿ "ಸಂತೋಷಪಡಬೇಕು ಹಾಗೂ ಉಲ್ಲಾಸಪಡಬೇಕೆಂದು" ಅಪೇಕ್ಷಿಸಿದನು. ಒಬ್ಬ ವಿಶ್ವಾಸಿಯು ಅವಿಶ್ವಾಸಿಯಂತೆ ಪ್ರತಿಕ್ರಿಯಿಸಬಾರದು ಎಂದು ಯೇಸು ಅಪೇಕ್ಷಿಸುತ್ತಾನೆಂದು ನಾನು ಯೋಚಿಸುತ್ತೇನೆ: ಮಕ್ಕಳಂತೆ ಸಿಡುಕು ತೋರಿಸಬಾರದು, ಒಂದು ನಾಯಿ ಸ್ವ-ಕನಿಕರದಿಂದ ತನ್ನ ಗಾಯಗಳನ್ನು ನೆಕ್ಕುವಂತೆ ಮಾಡಬಾರದು ಅಥವಾ ಹಿಂಸೆಯನ್ನು ಅನುಭವಿಸುವುದು ನನಗೆ ಇಷ್ಟ ಎಂಬ ರೀತಿಯಲ್ಲಿ ಮುಖ ಮಾಡುವುದು ಅಥವಾ ನಟನೆ ಮಾಡುವುದನ್ನು ಮಾಡಬಾರದು.

15. –

16. –

# ಉತ್ತರಗಳು 13: ನಮ್ಮ ಪ್ರಭಾವ

## ಶಿಕ್ಷಕರಿಗಾಗಿ

ಎರಡು ವೈಯಕ್ತಿಕ ಪ್ರಶ್ನೆಗಳನ್ನು (ಪ್ರಶ್ನೆ 7 ಮತ್ತು 8) ವಿದ್ಯಾರ್ಥಿಗಳು ಮನೆಗೆಲಸದ ಸಮಯದಲ್ಲಿ ಉತ್ತರಿಸಲು ನೀವು ಅನುಮತಿಸುವುದಾದರೆ ಈ ಅಧ್ಯಯನವನ್ನು ಮುಗಿಸಲು ಒಂದು ಗಂಟೆ ಸಾಕಾಗಬಹುದು. ಆದರೆ ಮರುದಿನದ ತರಗತಿಯ ಸಮಯದಲ್ಲಿ ವಿದ್ಯಾರ್ಥಿಗಳು ಬರೆದಿರುವ ಉತ್ತರಗಳನ್ನು ಪರಿಶೀಲಿಸಲು ಸಮಯವನ್ನು ಮೀಸಲಿಡಿರಿ.

## ಉತ್ತರಗಳು

1. "ಉಪ್ಪು ಮತ್ತು ಬೆಳಕು" ಎಂಬ ರೂಪಾಲಂಕಾರವು ಈ ಲೋಕದಲ್ಲಿ ಎಲ್ಲವೂ ಸರಿಯಾಗಿಲ್ಲ ಎಂಬುದನ್ನು ನಮಗೆ ಹೇಳುತ್ತವೆ:
    - ಇಹಲೋಕವು ಕೊಳೆಯುವ ಪ್ರಕ್ರಿಯೆಯಲ್ಲಿದೆ, ಹಾಗಾಗಿ ಅದನ್ನು ತಡೆಗಟ್ಟಲು "ಉಪ್ಪಿನ" ಅವಶ್ಯವಿದೆ.
    - ಇಹಲೋಕವು ಕಾರ್ಗತ್ತಲೆಯಿರುವ ಸ್ಥಳವಾಗಿದೆ, ಹಾಗಾಗಿ ಅದನ್ನು ಬೆಳಗಿಸಲು "ಬೆಳಕಿನ" ಅವಶ್ಯವಿದೆ.
2. ನಾನು ಪಾಲೆಸ್ತೇನಿನಲ್ಲಿರುವ ಉಪ್ಪಿನ ಕುರಿತಾದ ಮಾಹಿತಿಯನ್ನು ಕ್ರೈಸ್ತ ವಿಶ್ವಾಸಿಗಳಿಗೆ ಹೀಗೆ ಅನ್ವಯಿಸುತ್ತೇನೆ (ಮಾರ್ಕ 9:50 ರಲ್ಲಿರುವ ಯೇಸುವಿನ ಮಾತುಗಳನ್ನು ಹೋಲಿಸಿರಿ *ನಿಮ್ಮೊಳಗೆ ಉಪ್ಪು ಇರುವಂತೆ):* ಪರಿಣಾಮಕಾರಿಯಾಗಿರಲು ಉಪ್ಪು ತನ್ನ ಸಾರವನ್ನು ಉಳಿಸಿಕೊಳ್ಳಬೇಕಾದಂತೆಯೇ ಒಬ್ಬ ವಿಶ್ವಾಸಿಯು ತನ್ನ ಕ್ರೈಸ್ತ ಗುಣವನ್ನು ಉಳಿಸಿಕೊಳ್ಳಬೇಕು. ನಾವು ಕ್ರೈಸ್ತ ಉಪ್ಪಿನಾಂಶವನ್ನು ಹೀಗೆ ಅರ್ಥಮಾಡಿಕೊಳ್ಳಬಹುದು:
    - ಆಶೀರ್ವಚನಗಳಲ್ಲಿ ವರ್ಣಿಸಲಾಗಿರುವ ಕ್ರೈಸ್ತ ಗುಣ
    - ಮಾತಿನಲ್ಲಿಯೂ (ಹೋಲಿಸಿರಿ ಕೊಲೊಸ್ಸೆ 4:6; ***ನಿಮ್ಮ ಸಂಭಾಷಣೆಯು ಯಾವಾಗಲೂ ಕೃಪೆಯುಳ್ಳದ್ದೂ ಉಪ್ಪಿನಿಂದ ಹದವುಳ್ಳದ್ದೂ ಆಗಿರಲಿ. ಹೀಗೆ ನೀವು ಪ್ರತಿಯೊಬ್ಬರಿಗೂ ಹೇಗೆ ಉತ್ತರ ಕೊಡಬೇಕು ಎಂಬುದನ್ನು ತಿಳಿದುಕೊಳ್ಳುವಿರಿ***) ಮತ್ತು ಕೃತ್ಯದಲ್ಲಿಯೂ (ಹೋಲಿಸಿರಿ ಲೂಕ 14:33–34: ***ಆದ್ದರಿಂದ ನಿಮ್ಮಲ್ಲಿ ಯಾವನಾದರೂ ತನಗಿರುವುದನ್ನೆಲ್ಲಾ ಬಿಟ್ಟುಬಿಡದಿದ್ದರೆ, ಅವನು ನನ್ನ ಶಿಷ್ಯನಾಗಿರಲಾರನು. ಉಪ್ಪು ಒಳ್ಳೆಯದೇ. ಆದರೆ ಉಪ್ಪೇ ಸಪ್ಪಗಾದರೆ ಅದಕ್ಕೆ ಇನ್ನಾವುದರಿಂದ ರುಚಿ ಬಂದೀತು?***) ಉದಾಹರಣೆಯಾಗಿ ತೋರಿಸಲ್ಪಟ್ಟ ಸಮರ್ಪಿತ ಕ್ರಿಸ್ತೀಯ ಶಿಷ್ಯತ್ವ.
3. ವಿಶ್ವಾಸಿಗಳು ಅವಿಶ್ವಾಸಿಗಳೊಂದಿಗೆ ಸೇರಿಕೊಂಡು ಲೋಕದ ಮಲಿನತೆಗಳಿಂದ ಕಲುಷಿತಗೊಂಡರೆ ಅವರು ಸಮಾಜದಲ್ಲಿ ಮತ್ತು ಸಮಾಜದ ಮೇಲೆ ಹೊಂದಿರುವ ಪ್ರಭಾವವನ್ನು ಕಳೆದುಕೊಳ್ಳುವರು. ಅವರ ಪ್ರಭಾವವು ಸುತ್ತಲಿರುವ ಸಮಾಜದೊಂದಿಗೆ ಸಮಾನವಾಗಿರದೆ ಅದಕ್ಕಿಂತ ಭಿನ್ನವಾಗಿರುವುದರ ಮೇಲೆ ಆತುಕೊಂಡಿರುತ್ತದೆ.
4. ಕ್ರೈಸ್ತ ವಿಶ್ವಾಸಿಗಳು "ಲೋಕಕ್ಕೆ ಬೆಳಕಾಗಿದ್ದಾರೆ" ಎಂಬ ಸಂಗತಿಯ ಹಿಂದಿರುವ ಯೇಸುವಿನ ಉದ್ದೇಶವನ್ನು ನಾನು ಹೀಗೆ ಅರ್ಥಮಾಡಿಕೊಳ್ಳುತ್ತೇನೆ:
    1) ವಿಶ್ವಾಸಿಗಳ ಬೆಳಕು ಅವರ "ಒಳ್ಳೆಯ ಕ್ರಿಯೆಗಳಾಗಿವೆ". ಕ್ರಿಸ್ತನಲ್ಲಿ ವಿಶ್ವಾಸವಿಟ್ಟಿರುವುದರ ನಿಮಿತ್ತ ವಿಶ್ವಾಸಿಗಳು ಹೇಳುವ ಮತ್ತು ಮಾಡುವ ಎಲ್ಲದ್ದನ್ನೂ ಅದು ಒಳಗೊಂಡಿದೆ. ಅವರ ಒಳ್ಳೆಯ ಕ್ರಿಯೆಗಳ ಉದ್ದೇಶವು ಜನರು ದೇವರನ್ನು ಮಹಿಮೆಪಡಿಸಬೇಕೆಂಬುದಾಗಿದೆ.
    2) "ಅನ್ಯಜನರಿಗೆ ಬೆಳಕು" (ಯೆಶಾಯ 42:7; 49:9) ಎಂಬ ಯೇಸುವಿನ ಕುರಿತಾದ ಹಳೇ ಒಡಂಬಡಿಕೆಯ ಪ್ರವಾದನೆಯು ಆತನ ಮೂಲಕ ಮಾತ್ರ ನೆರವೇರುವುದಲ್ಲದೆ ಕ್ರಿಸ್ತನಿಗೆ ಸಾಕ್ಷೀಕರಿಸುವ ವಿಶ್ವಾಸಿಗಳ ಮೂಲಕವೂ ಸಹ ನೆರವೇರಿದೆ.

3) "ಒಳ್ಳೆಯ ಕ್ರಿಯೆಗಳು" ಕೇವಲ ಯೇಸುವಿನ ಮೇಲೆ ನಂಬುವುದು, ಅರಿಕೆಮಾಡುವುದು ಮತ್ತು ಸತ್ಯವನ್ನು ಬೋಧಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. "ಕ್ರಿಯೆಗಳು" ಎಂಬುದು ಪ್ರಾಥಮಿಕವಾಗಿ ಕ್ರಿಸ್ತೀಯ ಕನಿಕರದ ಬಹಿರಂಗವಾದ ಮತ್ತು ಕಾರ್ಯರೂಪದ ಸಂಗತಿಗಳನ್ನು ಸೂಚಿಸುತ್ತದೆ. ಜನರು ಇಂತಹ ಕ್ರಿಸ್ತೀಯ ಕ್ರಿಯೆಗಳನ್ನು ನೋಡುವಾಗ ದೇವರನ್ನು ಮಹಿಮೆಪಡಿಸುತ್ತಾರೆ.

5. ಜನರು ಕ್ರಿಸ್ತೀಯ ದಯೆಯನ್ನು ಕಾರ್ಯರೂಪದಲ್ಲಿ ಕಾಣುವಾಗ ದೇವರನ್ನು ಮಹಿಮೆಪಡಿಸುವರು, ಯಾಕೆಂದರೆ ಈ ಕ್ರಿಯೆಗಳು ದೇವರ ಪ್ರೀತಿಯ ಕುರಿತಾದ ಶುಭವಾರ್ತೆಗೆ ಹೊಂದಿಕೊಂಡಿದೆ. ಅವುಗಳಿಲ್ಲದಿದ್ದರೆ ನಾವು ಸಾರುವ ಸುವಾರ್ತೆಯು ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತದೆ. ಆಗ ದೇವರಿಗೆ ಮಹಿಮೆಯಾಗುವುದಿಲ್ಲ.

6. ವಿಶ್ವಾಸಿಗಳ ಉಪ್ಪು ಸಪ್ಪಗಾಗಬಹುದಾದರೆ ಅವರಲ್ಲಿರುವ ಬೆಳಕು ಸಹ ಕತ್ತಲಾಗುವ ಸಾಧ್ಯತೆಯಿದೆ (ಮತ್ತಾಯ 6:23). ಇದು ಯಾವಾಗ ಸಂಭವಿಸುತ್ತದೆ ಎಂಬುದಕ್ಕೆ ಕೆಲವು ಉದಾಹರಣೆಗಳು ಹೀಗಿವೆ:

   - ನಾವು ಯೇಸುವಿನ ಕುರಿತಾದ ಸತ್ಯವನ್ನು ಮರೆಮಾಚುವಾಗ
   - ನಾವು ಕ್ರಿಸ್ತನಲ್ಲಿ ಏನಾಗಿದ್ದೇವೆ ಎಂಬುದರ ಕುರಿತಾದ ಸತ್ಯವನ್ನು ಮರೆಮಾಚುವಾಗ
   - ನಾವು ಯೇಸುವಿನ ನಾಮವನ್ನು ಅರಿಕೆಮಾಡಲು ನಾಚಿಕೆಪಡುವಾಗ
   - ನಾವು ಇತರರಂತೆ ನಟಿಸುವಾಗ
   - ನಾವು ಸುವಾರ್ತೆಯನ್ನು ಸಾರಲು ಸೋತು ಹೋಗುವಾಗ
   - ನಮ್ಮ ಜೀವಿತಗಳು ಕ್ರಿಸ್ತೀಯ ಕನಿಕರದ ಫಲವನ್ನು ಪ್ರಕಟಪಡಿಸದಿದ್ದಾಗ
   - ನಮ್ಮ ಗುಣವನ್ನು ಆಶೀರ್ವಚನಗಳಿಂದ ವರ್ಣಿಸಲು ಸಾಧ್ಯವಾಗದಿದ್ದಾಗ

7. –

8. –

## ಅವಲೋಕನ

ಯೇಸು ಬಳಸಿದ ಉಪ್ಪು ಮತ್ತು ಬೆಳಕಿನ ರೂಪಾಲಂಕಾರಗಳು ವಿಶ್ವಾಸಿಗಳು ವ್ಯತ್ಯಾಸವಾದ ಜನರು ಎಂಬುದನ್ನು ಬೋಧಿಸುತ್ತವೆ ಮತ್ತು ಪರ್ವತ ಪ್ರಸಂಗದುದ್ದಕ್ಕೂ ಯೇಸು ತನ್ನ ಹಿಂಬಾಲಕರು ವ್ಯತ್ಯಾಸವಾದ ಜನರಾಗಿರಬೇಕೆಂದು ಕರೆ ನೀಡಿದನು.

ಆದರೆ ಸಭಾ–ಇತಿಹಾಸದ ಬಹುತೇಕ ಸಮಯದಲ್ಲಿ ಸಭೆಯು ಪ್ರಾಪಂಚಿಕ ಸಂಪ್ರದಾಯಕ್ಕೆ ವಿರುದ್ಧವಾದ ಸಂಪ್ರದಾಯವನ್ನು ಬೆಳೆಸುವುದರ ಬದಲು ಅದಕ್ಕೆ ಶರಣಾಗುವ ಪ್ರವೃತ್ತಿಯನ್ನು ಹೊಂದಿರುವುದು ದುಃಖಕರವಾದ ಸಂಗತಿಯಾಗಿದೆ.

ಹಾಗಾಗಿ ದಕ್ಷಿಣ ಭಾರತದ ವಿಶ್ವಾಸಿಗಳಾದ ನಮಗೆ ಇಂದು ಯೇಸು ನೀಡುವ ಸವಾಲು ನಾವು ಹೆಚ್ಚು ಹೆಚ್ಚಾಗಿ ಆತನಂತೆಯೇ ಆಗಬೇಕೆಂಬುದಾಗಿದೆ:

- ನಾವು ದಕ್ಷಿಣ ಭಾರತದಲ್ಲಿ ಭೂಮಿಗೆ ಉಪ್ಪಾಗಿದ್ದೇವೆ. ನಾವು ಉಪ್ಪಿನ ಅಂಶವನ್ನು ಉಳಿಸಿಕೊಳ್ಳಬೇಕೆಂದು ಮತ್ತು ಭಾರತೀಯ ಸಮಾಜದಲ್ಲಿ ನಮ್ಮ ಪ್ರಭಾವವನ್ನು ಹೆಚ್ಚು ಬೀರಬೇಕೆಂದು ಯೇಸು ನಮ್ಮಿಂದ ಅಪೇಕ್ಷಿಸುತ್ತಾನೆ.
- ನಾವು ದಕ್ಷಿಣ ಭಾರತದಲ್ಲಿ ಲೋಕಕ್ಕೆ ಬೆಳಕಾಗಿದ್ದೇವೆ. ನಾವು ಪಾಪದ ಮೂಲಕವಾಗಲಿ ಅಥವಾ ಸೋಮಾರಿತನ ಅಥವಾ ಭಯದ ಮೂಲಕವಾಗಲಿ ಬೆಳಕನ್ನು ಮರೆಮಾಡದೆ ಇನ್ನೂ ಹೆಚ್ಚಾಗಿ ಪ್ರಕಾಶಿಸಬೇಕೆಂದು ಯೇಸು ನಮ್ಮಿಂದ ಅಪೇಕ್ಷಿಸುತ್ತಾನೆ.

ನಾವು ಹೇಗೆ ಉಪ್ಪು ಮತ್ತು ಬೆಳಕು ಎಂಬ "ಎರಡು ಪ್ರಭಾವಗಳನ್ನು "ಭಾರತದ ಮತ್ತು ಭಾರತೀಯ ಸಮಾಜದ ಮೇಲೆ ಹೇಗೆ ಬೀರಲು ಸಾಧ್ಯ?

ನಾವು ಭಾರತೀಯ ಸಮಾಜದಲ್ಲಿ "ಉಪ್ಪಾಗಿರಲು" ಏನು ಮಾಡಬೇಕೆಂಬುದಕ್ಕೆ ಮೂರು ಉದಾಹರಣೆಗಳುಹೀಗಿವೆ:

1) ನಾವು ಕೆಟ್ಟದ್ದನ್ನು ಖಂಡಿಸಲು ಹೆಚ್ಚು ಧೈರ್ಯವುಳ್ಳವರಾಗಿರಬೇಕು ಮತ್ತು ಮುಕ್ತವಾಗಿ ಮಾತನಾಡಬೇಕು.

2) ನಾವು ನಮ್ಮ ಬೀದಿಗಳಲ್ಲಿ, ಶಾಲೆಗಳಲ್ಲಿ ಮತ್ತು ಕಾಲೇಜುಗಳಲ್ಲಿ ಹಾಗೂ ವೃತ್ತಿಪರ ಜೀವನದಲ್ಲಿ, ಕೆಲಸದ ಸ್ಥಳದಲ್ಲಿ, ಅಷ್ಟೇ ಅಲ್ಲದೆ ರಾಷ್ಟ್ರೀಯ ಜೀವನ ಹಾಗೂ ಮಾಧ್ಯಮದಲ್ಲಿ ಸತ್ಯಕ್ಕಾಗಿ, ಒಳ್ಳೆಯದ್ದಕ್ಕಾಗಿ ಮತ್ತು ಸಭ್ಯವಾದದ್ದಕ್ಕಾಗಿ ದಿಟ್ಟ ನಿಲುವನ್ನು ತೆಗೆದುಕೊಳ್ಳಬೇಕು.

3) ಸಮಾಜದ ಒಳಿತಿಗಾಗಿ ದೇವರು ನೇಮಿಸಿರುವ ಸಂಸ್ಥೆಗಳನ್ನು (ಉದಾ. ದೇಶ ಮತ್ತು ಕುಟುಂಬ) ಉಳಿಸಿ ಬೆಳೆಸುವುದಲ್ಲದೆ ಅವುಗಳಲ್ಲಿ ನ್ಯಾಯವನ್ನು ಪಾಲಿಸುವಂತೆ ನಾವು ನೋಡಿಕೊಳ್ಳಬೇಕು. ಶಾಸನ, ಕಾನೂನು, ವ್ಯಕ್ತಿ ಸ್ವಾತಂತ್ರ ಮತ್ತು ಘನತೆ, ಅಲ್ಪಸಂಖ್ಯಾತರಿಗೆ ಸಾಮಾಜಿಕ ಹಕ್ಕುಗಳು, ಭಾಷೆ ಮತ್ತು ಜಾತಿ ಬೇಧ ಇವೆಲ್ಲವುಗಳಲ್ಲಿ ನ್ಯಾಯಸ್ಥಾಪನೆ.

ನಾವು ಭಾರತೀಯ ಸಮಾಜದಲ್ಲಿ "ಬೆಳಕಾಗಿರಲು" ಏನು ಮಾಡಬೇಕೆಂಬುದಕ್ಕೆ ಎರಡು ಉದಾಹರಣೆಗಳುಹೀಗಿವೆ:

1) ನಾವು ಸುವಾರ್ತೆಯನ್ನು ಹರಡಬೇಕು.

2) ನಾವು ಸುವಾರ್ತೆಗೆ ಯೋಗ್ಯವಾದ ಜೀವನವನ್ನು ಜೀವಿಸಬೇಕು.

ನಾವು ಈ ಎರಡು ಕರೆಗಳ ನಡುವೆ (ಉಪ್ಪು– ನಮ್ಮ ಕ್ರಿಸ್ತೀಯ ಸಾಮಾಜಿಕ ಕರ್ತವ್ಯಗಳು ಮತ್ತು ಬೆಳಕು – ನಮ್ಮ ಸುವಾರ್ತೆ ಸೇವೆಯ ಕರ್ತವ್ಯಗಳು) ಆರಿಸಿಕೊಳ್ಳಬಾರದು. ನಾವು ಎರಡನ್ನೂ ಮಾಡುವುದಕ್ಕಾಗಿ ಕರೆಯಲ್ಪಟ್ಟಿದ್ದೇವೆ.

ನಮ್ಮ ಕ್ರಿಸ್ತೀಯ ಗುಣವನ್ನು ವರ್ಣಿಸುವ ಪರ್ವತ ಪ್ರಸಂಗ ಮತ್ತು ನಮ್ಮ ಕ್ರಿಸ್ತೀಯ ಪ್ರಭಾವವನ್ನು ವರ್ಣಿಸುವ ಉಪ್ಪು ಬೆಳಕಿನ ರೂಪಾಲಂಕಾರಗಳು ಒಂದಕ್ಕೊಂದು ಸೇರಿವೆ. ಇಹಲೋಕದಲ್ಲಿರುವ ನಮ್ಮ ಪ್ರಭಾವವು ನಮ್ಮ ಗುಣದ ಮೇಲೆ ಆತುಕೊಂಡಿದೆ. ನಾವು ಎಷ್ಟು ಹೆಚ್ಚಾಗಿ ಕ್ರಿಸ್ತನಂತಾಗುತ್ತೇವೋ ಅಷ್ಟು ಹೆಚ್ಚಾಗಿ ಈ ಲೋಕದ ಮೇಲೆ ಪ್ರಭಾವ ಬೀರುತ್ತೇವೆ. ಆದರೆ ಆಶೀರ್ವಚನಗಳು ಒಂದು ಉನ್ನತವಾದ ಮಾನದಂಡವನ್ನು ಸ್ಥಾಪಿಸುವುದರಿಂದ ನಾವು ನಿರುತ್ಸಾಹಗೊಳ್ಳಬಹುದು. ಹಾಗಾಗಿ ಯೇಸು ತನ್ನ ಹಿಂಬಾಲಕರಿಗೆ ಮೂರು ಪ್ರೋತ್ಸಾಹಗಳನ್ನು ನೀಡುತ್ತಾನೆ:

1) ನಾವು ಸಹ ಇದೇ ರೀತಿಯಲ್ಲಿ ಆಶೀರ್ವದಿಸಲ್ಪಡುವೆವು.

2) ಲೋಕಕ್ಕೆ ಸೇವೆ ಮಾಡಲು ಇದೇ ಉತ್ತಮವಾದ ಮಾರ್ಗ.

3) ದೇವರು ಮಹಿಮೆ ಹೊಂದಲು ಇದೇ ಮಾರ್ಗ.

# ಉತ್ತರಗಳು 14: ನಮ್ಮ ನೈತಿಕ ನೀತಿವಂತಿಕೆ

## ಶಿಕ್ಷಕರಿಗಾಗಿ

ಇದೊಂದು ಸವಾಲನ್ನೊಡ್ಡುವ ಅಧ್ಯಯನವಾಗಿದೆ ಮತ್ತು ಇದನ್ನು ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಹೆಚ್ಚು ಸಮಯ ಬೇಕಾಗಬಹುದು ಎಂದು ನಿಮಗೆ ಅನ್ನಿಸಬಹುದು. ಆದರೆ ಸಮಯವಿಲ್ಲವಾದ್ದರಿಂದ ನೀವು ಈ ಮಾದರಿಯನ್ನು ಅನುಸರಿಸಬೇಕೆಂಬುದು ನನ್ನ ಸಲಹೆಯಾಗಿದೆ:

1) ಈ ಅಧ್ಯಯನದ ಮೊದಲ ಮೂರು ಭಾಗಗಳನ್ನು ತರಗತಿಯಲ್ಲಿ ವಿದ್ಯಾರ್ಥಿಗಳೊಂದಿಗೆ ಮಾಡಿರಿ. ಹೆಚ್ಚಿನ ವಿವರಗಳಲ್ಲಿ ಅಥವಾ ದೈವಶಾಸ್ತ್ರೀಯ ಸಮಸ್ಯೆಗಳಲ್ಲಿ ಸಿಲುಕಿಕೊಳ್ಳಬೇಡಿರಿ. ವಿದ್ಯಾರ್ಥಿಗಳು ಪಠ್ಯದ ರಚನೆಯನ್ನು ನೋಡಿ ಅದರ ಅಂಶಗಳ ಕುರಿತು ಒಂದು ಸಾಮಾನ್ಯ ಭಾವನೆಯನ್ನು ಪಡೆದುಕೊಂಡರೆ ಸಾಕು.

2) ಸಮಂಜಸವಾದ ಪ್ರಶ್ನೆಗಳಿಗೆ ಮಾತ್ರ ಪದಗಳ ಮತ್ತು ಹೇಳಿಕೆಗಳ ಟಿಪ್ಪಣಿಗಳನ್ನು ಬಳಸಿರಿ. ವಿದ್ಯಾರ್ಥಿಗಳು ಅತ್ಯಧಿಕವಾದ ಮಾಹಿತಿಯಲ್ಲಿ ಮುಳುಗದಂತೆ ಇದು ಕಾಪಾಡುತ್ತದೆ. ಅದರ ಪರಿಣಾಮವಾಗಿ ಹೆಚ್ಚು ಗೊಂದಲವಿರುವುದಿಲ್ಲ.

3) ವಿದ್ಯಾರ್ಥಿಗಳು ಪ್ರಶ್ನೆ 1–6 ನ್ನು ಗುಂಪುಗಳಲ್ಲಿ ಚರ್ಚಿಸಲಿ. ತರಗತಿಯ ಸಮಯದಲ್ಲಿ ವಿದ್ಯಾರ್ಥಿಗಳು ಬರೆದಿರುವ ಉತ್ತರಗಳನ್ನು ಪರಿಶೀಲಿಸಿರಿ.

4) ಉಳಿದ ಪ್ರಶ್ನೆಗಳನ್ನು ವಿದ್ಯಾರ್ಥಿಗಳು ಗ್ರಂಥಾಲಯದ ಸಮಯ ಅಥವಾ ಮನೆಗೆಲಸದ ಸಮಯದಲ್ಲಿ ಮಾಡಬಹುದು. ಆದರೆ ಮರುದಿನ ವಿದ್ಯಾರ್ಥಿಗಳು ಬರೆದಿರುವ ಉತ್ತರಗಳನ್ನು ತರಗತಿಯಲ್ಲಿ ಪರಿಶೀಲಿಸಿರಿ.

5) ಈ ಅಧ್ಯಯನದ ಮೂರು ಮುಖ್ಯ ಪಾಠಗಳನ್ನು ಕೆಳಗಿರುವ ***ಅವಲೋಕನ*** ಭಾಗವು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಸ್ಥಾಪಿಸುತ್ತದೆ. ನಿಮಗೆ ಸಮಯ ಸಾಲದಿದ್ದಲ್ಲಿ ಅದನ್ನು ಕೈಬಿಡಬಹುದು.

ನೀವು ಈ ಪ್ರಕ್ರಿಯೆಯನ್ನು ಪಾಲಿಸಿದರೆ ಈ ಅಧ್ಯಯನವನ್ನು (ಗ್ರಂಥಾಲಯ / ಮನೆಗೆಲಸ ಮತ್ತು ಮರುದಿನದ ಪರಿಶೀಲನೆಯನ್ನು ಒಳಗೊಂಡು) ಒಂದು ಗಂಟೆಯಲ್ಲಿ ಮಾಡಲು ಸಾಧ್ಯವಾಗಬಹುದು.

## ಉತ್ತರಗಳು

1. ಹಳೇ ಒಡಂಬಡಿಕೆಯ ಕುರಿತು ತಾನು ಹೊಂದಿರುವ ಸಂಬಂಧದ ಕುರಿತು ಯೇಸು ಎರಡು ಭಾವಗಳನ್ನು ಬಳಸುತ್ತಾನೆ (ವ. 17):

   1) ಆತನು ರದ್ದುಗೊಳಿಸಲು ಬರಲಿಲ್ಲ: ಅದರ ಅರ್ಥ ಯೇಸು ಹಳೇ ಒಡಂಬಡಿಕೆಯ ಧರ್ಮಶಾಸ್ತ್ರವನ್ನು ರದ್ದುಗೊಳಿಸಲಿಲ್ಲ ಅಥವಾ ಬದಲಾಯಿಸಲಿಲ್ಲ.

   2) ಆತನು ನೆರವೇರಿಸಲು ಬಂದನು: ಅದರ ಅರ್ಥ ಯೇಸು ಹಳೇ ಒಡಂಬಡಿಕೆಯ ಧರ್ಮಶಾಸ್ತ್ರವನ್ನು ಕೇವಲ ಅಂಗೀಕರಿಸುವುದು ಅಥವಾ ಶಿಫಾರಸ್ಸು ಮಾಡುವುದು ಮಾತ್ರವಲ್ಲದೆ ಅದನ್ನು ನೆರವೇರಿಸಲು ಬಂದನು. **"ನೆರವೇರಿಸು"** ಎಂಬುದಕ್ಕೆಸಮನಾರ್ಥಪದ**"ಪೂರ್ಣಗೊಳಿಸು"** ಎಂದಾಗಬಹುದು.

   ಹಳೇ ಒಡಂಬಡಿಕೆಯು ಅನೇಕ ವಿಧವಾದ ಬೋಧನೆಗಳನ್ನು ಒಳಗೊಂಡಿದೆ. ಯೇಸು ಕ್ರಿಸ್ತನೊಂದಿಗೆ ಅದು ಹೊಂದಿರುವ ಸಂಬಂಧವು ವ್ಯತ್ಯಾಸವಾದುದ್ದಾಗಿದೆ. ಆದರೆ **"ನೆರವೇರುವಿಕೆ"** ಎಂಬ ಪದವು ಅವೆಲ್ಲವನ್ನೂ ಒಳಗೊಂಡಿದೆ. ಈ ವಿಷಯದ ಕುರಿತು ಹೆಚ್ಚಿನ ಅಂಶಗಳಿಗಾಗಿ ಕೆಳಗಿರುವ***ಅವಲೋಕನ*** ಭಾಗವನ್ನು ಗಮನಿಸಿರಿ.

2. ಧರ್ಮಶಾಸ್ತ್ರವು (ಹಳೇ ಒಡಂಬಡಿಕೆ ಹಾಗೂ ಅದರ ಬೋಧನೆಯು) ಬದಲಾಗುವುದಿಲ್ಲ ಅಥವಾ ಅಳಿದು ಹೋಗುವುದಿಲ್ಲವೆಂದು ಯೇಸು ಹೇಳಿದನು (ವ. 18). ವಿಶ್ವಕ್ಕಿರುವ ಶಾಶ್ವತತೆಯು ಅದಕ್ಕಿದೆ.

3. ವಚನ 19 "ಆದ್ದರಿಂದ" ಎಂಬ ಪದದೊಂದಿಗೆ ಪ್ರಾರಂಭಿಸುತ್ತದೆ. ಈ ಪದವು ಧರ್ಮಶಾಸ್ತ್ರವನ್ನು ದೇವರ ರಾಜ್ಯದೊಂದಿಗೆ ಹೀಗೆ ಸಂಬಂಧಿಸುತ್ತದೆ:

   ಒಬ್ಬ ವಿಶ್ವಾಸಿಯು ಎಷ್ಟರಮಟ್ಟಿಗೆ ಧರ್ಮಶಾಸ್ತ್ರವನ್ನು ಕೈಗೊಳ್ಳುತ್ತಾನೆಯೋ ಅದರ ಮೇಲೆ ದೇವರ ರಾಜ್ಯದಲ್ಲಿ ಆತನ ಶ್ರೇಷ್ಠತೆಯು ಅಳತೆಮಾಡಲ್ಪಡುತ್ತದೆ ಎಂಬುದನ್ನು "ಆದ್ದರಿಂದ" ಎಂಬ ಪದವು ತೋರಿಸುತ್ತದೆ. ಧರ್ಮಶಾಸ್ತ್ರವನ್ನು ಪಾಲಿಸುವ ನೀತಿವಂತಿಕೆಯ ಆಧಾರದ ಮೇಲೆ ಒಬ್ಬ ವಿಶ್ವಾಸಿಯ ಶ್ರೇಷ್ಠತೆಯು ಅಳೆಯಲ್ಪಡುತ್ತದೆ. ಆದರೆ ವೈಯಕ್ತಿಕವಾಗಿ ವಿಧೇಯರಾಗುವುದು ಮಾತ್ರ ಸಾಲದು. ಒಬ್ಬ ವಿಶ್ವಾಸಿಯು ಧರ್ಮಶಾಸ್ತ್ರದ ಆಜ್ಞೆಗಳನ್ನು ಶಾಶ್ವತವಾಗಿ ಪಾಲಿಸುವುದರ ಕುರಿತು ಇತರೆ ವಿಶ್ವಾಸಿಗಳಿಗೂ ಬೋಧಿಸಬೇಕು.

4. ವಚನ 20 ರಲ್ಲಿ (***ನಿಮ್ಮ ನೀತಿಯು ಫರಿಸಾಯರ ಮತ್ತು ಧರ್ಮಶಾಸ್ತ್ರಿಗಳ ನೀತಿಗಿಂತಲೂ ಹೆಚ್ಚಿನದಾಗದಿದ್ದರೆ ನೀವು ಪರಲೋಕ ರಾಜ್ಯವನ್ನು ಸೇರಲಾರಿರಿ ಎಂದು ನಿಮಗೆ ಹೇಳುತ್ತೇನೆ***) ಯೇಸು ಹೇಳಿದ ಅಂಶವನ್ನು ನಾವು ಹೀಗೆ ಅರ್ಥಮಾಡಿಕೊಳ್ಳಬೇಕು:

   ಯೇಸು ನೀತಿವಂತಿಕೆಯ *ಹಂತಗಳನ್ನು* ಮಾತನಾಡದೆ ಯಾವ *ರೀತಿಯ* ನೀತಿವಂತಿಕೆ ಎಂಬುದರ ಕುರಿತು ಮಾತನಾಡಿದನು. ಕ್ರಿಸ್ತೀಯ ನೀತಿವಂತಿಕೆಯು ಫರಿಸಾಯರ ನೀತಿಗಿಂತಲೂ ಹೆಚ್ಚಿನದ್ದಾಗಿರುವುದು *ಹಂತಗಳಲ್ಲಿ* ಅಲ್ಲ ಬದಲಾಗಿ ವ್ಯತ್ಯಾಸವಾದ *ರೀತಿಯಲ್ಲಾಗಿದೆ.* ವಿಶ್ವಾಸಿಗಳು ಹಳೇ ಒಡಂಬಡಿಕೆಯ ಎಲ್ಲಾ 248 ಆಜ್ಞೆಗಳನ್ನು ಮತ್ತು 365 ನಿಷೇಧಗಳನ್ನು ಪಾಲಿಸಬೇಕೆಂದು ಯೇಸು ಹೇಳಲಿಲ್ಲ. ಬಹುಶಃ ಫರಿಸಾಯರು ಅವುಗಳನ್ನು ಶೇ. 85% ರಷ್ಟು ಪಾಲಿಸುತ್ತಿದ್ದಿರಬಹುದು.

   ಕ್ರಿಸ್ತೀಯ ನೀತಿವಂತಿಕೆಯು ಹೆಚ್ಚಿನದ್ದಾಗಿದೆ, ಯಾಕೆಂದರೆ ಅದು *ವ್ಯತ್ಯಾಸವಾದುದ್ದಾಗಿದೆ.* ಅದು ಹೃದಯದ ನೀತಿವಂತಿಕೆಯಾಗಿದೆ. ಫರಿಸಾಯರು ಬಾಹ್ಯವಾದ ಮತ್ತು ಔಪಚಾರಿಕವಾದ ವಿಧೇಯತೆಯಿಂದ ತೃಪ್ತರಾಗಿದ್ದರು. ದೇವರು ಮೆಚ್ಚುವಂತಹ ನೀತಿವಂತಿಕೆಯು ಆಂತರಿಕವಾದದ್ದು ಮತ್ತು ಮನಸ್ಸಿನ ಹಾಗೂ ಉದ್ದೇಶದ ನೀತಿವಂತಿಕೆಯಾಗಿದೆ ಎಂದು ಯೇಸು ತನ್ನ ಹಿಂಬಾಲಕರಿಗೆ ಬೋಧಿಸಿದನು.

5. ನಮ್ಮ ನೀತಿವಂತಿಕೆಯು ಶಾಸ್ತ್ರಿಗಳ ಮತ್ತು ಫರಿಸಾಯರ ನೀತಿವಂತಿಕೆಗಿಂತ ಹೆಚ್ಚಾಗಿ ಇರದಿದ್ದರೆ ನಾವು ದೇವರ ರಾಜ್ಯವನ್ನು ಪ್ರವೇಶಿಸಲಾರೆವು ಎಂದು ಯೇಸು ಹೇಳಿದನು (ವ. 20). ಯೇಸು ಹಾಗೆ ಹೇಳಲು ಕಾರಣವೇನೆಂದರೆ, ಕ್ರೈಸ್ತ ನೀತಿವಂತಿಕೆಯು, ಅಂದರೆ ಹೃದಯದ ನೀತಿವಂತಿಕೆಯು ನಾವು ಹೊಸದಾಗಿ ಹುಟ್ಟಿದ್ದೇವೆ ಮತ್ತು ದೇವರ ರಾಜ್ಯದ ಪ್ರಜೆಗಳಾಗಿದ್ದೇವೆ ಎಂಬುದನ್ನು ತೋರಿಸುತ್ತದೆ. ಒಬ್ಬನು ಹೊಸದಾಗಿ ಹುಟ್ಟದಿದ್ದರೆ ದೇವರ ರಾಜ್ಯವನ್ನು ಕಾಣಲಾರನು (ಯೋಹಾನ 3:3, 5).

6. ನಾವು ಈ ವಾಕ್ಯಭಾಗದಲ್ಲಿ "ನಿಮ್ಮ ಪೂರ್ವಿಕರಿಗೆ ಹೇಳಿದ್ದನ್ನು ನೀವು ಕೇಳಿದ್ದೀರಷ್ಟೇ ... ಆದರೆ ನಾನು ನಿಮಗೆ ಹೇಳುವುದೇನೆಂದರೆ" ಎಂಬ ಸೂತ್ರವನ್ನು ಯೇಸು ಆಗಾಗ್ಗೆ ಬಳಸವುದನ್ನು ಕಾಣುತ್ತೇವೆ. ಯೇಸು ಹಳೇ ಒಡಂಬಡಿಕೆಯ ಧರ್ಮಶಾಸ್ತ್ರದ ವಿರುದ್ಧವಾಗಿ ಮಾತನಾಡಿದನು (ಅಥವಾ ಅದನ್ನು ಬದಲಾಯಿಸಿದನು) ಎಂದು ಅದರ ಅರ್ಥವಲ್ಲ. ಯೇಸು ಧರ್ಮಶಾಸ್ತ್ರವನ್ನು ರದ್ದುಗೊಳಿಸಲು ಬಾರದೆ ಅದನ್ನು ನೆರವೇರಿಸುವುದಕ್ಕಾಗಿ ಬಂದನು ಎಂದು ಹೇಳುವುದರ ಮೂಲಕ ತನ್ನ ಬೋಧನೆಯನ್ನು ಪ್ರಾರಂಭಿಸುತ್ತಾನೆ (ವ. 17). ಅದರಲ್ಲಿರುವ ಎಲ್ಲವೂ ನೆರವೇರುವವರೆಗೆ ಒಂದು ಬಿಂದುವಾದರೂ ಅಳಿದುಹೋಗುವುದಿಲ್ಲವೆಂದು ಆತನು ಹೇಳಿದನು (ವ. 18). ಅದಲ್ಲದೆ, ಯೇಸು ಹಳೇ ಒಡಂಬಡಿಕೆಯ ಬರಹಗಳನ್ನು ಉಲ್ಲೇಖಿಸುವಾಗ "ಎಂದು ಬರೆದಿದೆ" ಎಂಬ ಪದವನ್ನು ಬಳಸಿದನು. ಹಾಗಾಗಿ ಆತನು ವಿರೋಧಿಸಿದ್ದು ಹಳೇ ಒಡಂಬಡಿಕೆಯನ್ನಲ್ಲ. ಆತನು ವಿರೋಧಿಸಿದ್ದು "ಹಿರಿಯರಸಂಪ್ರದಾಯಗಳಾಗಿವೆ". ಅವುಗಳು ಮೌಖಿಕವಾದ ಸೇರ್ಪಡುವಿಕೆಗಳಾಗಿದ್ದು ಧರ್ಮಶಾಸ್ತ್ರದ ಬದಲಾವಣೆಗಳಾಗಿವೆ (ಅದು ನಂತರ ಲಿಖಿತರೂಪದಲ್ಲಿ ದಾಖಲಿಸಲಾಗಿ "ಮಿಶ್ನ" ಎಂದು ಕರೆಯಲ್ಪಟ್ಟಿತು). ಅದನ್ನು ಯೆಹೂದ್ಯ ಶಾಸ್ತ್ರಿಗಳು ವರ್ಷಗಳು ಕಳೆದಂತೆ ಪರಿಚಯಿಸಿದ್ದರು. ಈ ಸೇರ್ಪಡುವಿಕೆಗಳ (ಮತ್ತು ಧರ್ಮಶಾಸ್ತ್ರದ ನಿಖರವಲ್ಲದ ಅರ್ಥವಿವರಣೆಗಳ) ಉದ್ದೇಶವು ಧರ್ಮಶಾಸ್ತ್ರದ ಆಜ್ಞೆಗಳನ್ನು ಯೆಹೂದ್ಯರು ಪಾಲಿಸಲು ಸುಲಭವಾಗಲೆಂದಾಗಿದೆ.

7. ಆರನೇಯ ಆಜ್ಞೆಯ (*ಕೊಲೆ ಮಾಡಬಾರದು.* ವಿಮೋ. 20:13) ಕುರಿತು ಯೇಸು ನೀಡಿದ ಅನ್ವಯವು ಶಾಸ್ತ್ರಿಗಳ ಮತ್ತು ಫರಿಸಾಯರ ಅನ್ವಯಕ್ಕಿಂತ ವಿಶಾಲವಾಗಿದೆ: ಈ ಆಜ್ಞೆಯ ನಿಜವಾದ ಪಾಲನೆಯು ಮಾತಿನಲ್ಲಿಯೂ ಕೃತ್ಯದಲ್ಲಿಯೂ ಕಂಡುಬರುತ್ತದೆ ಎಂದು ಯೇಸು ಹೇಳಿದನು– ಕೋಪ, ನಿಂದನೆ ಹಾಗೂ ಕೊಲೆ ಇವೆಲ್ಲವನ್ನೂ ಒಳಗೊಂಡಂತೆ.

   ಅದಲ್ಲದೆ ಯೇಸು ಅದರ ದಂಡನೆಯನ್ನೂ ವಿಸ್ತರಿಸಿದನು. ವಚನ 21 ರಲ್ಲಿರುವ "ನ್ಯಾಯತೀರ್ಪು" ಯೆಹೂದ್ಯ ನ್ಯಾಯಸಭೆಯ ನ್ಯಾಯತೀರ್ಪನ್ನು ಉಲ್ಲೇಖಿಸುತ್ತದೆ. ಹಾಗಾಗಿ ಒಂದು ಪ್ರಕರಣವು "ಕೊಲೆಯ" ಪ್ರಕರಣವಾಗಿದೆ ಎಂಬುದನ್ನು ನಿರ್ಧರಿಸುವುದು ಯೆಹೂದ್ಯ ನ್ಯಾಯಾಲಯವಾಗಿತ್ತು. ಆದರೆ ವಚನ 22 ರಲ್ಲಿರುವ "ನ್ಯಾಯತೀರ್ಪು" ದೇವರ ನ್ಯಾಯತೀರ್ಪನ್ನು ಉಲ್ಲೇಖಿಸುತ್ತದೆ. ಹಾಗಾಗಿ ನಾವು ಒಬ್ಬರನ್ನು"ಬುದ್ಧಿ ಇಲ್ಲದವನೇ" ಎನ್ನುವಾಗ ದೇವರು ನಮಗೆ ನ್ಯಾಯತೀರಿಸುವನು.

8. *ವ್ಯಭಿಚಾರ ಮಾಡಬಾರದು* ಎಂಬ ಏಳನೇಯ ಆಜ್ಞೆಯು ಕೇವಲ ವ್ಯಭಿಚಾರದ ಕೃತ್ಯವನ್ನು ಮಾತ್ರವಲ್ಲದೆ ವ್ಯಭಿಚಾರದ ಆಲೋಚನೆಯನ್ನೂ (ಕಾಮದೃಷ್ಟಿಯನ್ನೂ) ಸಹ ಒಳಗೊಂಡಿದೆ ಎಂದು ಯೇಸು ಅರ್ಥವಿವರಿಸಿದನು. ದೇವರು ಹೃದಯವನ್ನು ನೋಡುತ್ತಾನೆ! ಸರ್ವಶಕ್ತನಾದ ಯೆಹೋವನನ್ನು ಯೆರೆಮೀಯನು ನೀತಿಯಾಗಿ ನ್ಯಾಯತೀರಿಸುವಂಥ ಹಾಗೂ ಅಂತರಿಂದ್ರಿಯಗಳನ್ನೂ ಹೃದಯವನ್ನೂ ಶೋಧಿಸುವಂಥವನು ಎಂದು ವರ್ಣಿಸುತ್ತಾನೆ (ಯೆರೆ. 11:20).

9. *ನಿನ್ನ ಬಲಗಣ್ಣು ನಿನ್ನ ಪಾಪಕ್ಕೆ ಕಾರಣವಾಗಿದ್ದರೆ, ಅದನ್ನು ನೀನು ಕಿತ್ತೆಸೆದುಬಿಡು; ಏಕೆಂದರೆ ನಿನ್ನ ಇಡೀ ದೇಹ ನರಕದಲ್ಲಿ ಎಸೆಯಲ್ಪಡುವುದಕ್ಕಿಂತ ನಿನ್ನ ಒಂದು ಅಂಗವು ನಾಶವಾಗುವುದು ನಿನಗೆ ಲೇಸು* (ವ. 29) ಎಂಬ ಯೇಸುವಿನ ಈ ಮಾತುಗಳನ್ನು ನಾನು ಒಂದು ಅತಿಶಯೋಕ್ತಿಯಾಗಿ ಅರ್ಥಮಾಡಿಕೊಳ್ಳುತ್ತೇನೆ. ಪಾಪದ ಗಂಭೀರತೆಯನ್ನು ಒತ್ತಿ ಹೇಳುವುದು ಯೇಸುವಿನ ಉದ್ದೇಶವಾಗಿತ್ತು. ಪೂರ್ಣಾಂಗವುಳ್ಳವನಾಗಿ ನರಕಕ್ಕೆ ಹೋಗುವುದರ ಬದಲು ಅಂಗವಿಕಲನಾಗಿರುವುದು ಉತ್ತಮ.

10. ನಾನು ಆಣೆಗಳ ಕುರಿತಾದ ಯೇಸುವಿನ ಬೋಧನೆಯನ್ನು ಹೀಗೆ ಸಾರಾಂಶಗೊಳಿಸುತ್ತೇನೆ (ವ. 34–37): ವಿಶ್ವಾಸಿಗಳು ಯಾವಾಗಲೂ ಸತ್ಯವನ್ನು ಮಾತನಾಡಬೇಕು. ಹಾಗಾಗಿ ನಾವು "ಹೌದು" ಎಂದುಹೇಳುವಾಗ ಜನರು ಅದನ್ನು "ಹೌದು" ಎಂದೇ ಅಂದುಕೊಳ್ಳುವರು. ನಾವು "ಇಲ್ಲ" ಎಂದು ಹೇಳುವಾಗ ಜನರು ಅದನ್ನು "ಇಲ್ಲ" ಎಂದೇ ಅಂದುಕೊಳ್ಳುವರು. ಯಾಕೋಬನು ಹೇಳುವ ಮಾತಿನೊಂದಿಗೆ ಹೋಲಿಸಿರಿ: *ಮುಖ್ಯವಾಗಿ ನನ್ನ ಸಹೋದರರೇ, ಆಣೆ ಇಡಲೇ ಬೇಡಿರಿ. ಆಕಾಶದ ಮೇಲಾಗಲಿ ಭೂಮಿಯ ಮೇಲಾಗಲಿ ಇನ್ನಾವುದರ ಮೇಲಾಗಲಿ ಆಣೆ ಇಡಬೇಡಿರಿ. ಹೌದೆಂದು ಹೇಳಬೇಕಾದರೆ ಹೌದೆನ್ನಿರಿ. ಅಲ್ಲವೆನ್ನಬೇಕಾದರೆ ಅಲ್ಲವೆನ್ನಿರಿ. ಹೀಗಾದರೆ ನೀವು ನ್ಯಾಯವಿಚಾರಣೆಗೆ ಗುರಿಯಾಗುವುದಿಲ್ಲ* (ಯಾಕೋಬ 5:12).

    ನ್ಯಾಯಾಲಯಗಳಲ್ಲಿ ಪ್ರಮಾಣ ಮಾಡುವುದನ್ನು ಸತ್ಯವೇದವು ನಿಷೇಧಿಸುತ್ತದೆ ಎಂದು ಕೆಲವು ಕ್ರೈಸ್ತೀಯ ಗುಂಪುಗಳು ಘೋಷಿಸಿಕೊಳ್ಳುತ್ತವೆ. ಅದು ಸರಿಯಲ್ಲ. ಮಹಾಯಾಜಕನು ಆಣೆಯಿಟ್ಟು ಕೇಳಿದಾಗ ಯೇಸು ಸಹ ಮೌನವಾಗಿರಲಿಲ್ಲ (ಮತ್ತಾಯ 26:63–64).

11. ಯೇಸು ಪ್ರತೀಕಾರದ ನಿಯಮವನ್ನು (ಕಣ್ಣಿಗೆ ಕಣ್ಣು ಹಲ್ಲಿಗೆ ಹಲ್ಲು) ತದ್ವಿರೋಧಿಸಲಿಲ್ಲ, ಯಾಕೆಂದರೆ ಅದು ಸತ್ಯವಾಗಿಯೂ ನ್ಯಾಯಸಮ್ಮತವಾಗಿಯೂ ಇತ್ತು. ಯೇಸು ವಾಸ್ತವಿಕವಾಗಿ ಹೇಳಿದ ಅಂಶವು ಇದಾಗಿದೆ:

    ಈ ನಿಯಮವು ನ್ಯಾಯಾಲಯಕ್ಕೆ ಸಂಬಂಧಪಟ್ಟಿದ್ದು ನಮ್ಮ ವೈಯಕ್ತಿಕ ಸಂಬಂಧಗಳಿಗೆ ಅನ್ವಯಿಸುವುದಿಲ್ಲ. ನಮ್ಮ ವೈಯಕ್ತಿಕ ಸಂಬಂಧಗಳು ಪ್ರೀತಿಯ ಮೇಲೆ ಆಧರಿತವಾಗಿರಬೇಕೇ ಹೊರತು ನ್ಯಾಯಾಲಯದ ಮೇಲಲ್ಲ. ನಮಗೆ ತಪ್ಪು ಮಾಡುವವರ ವಿರುದ್ಧ ಸೇಡು ತೀರಿಸಿಕೊಳ್ಳುವುದು ನಮ್ಮ ಕರ್ತವ್ಯವಲ್ಲ. ಬದಲಾಗಿ ಅನ್ಯಾಯವನ್ನು ಯಾವುದೇ ಪ್ರತೀಕಾರವಿಲ್ಲದೆ ಅಥವಾ ದಂಡವಿಲ್ಲದೆ ಅಂಗೀಕರಿಸಿಕೊಳ್ಳಬೇಕು: *ಕೆಡುಕನನ್ನು ಎದುರಿಸಬೇಡಿರಿ* (ವ. 39).

12. **"ಕೆಡುಕನನ್ನು ಎದುರಿಸಬೇಡ"** ಎಂಬುದರ ಅರ್ಥವನ್ನು ತಿಳಿಸಲು ಯೇಸು ನಾಲ್ಕು ಸನ್ನಿವೇಶಗಳ ಉದಾಹರಣೆಯನ್ನು ಕೊಟ್ಟು ವಿವರಿಸುತ್ತಾನೆ. ಕ್ರೈಸ್ತೀಯ ಅಹಿಂಸೆಯನ್ನು ಯಾವ ಮಟ್ಟದವರೆಗೆ ಮಾಡಬೇಕೆಂದು ಅವುಗಳು ನಮಗೆ ತಿಳಿಸುತ್ತದೆ. ಪ್ರತಿಯೊಂದು ಸನ್ನಿವೇಶವು ಒಂದು ಅರ್ಥದಲ್ಲಾದರೂ "ಕೆಡುಕನು" ಎಂದು ಕರೆಯಲ್ಪಡುವ ಒಬ್ಬ ವ್ಯಕ್ತಿಯನ್ನು ಪರಿಚಯಿಸುತ್ತದೆ:

    1) ನಿಮಗೆ ಹೊಡೆಯುವ ವ್ಯಕ್ತಿ

    2) ನಿಮ್ಮನ್ನು ಸುಲಿಗೆ ಮಾಡುವ ವ್ಯಕ್ತಿ

    3) ತನಗಾಗಿ ಯಾವುದಾದರೂ ಕೆಲಸವನ್ನು ಮಾಡಬೇಕೆಂದು ನಿಮ್ಮನ್ನು ಒತ್ತಾಯಿಸುವ ವ್ಯಕ್ತಿ

    4) ನಿಮಗೆ ಬೇಡುವ ವ್ಯಕ್ತಿ

13. ಜನರು ತಮ್ಮ ವೈರಿಗಳನ್ನು ದ್ವೇಷಿಸಬೇಕೆಂದು ಫರಿಸಾಯರು ಬೋಧಿಸಿದರು (ವ. 43). ಆದರೆ ತನ್ನ ಹಿಂಬಾಲಕರು ತಮ್ಮ ವೈರಿಗಳನ್ನು ಪ್ರೀತಿಸಬೇಕೆಂದು, ಅವರಿಗಾಗಿ ಪ್ರಾರ್ಥಿಸಬೇಕೆಂದು ಹಾಗೂ ಅವರಿಗೆ ಒಳ್ಳೆಯದನ್ನು ಮಾಡಬೇಕೆಂದು ಯೇಸು ಅಪೇಕ್ಷಿಸಿದನು.

14. –

## ಅವಲೋಕನ

## ಯೇಸು ಮತ್ತು ಹಳೇ ಒಡಂಬಡಿಕೆಯ "ನೆರವೇರುವಿಕೆ"

ಹಳೇ ಒಡಂಬಡಿಕೆಯು ಅನೇಕ ವಿಧವಾದ ಬೋಧನೆಗಳನ್ನು ಒಳಗೊಂಡಿದೆ. ಅವುಗಳು ಯೇಸುವನ್ನು ಹೇಗೆ ಸೂಚಿಸುತ್ತವೆ ಎಂಬುದು ವ್ಯತ್ಯಾಸವಾಗಿದ್ದರೂ "ನೆರವೇರುವಿಕೆ" ಎಂಬ ಪದವು ಎಲ್ಲವನ್ನೂ ಒಳಗೊಂಡಿದೆ.

1) ಹಳೇ ಒಡಂಬಡಿಕೆಯು ಸೈದ್ಧಾಂತಿಕ ಬೋಧನೆಯನ್ನು ಒಳಗೊಂಡಿದೆ. ಎಲ್ಲಾ ಶ್ರೇಷ್ಠ ಸತ್ಯವೇದ ಸಿದ್ಧಾಂತಗಳು ನಮಗೆ ಅಲ್ಲಿ ದೊರೆಯುತ್ತವೆ. ಆದರೆ ಅದು ಕೇವಲ ಒಂದು ಭಾಗಶಃ ಪ್ರಕಟನೆ ಮಾತ್ರವಾಗಿತ್ತು. ಯೇಸು ತನ್ನ ವ್ಯಕ್ತಿತ್ವ, ಬೋಧನೆ ಮತ್ತು ಕ್ರಿಯೆಗಳ ಮೂಲಕ ಅದನ್ನು ಪೂರ್ಣಗೊಳಿಸಿದ್ದರ ಅರ್ಥದಲ್ಲಿ ಅದನ್ನು "ನೆರವೇರಿಸಿದನು".

2) ಹಳೇ ಒಡಂಬಡಿಕೆಯು ಭವಿಷ್ಯ ನುಡಿಯುವ ಪ್ರವಾದನೆಯನ್ನು ಒಳಗೊಂಡಿದೆ. ಅದರಲ್ಲಿ ಹೆಚ್ಚಿನ ಸಂಗತಿಯು ಮೆಸ್ಸೀಯನ ದಿನಗಳನ್ನು ಎದುರುನೋಡುವುದಾಗಿದೆ. ಅದು ವಾಕ್ಯದಲ್ಲಿ ಆತನ ಕುರಿತು ಮುಂತಿಳಿಸುತ್ತದೆ ಅಥವಾ ಒಂದು ಮಾದರಿಯಲ್ಲಿ ಆತನನ್ನು ಮುಂಛಾಯೆಯಾಗಿ ತೋರಿಸುತ್ತದೆ. ಆದರೆ ಅದು ಕೇವಲ ಎದುರುನೋಡುವಿಕೆ ಮಾತ್ರವಾಗಿತ್ತು. ಮೆಸ್ಸೀಯನ ಕುರಿತು ಮಾಡಲ್ಪಟ್ಟ ಪ್ರವಾದನೆಗಳು ಯೇಸುವಿನಲ್ಲಿ ಜರುಗಿದ್ದರ ಅರ್ಥದಲ್ಲಿ ಯೇಸು ಅದನ್ನು "ನೆರವೇರಿಸಿದನು": ದೇವರು ತನ್ನ ಪ್ರವಾದಿಯ ಮುಖಾಂತರ ಹೇಳಿದ ಮಾತು ನೆರವೇರುವುದಕ್ಕೋಸ್ಕರ ಇದೆಲ್ಲಾ ನಡೆಯಿತು (ಮತ್ತಾಯ 1:22). ಕ್ರೂಜೆಯ ಮೇಲಿನ ಯೇಸುವಿನ ಮರಣದಲ್ಲಿ ಯಾಜಕತ್ವ ಮತ್ತು ಯಜ್ಞಬಲಿಗಳನ್ನೊಳಗೊಂಡು ಹಳೇ ಒಡಂಬಡಿಕೆಯ ಇಡೀ ಸಾಂಪ್ರದಾಯಿಕ ಪದ್ಧತಿಯು ತನ್ನ ಪರಿಪೂರ್ಣವಾದ ನೆರವೇರುವಿಕೆಯನ್ನು ಕಂಡುಕೊಂಡಿತು. ಅವುಗಳು ಬರಲಿದ್ದ ಸಂಗತಿಗಳ "ನೆರಳು" ಮಾತ್ರವಾಗಿದ್ದವು; ಅದರ "ನಿಜಸ್ವರೂಪವು" ಕ್ರಿಸ್ತನಾಗಿದ್ದನು (ಕೊಲೊಸ್ಸೆ 2:17).

3) ಹಳೇ ಒಡಂಬಡಿಕೆಯು ನೈತಿಕ ಆಜ್ಞೆಗಳನ್ನು ಅಥವಾ ದೇವರ ನೈತಿಕ ಆಜ್ಞೆಯನ್ನು ಒಳಗೊಂಡಿದೆ. ಯೇಸು ಅವುಗಳಿಗೆ ವಿಧೇಯನಾಗುವುದರ ಮೂಲಕ ಅದನ್ನು ನೆರವೇರಿಸಿದನು, ಯಾಕೆಂದರೆ ಆತನು "ಧರ್ಮಶಾಸ್ತ್ರಕ್ಕೆ ಒಳಗಾದವನಾಗಿ" ಹುಟ್ಟಿದನು (ಗಲಾತ್ಯ 4:4) ಮತ್ತು "ಸಕಲನೀತಿಯನ್ನು ನೆರವೇರಿಸಲು" ನಿರ್ಧರಿಸಿದ್ದನು (ಮತ್ತಾಯ 3:15). ಆದರೆ ಆತನು ಅವುಗಳಿಗೆ ವಿಧೇಯನಾಗುವುದು ಮಾತ್ರವಲ್ಲದೆ ತನ್ನ ಶಿಷ್ಯರಿಗೆ ವಿಧೇಯತೆಯು ಯಾವುದೆಲ್ಲವನ್ನೂ ಒಳಗೊಂಡಿದೆ ಎಂಬುದನ್ನು ವಿವರಿಸಿದನು. ಆತನು ಧರ್ಮಶಾಸ್ತ್ರದ ಕುರಿತಾದ ಶಾಸ್ತ್ರಿಗಳ ಬಾಹ್ಯ ಅರ್ಥವಿವರಣೆಯನ್ನು ತಿರಸ್ಕರಿಸುತ್ತಾನೆ. ಅದೇ ಸಮಯದಲ್ಲಿ ಆತನೇ ಸ್ವತಃ ಅದರ ಸತ್ಯವಾದ ಅರ್ಥವಿವರಣೆಯನ್ನು ನೀಡುತ್ತಾನೆ. ಆತನು ಉದ್ದೇಶವು ಧರ್ಮಶಾಸ್ತ್ರವನ್ನು ಬದಲಾಯಿಸುವುದಾಗಿರದೆ (ರದ್ದುಗೊಳಿಸುವುದು ದೂರದ ಮಾತು) ಅದು ಹೊಂದಿದ್ದ ಆಳವಾದ ಅರ್ಥವನ್ನು ಪ್ರಕಟಿಸುವುದಾಗಿತ್ತು. ಹಾಗಾಗಿ ಆತನು ದೇವರ ನೀತಿವಂತಿಕೆಯ ಮೂಲಭೂತ ಆಜ್ಞೆಗಳನ್ನು ಘೋಷಿಸುವುದರ ಮೂಲಕ ಅದನ್ನು ನೆರವೇರಿಸಿದನು. ಆತನು ಮತ್ತಾಯ 5 ರ ಉಳಿದ ಭಾಗದಲ್ಲಿ ಉದಾಹರಣೆಗಳನ್ನು ಕೊಡುವುದರ ಮೂಲಕ ಇದೇ ಅಂಶವನ್ನು ಒತ್ತಿ ಹೇಳುತ್ತಾನೆ. ಪೌಲನು ಹೀಗೆ ಹೇಳುತ್ತಾನೆ: *ಕ್ರಿಸ್ತನು ಧರ್ಮಶಾಸ್ತ್ರದ ಅಂತ್ಯವಾಗಿದ್ದಾನೆ* (ರೋಮಾ. 10:4). ಇದರ ಅರ್ಥ ನಾವು ಧರ್ಮಶಾಸ್ತ್ರಕ್ಕೆ ಅವಿಧೇಯರಾಗಬಹುದು ಎಂದಲ್ಲ. ವಾಸ್ತವಿಕವಾಗಿ ಅದಕ್ಕೆ ವಿರುದ್ಧವಾಗಿದೆ (*ನಮ್ಮಲ್ಲಿ ಧರ್ಮಶಾಸ್ತ್ರದ ಅಗತ್ಯವು ನೆರವೇರುವುದಕ್ಕೆ ಆಸ್ಪದವಾಯಿತು*, ರೋಮಾ. 8:4). ಅದರ ಅರ್ಥ ನಾವು ಧರ್ಮಶಾಸ್ತ್ರಕ್ಕೆ ವಿಧೇಯರಾಗಿದ್ದರ ನಿಮಿತ್ತವಲ್ಲ ಬದಲಾಗಿ ಕ್ರಿಸ್ತನ ಮೇಲಿಟ್ಟಿರುವ ನಂಬಿಕೆಯ ನಿಮಿತ್ತ ದೇವರು ನಮ್ಮನ್ನು ಅಂಗೀಕರಿಸುತ್ತಾನೆ.

## ಕ್ರಿಸ್ತೀಯ ನೀತಿವಂತಿಕೆ

ಕ್ರಿಸ್ತೀಯ ನೀತಿವಂತಿಕೆಯು ಫರಿಸಾಯರ ನೀತಿವಂತಿಕೆಗಿಂತ ಶ್ರೇಷ್ಠವಾದದ್ದಾಗಿದೆ ಯಾಕೆಂದರೆ ಅದು ವ್ಯತ್ಯಾಸವಾದದ್ದಾಗಿದೆ. ಕ್ರಿಸ್ತೀಯ ನೀತಿವಂತಿಕೆಯು ಹೃದಯದ ನೀತಿವಂತಿಕೆಯಾಗಿದೆ. ಆದರೆ ಫರಿಸಾಯರು ಒಂದು ಬಾಹ್ಯವಾದ ಮತ್ತು ಔಪಚಾರಿಕವಾದ ವಿಧೇಯತೆಯಲ್ಲಿ ತೃಪ್ತರಾಗಿದ್ದರು. ದೇವರು ಮೆಚ್ಚುವಂತಹ ನೀತಿವಂತಿಕೆಯು ಆಂತರಿಕವಾದದ್ದು ಮತ್ತು ಮನಸ್ಸಿನ ಹಾಗೂ ಉದ್ದೇಶದ ನೀತಿವಂತಿಕೆಯಾಗಿದೆ ಎಂದು ಯೇಸು ತನ್ನ ಹಿಂಬಾಲಕರಿಗೆ ಬೋಧಿಸಿದನು. ಯಾಕೆಂದರೆ *ಯೆಹೋವನು ಮನುಷ್ಯರಂತೆ ಹೊರಗಿನ ತೋರಿಕೆಯನ್ನು ಮಾತ್ರ ನೋಡದೆ ಹೃದಯವನ್ನೇ ನೋಡುವನು* (1 ಸಮು. 16:7 ನ್ನು ಲೂಕ 16:15 ರೊಂದಿಗೆ ಹೋಲಿಸಿರಿ). ಅದು ಪ್ರವಾದಿಗಳು ಮುಂತಿಳಿಸಿದ ಮೆಸ್ಸೀಯನ ಯುಗದ ಆಶೀರ್ವಾದಗಳಲ್ಲಿ ಒಂದಾಗಿದ್ದು ನೂತನ ಹೃದಯದ ನೀತಿವಂತಿಕೆಯಾಗಿದೆ. ದೇವರು ಯೆರೆಮೀಯನ ಮೂಲಕ ಹೀಗೆ ವಾಗ್ದಾನ ಮಾಡಿದನು: *ನನ್ನ ಧರ್ಮಶಾಸ್ತ್ರವನ್ನು ಅವರ ಅಂತರಂಗದಲ್ಲಿ ಇಡುವೆನು. ಅವರ*

*ಹೃದಯದ ಹಲಗೆಯ ಮೇಲೆ ಬರೆಯುವನು* (ಯೆರೆ. 31:33). ಆತನು ಅದನ್ನು ಹೇಗೆ ಮಾಡುವನು? ದೇವರು ಯೆಹೆಜ್ಕೇಲನಿಗೆ ಹೀಗೆ ಹೇಳಿದನು: "ನನ್ನ ಆತ್ಮವನ್ನು ನಿಮ್ಮೊಳಗೆ ಇಡುವೆನು. ನೀವು ನನ್ನ ನಿಯಮಗಳಲ್ಲಿ ನಡೆಯುವ ಹಾಗೆ ಮಾಡುವೆನು ಮತ್ತು ನೀವು ನನ್ನ ನ್ಯಾಯವಿಧಿಗಳನ್ನು ಜಾಗರೂಕತೆಯಿಂದ ಅನುಸರಿಸಿನಡೆಯುವಿರಿ (ಯೆಹೆ. 36:27).

ದೇವರಾತ್ಮನು ಮಾಡುವುದೇನೆಂದರೆ ಆತನು ನಮ್ಮ ಹೃದಯಗಳಲ್ಲಿ ದೇವರ ಧರ್ಮಶಾಸ್ತ್ರವನ್ನು ಬರೆಯುವನು. ಹಾಗಾಗಿ "ಆತ್ಮನು", "ಧರ್ಮಶಾಸ್ತ್ರ", "ನೀತಿವಂತಿಕೆ" ಮತ್ತು "ಹೃದಯ" ಇವೆಲ್ಲವೂ ಒಂದೇ ಸಂಗತಿಗೆ ಸೇರಿವೆ.

## ಕ್ರಿಸ್ತೀಯ ಪ್ರೀತಿ

ಯೇಸು ಪರ್ವತ ಪ್ರಸಂಗದ ಈ ಭಾಗವನ್ನು ನಿಜವಾದ ಕ್ರಿಸ್ತೀಯ ನೈತಿಕ ನೀತಿವಂತಿಕೆಯ ಕುರಿತಾದ ಎರಡು ಉದಾಹರಣೆಗಳನ್ನು ನೀಡುವುದರ ಮೂಲಕ ಮುಕ್ತಾಯಗೊಳಿಸುತ್ತಾನೆ. ಅದು ಈ ಪ್ರಸಂಗದಲ್ಲಿರುವ ಇತರೆ ಅಂಶಗಳಿಗಿಂತ ಹೆಚ್ಚು ಸವಾಲನ್ನೊಡ್ಡುವ ಅಂಶವಾಗಿದೆ. ನಾವು ಒಬ್ಬ ಕೆಡುಕನಿಗೆ (ವ. 39) ಮತ್ತು ನಮ್ಮ ವೈರಿಗಳಿಗೆ (ವ. 44) ಪ್ರೀತಿ ತೋರಿಸಬೇಕೆಂದು ಯೇಸು ಅಪೇಕ್ಷಿಸುತ್ತಾನೆ. ನಾವು ನಮ್ಮ ವೈರಿಗಳಿಗೆ ಮೂರು ಸಂಗತಿಗಳನ್ನು ಮಾಡಬೇಕೆಂದು ಯೇಸು ಬೋಧಿಸುತ್ತಾನೆ:

1) ನಾವು ಅವರನ್ನು ಪ್ರೀತಿಸಬೇಕು.

2) ನಾವು ಅವರಿಗಾಗಿ ಪ್ರಾರ್ಥಿಸಬೇಕು.

3) ನಾವು ಅವರಿಗೆ ಒಳ್ಳೇಯದನ್ನು ಮಾಡಬೇಕು.

ಬೇರೆ ಎಲ್ಲದಕ್ಕಿಂತಲೂ ಹೆಚ್ಚಾಗಿ ಈ ಅಂಶವು ಕ್ರಿಸ್ತೀಯ ಸಂಸ್ಕೃತಿಯನ್ನು ಇತರೆ ಸಂಗತಿಗಳಿಗಿಂತ ವಿಭಿನ್ನವಾಗಿಸುತ್ತದೆ ಮತ್ತು ಎಲ್ಲದಕ್ಕಿಂತಲೂ ಹೆಚ್ಚಾಗಿ ಈ ಅಂಶಕ್ಕೆ ಪವಿತ್ರಾತ್ಮನ ಬಲದ ಹೆಚ್ಚು ಅವಶ್ಯವಿದೆ ಎಂದು ಜಾನ್ ಸ್ಟಾಟ್‌ರವರು ಸಮಾರೋಪಿಸುತ್ತಾರೆ. ಪವಿತ್ರಾತ್ಮನ ಫಲವು ಪ್ರೀತಿಯಾಗಿದೆ.

# ಉತ್ತರಗಳು 15: ನಮ್ಮ ಧಾರ್ಮಿಕ ನೀತಿವಂತಿಕೆ

## ಶಿಕ್ಷಕರಿಗಾಗಿ

ವಿದ್ಯಾರ್ಥಿಗಳು ಕೆಲವು ಪ್ರಶ್ನೆಗಳನ್ನು ಗ್ರಂಥಾಲಯದ ಅಥವಾ ಮನೆಗೆಲಸದ ಸಮಯದಲ್ಲಿ ಉತ್ತರಿಸಲು ನೀವು ಅನುಮತಿಸಿದರೂ ಸಹ ಈ ಅಧ್ಯಯನವನ್ನು ಮುಗಿಸಲು ಒಂದು ಗಂಟೆ ಬೇಕಾಗಬಹುದು.

ಸಾಧ್ಯವಾದರೆ ನೀವು ಇದನ್ನು ಹೀಗೆ ಮಾಡಿ ಮುಗಿಸಬಹುದು:

ನಿಮ್ಮ ಮೇಲ್ವಿಚಾರಣೆಯ ಅಡಿಯಲ್ಲಿ ಹಾಗೂ ತರಗತಿಯ ಸಮಯದಲ್ಲಿ ಇವುಗಳನ್ನು ಮುಗಿಸಿರಿ:

1) ***ಪೀಠಿಕೆ*** (ಪ್ರಶ್ನೆ 1–3 ರೊಂದಿಗೆ)
2) ಇಡೀ ವಾಕ್ಯಭಾಗವನ್ನು ಓದುವುದು
3) ಕರ್ತನ ಪ್ರಾರ್ಥನೆ (ಪ್ರಶ್ನೆ 14–20 ರೊಂದಿಗೆ)

ಗ್ರಂಥಾಲಯದ ಅಥವಾ ಮನೆಗೆಲಸದ ಸಮಯಕ್ಕಾಗಿ (ಅವಕಾಶವಿದ್ದರೆ ತರಗತಿಯ ಸಮಯದಲ್ಲಿಯೂ ಮಾಡಬಹುದು)

1) ದಾನಧರ್ಮ ಮತ್ತು ಇತರೆ "ಪುಣ್ಯ ಕ್ರಿಯೆಗಳು" (ಪ್ರಶ್ನೆ 4–6 ರೊಂದಿಗೆ)
2) ಸಾಮಾನ್ಯವಾಗಿ ಪ್ರಾರ್ಥನೆ (ಪ್ರಶ್ನೆ 8–12 ರೊಂದಿಗೆ)
3) ಉಪವಾಸ (ಪ್ರಶ್ನೆ 22–24 ರೊಂದಿಗೆ)
4) ಉಳಿದ ಪ್ರಶ್ನೆಗಳು 7, 13, 21, 25

## ಉತ್ತರಗಳು

1. ಪ್ರಾರ್ಥನೆ ಹಾಗೂ ಸಭೆಯ ಆರಾಧನೆಗಳಲ್ಲಿ ಭಾಗಿಯಾಗುವುದನ್ನು ಪಾಲಿಸುವುದಕ್ಕಿಂತ ಒಬ್ಬ ವಿಶ್ವಾಸಿಗೆ ಮುಖ್ಯವಾದದ್ದು ತಾಳ್ಮೆ ಮತ್ತು ಪ್ರಾಮಾಣಿಕತೆಯಾಗಿದೆ ಎಂದು ಹೇಳುವ ವಿಶ್ವಾಸಿಗೆ ನಾನು ಹೀಗೆ ಹೇಳುವೆನು:

   ಆಂತರಿಕವಾದ ನೈತಿಕ ಗುಣಗಳನ್ನು ಹೊಂದಿದ್ದು ಬಾಹ್ಯ ಧಾರ್ಮಿಕ ಆಚರಣೆಗಳನ್ನು ತ್ಯಜಿಸಬೇಕೆಂದು ಯೇಸು ಹೇಳಲಿಲ್ಲ. ಆತನು ಅವೆರಡನ್ನೂ "ನೀತಿವಂತಿಕೆ" ಎಂದು ಕರೆದನು ಮತ್ತು ತನ್ನ ಹಿಂಬಾಲಕರು ಎರಡನ್ನೂ ಹೊಂದಿರಬೇಕೆಂದು ಆತನು ಅಪೇಕ್ಷಿಸಿದನು.

2. ತನ್ನ ಶಿಷ್ಯರು ದಾನಧರ್ಮ, ಪ್ರಾರ್ಥನೆ ಹಾಗೂ ಉಪವಾಸವನ್ನು ಮಾಡುವರೆಂದು ಯೇಸು ತಿಳಿದಿದ್ದನು. ಆತನು "ನೀವು ಒಂದು ವೇಳೆ ಉಪವಾಸ ಮಾಡಿದರೆ ... " ಎನ್ನದೆ "ನೀವು ಉಪವಾಸಮಾಡುವಾಗ ... " ಎಂದು ಹೇಳಿದನು (ವ. 2, 5, 16).

3. ಮತ್ತಾಯ 5:16 ರಲ್ಲಿ ಯೇಸು ಹೇಳಿದ ಸಂಗತಿಯ *(ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ*) ಹಾಗೂ 6:1 ರಲ್ಲಿ ಆತನು ಹೇಳಿದ ಸಂಗತಿಯ (*ಜನರು ನೋಡಲಿ ಎಂದು ಅವರ ಮುಂದೆ ನಿಮ್ಮ ದಾನಧರ್ಮಗಳನ್ನು ಮಾಡದಂತೆ ಜಾಗರೂಕರಾಗಿರಿ*) ನಡುವೆ ಒಂದು ತದ್ವಿರೋಧತೆಯಿದ್ದಂತೆ ತೋರುತ್ತದೆ.

   ನನ್ನ ಟಿಪ್ಪಣಿ: ಈ ತದ್ವಿರೋಧತೆಯು ಕೇವಲ ಕ್ಷುಲ್ಲಕವಾಗಿದೆ, ಯಾಕೆಂದರೆ ಯೇಸು ಈ ವಚನಗಳಲ್ಲಿ ಎರಡು ವ್ಯತ್ಯಾಸವಾದ ಪಾಪಗಳ ಕುರಿತು ಮಾತನಾಡುತ್ತಿದ್ದಾನೆ. ವಚನ 5:16 ರಲ್ಲಿ ಆತನು ಮಾನವನ ಹೇಡಿತನದ ಕುರಿತು ಮಾತನಾಡಿದನು. ವಚನ 6:1 ರಲ್ಲಿ ಆತನು ಮಾನವನ ಶೂನ್ಯ ಯೋಚನೆಗಳ ಕುರಿತು ಮಾತನಾಡಿದನು. ನಮ್ಮ ಒಳ್ಳೆಯ ಕ್ರಿಯೆಗಳು ಬಹಿರಂಗವಾಗುವುದರ ಮೂಲಕ ನಮ್ಮ ಬೆಳಕು ಪ್ರಕಾಶಿಸಬೇಕೆಂದು ಯೇಸು ಬಯಸುತ್ತಾನೆ (ಆಗ ದೇವರು ಮಹಿಮೆ ಹೊಂದುವನು). ಆದರೆ ನಮ್ಮ ಭಕ್ತಿಯು ರಹಸ್ಯವಾಗಿರಬೇಕು ಇಲ್ಲವಾದರೆ ನಾವು ನಮ್ಮ ಭಕ್ತಿಯುತ ಕ್ರಿಯೆಗಳ ಕುರಿತು ಹೊಗಳಿಕೊಳ್ಳುವುದಿಲ್ಲ (ಇಲ್ಲವಾದರೆ ನಾವು ದೇವರ ಮಹಿಮೆಯನ್ನು ಕದ್ದುಕೊಳ್ಳುವೆವು).

4. ಫರಿಸಾಯರ ದಾನಧರ್ಮದಲ್ಲಿ ಕಪಟವಿದ್ದರಿಂದ ಅದು ತಪ್ಪಾಗಿತ್ತು. ಅವರು ಅದನ್ನು ತೋರಿಕೆಗಾಗಿ ಮಾಡಿದರು. ಅವರು ದೇವರನ್ನು ಅಥವಾ ಅಗತ್ಯದಲ್ಲಿರುವ ಜನರನ್ನು ಕೇಂದ್ರವಾಗಿಸದೆ ತಮ್ಮನ್ನೇ ಕೇಂದ್ರವಾಗಿಸಿಕೊಂಡರು. ಅವರು ದೇವರನ್ನು ಸನ್ಮಾನಿಸಲಿಲ್ಲ.

5. *"ನಿನ್ನ ಬಲಗೈ ಕೊಡುವುದು ನಿನ್ನ ಎಡಗೈಗೆ ತಿಳಿಯದಿರಲಿ"* (ವ. 3) ಎಂದು ಯೇಸು ಹೇಳಿದಾಗ ಈ ರೀತಿಯಾಗಿ ಅರ್ಥೈಸಿದನು ಎಂದು ನನಗೆ ಅನ್ನಿಸುತ್ತದೆ: ನಾವು ಮಾಡಿರುವ ಪುಣ್ಯಕ್ರಿಯೆಗಳ ಕುರಿತು "ನಮಗೆ ನಾವು" ಹೇಳಿಕೊಳ್ಳಬಾರದು. ಅದನ್ನು ಒಂದು "ರಹಸ್ಯವಾಗಿ" ನಮ್ಮಲ್ಲಿ ನಾವು ಇಟ್ಟುಕೊಳ್ಳಬೇಕು. ನಾವು ನಮ್ಮ ಹೃದಯಗಳಲ್ಲಿ ಅದರ ಬಗ್ಗೆ ಹೆಮ್ಮೆಪಟ್ಟುಕೊಳ್ಳಬಾರದು.

6. *"ನಿನ್ನ ತಂದೆ ನಿನಗೆ ಪ್ರತಿಫಲವನ್ನು ಕೊಡುವನು"* ಎಂದು ಯೇಸು ಹೇಳಿದಾಗ ಏನನ್ನು ಅರ್ಥೈಸಿರಬಹುದು? ದೇವರು ನಮ್ಮ ಹಣವನ್ನು (ಬಹುಶಃ ಬಡ್ಡಿಸಮೇತವಾಗಿ) ನಮಗೆ ಹಿಂದಿರುಗಿಸುತ್ತಾನೆ ಎಂದು ಯೇಸು ವಾಗ್ದಾನ ಮಾಡುತ್ತಿದ್ದಾನೆ ಎಂಬಂತೆ ಇದನ್ನು ಅರ್ಥಮಾಡಿಕೊಳ್ಳಬಾರದು ಎಂದು ನನಗನ್ನಿಸುತ್ತದೆ. ದೇವರಲ್ಲಿ ನಮ್ಮ ಬಗ್ಗೆ ಒಂದು ಒಳ್ಳೆ ಅಭಿಪ್ರಾಯ ಮೂಡಬಹುದು ಮತ್ತು ಆತನು ನಮ್ಮನ್ನು ಶ್ರೇಷ್ಠ ಮಾದರಿಗಳನ್ನಾಗಿ ಕಾಣಬಹುದು ಎಂದುಕೊಳ್ಳುವುದು ಸಹ ಅದರ ಅರ್ಥವಲ್ಲ. ಅಂತಿಮವಾಗಿ, ದೇವರು ನಮ್ಮ ಪುಣ್ಯಕ್ರಿಯೆಗಳನ್ನು ಬಹಿರಂಗಪಡಿಸಿ ನಮ್ಮ ಸುತ್ತಲಿರುವ ಜನರು ನಮ್ಮನ್ನು ಅದ್ಭುತವಾದ ವಿಶ್ವಾಸಿಗಳಾಗಿ ಕಾಣುವಂತೆ ಮಾಡುತ್ತಾನೆ ಎಂದೂ ಸಹ ನಾನು ನಂಬುವುದಿಲ್ಲ.

   ಬದಲಾಗಿ ನಾನು (ಜಾನ್ ಸ್ಟಾಟ್‌ರವರೊಂದಿಗೆ ಸೇರಿ) ಅಂದುಕೊಳ್ಳುವುದೇನೆಂದರೆ, ನಮಗೆ ದೊರಕಲಿರುವ ಬಹುಮಾನವು ನಾವು ಮಾಡಿರುವ ಸಂಗತಿಗಳ – ಹಸಿದವರಿಗೆ ಊಟ ನೀಡಿದ್ದು, ಬಟ್ಟೆಯಿಲ್ಲದವರಿಗೆ ಬಟ್ಟೆ ತೊಡಿಸಿದ್ದು, ರೋಗಿಗಳಿಗೆ ಸ್ವಸ್ಥತೆ ನೀಡಿದ್ದರ – ಸಕಾರಾತ್ಮಕವಾದ ಪರಿಣಾಮಗಳಾಗಿವೆ ಎಂದು ಯೇಸು ಅರ್ಥೈಸಿದನು. ಹಾಗಾಗಿ ನಾವು ಬಡವರಿಗೆ ಹಾಗೂ ಅಗತ್ಯತೆಯಲ್ಲಿರುವವರಿಗೆ ಕೊಡಲು ಪ್ರೇರೇಪಿಸಿದ ನಮ್ಮ ಕ್ರಿಸ್ತೀಯ ಪ್ರೀತಿಯು ತನ್ನ ಪ್ರತಿಫಲವನ್ನು ಹೊಂದುತ್ತದೆ ಎನ್ನುವುದೇ ನಮಗೆ ಸಿಗುವ ಬಹುಮಾನವಾಗಿದೆ.

7. –

8. ಫರಿಸಾಯರ ಪ್ರಾರ್ಥನೆ (ವ. 5): ಫರಿಸಾಯರು ಪ್ರಾರ್ಥನೆಯನ್ನು ಪ್ರೀತಿಸಿದ್ದರಲ್ಲಿ, ಪ್ರಾರ್ಥನೆಗಾಗಿ ಎದ್ದು ನಿಂತುಕೊಳ್ಳುವುದರಲ್ಲಿ, ನ್ಯಾಯಸಭೆಯಲ್ಲಿ ಹಾಗೂ ಬೀದಿ ಚೌಕಗಳಲ್ಲಿ ಪ್ರಾರ್ಥಿಸಿದ್ದರಲ್ಲಿ ಯಾವ ತಪ್ಪಿಲ್ಲ. ಅವರಲ್ಲಿ ತಪ್ಪಾದ ಅಂಶವು ಕಪಟತನವಾಗಿತ್ತು ಹಾಗೂ ಪ್ರಾರ್ಥಿಸುವುದರ ಹಿಂದಿದ್ದ ದುರುದ್ದೇಶವಾಗಿತ್ತು. ಅವರು ತಮ್ಮ ಪ್ರಾರ್ಥನಾ ಜೀವಿತವನ್ನು ಜನರು ಕಂಡು ಹಾಡಿ ಹೊಗಳಬೇಕೆಂದು ಬಯಸಿದರು.

9. ಫರಿಸಾಯರು *"ತಮ್ಮ ಪ್ರತಿಫಲವನ್ನು ಹೊಂದಿದ್ದಾಯಿತು"* (ವ. 5), ಯಾಕೆಂದರೆ ಅವರು ತಮ್ಮ ಪ್ರಾರ್ಥನಾ ಜೀವಿತವನ್ನು ತೋರಿಕೆಗಾಗಿ ಮಾಡಿದಾಗ ಅವರು ಬಯಸಿದ್ದನ್ನು ಹೊಂದಿಕೊಂಡರು. ಅವರು ಗುರುತಿಸಲ್ಪಟ್ಟರು, ಹಾಡಿ ಹೊಗಳಲ್ಪಟ್ಟರು. ಅವರಿಗೆ ಸಿಕ್ಕ ಪ್ರತಿಫಲವು ಅದೇ.

10. ಯೇಸು ವಚನ 6 ರಲ್ಲಿ ವೈಯಕ್ತಿಕ ಪ್ರಾರ್ಥನೆಯನ್ನು ಉಲ್ಲೇಖಿಸಿದನು (ಸಭಾ ಆರಾಧನೆಗಳಲ್ಲಿ ಅಥವಾ ಪ್ರಾರ್ಥನಾ ಕೂಟಗಳಲ್ಲಿ ಪ್ರಾರ್ಥಿಸುವುದಲ್ಲ). ಇದೇ ಕಾರಣದಿಂದಾಗಿ ಆತನು "ನೀನು" ಎಂಬ ಏಕವಚನವನ್ನು ಬಳಸಿದನು.

11. ಅನ್ಯರ ಪ್ರಾರ್ಥನೆಯಲ್ಲಿ ಈ ದೋಷವಿತ್ತೆಂದು ಯೇಸು ಹೇಳಿದನು (ವ. 7): ಅವರು ತಮ್ಮ ಉದ್ದವಾದ ಪ್ರಾರ್ಥನೆಯ ಅಥವಾ ಅನೇಕ ಪದಗಳನ್ನು ಬಳಸುವುದರ ಮೂಲಕ ತಮ್ಮ ದೇವರುಗಳಿಗೆ ಮನವರಿಕೆ ಮಾಡಿಸಿ ಹಸ್ತಪ್ರಯೋಗ ಮಾಡಬಹುದು ಅಂದುಕೊಂಡರು.

12. ಯೇಸು ವಚನ 5–6 ಮತ್ತು 8 ರಲ್ಲಿ ಪ್ರಾರ್ಥನೆಯ ಕುರಿತು ನಮಗೆ ಇವುಗಳನ್ನು ಕಲಿಸುತ್ತಾನೆ:

    - ನಮ್ಮ ವೈಯಕ್ತಿಕ ಪ್ರಾರ್ಥನಾ ಜೀವಿತವು ದೇವರ ಮೇಲೆ ಕೇಂದ್ರಿಕೃತವಾಗಿರಬೇಕೇ ಹೊರತು ನಮ್ಮ ಸುತ್ತಲಿರುವ ಜನರ ಮೇಲಾಗಲಿ ಅಥವಾ ವಸ್ತುಗಳ ಮೇಲಾಗಲಿ ಕೇಂದ್ರಿಕೃತವಾಗಿರಬಾರದು. ಇದೇ ಕಾರಣದಿಂದಾಗಿ ಒಂದು ಕೋಣೆಯೊಳಗೆ ಹೋಗಿ ಬಾಗಿಲನ್ನು ಮುಚ್ಚಿಕೊಂಡು ಪ್ರಾರ್ಥಿಸುವುದು ಉತ್ತಮವಾಗಿದೆ.

    - ನಮ್ಮ ಪ್ರಾರ್ಥನೆಯು ಭಕ್ತಿಯ ತೋರಿಕೆಯಾಗಿರಬಾರದು. ನಾವು ನಮ್ಮ ಶ್ರೇಷ್ಠ ಪ್ರಾರ್ಥನಾ ಜೀವಿತದ ಕುರಿತು ಹೆಮ್ಮೆಪಡಬಾರದು. ಪ್ರಾರ್ಥನೆಯನ್ನು ದೇವರ ಸನ್ನಿಧಿಯಲ್ಲಿ ಮಾತ್ರ ಮಾಡಬೇಕು.

- ನಾವು ನಮ್ಮ ಪ್ರಾರ್ಥನೆಯನ್ನು ಹೇಗೆ ವ್ಯಕ್ತಪಡಿಸುತ್ತೇವೆ ಎನ್ನುವುದರ ಮೇಲೆ ದೇವರು ನಮ್ಮ ಪ್ರಾರ್ಥನೆಯನ್ನು ಕೇಳದೆ ನಮ್ಮ ಹೃದಯದ ಯಥಾರ್ಥತೆಯನ್ನು ಕಂಡು ಉತ್ತರಿಸುತ್ತಾನೆ.

- ನಮ್ಮ ಪ್ರಾರ್ಥನೆಯು ಯಾಂತ್ರಿಕವಾಗಿರದೆ ವಿವೇಕವುಳ್ಳದ್ದಾಗಿರಬೇಕು.

13. –

14. ನಾವು ಕರ್ತನ ಪ್ರಾರ್ಥನೆಯ ಮೊದಲ ವಾಕ್ಯಗಳಲ್ಲಿ ದೇವರ ಕುರಿತು ಮೂರು ಸಂಗತಿಗಳನ್ನು ಅರ್ಥಮಾಡಿಕೊಳ್ಳುತ್ತೇವೆ:

    1) ದೇವರು ವೈಯಕ್ತಿಕ

    2) ದೇವರು (ಒಬ್ಬ ಒಳ್ಳೆಯ ತಂದೆಯಂತೆ) ಪ್ರೀತಿಸುವವನು.

    3) ದೇವರು ದೊಡ್ಡವನ್ನು (ಆತನು "ಪರಲೋಕದಲ್ಲಿದ್ದಾನೆ" – ಈ ಪದವು ಆತನಿರುವ ಸ್ಥಳವನ್ನು ವ್ಯಕ್ತಪಡಿಸುತ್ತಿಲ್ಲ ಬದಲಾಗಿ ಆತನ ಶಕ್ತಿಯನ್ನು ಸೂಚಿಸುತ್ತದೆ)

15. ಕರ್ತನ ಪ್ರಾರ್ಥನೆಯಿಂದ ನಮ್ಮ ಪ್ರಾರ್ಥನಾ ಜೀವಿತದಲ್ಲಿ ದೇವರ ಪ್ರಾಧಾನ್ಯತೆಗಳನ್ನು ಮೊದಲ ಸ್ಥಾನದಲ್ಲಿ ಇರಿಸಬೇಕೆಂದು ನಾವು ಅರ್ಥಮಾಡಿಕೊಳ್ಳುತ್ತೇವೆ. ನಮ್ಮ ಸ್ವಂತ ಅವಶ್ಯಕತೆಗಳು ಎರಡನೇಯ ಸ್ಥಾನವನ್ನು ತೆಗೆದುಕೊಳ್ಳುತ್ತದೆ. ದಶಾಜ್ಞೆಗಳೊಂದಿಗೆ ಹೋಲಿಸಿರಿ: ಪ್ರಾರಂಭದ ಆಜ್ಞೆಗಳು ದೇವರಿಗೆ ಸಂಬಂಧಿಸಿವೆ, ನಂತರ ನಮ್ಮ ನೆರೆಯವನ ವಿಷಯವು ಪ್ರಸ್ತಾಪವಾಗುತ್ತವೆ.

16. ಕರ್ತನ ಪ್ರಾರ್ಥನೆಯ ಮೊದಲ ಮೂರು ವಿಜ್ಞಾಪನೆಗಳು ದೇವರ ಮಹಿಮೆಯ ಕುರಿತು ನಮಗಿರುವ ಕಾಳಜಿಯನ್ನು ಹೀಗೆ ವ್ಯಕ್ತಪಡಿಸುತ್ತವೆ:

    1) ಆತನ ನಾಮದ ಕುರಿತು ನಮಗಿರುವ ಕಾಳಜಿ: ದೇವರ ನಾಮವು ಪರಿಶುದ್ಧವೆಂದೆಣಿಸಲ್ಪಡಲಿ ಎಂದು ನಾವು ಪ್ರಾರ್ಥಿಸುತ್ತೇವೆ. ಆ ನಾಮಕ್ಕೆ (ನಮ್ಮ ಜೀವಿತಗಳಲ್ಲಿ, ನಮ್ಮ ಸಭೆಯಲ್ಲಿ ಮತ್ತು ಲೋಕದಲ್ಲಿ) ಮಹಿಮೆ ಸಲ್ಲಬೇಕೆಂದು ನಾವು ಬಯಸುತ್ತೇವೆ.

    2) ಆತನ ಆಳ್ವಿಕೆಯ ಕುರಿತು ನಮಗಿರುವ ಕಾಳಜಿ: ದೇವರು ಈಗಾಗಲೇ ಅರಸನಾಗಿದ್ದಾನೆ ಹಾಗೂ ಸರ್ವಾಧಿಪತಿಯಾಗಿ ಆಳುತ್ತಿದ್ದಾನೆ. ಆದರೆ ಇನ್ನೂ ಅನೇಕರು ಆತನ ಒಡೆಯತ್ವ ಹಾಗೂ ಆತನ ರಕ್ಷಣೆಯನ್ನು ಸ್ವೀಕರಿಸುವುದರ ಮೂಲಕ ಆತನ ಆಳ್ವಿಕೆಗೆ ಅಧೀನರಾಗಲಿ ಎಂಬುದಾಗಿ ಪ್ರಾರ್ಥಿಸುತ್ತೇವೆ. ದೇವರ ರಾಜ್ಯವು ಅತೀ ಬೇಗನೇ ಪರಿಪೂರ್ಣಗೊಳ್ಳಲಿ ಮತ್ತು ಯೇಸು ಅತೀ ಬೇಗನೇ ತನ್ನ ಮಹಿಮೆಯೊಂದಿಗೆ ಹಿಂತಿರುಗಿ ಬರಲಿ ಎಂಬುದಾಗಿಯೂ ಪ್ರಾರ್ಥಿಸುತ್ತೇವೆ.

    3) ಆತನ ಚಿತ್ತದ ಕುರಿತು ನಮಗಿರುವ ಕಾಳಜಿ: ಪರಲೋಕದಲ್ಲಿ ಈಗಾಗಲೇ ದೇವರ ಚಿತ್ತವು ನೆರವೇರುತ್ತಿದೆ (ಆತನ ಹೆಸರು ಈಗಾಗಲೇ ಪರಿಶುದ್ಧವಾಗಿದೆ ಹಾಗೂ ಆತನು ಈಗಾಗಲೇ ಅರಸನಾಗಿದ್ದಾನೆ). ಆದರೆ ಇಹಲೋಕದಲ್ಲಿರುವ ಜೀವನವು ಪರಲೋಕದಲ್ಲಿರುವ ಜೀವನದಂತೆ ಆಗಲಿ ಎಂದು ನಾವು ಪ್ರಾರ್ಥಿಸುತ್ತೇವೆ. ದೇವರ ಪವಿತ್ರತೆ ಮತ್ತು ಸರ್ವಾಧಿಪತ್ಯವು ಭೂಮಿಯಲ್ಲಿ ಇನ್ನೂ ಹೆಚ್ಚಾಗಿ ಗೋಚರವಾಗಲಿ ಎಂದು ನಾವು ಪ್ರಾರ್ಥಿಸುತ್ತೇವೆ.

17. "ನಿನ್ನ ರಾಜ್ಯವು ಬರಲಿ; ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ" ಎಂದು ನಾವು ಪ್ರಾರ್ಥಿಸುವಾಗ ವಾಸ್ತವಿಕವಾಗಿ ಎರಡು ದೃಷ್ಟಿಕೋನದಿಂದ ಪ್ರಾರ್ಥಿಸುತ್ತಿದ್ದೇವೆ:

    1) ನಾವು ದೇವರ ಆಳ್ವಿಕೆ ಮತ್ತು ಅಧಿಕಾರವು ಭೂಮಿಯಲ್ಲಿ ಹೆಚ್ಚಲಿ ಎಂದು ಪ್ರಾರ್ಥಿಸುತ್ತಿದ್ದೇವೆ. ಇದು ದೇವರ ರಾಜ್ಯದ "ಈಗ ಬಂದಿರುವ" ದೃಷ್ಟಿಕೋನವಾಗಿದೆ.

    2) ದೇವರು ಈಗಿರುವ ಪ್ರಾಪಂಚಿಕ ವ್ಯವಸ್ಥೆಯನ್ನು ತೆಗೆದುಹಾಕಿ ತನ್ನ ರಾಜ್ಯವನ್ನು (ನೂತನ ಭೂಮ್ಯಾಕಾಶವನ್ನು) ಸ್ಥಾಪಿಸಲಿ ಎಂದು ಪ್ರಾರ್ಥಿಸುತ್ತಿದ್ದೇವೆ. ಇದು ದೇವರ ರಾಜ್ಯದ "ಮುಂದೆ ಬರಲಿರುವ" ದೃಷ್ಟಿಕೋನವಾಗಿದೆ.

18. "ನಮ್ಮ ಅನುದಿನದ ಆಹಾರ"ಕ್ಕಾಗಿ ಮಾಡುವ ಪ್ರಾರ್ಥನೆ: ಕೆಲವು ಸತ್ಯವೇದ ಶಾಸ್ತ್ರಜ್ಞರುಗಳು ಘೋಷಿಸಿಕೊಳ್ಳುವಂತೆ ಇದು "ಆತ್ಮಿಕ ಆಹಾರಕ್ಕಾಗಿ" ಅಥವಾ "ಕರ್ತನ ಭೋಜನಕ್ಕಾಗಿ" ಮಾಡುವ ಪ್ರಾರ್ಥನೆಯಲ್ಲ. ಅದು ಮಾನವನ ದಿನನಿತ್ಯದ ಅಗತ್ಯತೆಗಾಗಿ – ಅಂದರೆ ಊಟ ಬಟ್ಟೆಗಾಗಿ, ಸೂರಿಗಾಗಿ, ಆರೋಗ್ಯಕ್ಕಾಗಿ ಮತ್ತು ಒಂದು ಸುಂದರವಾದ ಕುಟುಂಬಕ್ಕಾಗಿ, ಉದ್ಯೋಗಕ್ಕಾಗಿ, ಶಾಂತಿ ನೆಮ್ಮದಿಗಾಗಿ ಮಾಡುವ ಪ್ರಾರ್ಥನೆಯಾಗಿದೆ.

19. ನಮ್ಮ ಪರಲೋಕದ ತಂದೆಗೆ ಕ್ಷಮಾಪಣೆಗಾಗಿ ಪ್ರಾರ್ಥಿಸುವಾಗ ಯೇಸು ಹೇಳುವ ಷರತ್ತನ್ನು ಜಾನ್ ಸ್ಟಾಟ್‌ರವರು ಹೀಗೆ ಅರ್ಥಮಾಡಿಕೊಳ್ಳುತ್ತಾರೆ (ನಾನೂ ಸಹ ಅವರೊಂದಿಗೆ ಒಪ್ಪುತ್ತೇನೆ):

ನಮ್ಮ ವಿರುದ್ಧವಾಗಿ ಪಾಪ ಮಾಡುವವರನ್ನು ಕ್ಷಮಿಸುವುದರ ಮೂಲಕ ನಾವು ದೇವರ ಕ್ಷಮಾಪಣೆಯನ್ನು "ಸಂಪಾದಿಸಬಹುದು" ಎಂದು ಯೇಸು ಹೇಳುತ್ತಿಲ್ಲ. ದೇವರು ಕೇವಲ ಪಶ್ಚಾತ್ತಾಪದ ಹೃದಯವುಳ್ಳವರನ್ನು ಮಾತ್ರ ಕ್ಷಮಿಸುತ್ತಾನೆ ಎಂದು ಯೇಸು ಹೇಳುತ್ತಾನೆ. ನಿಜವಾಗಿಯೂ ಪಶ್ಚಾತ್ತಾಪಪಡುವ ಹೃದಯದ ಒಂದು ಮುಖ್ಯವಾದ ಪುರಾವೆಯು ಕ್ಷಮಿಸುವ ಆತ್ಮವಾಗಿದೆ. ನಮ್ಮ ನೆರೆಯವನನ್ನು ಕ್ಷಮಿಸಲು ನಾವು ಮನಸ್ಸುಮಾಡುವುದು ನಮಗೂ ಸಹ ಕ್ಷಮಾಪಣೆಯ ಅಗತ್ಯವಿದೆ ಎಂಬ ನಮ್ಮ ಮನವರಿಕೆಯನ್ನು ತೋರಿಸುತ್ತದೆ. ದೇವರು ನಮ್ಮ ಹೃದಯಗಳನ್ನು ತೆರೆದು ನಮ್ಮ ಪಾಪಗಳನ್ನು ಕ್ಷಮಿಸುವಂತೆ ನಾವು ಹಾಗೆ ಮಾಡುತ್ತೇವೆ. ನಮ್ಮ ನೆರೆಯವನು ನಮಗೆ ವಿರುದ್ಧವಾಗಿ ಮಾಡಿರುವ ಪಾಪಗಳಿಗಿಂತ ನಾವು ದೇವರಿಗೆ ವಿರುದ್ಧವಾಗಿ ಮಾಡಿರುವ ಪಾಪಗಳು ಅತೀ ಹೆಚ್ಚು (ನಿರ್ದಯಿಯಾದ ಸೇವಕನ ಸಾಮ್ಯವನ್ನು ಹೋಲಿಸಿರಿ, ಮತ್ತಾಯ 18:23–25).

20. ಕೊನೆಯ ಎರಡು ವಿಜ್ಞಾಪನೆಗಳನ್ನು ಒಂದೇ ವಿಜ್ಞಾಪನೆಯ ಸಕಾರಾತ್ಮಕ ಹಾಗೂ ನಕಾರಾತ್ಮಕ ಅಂಶಗಳಾಗಿ ಅರ್ಥಮಾಡಿಕೊಳ್ಳಬಹುದು. ಜಾನ್ ಸ್ಟಾಟ್‌ರವರು ಅದರ ಸಮಸ್ಯೆಯನ್ನು ವಿವರಿಸುವುದಲ್ಲದೆ ಅದಕ್ಕೆ ಒಂದು ಒಳ್ಳೆಯ ಪರಿಹಾರವನ್ನು ಸಹ ಸೂಚಿಸುತ್ತಾರೆ:

1) ಈ ವಿಜ್ಞಾಪನೆಯಲ್ಲಿ ಎರಡು ಸಮಸ್ಯಾತ್ಮಕ ಪ್ರಶ್ನೆಗಳಿವೆ:

- ದೇವರು ನಮ್ಮನ್ನು ಎಂದಿಗೂ ಶೋಧಿಸುವುದಿಲ್ಲವೆಂದು ಹೇಳಿರುವಾಗ ಆತನು ನಮ್ಮನ್ನು ಶೋಧನೆಗೆ ನಡೆಸಲು ಹೇಗೆ ಸಾಧ್ಯ (*ಯಾವನಾದರೂ ಶೋಧನೆಗೆ ಪ್ರೇರೇಪಿಸಲ್ಪಡುವಾಗ ಈ ಪ್ರೇರಣೆಯು ತನಗೆ ದೇವರಿಂದ ಉಂಟಾಯಿತೆಂದು ಹೇಳಬಾರದು. ಏಕೆಂದರೆ ದೇವರು ಕೆಟ್ಟದ್ದರಿಂದ ಶೋಧಿಸಲ್ಪಡಲಾರನು. ಆತನು ಯಾರನ್ನೂ ಶೋಧಿಸುವುದೂ ಇಲ್ಲ,* ಯಾಕೋಬ. 1:13)?

- ಸಂಕಷ್ಟಗಳು ಮತ್ತು ಶೋಧನೆಗಳು ನಮಗೆ ಒಳ್ಳೆಯವುಗಳಾಗಿವೆ ಎಂದು ಸತ್ಯವೇದವು ಹೇಳುವಾಗ ದೇವರು ನಮ್ಮನ್ನು ಅವುಗಳಿಂದ ಬಿಡಿಸಲೆಂದು ನಾವು ಯಾಕೆ ಪ್ರಾರ್ಥಿಸಬೇಕು *(ನನ್ನ ಸಹೋದರರೇ, ನೀವು ವಿವಿಧ ಕಷ್ಟಗಳನ್ನು ಎದುರಿಸುವಾಗ ನಿಮ್ಮ ನಂಬಿಕೆಯ ಪರೀಕ್ಷೆಯು ಸಹನೆಯನ್ನುಂಟುಮಾಡುತ್ತದೆ ಎಂದು ತಿಳಿದು ಪರೀಕ್ಷೆಗಳನ್ನೆಲ್ಲಾ ಆನಂದದಿಂದ ಸ್ವೀಕರಿಸಿರಿ,* ಯಾಕೋಬ 1:2)?

2) ಆದರೆ ನಾವು "ಕೇಡನ್ನು" "ಕೆಡುಕನನ್ನಾಗಿ" (ಮತ್ತಾಯ 13:19) ಅರ್ಥಮಾಡಿಕೊಳ್ಳುವುದಾದರೆ ಈ ಪ್ರಶ್ನೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ. ಅದಲ್ಲದೆ ನಾವು ವಿಜ್ಞಾಪನೆಯ ಮೊದಲ ಭಾಗವನ್ನು ಎರಡನೇಯ ಭಾಗದ ಬೆಳಕಿನಲ್ಲಿಯೂ ಸಹ ಅರ್ಥಮಾಡಿಕೊಳ್ಳಬೇಕು. ಇಡೀ ವಿಜ್ಞಾಪನೆಯನ್ನು ನಾವು ಹೀಗೆ ಸಾರಾಂಶವಾಗಿ ಹೇಳಬಹುದು: "ಸಹನೆಯನ್ನು ಮೀರುವ ಶೋಧನೆಯೊಳಗೆ ನಡೆಯಲು ನಮ್ಮನ್ನು ಅನುಮತಿಸದೆ ಕೆಡುಕನಿಂದ ತಪ್ಪಿಸಿ ಕಾಪಾಡು". ನಾವು ನಮ್ಮ ಪರಲೋಕದ ತಂದೆಯಲ್ಲಿ ಕೂಗಿಕೊಳ್ಳುವಾಗ ಆತನು ಸೈತಾನನ ಬಲದಿಂದ ನಮ್ಮನ್ನು ಬಿಡಿಸುವನು. ನಾವು ಸೈತಾನನನ್ನು ನಮ್ಮ ಸ್ವಂತ ಶಕ್ತಿಯಿಂದ ಸೋಲಿಸಲಾರೆವು.

21. –

22. ಫರಿಸಾಯರು ವಾರಕ್ಕೆ ಎರಡು ಬಾರಿ, ಅಂದರೆ ಸೋಮವಾರ ಮತ್ತು ಗುರುವಾರದಂದು ಉಪವಾಸ ಮಾಡುತ್ತಿದ್ದರು. ತನ್ನ ಶಿಷ್ಯರು ಉಪವಾಸ ಮಾಡಬೇಕೆಂದು ಯೇಸು ನಿರೀಕ್ಷಿಸಿದನು ಎಂಬುದು ವಚನ 16 ರಲ್ಲಿ ಸ್ಪಷ್ಟವಾಗಿದೆ. ಆದರೆ ಫರಿಸಾಯರು ಕಪಟಿಗಳಾಗಿದ್ದರಿಂದ ಅವರು ಉಪವಾಸ ಮಾಡುವಾಗ ಜನರ ಗಮನವನ್ನು ತಮ್ಮ ಕಡೆಗೆ ಸೆಳೆದುಕೊಳ್ಳುತ್ತಿದ್ದರು. ಹಾಗಾಗಿ ಅವರು ತಮ್ಮ ಪ್ರತಿಫಲವನ್ನು ಈಗಾಗಲೇ ಹೊಂದಿಕೊಂಡರು ಎಂದು ಯೇಸು ಹೇಳಿದನು. ಅವರಿಗೆ ಸಿಕ್ಕ ಪ್ರತಿಫಲವು ಜನರಿಂದ ಸಿಕ್ಕ ಪ್ರಶಂಸೆಯಾಗಿತ್ತು.

23. ತನ್ನ ಶಿಷ್ಯರು ಉಪವಾಸ ಮಾಡುವಾಗ *"ತಲೆಗೆ ಎಣ್ಣೆ ಹಚ್ಚಿಕೊಂಡು ಮುಖ ತೊಳೆದುಕೊಳ್ಳಬೇಕೆಂದು"* ಹೇಳಿದಾಗ ಅವರು ಉಪವಾಸ ಮಾಡುವುದನ್ನು ತೋರಿಕೆಗಾಗಿ ಮಾಡದೆ ಎಂದಿನಂತೆ ನಡೆದುಕೊಳ್ಳಬೇಕೆಂದು ಯೇಸು ಅರ್ಥೈಸಿದನು. ಅವರು ತಾವು ಉಪವಾಸ ಮಾಡುತ್ತಿದ್ದೇವೆಂಬ ಸೂಚನೆಯನ್ನು ನೀಡಬಾರದು.

24. ಶಿಷ್ಯರ ಉಪವಾಸದ ಹಿನ್ನಲೆಯಲ್ಲಿ *"ನಿನ್ನ ತಂದೆ ನಿನಗೆ ಪ್ರತಿಫಲವನ್ನು ಕೊಡುವನು"* ಎಂದು ಹೇಳಿದಾಗ ಯೇಸು ಈ ರೀತಿಯಾಗಿ ಅರ್ಥೈಸಿದನು ಎಂದು ನನಗೆ ಅನ್ನಿಸುತ್ತದೆ: "ಪ್ರತಿಫಲ" ಎನ್ನುವಾಗ ದೇವರು ಅವರ ಶ್ರಮ ಮತ್ತು ತ್ಯಾಗಗಳನ್ನು ಸನ್ಮಾನಿಸುವುದಕ್ಕಾಗಿ ಅವರ ಸ್ವಾರ್ಥ ಬಯಕೆಗಳನ್ನು ಇಡೇರಿಸುವನು ಎಂದು ಅದರ ಅರ್ಥವಲ್ಲ. ಉಪವಾಸ ಎನ್ನುವುದು "ದೇವರ ಮೇಲೆ ಒತ್ತಡ ಹೇರುವುದಾಗಿದೆ" ಎಂದು ಅರ್ಥಮಾಡಿಕೊಳ್ಳಬಾರದು. ಉಪವಾಸದ ಹಿಂದಿನ ಉದ್ದೇಶಕ್ಕೆ ಸಂಬಂಧಿಸಿದ "ಪ್ರತಿಫಲವನ್ನು" ಯೇಸು ಉಲ್ಲೇಖಿಸಿರಬಹುದು:

- ಉಪವಾಸ ಎಂಬುದು ಒಬ್ಬನ ಶರೀರವನ್ನು ಶಿಸ್ತಿಗೆ ಒಳಪಡಿಸುವುದಾಗಿದೆಯೇ ಹೊರತು ನಮ್ಮ "ಆತ್ಮಿಕತೆಯ" ಜಾಹೀರಾತನ್ನು ಕೊಡುವುದಲ್ಲ.
- ಉಪವಾಸ ಎಂಬುದು ದೇವರ ಮುಂದೆ ತಗ್ಗಿಸಿಕೊಳ್ಳುವುದಾಗಿದೆಯೇ ಹೊರತು ತನಾಗಾಗಿ ಪ್ರಖ್ಯಾತಿಯನ್ನು ಪಡೆದುಕೊಳ್ಳುವುದಲ್ಲ.
- ಉಪವಾಸ ಎಂಬುದು ಅಗತ್ಯದಲ್ಲಿರುವ ಇತರರಿಗೆ ಕಾಳಜಿಯನ್ನು ತೋರಿಸುವುದಾಗಿದೆಯೇ ಹೊರತು ಇತರರಿಗೆ ಒಳಿತನ್ನು ಮಾಡುವುದರಿಂದ ದೂರವಿರುವುದಲ್ಲ.

  ಈ ಉದ್ದೇಶಗಳನ್ನು ನೆರವೇರಿಸುವುದಾದರೆ ಅವುಗಳೇ ಒಂದು ರೀತಿಯ ಪ್ರತಿಫಲವಾಗಿವೆ.

25. ಇಂದಿನ ದಿನಗಳಲ್ಲಿ ವಿದೇಶದಲ್ಲಿರುವ ಅನೇಕ ಸಭೆಗಳಲ್ಲಿ "ಉಪವಾಸ" ಎಂಬುದು ಕೇವಲ ಆಹಾರವನ್ನು ತ್ಯಜಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಸತ್ಯವೇದಾನುಸಾರವಾದ ಉಪವಾಸದ ನಿಜವಾದ ಉದ್ದೇಶಗಳನ್ನು ನೆರವೇರಿಸುವುದಕ್ಕೆ ಅಡ್ಡಿಯಾಗಿರುವ ಯಾವುದೇ ಸಂಗತಿಯಿಂದ ದೂರವಿರುವುದರ ಮೂಲಕ ವಿಶ್ವಾಸಿಗಳು "ಉಪವಾಸವಿರುತ್ತಾರೆ" (ಹಿಂದಿನ ಪ್ರಶ್ನೆಯ ಉತ್ತರವನ್ನು ನೋಡಿರಿ). ಉದಾಹರಣೆಗೆ, ಟಿ.ವಿ.ಯನ್ನು ನೋಡದಿರುವುದು, ಅಥವಾ ಹಾಡು ಕೇಳದಿರುವುದು, ವಾರ್ತಾಪತ್ರಿಕೆ/ ಮಾಸಪತ್ರಿಕೆ/ ಕಾದಂಬರಿಗಳನ್ನು ಓದದಿರುವುದು, ಯಾವುದೇ ಆಟಗಳಲ್ಲಿ ಭಾಗವಹಿಸದಿರುವುದು, ಟೀ ಅಥವಾ ಕಾಫಿ ಕುಡಿಯದಿರುವುದು, ಸಿಹಿ ತಿನಿಸುಗಳನ್ನು ತಿನ್ನದಿರುವುದು. ಇವುಗಳಲ್ಲಿ ಭಾಗವಹಿಸದಿರುವಾಗ ಉಳಿತಾಯವಾಗುವ ಹಣವನ್ನು ಸಭೆಗೆ ನೀಡಿ ಬಡವರಿಗೆ ಹಾಗೂ ಅಗತ್ಯತೆಯಲ್ಲಿರುವವರಿಗೆ ಸಹಾಯ ಮಾಡಿರಿ ಎಂದು ಹೇಳಬೇಕು.

## ಅವಲೋಕನ

ಈ ಅಧ್ಯಯನವು ನಮಗೆ ಸವಾಲನ್ನೊಡ್ಡುವ ಹಾಗೂ ನಮ್ಮ ಜೀವನಶೈಲಿಯ ಪ್ರಾಧಾನ್ಯತೆಗಳನ್ನು ಪ್ರಶ್ನಿಸುವ ಅನೇಕ ಸಮಸ್ಯೆಗಳನ್ನು ಹೊರತಂದಿದೆ.

ಬಡವರಿಗೆ ಹಾಗೂ ಅಗತ್ಯತೆಯಲ್ಲಿರುವವರಿಗೆ ಕೊಡುವುದರ ಬಗ್ಗೆ ಏನು? ಯೇಸು ನಾವು ಕೊಡಬೇಕೆಂದು ಬೋಧಿಸುತ್ತಾನೆ. ಆದರೆ ನಾವು ಕೊಡುವಾಗ ಯಾವುದೇ ದುರುದ್ದೇಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಕೊಡಬಾರದು. ನಾವು ಅದರ ಕುರಿತು ಹೆಮ್ಮೆಪಟ್ಟುಕೊಳ್ಳಬಾರದು ಅಥವಾ ಅದಕ್ಕಾಗಿ ಸನ್ಮಾನ ಪಡೆದುಕೊಳ್ಳಬಾರದು. ನಾವು ಮಾಡಿರುವುದನ್ನು ತಿಳಿದಿರುವ ದೇವರು ನಾವು ಸಂತೋಷವಾಗಿ ಕೊಡುವವರಾಗುವಂತೆ ಹಾಗೂ ನಮ್ಮ ನೆರೆಯವನಿಗೆ ಈ ಮೂಲಕವಾಗಿ ಪ್ರೀತಿಯನ್ನು ವ್ಯಕ್ತಪಡಿಸುವವರಾಗುವಂತೆ ಮಾಡುವುದರ ಮೂಲಕ ನಮಗೆ ಪ್ರತಿಫಲವನ್ನು ಅನುಗ್ರಹಿಸುವನು. ಆತನು ನಮ್ಮ ವರಗಳನ್ನು ಆಶೀರ್ವದಿಸಿ ನಮ್ಮ ವರಗಳ ಮೂಲಕ ಇತರರನ್ನೂ ಸಹ ಆಶೀರ್ವದಿಸುತ್ತಾನೆ.

ನಮ್ಮ ಪ್ರಾರ್ಥನಾ ಜೀವಿತದ ಬಗ್ಗೆ ಏನು? ಪ್ರಾರ್ಥನೆಯ ವಿಷಯದಲ್ಲಿ ಫರಿಸಾಯರು ಕಪಟಿಗಳಾಗಿದ್ದರು ಮತ್ತು ಅನ್ಯಜನರು ಯಾಂತ್ರಿಕವಾಗಿದ್ದರು. ಆದರೆ ವಿಶ್ವಾಸಿಗಳ ಪ್ರಾರ್ಥನೆಯು ನೈಜವಾಗಿರಬೇಕು, ಕಪಟದಿಂದ ತುಂಬಿರದೆ ಯಾಥಾರ್ಥವಾಗಿರಬೇಕು, ಯಾಂತ್ರಿಕವಾಗಿರದೆ ವಿವೇಕವುಳ್ಳದ್ದಾಗಿರಬೇಕು. ಪ್ರಾರ್ಥನೆ ಎಂದರೆ ಅರ್ಥವಿಲ್ಲದೆ ಬಳಸಿದ ಪದಗಳನ್ನೇ ಪದೇ ಪದೇ ಬಳಸುವುದು ಅಥವಾ ನಮ್ಮನ್ನು ನಾವೇ ಹೊಗಳಿಕೊಳ್ಳುವುದಲ್ಲ ಬದಲಾಗಿ ನಮ್ಮ ಪರಲೋಕದ ತಂದೆಯೊಂದಿಗೆ ನಾವು ಮಾತನಾಡುವುದಾಗಿದೆ.

ನಮ್ಮ ಪ್ರಾಧ್ಯಾನತೆಯ ಬಗ್ಗೆ ಏನು? ನಮ್ಮ ಪ್ರಧಾನ ಪ್ರಾಧ್ಯಾನತೆಯು ನಮ್ಮ ಸ್ವಂತ ಹೆಸರು, ನಮ್ಮ ರಾಜ್ಯ, ನಮ್ಮ ಸ್ವಂತ ಚಿತ್ತವಾಗಿರದೆ ದೇವರದ್ದಾಗಿರಬೇಕು ಎಂದು ಯೇಸು ನಮಗೆ ಬೋಧಿಸುತ್ತಾನೆ. ನಂತರ ಕರ್ತನ ಪ್ರಾರ್ಥನೆಯ ಎರಡನೆಯ ಭಾಗದಲ್ಲಿ ದೇವರಿಗೆ ಸಂಬಂಧಿಸಿದ ವಿಷಯಗಳಿಂದ ನಮ್ಮ ವಿಷಯಗಳಿಗೆ ತಿರುಗಲು ಬೋಧಿಸುತ್ತಾನೆ. ನಾವು ಈಗ ದೇವರ ಕೃಪೆಯ ಮೇಲೆ ನಮ್ಮ

ದೀನವಾದ ಅವಲಂಬನೆಯನ್ನು ವ್ಯಕ್ತಪಡಿಸುತ್ತೇವೆ. ಹಾಗಾಗಿ ನಾವು ನಮ್ಮ ಸ್ವಂತ ಅಗತ್ಯತೆಗಳನ್ನು ನಿರ್ಲಕ್ಷಿಸಬೇಕೆಂದು ಯೇಸು ಹೇಳುತ್ತಿಲ್ಲ. ಬದಲಾಗಿ ಸರಿಯಾದ ಪ್ರಾಧ್ಯಾನತೆಯನ್ನು ನಾವು ಹೊಂದಿರಬೇಕೆಂದು ಆತನು ನಿರೀಕ್ಷಿಸುತ್ತಾನೆ – ದೇವರಿಗೆ ಸಂಬಂಧಿಸಿದ ವಿಷಯಗಳು ಮೊದಲು, ನಂತರ ನಮ್ಮ ಸ್ವಂತ ಅಗತ್ಯತೆಗಳು. ದೇವರು ಪರಲೋಕದಲ್ಲಿರುವ ನಮ್ಮ ತಂದೆಯಾಗಿದ್ದಾನೆ. ಆತನು ತನ್ನ ಮಕ್ಕಳ ಸಂಪೂರ್ಣವಾದ ಯೋಗಕ್ಷೇಮದ ಕುರಿತು ಚಿಂತಿಸುವವನಾಗಿದ್ದಾನೆ. ನಾವು ನಮ್ಮ ಅಗತ್ಯತೆಗಳನ್ನು ಆತನ ಮುಂದೆ ತರಬೇಕು, ಆತನಲ್ಲಿ ಭರವಸವಿಡಬೇಕು ಮತ್ತು ಆತನ ಮೇಲೆ ಆತುಕೊಳ್ಳಬೇಕೆಂದು ದೇವರು ಬಯಸುತ್ತಾನೆ.

ಕರ್ತನ ಪ್ರಾರ್ಥನೆಯ ಕೊನೆಯ ಮೂರು ವಿಜ್ಞಾಪನೆಗಳು ಸುಂದರವಾಗಿವೆ. ಅವುಗಳು ನಮ್ಮ ಎಲ್ಲಾ ಮಾನವ ಅಗತ್ಯತೆಗಳನ್ನು ಒಳಗೊಂಡಿವೆ:

1) ನಮ್ಮ ಭೌತಿಕ ಅಗತ್ಯತೆ (ಅನುದಿನದ ಆಹಾರ)
2) ನಮ್ಮ ಆತ್ಮಿಕ ಅಗತ್ಯತೆ (ಪಾಪಕ್ಷಮಾಪಣೆ)
3) ನಮ್ಮ ನೈತಿಕ ಅಗತ್ಯತೆ (ಕೇಡಿನಿಂದ ಬಿಡುಗಡೆ)

ನಾವು ಈ ಪ್ರಾರ್ಥನೆಯನ್ನು ಮಾಡುವಾಗ ನಮ್ಮ ಮಾನವ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ದೇವರನ್ನು ಅವಲಂಬಿಸಿರುವುದನ್ನು ವ್ಯಕ್ತಪಡಿಸುತ್ತೇವೆ.

ಉಪವಾಸದ ಬಗ್ಗೆ ಏನು? ನಾನು "ನಲವತ್ತು ದಿನಗಳ ಉಪವಾಸವನ್ನು" ಕೈಗೊಳ್ಳುತ್ತಿದ್ದೇನೆ ದಯವಿಟ್ಟು ನನಗಾಗಿ ಎಲ್ಲರೂ ಪ್ರಾರ್ಥಿಸಿರಿ ಎಂದು ಒಬ್ಬ ಸಹೋದರಿಯು ತನ್ನ ಎಲ್ಲಾ ಸ್ನೇಹಿತರಿಗೆ ಮೊಬೈಲ್‌ನಲ್ಲಿ ಮೆಸೇಜ್ ಕಳುಹಿಸಿದಂತೆ ನಾವು ಉಪವಾಸವನ್ನು ನಮ್ಮ ಆತ್ಮಿಕ ಜೀವನದ ತೋರಿಕೆಗಾಗಿ ಬಳಸುತ್ತೇವೋ? ದೇವರು ನಮಗೆ ಬಹುಮಾನವನ್ನು ಕೊಡಲಿ ಹಾಗೂ (ಆತನ ಚಿತ್ತದ ಬದಲು) ನಮ್ಮ ಚಿತ್ತವನ್ನು ಈಡೇರಿಸಲಿ ಎಂದು ದೇವರ ಮೇಲೆ ಒತ್ತಡವನ್ನು ಹೇರುವುದಕ್ಕಾಗಿ ನಾವು ಉಪವಾಸವನ್ನು ಬಳಸುತ್ತೇವೋ?

# ಉತ್ತರಗಳು 16: ನಮ್ಮ ಮಹತ್ವಾಕಾಂಕ್ಷೆ

## ಶಿಕ್ಷಕರಿಗಾಗಿ

ವಿದ್ಯಾರ್ಥಿಗಳು ಕೆಲವು ಪ್ರಶ್ನೆಗಳನ್ನು ಗ್ರಂಥಾಲಯದ ಅಥವಾ ಮನೆಗೆಲಸದ ಸಮಯದಲ್ಲಿ ಉತ್ತರಿಸಲು ನೀವು ಅನುಮತಿಸಿದರೂ ಸಹ ಈ ಅಧ್ಯಯನವನ್ನು ಮುಗಿಸಲು ಒಂದು ಗಂಟೆ ಬೇಕಾಗಬಹುದು.

ಈ ಪ್ರಶ್ನೆಗಳು ಕಷ್ಟಕರವಾದವುಗಳು: 5, 12, 13–14 ಮತ್ತು 16.

ಈ ಪ್ರಶ್ನೆಗಳು ಗ್ರಂಥಾಲಯದ ಅಥವಾ ಮನೆಗೆಲಸದ ಸಮಯಕ್ಕಾಗಿ ಸೂಕ್ತವಾದವುಗಳು: 3, 6, 8 ಮತ್ತು 17.

## ಉತ್ತರಗಳು

1. ಯೇಸು 6:19–21 ರಲ್ಲಿ ವಾಸ್ತವಿಕವಾಗಿ ಏನನ್ನು ನಿಷೇಧಿಸಿದನು? ನನ್ನ ಸಮಾರೋಪಗಳು ಹೀಗಿವೆ:

   ಯೇಸು ಈ ಸಂಗತಿಗಳನ್ನು ನಿಷೇಧಿಸಲಿಲ್ಲ:

   - ತಮಗಾಗಿ ಆಸ್ತಿ ಮಾಡಿಕೊಳ್ಳುವುದು: ಸ್ವಂತ ಆಸ್ತಿಪಾಸ್ತಿಗಳನ್ನು ಹೊಂದಿರುವುದರ ವಿರುದ್ಧ ಸತ್ಯವೇದದಲ್ಲಿ ಯಾವುದೇ ನಿಷೇಧವಿಲ್ಲ.
   - ಭವಿಷ್ಯಕ್ಕಾಗಿ ಹಣ ಕೂಡಿಡುವುದು ಅಥವಾ ಜೀವವಿಮೆಯನ್ನು ಮಾಡಿಸುವುದು: ನಮ್ಮ ಕುಟುಂಬದ ಎಲ್ಲಾ ಅವಶ್ಯಕತೆಗಳನ್ನು ನಾವು ಪೂರೈಸಬೇಕೆಂದು ಸತ್ಯವೇದವು ನಮಗೆ ಹೇಳುತ್ತದೆ (1 ತಿಮೋ. 5:8).
   - ನಮ್ಮ ಸೃಷ್ಟಿಕರ್ತನು ನಮಗೆ ಹೇರಳವಾಗಿ ಅನುಭವಿಸಲು ನೀಡಿರುವ ಎಲ್ಲಾ ಒಳ್ಳೆಯ ಸಂಗತಿಗಳಲ್ಲಿ ಆನಂದಿಸುವುದು

   ಆದರೆ ಯೇಸು ಈ ಸಂಗತಿಗಳ ವಿರುದ್ಧವಾಗಿ ಮಾತನಾಡಿದನು:

   - ಸ್ವಾರ್ಥವಾಗಿ ತಮಗೋಸ್ಕರವೇ ಎಲ್ಲವನ್ನೂ ಕೂಡಿಟ್ಟುಕೊಳ್ಳುವುದು
   - ದುಂದುವೆಚ್ಚ ಮತ್ತು ಐಷಾರಾಮಿ ಜೀವನ
   - ಅಗತ್ಯದಲ್ಲಿರುವ ಜನರ ಕುರಿತು ತಲೆಕೆಡಿಸಿಕೊಳ್ಳದಿರುವುದು
   - ಒಬ್ಬನ ಜೀವನವು ತನಗಿರುವ ಸಂಪತ್ತಿನ ಮೇಲೆ ಆಧಾರವಾಗಿದೆ ಎಂಬ ಮೂರ್ಖತನದ ಕನಸು
   - ನಮ್ಮ ಹೃದಯ ಹಾಗೂ ಮನಸ್ಸುಗಳನ್ನು ಇಹಲೋಕಕ್ಕೆ ಕಟ್ಟಿಹಾಕುವ ಭೌತಿಕತೆ
   - ದುರಾಶೆ (ಇತರರು ಹೊಂದಿರುವ ವಸ್ತುಗಳನ್ನು ತಾವು ಸಹ ಹೊಂದಿಕೊಳ್ಳಬೇಕೆಂಬ ಬಯಕೆ)

2. *"ಪರಲೋಕದಲ್ಲಿ ನಿಕ್ಷೇಪವನ್ನು"* ಎಂದು ಹೇಳಿದಾಗ ಯೇಸು ನಿತ್ಯತ್ವದಲ್ಲಿ, ಅಂದರೆ ಪರಲೋಕದಲ್ಲಿ ಫಲಕೊಡಬಹುದಾದ ಸಂಗತಿಗಳನ್ನು ನಾವು ಭೂಮಿಯಲ್ಲಿ ಮಾಡುವುದರ ಕುರಿತು ಉಲ್ಲೇಖಿಸಿರಬಹುದು. ಜಾನ್ ಸ್ಟಾಟ್‌ರವರು ಹೀಗೆ ಸಲಹೆ ಸೂಚಿಸುತ್ತಾರೆ:

   - ಕ್ರಿಸ್ತನಂತಹ ಗುಣವನ್ನು ಬೆಳೆಸಿಕೊಳ್ಳುವುದು (ಯಾಕೆಂದರೆ ನಾವು ಪರಲೋಕಕ್ಕೆ ತೆಗೆದುಕೊಂಡು ಹೋಗಬಹುದಾದ ಒಂದೇ ಒಂದು ಸಂಗತಿಯು ಸ್ವತಃ ನಾವೇ ಆಗಿದ್ದೇವೆ).

- ನಂಬಿಕೆ, ನಿರೀಕ್ಷೆ ಮತ್ತು ಪ್ರೀತಿಯ ಅಭಿವೃದ್ಧಿ (ಈ ಮೂರು ಸಂಗತಿಗಳು ಉಳಿಯುವುದು ಎಂದು ಪೌಲನು ಹೇಳಿದನು, 1 ಕೊರಿ. 13:13).
- ನಾವು ಒಂದು ದಿನ ಮುಖಾಮುಖಿಯಾಗಿ ನೋಡಲಿರುವ ಕ್ರಿಸ್ತನ ಕುರಿತಾದ ಜ್ಞಾನದ ಬೆಳವಣಿಗೆ
- ಅನೇಕರು ನಿತ್ಯಜೀವಕ್ಕೆ ಬಾಧ್ಯರಾಗುವಂತೆ ಕ್ರಿಯಾಶೀಲರಾಗಿ ಸುವಾರ್ತೆಯನ್ನು ಸಾರುವುದು
- ಒಳ್ಳೆಯ ಕ್ರಿಸ್ತೀಯ ಸೇವೆಗಳಿಗೆ ನಮ್ಮ ಹಣವನ್ನು ಬಳಸುವುದು: ಈ ಹಣಹೂಡುವಿಕೆ ಮಾತ್ರ ನಿತ್ಯತ್ವಕ್ಕೆ ಲಾಭವನ್ನು ನೀಡುವುದು.

3. –

4. *"ಕಣ್ಣು ದೇಹಕ್ಕೆ ದೀಪವಾಗಿದೆ"* (ವ. 22) ಎಂಬ ರೂಪಾಲಂಕಾರವನ್ನು ನಾನು ಹೀಗೆ ಅರ್ಥಮಾಡಿಕೊಳ್ಳುತ್ತೇನೆ:

   ಯೇಸು ಒಬ್ಬ ಕುರುಡನನ್ನು ಕಣ್ಣಿದ್ದವನಿಗೆ ವಿರುದ್ಧವಾಗಿ ಹೋಲಿಸುತ್ತಾನೆ – ನಂತರ ಈ ಎರಡೂ ವ್ಯಕ್ತಿಗಳು ಜೀವಿಸುವ ಕತ್ತಲೆ ಮತ್ತು ಬೆಳಕನ್ನು ಹೋಲಿಸುತ್ತಾನೆ. ದೇಹವು ಸೂಕ್ತವಾಗಿ ಕ್ರಿಯೆ ಮಾಡಾಬೇಕಾದರೆ ದೃಷ್ಟಿಯು ಅತ್ಯವಶ್ಯವಾಗಿದೆ. ಕಣ್ಣಿದ್ದವನು ಬೆಳಕಿನಲ್ಲಿ ನಡೆಯುತ್ತಾನೆ, ಕಣ್ಣಿಲ್ಲದವನು ಕತ್ತಲಲ್ಲಿ ನಡೆಯುತ್ತಾನೆ. ಸತ್ಯವೇದದಲ್ಲಿ "ಕಣ್ಣನ್ನು" ಆಗಾಗ್ಗೆ ಒಂದು ರೂಪಾಲಂಕಾರವಾಗಿ "ಹೃದಯವನ್ನು" ಸೂಚಿಸಲು ಬಳಸಲಾಗಿದೆ, ಉದಾಹರಣೆಗೆ ನೋಡಿರಿ ಕೀರ್ತನೆ 119:10 (ಹೃದಯ), 19 (ಕಣ್ಣುಗಳು). ಯೇಸು ಈ ಎರಡೂ ಹಿನ್ನಲೆಯಲ್ಲಿ ಹೃದಯ ಮತ್ತು ಕಣ್ಣು ಇವೆರಡನ್ನೂ ಬಳಸಿರುವುದನ್ನು ಗಮನಿಸಿರಿ: ನಮ್ಮ ಹೃದಯವು ಸರಿಯಾದ ಸ್ಥಳದಲ್ಲಿರಬೇಕು ಮತ್ತು ನಮ್ಮ ಕಣ್ಣು ಸ್ವಸ್ಥವಾಗಿಯೂ ಆರೋಗ್ಯಕರವಾಗಿಯೂ ಇರಬೇಕು.

5. ಮತ್ತಾಯ 6:22–33 ರಲ್ಲಿ ಯೇಸು ಹೇಳಿದ ಅಂಶವನ್ನು ಹೀಗೆ ವಿವರಿಸಬಹುದು:

   ನಮ್ಮ ಕಣ್ಣು ಇಡೀ ದೇಹದ ಮೇಲೆ ಪರಿಣಾಮ ಬೀರುವಂತೆಯೇ ನಮ್ಮ ಮಹತ್ವಾಕಾಂಕ್ಷೆಯು (ನಮ್ಮ ಕಣ್ಣುಗಳನ್ನು ಮತ್ತು ಹೃದಯವನ್ನು ಕೇಂದ್ರೀಕರಿಸುವ) ನಮ್ಮ ಇಡೀ ಜೀವಿತದ ಮೇಲೆ ಪರಿಣಾಮ ಬೀರುತ್ತದೆ:

   - ದೇವರಿಗೆ ಮತ್ತು ಮನುಷ್ಯನಿಗೆ ಸೇವೆ ಮಾಡಬೇಕೆನ್ನುವ ಒಂದು ಮಾನ್ಯವಾದ ಮತ್ತು ನಿಸ್ವಾರ್ಥವಾದ ಮಹತ್ವಾಕಾಂಕ್ಷೆಯು ಜೀವನಕ್ಕೆ ಒಂದು ಅರ್ಥವನ್ನು ಕೊಡುತ್ತದೆ ಮತ್ತು ನಾವು ಮಾಡುವ ಎಲ್ಲಾ ಸಂಗತಿಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ.
   - ಒಂದು ಮಾನ್ಯವಲ್ಲದ ಹಾಗೂ ಸ್ವಾರ್ಥ ಮಹತ್ವಾಕಾಂಕ್ಷೆಯು (ಉದಾಹರಣೆಗೆ ನಮಗಾಗಿ ಭೂಮಿಯಲ್ಲಿ ನಿಕ್ಷೇಪವನ್ನು ಕೂಡಿಟ್ಟುಕೊಳ್ಳುವುದು) ನಮ್ಮನ್ನು ನೈತಿಕ ಕತ್ತಲೆಗೆ ತಳ್ಳುತ್ತದೆ. ಅದು ನಮ್ಮನ್ನು ಅಸಹಿಷ್ಣುತರನ್ನಾಗಿ, ಅಮಾನವೀಯರನ್ನಾಗಿ, ಉಗ್ರರನ್ನಾಗಿ ಮಾಡಿ ಜೀವನದ ಎಲ್ಲಾ ಮಹತ್ವವನ್ನು ಕದ್ದುಕೊಳ್ಳುತ್ತದೆ.

   ಇವೆಲ್ಲವೂ ದರ್ಶನಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿದೆ:

   - ನಮಗೆ ಆತ್ಮಿಕ ದರ್ಶನವಿದ್ದರೆ, ನಮ್ಮ ಆತ್ಮಿಕ ದೃಷ್ಟಿಕೋನವನ್ನು ಸೂಕ್ತವಾಗಿ ಸರಿಹೊಂದಿಸಿದರೆ ನಮ್ಮ ಜೀವನವು ಉದ್ದೇಶ ಮತ್ತು ಬಲದೊಂದಿಗೆ ತುಂಬಲ್ಪಡುತ್ತದೆ.
   - ಆದರೆ ನಮ್ಮ ದರ್ಶನವು ಭೌತಿಕತೆಯ ಸುಳ್ಳು ದೇವರುಗಳಿಂದ ಮೊಬ್ಬಾಗಿ ಜೀವನದ ಮೌಲ್ಯಗಳನ್ನು ಕಳೆದುಕೊಂಡರೆ ನಮ್ಮ ಇಡೀ ಜೀವನವು ಕತ್ತಲೆಯಿಂದ ಆವರಿಸಲ್ಪಟ್ಟು ನಾವು ಹೋಗುತ್ತಿರುವ ಮಾರ್ಗವನ್ನು ಅರಿಯದವರಾಗುತ್ತೇವೆ.

6. –

7. ಹಿಂದಿನ ಎರಡು ಆಯ್ಕೆಗಳ ಹಿಂದೆ (ಎರಡು ನಿಕ್ಷೇಪಗಳು, ನಾವು ಎಲ್ಲಿ ಕೂಡಿಸುತ್ತೇವೆ, ಮತ್ತು ಎರಡು ನೋಟಗಳು, ನಾವು ಯಾವುದರ ಮೇಲೆ ನಮ್ಮ ಕಣ್ಣುಗಳನ್ನು ಇಟ್ಟಿದ್ದೇವೆ ಎಂಬುದರ ನಡುವಿನ ಆಯ್ಕೆ) ಯಜಮಾನನನ್ನು ಆಯ್ಕೆಮಾಡಿಕೊಳ್ಳುವ ಇನ್ನೂ ಮೂಲಭೂತವಾದ ಆಯ್ಕೆಯಿದೆ. ನಾವು ಯಾರನ್ನು ಸೇವಿಸಬೇಕೆಂದಿದ್ದೇವೆ (6:24)? ಯಜಮಾನನ ಕುರಿತು ಒಬ್ಬ ವಿಶ್ವಾಸಿಯು ಎದುರಿಸುವ ಆಯ್ಕೆ ಇದಾಗಿದೆ:

   ದೇವರು ಮತ್ತು ಮಮ್ಮೋನನ (ಹಣದ) ನಡುವೆ ಇರುವ ಆಯ್ಕೆ. ಜೀವಿಸುವ ಸೃಷ್ಟಿಕರ್ತನ ಹಾಗೂ ನಮ್ಮಿಂದ ಸೃಷ್ಟಿಸಲ್ಪಟ್ಟ ಯಾವುದೇ ಸಂಗತಿಯ ನಡುವೆ ಇರುವ ಆಯ್ಕೆ. ಇಲ್ಲಿ ಅದನ್ನು "ಐಶ್ವರ್ಯ ಮತ್ತು ಹಣವು" ಪ್ರತಿನಿಧಿಸುತ್ತಿದೆ (ಯೇಸು ಹಣ

ಎಂಬುದಕ್ಕೆ ಅರಾಮಿಕ್ ಭಾಷೆಯಪದವಾದ "ಮಮ್ಮೋನ" ಎಂಬುದನ್ನು ಬಳಸುತ್ತಾನೆ. ನಾವು ಎರಡೂ ಯಜಮಾನರಿಗೆ ಸೇವೆಮಾಡಲಾರೆವು.

8. –

9. ಮುಂದಿನ ವಾಕ್ಯಭಾಗವು (6:25–34) "ಆದ್ದರಿಂದ" ಎಂಬ ಪದದೊಂದಿಗೆ ಪ್ರಾರಂಭಿಸುತ್ತದೆ. ಈ ವಾಕ್ಯಭಾಗದಲ್ಲಿರುವ ಯೇಸುವಿನ ಬೋಧನೆಯು ಆತನು ಈ ಹಿಂದೆ ಹೇಳಿರುವ ಸಂಗತಿಯ ಮೇಲೆ ಆಧರಿತವಾದದ್ದು ಎಂಬುದನ್ನು ಇದು ತೋರಿಸುತ್ತದೆ. ಯೇಸು ಈ ಹಿಂದೆ ಬೋಧಿಸಿರುವ ಸಂಗತಿಯ ಸಮಾರೋಪಕ್ಕೆ ತಲುಪಿದ್ದೇವೆ: ನಾವು ನಿಜವಾಗಲೂ ಏನನ್ನು ಹುಡುಕುತ್ತಿದ್ದೇವೆ? ನಾವು ನಮ್ಮ ಜೀವನದಲ್ಲಿ ಹೊಂದಿರುವ ಮಹತ್ವಾಕಾಂಕ್ಷೆಯೇನು?

10. 6:25–34 ರಲ್ಲಿ ಯೇಸು ನಮ್ಮ ಮುಂದೆ ಇಡುವ ಎರಡು ಪರ್ಯಾಯಗಳು ಇವುಗಳಾಗಿವೆ:

    - ಸ್ವಂತ ಭದ್ರತೆ (ಊಟ ಬಟ್ಟೆಯ ಚಿಂತೆ), ಅದು ದೇವರನ್ನರಿಯದ ಅನ್ಯಜನರ ಗೀಳಾಗಿದೆ
    - ದೇವರ ಆಳ್ವಿಕೆ ಮತ್ತು ದೇವರ ನೀತಿವಂತಿಕೆ ಮತ್ತು ಲೋಕದಲ್ಲಿ ಅದರ ಹರಡುವಿಕೆ ಮತ್ತು ಜಯ

11. "ಚಿಂತೆ" ಎಂಬುದು ಕ್ರಿಸ್ತೀಯ ನಂಬಿಕೆಗೆ ಸರಿಬೀಳದ ಸಂಗತಿಯಾಗಿದೆ (ವ. 30). ಚಿಂತೆಪಡುವವರನ್ನು ಯೇಸು *"ಅಲ್ಪವಿಶ್ವಾಸಿಗಳೇ"* ಎಂದು ಕರೆದನು.

12. "ಚಿಂತೆ" ಎಂಬುದು ಸಾಮಾನ್ಯ ಜ್ಞಾನಕ್ಕೆ ಸರಿಬೀಳದ ಸಂಗತಿಯಾಗಿದೆ (ವ. 34). ನಾವು ನಾಳೆಯ ಬಗ್ಗೆ ಚಿಂತಿಸುತ್ತೇವೆ ಆದರೆ ನಾಳೆಯ ಕುರಿತಾದ ಚಿಂತೆಯನ್ನು ಇಂದೆ ಮಾಡುತ್ತಿದ್ದೇವೆ. ನಾಳೆಯ ಕುರಿತು ಇಂದು ನಮಗಿರುವ ಭಯವು ನಾಳೆ ಸಂಭವಿಸದಿರಬಹುದು. "ಚಿಂತಿಸಬೇಡ, ನೀನು ಅಂದುಕೊಂಡಂತೆ ಏನೂ ಆಗುವುದಿಲ್ಲ" ಎಂಬ ಪ್ರಸಿದ್ಧವಾದ ಸಲಹೆಯು ಸತ್ಯವಾದದ್ದು. ಹಾಗಾಗಿ ಚಿಂತೆ ಎಂಬುದು ಸಮಯದ, ಆಲೋಚನೆಯ, ನರಬಲದ ವ್ಯರ್ಥ ಬಳಕೆಯಾಗಿದೆ.

13. "ಹುಡುಕಿರಿ" (ವ. 33, ಅಥವಾ "ತವಕಪಡು" ವ. 32) ಮತ್ತು "ಚಿಂತೆ" (ವ. 31) ಎಂಬ ಭಾವಗಳು ಯೇಸುವಿಗೆ ಒಂದೇ ಸಂಗತಿಯನ್ನು ಉಲ್ಲೇಖಿಸುವ ಪದಗಳಾಗಿವೆ. ನಾವು ಇದರಿಂದ ಯೇಸು "ಚಿಂತೆಯನ್ನು" ಉಲ್ಲೇಖಿಸದೆ "ಮಹತ್ವಾಕಾಂಕ್ಷೆಯನ್ನು" ಉಲ್ಲೇಖಿಸುತ್ತಿದ್ದಾನೆ ಎಂಬ ಸಮಾರೋಪಕ್ಕೆ ತಲುಪಬಹುದು. ಅನ್ಯಜನರ ಮಹತ್ವಾಕಾಂಕ್ಷೆಯು ಭೌತಿಕವಾದ ಅವಶ್ಯಕತೆಗಳ ಮೇಲೆ ಹೆಚ್ಚು ಕೇಂದ್ರೀಕರಿಸುತ್ತದೆ. ಆದರೆ ಈ ಮಹತ್ವಾಕಾಂಕ್ಷೆಯು ವಿಶ್ವಾಸಿಗಳಿಗೆ ಸೂಕ್ತವಲ್ಲ (ಭಾಗಶಃವಾಗಿ ಯಾಕೆಂದರೆ ಪರಲೋಕದಲ್ಲಿರುವ ನಮ್ಮ ತಂದೆಯು ಅವುಗಳು ನಮಗೆ ಅವಶ್ಯವೆಂಬುದನ್ನು ತಿಳಿದಿದ್ದಾನೆ) ಆದರೆ ಬಹುತೇಕವಾಗಿ ಯಾಕೆಂದರೆ ಒಬ್ಬ ಕ್ರೈಸ್ತನ ನಿಜವಾದ ತವಕವು ದೇವರ ರಾಜ್ಯ ಹಾಗೂ ಆತನ ನೀತಿವಂತಿಕೆಯಾಗಿದೆ.

14. ಹಿಂದಿನ ಪ್ರಶ್ನೆಯ ಉತ್ತರವನ್ನು ಕರ್ತನ ಪ್ರಾರ್ಥನೆಯೊಂದಿಗೆ ಹೋಲಿಸುವಾಗ (ವ. 9–13) ನಾವು ಈ ಸಮಾರೋಪಗಳಿಗೆ ತಲುಪಬಹುದು:

    6 ನೇ ಅಧ್ಯಾಯದ ಕೊನೆಯ ಭಾಗದಲ್ಲಿ ನಾವು ಕಾಣುವ ಸಂಗತಿಯು ಕರ್ತನ ಪ್ರಾರ್ಥನೆಯ ಇನ್ನೊಂದು ವಿಧವಾಗಿದೆ. ನಿಶ್ಚಯವಾಗಲೂ ವಿಶ್ವಾಸಿಗಳು ದೇಹದ ಅಗತ್ಯತೆಗಳನ್ನು ಗುರುತಿಸಬೇಕು ("ನಮಗೆ ನಮ್ಮ ಅನುದಿನದ ಆಹಾರವನ್ನು ದಯಪಾಲಿಸು"), ಆದರೆ ನಮ್ಮ ಪ್ರಾಧ್ಯಾನತೆಯು ದೇವರ ನಾಮ, ಆತನ ರಾಜ್ಯ ಮತ್ತು ಆತನ ಚಿತ್ತವಾಗಿರಬೇಕು. ನಾವು ಮೊದಲು ದೇವರ ರಾಜ್ಯ ಹಾಗೂ ಆತನ ನೀತಿವಂತಿಕೆಯನ್ನು ಹುಡುಕಬೇಕೆಂದು ಯೇಸು ನಮಗೆ ಹೇಳುತ್ತಾನೆ. ಕರ್ತನ ಪ್ರಾರ್ಥನೆಯಲ್ಲಿ ನಾವು ಈ ಜೀವನದ ಶ್ರೇಷ್ಠವಾದ ಮಹತ್ವಾಕಾಂಕ್ಷೆಯನ್ನು ಪ್ರಾರ್ಥನೆಯನ್ನಾಗಿ ಪರಿವರ್ತಿಸುತ್ತೇವೆ.

15. "ದೇವರ ರಾಜ್ಯವನ್ನು ಹುಡುಕಿರಿ" ಎಂಬ ಯೇಸುವಿನ ಪ್ರಬೋಧನೆಗೆ ನಾವು ಹೀಗೆ ವಿಧೇಯರಾಗಬಹುದು ಎಂದು ನನಗನ್ನಿಸುತ್ತದೆ:

    1) ನಮ್ಮ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಮತ್ತು ಮಹತ್ವಾಕಾಂಕ್ಷೆಯಲ್ಲಿ ಯೇಸುವಿಗೆ ಅಧೀನರಾಗುವುದು
    2) ಸುವಾರ್ತೆಯನ್ನು ಹರಡುವುದು
    3) ಯೇಸುವಿನ ಬರೋಣಕ್ಕಾಗಿ ಪ್ರಾರ್ಥಿಸುವುದು ಮತ್ತು ಕಾದುಕೊಂಡಿರುವುದು

16. *ನೀವು ಮೊದಲು ದೇವರ ರಾಜ್ಯವನ್ನೂ ಆತನ ನೀತಿಯನ್ನೂ ಹುಡುಕಿರಿ* (ವ. 33) ಎಂದು ಯೇಸು ಹೇಳಿದಾಗ ಆತನು ತನ್ನ ಮನಸ್ಸಿನಲ್ಲಿ ಎರಡು ವಿಷಯಗಳನ್ನು ("ರಾಜ್ಯ" ಮತ್ತು "ನೀತಿವಂತಿಕೆ") ಹೊಂದಿದ್ದನೋ ಅಥವಾ "ಆತನನೀತಿವಂತ ರಾಜ್ಯವನ್ನು ಮೊದಲು ಹುಡುಕಿರಿ" ಎಂಬ ಒಂದೇ ವಿಷಯವನ್ನು ಮನಸ್ಸಿನಲ್ಲಿ ಹೊಂದಿದ್ದನೋ ಎಂಬುದನ್ನು ತಿಳಿಯುವುದು ಕಷ್ಟಕರವಾಗಿದೆ.

ಆದರೆ ನಾವು "ದೇವರ ರಾಜ್ಯ" ಹಾಗೂ "ದೇವರ ನೀತಿವಂತಿಕೆಯ" ನಡುವೆ ಒಂದು ವ್ಯತ್ಯಾಸವನ್ನು ತರುವುದಾದರೆ ಅದು (ಜಾನ್‌ಸ್ಟಾಟ್‌ರವರ ಪ್ರಕಾರ) ಹೀಗಿರಬಹುದು:

"ದೇವರ ನೀತಿವಂತಿಕೆಯು" (ದೇವರ ಕುಟುಂಬಕ್ಕೆ ಸೇರಿದ ಜನರಿಂದ ಮಾತ್ರ ನಿಜವಾಗಲೂ ಅನುಭವಿಸಲು ಸಾಧ್ಯವಾಗಿದ್ದು) ಸ್ವಲ್ಪಮಟ್ಟಿಗಾದರೂ ಮಾನವ ಸಮಾಜದಲ್ಲಿ ಮತ್ತು ವ್ಯವಹಾರಗಳಲ್ಲಿ ಕಾಣಿಸಿಕೊಳ್ಳುವಂತೆ ದೇವರ ರಾಜ್ಯವು ಅಕ್ರೈಸ್ತ ಲೋಕಕ್ಕೆ "ಹೊರಸೂಸುವುದೇ" ದೇವರ ನೀತಿವಂತಿಕೆಯಾಗಿದೆ, ಉದಾಹರಣೆಗೆ:

- ಹೆಚ್ಚು ಅನ್ಯಾಯದ ಬದಲು ಹೆಚ್ಚು ನ್ಯಾಯ
- ಹೆಚ್ಚು ದಬ್ಬಾಳಿಕೆಯ ಬದಲು ಹೆಚ್ಚು ಸ್ವಾತಂತ್ರ
- ದ್ವೇಷಕ್ಕಿಂತ ಹೆಚ್ಚು ಪ್ರೀತಿ
- ಯುದ್ಧಕಿಂತ ಹೆಚ್ಚು ಶಾಂತಿ

ಹಾಗಾಗಿ ನಾವು ದೇವರ ರಾಜ್ಯವನ್ನು ಮೊದಲು ಹುಡುಕಬೇಕಾದರೆ *ಸುವಾರ್ತೆ ಸಾರಬೇಕು*, ಯಾಕೆಂದರೆ ಕ್ರಿಸ್ತನ ಸುವಾರ್ತೆಯನ್ನು ಸಾರುವಾಗ, ಅದನ್ನು ಕೇಳಿಸಿಕೊಂಡು ನಂಬಿಕೆಯಿಟ್ಟು ವಿಧೇಯರಾಗುವಾಗ ಮಾತ್ರ ದೇವರ ರಾಜ್ಯವು ವಿಸ್ತಾರವಾಗುತ್ತದೆ.

ನಾವು ದೇವರ ನೀತಿವಂತಿಕೆಯನ್ನು ಹುಡುಕುವುದಾದರೆ ನಾವು ಕೇವಲ ಸುವಾರ್ತೆಯನ್ನು ಸಾರುವುದು ಮಾತ್ರವಲ್ಲದೆ *ಸಾಮಾಜಿಕ ಕಾರ್ಯಗಳಲ್ಲಿ ತೊಡಗಬೇಕು* ಮತ್ತು ದೇವರಿಗೆ ಮೆಚ್ಚಿಕೆಯಾಗುವ ನೀತಿವಂತಿಕೆಯ ಉನ್ನತವಾದ ಮಾನದಂಡಗಳನ್ನು ಹರಡಲು ಯತ್ನಿಸಬೇಕು.

17. –

## ಅವಲೋಕನ

ನಾವು ಜೀವನದಲ್ಲಿ ಸರಿಯಾದ ಆಯ್ಕೆಯನ್ನು ಮಾಡುವಂತೆ ಯೇಸು ನಮಗೆ ಸಹಾಯ ಮಾಡುತ್ತಾನೆ. ಆತನು ನಮಗೆ ತಪ್ಪಾದ ಮಾರ್ಗದ ಮೂರ್ಖತನವನ್ನು ಮತ್ತು ಸರಿಯಾದ ಮಾರ್ಗದ ಜ್ಞಾನವನ್ನು ತೋರಿಸುತ್ತಾನೆ. ನಾವು ಆಯ್ಕೆ ಮಾಡಲು ಮತ್ತು ನಿರ್ಧರಿಸಲು ಸಹಾಯವಾಗಲೆಂದು ಆತನು ತಪ್ಪು ಮತ್ತು ಸರಿಯ ನಡುವೆ ಇರುವ ವ್ಯತ್ಯಾಸವನ್ನು ತೋರಿಸುತ್ತಾನೆ.

ಎಲ್ಲಾ ಮಾನವರು "ಹುಡುಕುವವರಾಗಿದ್ದಾರೆ" ಮತ್ತು ನಮ್ಮೆಲ್ಲರಿಗೂ ಮಹತ್ವಾಕಾಂಕ್ಷೆಯಿದೆ ಹಾಗೂ ನಾವೆಲ್ಲರೂ ಏನನ್ನಾದರೂ ಬಯಸುತ್ತಿದ್ದೇವೆ ಎಂದು ಯೇಸು ಅರಿತಿದ್ದಾನೆ. ನಾವೆಲ್ಲರೂ ಯಾವ ಕಾರಣಕ್ಕಾದರೂ ಜೀವಿಸಲು ಬಯಸುತ್ತೇವೆ, ನಮ್ಮ ಅಸ್ತಿತ್ವಕ್ಕೆ ಅರ್ಥಸಿಗಲೆಂದು ಯಾವುದನ್ನಾದರೂ ಹುಡುಕುತ್ತಿದ್ದೇವೆ, ನಮ್ಮ ಹೃದಯ ಮನಸ್ಸುಗಳನ್ನು ಯಾವುದರ ಮೇಲಾದರೂ ಕೇಂದ್ರೀಕರಿಸುತ್ತೇವೆ. ನಾವು ಹುಡುಕುವ ಆ ಸಂಗತಿಯು ನಮ್ಮ ಮಹತ್ವಾಕಾಂಕ್ಷೆಯಾಗಿದೆ. "ದೇವರ ರಾಜ್ಯ ಹಾಗೂ ಆತನ ನೀತಿವಂತಿಕೆಯನ್ನು ಮೊದಲು ಹುಡುಕುವುದೇ" ದೇವಜನರ ಮಹತ್ವಾಕಾಂಕ್ಷೆಯಾಗಿರಬೇಕು.

**ನಿಮ್ಮ** ಜೀವನದ ಮಹತ್ವಾಕಾಂಕ್ಷೆಯೇನು? ನೀವು ದೇವರ ರಾಜ್ಯ ಹಾಗೂ ಆತನ ನೀತಿವಂತಿಕೆಯನ್ನು ಮೊದಲು ಹುಡುಕುತ್ತೀರೋ?

# ಉತ್ತರಗಳು 17: ನಮ್ಮ ಸಂಬಂಧಗಳು

## ಶಿಕ್ಷಕರಿಗಾಗಿ

ನೀವು ಒಂದು ಗಂಟೆಯಲ್ಲಿ ಈ ಅಧ್ಯಯನವನ್ನು ಮುಗಿಸಬಹುದು.

ಕೆಲವು ಪ್ರಶ್ನೆಗಳು ಗ್ರಂಥಾಲಯ ಸಮಯಕ್ಕೆ ಹಾಗೂ ಮನೆಗೆಲಸಕ್ಕೆ ಹೆಚ್ಚು ಸೂಕ್ತವಾಗಿವೆ: 7, 13 ಮತ್ತು 15.

## ಉತ್ತರಗಳು

1. –

2. ಮತ್ತಾಯ 7:1–5 ರಲ್ಲಿ ಯೇಸು ಹೇಳುವ ಮೂರು ಅಂಶಗಳು ಇವುಗಳಾಗಿವೆ:

   1) ಜೊತೆ–ವಿಶ್ವಾಸಿಗೆ ತೀರ್ಪು ಮಾಡಬಾರದು, ವ. 1–2

   2) ಕಪಟಿಯಾಗಿರಬಾರದು, ವ. 3–4

   3) ಜೊತೆ–ವಿಶ್ವಾಸಿಗೆ ಸಹಾಯ ಮಾಡಬೇಕು, ವ. 5

3. **"**ತೀರ್ಪುಮಾಡಬೇಡಿರಿ**"** ಎಂಬ ಯೇಸುವಿನ ಹೇಳಿಕೆಯನ್ನು ನಾನು ಹೀಗೆ ಅರ್ಥಮಾಡಿಕೊಳ್ಳುತ್ತೇನೆ:

   1) ನ್ಯಾಯಾಧೀಶರುಗಳನ್ನು ಒಳಗೊಂಡ ನ್ಯಾಯಾಲಯ ವ್ಯವಸ್ಥೆಯು ಇರುವುದು ತಪ್ಪೆಂದು ಯೇಸು *ಅರ್ಥೈಸಿರಲಾರನು* (ಇದರ ಹಿನ್ನಲೆಯು ನ್ಯಾಯಾಲಯಗಳ ಕುರಿತಾಗಿರದೆ ಪರಸ್ಪರ ಒಬ್ಬರ ಕುರಿತು ಇನ್ನೊಬ್ಬರಿಗಿರುವ ಜವಾಬ್ದಾರಿಗಳ ಕುರಿತಾಗಿದೆ).

   2) ಮೌಲ್ಯಮಾಪಿಸಲು ಮತ್ತು ವಿಮರ್ಶಿಸಲು ನಮ್ಮ ಮಾನವ ಬುದ್ಧಿಯನ್ನು ಬಳಸಬಾರದೆಂಬ ನಿಷೇಧವನ್ನು ಯೇಸು *ಅರ್ಥೈಸಿರಲಾರನು.* ಈ ವಾಕ್ಯಭಾಗದ ಹಿನ್ನಲೆಯು ಅಂತಹ ತಿಳುವಳಿಕೆಯ ವಿರುದ್ಧ ಮಾತನಾಡುತ್ತದೆ: ನಾವು **"**ನಾಯಿಗಳನ್ನು ಮತ್ತು ಹಂದಿಗಳನ್ನು**"** (ವ. 6) ಮತ್ತು ಸುಳ್ಳುಪ್ರವಾದಿಗಳು ಹಾಗೂ ಅವರ ಫಲವನ್ನು (ವ. 15–16) ಗುರುತಿಸಬೇಕೆಂದು ಹೇಳುತ್ತಾನೆ. ಆದ್ದರಿಂದ ನಾವು ಅನಿವಾರ್ಯವಾಗಿ ಅವರನ್ನು ಮೌಲ್ಯಮಾಪಿಸಬೇಕಾಗುತ್ತದೆ ಮತ್ತು **"**ತೀರ್ಪು ಮಾಡಬೇಕಾಗುತ್ತದೆ**"**.

   3) ಹಾಗಾಗಿ ಯೇಸು ಇದನ್ನು ಅರ್ಥೈಸಿರಬಹುದು: ಒಬ್ಬ ವಿಶ್ವಾಸಿಯು ದೇವರ ನ್ಯಾಯಾಧೀಶನ ಸ್ಥಾನವನ್ನು ತೆಗೆದುಕೊಳ್ಳಬಾರದು. ನಮ್ಮ ಜೊತೆ–ವಿಶ್ವಾಸಿಗಳನ್ನು **"**ದೇವರ ಸ್ಥಾನದಲ್ಲಿ ನಿಂತುಕೊಂಡಂತೆ**"** ಅನವಶ್ಯಕವಾಗಿ ಟೀಕಿಸಬಾರದು ಅಥವಾ ಖಂಡಿಸಬಾರದು. ನಾವೂ ಸಹ ದೇವರ ನ್ಯಾಯತೀರ್ಪಿನ ಅಡಿಯಲ್ಲಿದ್ದೇವೆ ಎಂಬುದನ್ನು ತಿಳಿದುಕೊಳ್ಳಬೇಕು.

4. ಮತ್ತಾಯ 7:3–4 ರಲ್ಲಿ ಯೇಸು ಬಳಸಿರುವ ರೂಪಾಲಂಕಾರಗಳು: **"**ಮರದ ಚೂರು**"** ಎಂಬುದು ಅತ್ಯಂತ ಚಿಕ್ಕದಾಗಿದ್ದು ಒಬ್ಬ ವಿಶ್ವಾಸಿಯ ಕ್ರಿಸ್ತೀಯ ಜೀವಿತದಲ್ಲಿರುವ ಚಿಕ್ಕಪುಟ್ಟ ತಪ್ಪುಗಳನ್ನು ಪ್ರತಿನಿಧಿಸುತ್ತದೆ. ಆದರೆ ಒಂದು **"**ಮರದ ದಿಮ್ಮಿಯು**"** ದೊಡ್ಡದಾಗಿದ್ದು ಒಬ್ಬ ವಿಶ್ವಾಸಿಯ ಜೀವಿತದಲ್ಲಿರುವ ದೊಡ್ಡ ತಪ್ಪುಗಳನ್ನು (ಅಥವಾ ಪಾಪಗಳನ್ನು) ಪ್ರತಿನಿಧಿಸುತ್ತದೆ. ಯೇಸು ತಿಳಿಸುತ್ತಿರುವ ಅಂಶವು ದೃಷ್ಟಿಕೋನದ್ದಾಗಿದೆ. ಒಬ್ಬ ವಿಶ್ವಾಸಿಯು ತನ್ನನ್ನು ಹಾಗೂ ತನ್ನ ಜೊತೆ ವಿಶ್ವಾಸಿಯನ್ನು ಸರಿಯಾದ ದೃಷ್ಟಿಕೋನದಲ್ಲಿ ಮೌಲ್ಯಮಾಪಿಸಬೇಕು. ಅದರ ಅರ್ಥ ಒಬ್ಬ ವಿಶ್ವಾಸಿಯು ತನ್ನ ಗಂಭೀರವಾದ ತಪ್ಪುಗಳನ್ನು ತಿದ್ದಿಕೊಳ್ಳದೆ ತನ್ನ ಜೊತೆ ವಿಶ್ವಾಸಿಯಲ್ಲಿ ಕಾಣುವ ಚಿಕ್ಕಪುಟ್ಟ ಬಲಹೀನತೆಗಳನ್ನು ಸರಿಪಡಿಸಲು ಯತ್ನಿಸಬಾರದು.

5. ತನ್ನ ಸ್ವಂತ ಗಂಭೀರವಾದ ತಪ್ಪುಗಳನ್ನು ಪರಿಗಣಿಸದೆ ಜೊತೆ–ವಿಶ್ವಾಸಿಯ ಸಣ್ಣಪುಟ್ಟ ಬಲಹೀನತೆಗಳ ಕುರಿತು ವ್ಯವಹರಿಸಲು ಬಯಸುವ ಒಬ್ಬ ವಿಶ್ವಾಸಿಯ ಗುಣವನ್ನು ಯೇಸು **"**ಕಪಟತನ**"** ಎಂದು ಕರೆಯುತ್ತಾನೆ. ಕಪಟತನ ಎಂದರೆ ನಮಗೆ ವಾಸ್ತವಿಕವಾಗಿ ಇರುವ ಗುಣಮಟ್ಟಕ್ಕಿಂತ ಹೆಚ್ಚಿನದ್ದನ್ನು (ಅಥವಾ ಉನ್ನತವಾದ ಗುಣಮಟ್ಟವನ್ನು) ಹೊಂದಿದ್ದೇವೆ ಎಂದು ಘೋಷಿಸಿಕೊಳ್ಳುವುದಾಗಿದೆ.

ಕಪಟಿಯು ಸುಳ್ಳಾಡುವವನು, ಎರಡು ಮುಖವುಳ್ಳವನು ಮತ್ತು ಅಪ್ರಾಮಾಣಿಕ ವ್ಯಕ್ತಿಯಾಗಿದ್ದಾನೆ. ಕಪಟಿಗಳಿಗೆ ಯಥಾರ್ಥತೆಯ ಕೊರತೆಯಿರುತ್ತದೆ.

6. ಮತ್ತಾಯ 7:5 ರಲ್ಲಿ ನಾವು ಎರಡು ಸಂಗತಿಗಳನ್ನು ಮಾಡಬೇಕೆಂದು ಯೇಸು ಹೇಳುತ್ತಾನೆ:

   1) ಮೊದಲು ನಾವು ಎಲ್ಲವನ್ನೂ ಸ್ಪಷ್ಟವಾಗಿ ಕಾಣಲು ಸಾಧ್ಯವಾಗುವಂತೆ ನಮ್ಮ ಸ್ವಂತ ಸನ್ನಿವೇಶದೊಂದಿಗೆ ವ್ಯವಹರಿಸಬೇಕು.

   2) ಆಗ ಮಾತ್ರ ನಾವು ಸಭೆಯೊಳಗಿರುವ ಸಮಸ್ಯೆಗಳೊಂದಿಗೆ ವ್ಯವಹರಿಸಲು ಸಾಧ್ಯ. ಆಗ ಮಾತ್ರ ನಾವು ನಮ್ಮ ಜೊತೆ ಸಹೋದರರಿಗೆ ನಿಜವಾದ ಸಹೋದರರಾಗಿರಲು ಸಾಧ್ಯ ಮತ್ತು ಅವರ ಸಮಸ್ಯೆಗಳಲ್ಲಿ ಅವರಿಗೆ ಸಹಾಯ ಮಾಡಲು ಸಾಧ್ಯ.

7. –

8. ಯೇಸು ವಚನ 6 ರಲ್ಲಿ ನಿಶ್ಚಯವಾಗಲೂ "ನಾಯಿಗಳು, ಹಂದಿಗಳು ಮತ್ತು ಮುತ್ತುಗಳು" ಎಂಬ ಮೂರು ಪದಗಳನ್ನು ರೂಪಾಲಂಕಾರವಾಗಿ ಬಳಸಿದನು. ಆತನು "ನಾಯಿಗಳು, ಹಂದಿಗಳು ಮತ್ತು ಮುತ್ತುಗಳು" ಎಂಬ ಪದಗಳ ಮೂಲಕ ಇದನ್ನು ಉಲ್ಲೇಖಿಸಿದನು ಎಂದು ನನಗನ್ನಿಸುತ್ತದೆ:

   "ನಾಯಿಗಳು" ಮತ್ತು "ಹಂದಿಗಳು" ಒಂದು ರೀತಿಯ ಜನರನ್ನು ಉಲ್ಲೇಖಿಸುತ್ತಿರಬಹುದು ಮತ್ತು "ಮುತ್ತುಗಳು" ಕ್ರೈಸ್ತ ವಿಶ್ವಾಸಿಗಳಾದ ನಾವು ಅವರಿಗೆ ಕೊಡಬಾರದಂತಹ ಸಂಗತಿಯನ್ನು ಉಲ್ಲೇಖಿಸುತ್ತಿರಬಹುದು.

   "ನಾಯಿಗಳು" ಮತ್ತು "ಹಂದಿಗಳು" ಅಂತಹ ಒಂದು "ಮೃಗ" ಸ್ವಭಾವದ ಜನರಾಗಿದ್ದು ಅವರೊಂದಿಗೆ ದೇವರ ವಾಕ್ಯವನ್ನು ಹಂಚಿಕೊಳ್ಳಬಾರದೆಂದು ಹೇಳಲ್ಪಟ್ಟಿದ್ದೇವೆ. ಯೇಸು ಮತ್ತಾಯ 10:14 ರಲ್ಲಿ ತನ್ನ ಶಿಷ್ಯರಿಗೆ ಕೊಟ್ಟ ಸೂಚನೆಯನ್ನು ಹೋಲಿಸಿರಿ: (*"ಯಾರಾದರೂ ನಿಮ್ಮನ್ನು ಸೇರಿಸಿಕೊಳ್ಳದೆ ಹೋದರೆ ಇಲ್ಲವೆ ನಿಮ್ಮ ಮಾತುಗಳನ್ನು ಕೇಳದೆ ಹೋದರೆ ನೀವು ಆ ಮನೆಯನ್ನು ಇಲ್ಲವೆ ಆ ಪಟ್ಟಣವನ್ನು ಬಿಟ್ಟು ಹೊರಡುವಾಗ ನಿಮ್ಮಪಾದಗಳ ಧೂಳನ್ನು ಜಾಡಿಸಿಬಿಡಿರಿ"*), ಮತ್ತು ಪೌಲನು ಅಂತಿಯೋಕ್ಯದ ಪಿಸಿದ್ಯದಲ್ಲಿ ಹೀಗೆ ಹೇಳಿದನು: *ದೇವರ ವಾಕ್ಯವನ್ನು ನಾವು ಮೊದಲು ಹೇಳುವುದು ಅವಶ್ಯವಾಗಿತ್ತು. ಆದರೆ ನೀವು ಅದನ್ನು ತಳ್ಳಿಬಿಟ್ಟದ್ದರಿಂದಲೂ ನಿತ್ಯಜೀವಕ್ಕೆ ನೀವು ಅಯೋಗ್ಯರೆಂದು ತೀರ್ಪುಮಾಡಿಕೊಂಡಿದ್ದರಿಂದಲೂ, ಇಗೋ, ನಾವೀಗ ಅನ್ಯಜನರ ಬಳಿಗೆ ಹೋಗುತಿದ್ದೇವೆ"*, ಅಪೊ.ಕೃತ್ಯ. 13:46) ಮತ್ತು ಕೊರಿಂಥದಲ್ಲಿ ಹೀಗೆ ಹೇಳಿದನು:*"ಆದರೆ ಯೆಹೂದ್ಯರು ಪೌಲನನ್ನು ವಿರೋಧಿಸಿ ದೂಷಿಸಿದಾಗ, ಅವನು ಅವರನ್ನು ಪ್ರತಿಭಟಿಸುವಂತೆ ತನ್ನ ಬಟ್ಟೆಗಳನ್ನು ಒದರಿ, ನಿಮ್ಮ ರಕ್ತವು ನಿಮ್ಮ ತಲೆಯಮೇಲೆ ಇರಲಿ. ನಿಮ್ಮ ವಿನಾಶಕ್ಕೆ ನೀವೇ ಹೊಣೆ. ಅದಕ್ಕೆ ನಾನು ಜವಾಬ್ದಾರನಲ್ಲ. ಇಂದಿನಿಂದ ನಾನು ಅನ್ಯಜನರ ಬಳಿಗೆ ಹೋಗುತ್ತೇನೆ ಎಂದನು"*, ಅಪೊ.ಕೃತ್ಯ. 18:5–6).

   ಅವಿಶ್ವಾಸಿಗಳಿಗೆ ಸುವಾರ್ತೆಯನ್ನು ಸಾರಬಾರದೆಂದು ಯೇಸು ನಿಷೇಧಿಸಿದನು ಎಂಬುದಾಗಿ ವಚನ 6 ನ್ನು ಅರ್ಥಮಾಡಿಕೊಳ್ಳುವುದು ನಿಶ್ಚಯವಾಗಲೂ ತಪ್ಪಾದದ್ದು. ಆದರೆ ನಾವು ಸುವಾರ್ತೆಯನ್ನು ಕೇಳಿಸಿಕೊಳ್ಳಲು ಬಯಸದವರಿಗೆ ಸುವಾರ್ತೆಯನ್ನು ಸಾರುವುದರಲ್ಲಿ ಸಮಯವನ್ನು ವ್ಯರ್ಥವಾಗಿ ಕಳೆಯಬಾರದು.

9. –

10. ನಮ್ಮ ಪರಲೋಕದ ತಂದೆಯು ನಮಗೆ "ಒಳ್ಳೆಯ ವರಗಳನ್ನು" ಕೊಡುವನೆಂಬ ಧೈರ್ಯದೊಂದಿಗೆ ಆತನ ಮುಂದೆ ನಾವು ಬರಬೇಕೆಂದು ಯೇಸು ಬಯಸುತ್ತಾನೆ ಎಂಬುದನ್ನು ನಾವು ಮತ್ತಾಯ 7:10–11 ರಿಂದ ಕಲಿಯುತ್ತೇವೆ.

11. ಕ್ರೈಸ್ತ ವಿಶ್ವಾಸಿಗಳು ಪರಲೋಕದ ತಂದೆಯೊಂದಿಗೆ ಹೊಂದಿರುವ ಸಂಬಂಧದ ಕುರಿತು ಮತ್ತಾಯ 7:7–11 ರಲ್ಲಿರುವ ಯೇಸುವಿನ ಬೋಧನೆಯ ಕುರಿತು ನನ್ನ ವೈಯಕ್ತಿಕ ಪುನರಚನೆಯನ್ನು ***ಅವಲೋಕನ*** ಎಂಬ ಕೆಳಗಿನ ಭಾಗದಲ್ಲಿ ಕಾಣಬಹುದು.

12. –

13. –

14. ಮತ್ತಾಯ 7:13–14 ರಲ್ಲಿ ಯೇಸು ನಮ್ಮ ಕಣ್ಣುಗಳ ಮುಂದೆ ಈ ಚಿತ್ರವನ್ನು ಬಿಡಿಸುತ್ತಾನೆ:

    1) ಎರಡು ಮಾರ್ಗಗಳು ಮಾತ್ರ ಉಂಟು (ಇನ್ನೊಂದು ಮಧ್ಯಮ ಮಾರ್ಗವಿಲ್ಲ): ಒಂದು ಸುಲಭವಾದದ್ದು, ಇನ್ನೊಂದು ಕಷ್ಟವಾದದ್ದು.

2) ಅವುಗಳನ್ನು ಎರಡು ದ್ವಾರಗಳ ಮೂಲಕ ಪ್ರವೇಶಿಸಬೇಕು (ಬೇರೆ ಇನ್ನೊಂದು ದ್ವಾರವಿಲ್ಲ): ಒಂದು ಅಗಲವಾದದ್ದು, ಇನ್ನೊಂದು ಇಕ್ಕಟ್ಟಾದದ್ದು.

3) ಅವುಗಳಲ್ಲಿ ಎರಡು ಗುಂಪಿನ ಜನರು ಪ್ರಯಾಣಿಸುವರು (ಇನ್ನೊಂದು ಮಧ್ಯಮ ಗುಂಪಿಲ್ಲ): ಒಂದು ದೊಡ್ಡ ಗುಂಪು, ಇನ್ನೊಂದು ಸಣ್ಣ ಗುಂಪು.

4) ಅವುಗಳು ಎರಡು ರೀತಿಯಲ್ಲಿ ಅಂತ್ಯಗೊಳ್ಳುತ್ತವೆ (ಇನ್ನೊಂದು ಪರ್ಯಾಯವಿಲ್ಲ): ನಾಶನ ಮತ್ತು ಜೀವನ.

15. –

16. ಮತ್ತಾಯ 7:15 ರಲ್ಲಿ ಯೇಸು ಬಳಸಿರುವ ರೂಪಾಲಂಕಾರಗಳು:

"ಕುರಿಗಳನ್ನು" ಶಾಂತಿಯುಳ್ಳ ಪ್ರಾಣಿಗಳಾಗಿ ಕಾಣಲಾಗುತ್ತದೆ. "ತೋಳಗಳನ್ನು" ಅಪಾಯಕಾರಿ ಹಾಗೂ ಉಗ್ರ ಪ್ರಾಣಿಗಳಾಗಿ ಕಾಣಲಾಗುತ್ತದೆ. "ವೇಷ ಹಾಕಿಕೊಳ್ಳುವುದು" ತೋರಿಕೆಯನ್ನು ಸೂಚಿಸುತ್ತದೆ. ಹಾಗಾಗಿ ಸ್ನೇಹಭಾವವುಳ್ಳ ಕುರಿಗಳಂತೆ ತೋರುವಂತದ್ದು ವಾಸ್ತವಿಕವಾಗಿ ಅಪಾಯಕಾರಿಯಾದ ತೋಳಗಳಾಗಿವೆ.

17. ನೀವು ಈ ರೂಪಾಲಂಕಾರಗಳನ್ನು ಸಭೆಯಲ್ಲಿರುವ ಸುಳ್ಳು ಬೋಧಕರಿಗೆ (ಮತ್ತು ಸುಳ್ಳು ಪ್ರವಾದಿಗಳಿಗೆ) ಹೀಗೆ ಅನ್ವಯಿಸಬಹುದು: ಈ ಸುಳ್ಳು ಪ್ರವಾದಿಗಳು (ಹಾಗೂ ಸುಳ್ಳು ಬೋಧಕರುಗಳು) ಸಭೆಯಲ್ಲಿ "ವೇಷ" ಹಾಕಿಕೊಂಡು ಬರುತ್ತಾರೆ. ಅವರು ನಿಜವಾಗಲೂ ಎಂತಹ ವ್ಯಕ್ತಿಗಳು ಎಂಬುದನ್ನು ಜನರು ಅರಿಯುವುದಿಲ್ಲ. ಅವರು ಒಳ್ಳೆಯವರಾಗಿ ಸ್ನೇಹಭಾವವುಳ್ಳವರಾಗಿ ತೋರುತ್ತಾರೆ. ಆದರೆ ನಿಜವಾಗಲೂ ಅವರು ಅಪಾಯಕಾರಿ ಹಾಗೂ ಉಗ್ರ ಜನರಾಗಿದ್ದಾರೆ. ತಮ್ಮ ತಂತ್ರಗಳನ್ನು ಬಳಸಲು ಅವರನ್ನು ಅನುಮತಿಸಿದರೆ ಅವರು ಸಭೆಯನ್ನು ನಾಶಮಾಡುವರು.

18. ಮತ್ತಾಯ 7:16–19 ರಲ್ಲಿ ಯೇಸು ಬಳಸಿರುವ ರೂಪಾಲಂಕಾರಗಳು:

"ಫಲವು" ಒಂದು ಮರದಿಂದ ಅಥವಾ ಪೊದೆಯಿಂದ ಬೆಳೆಯುವ ಸಂಗತಿಯಾಗಿದೆ. ಒಂದು ಮರದ ಫಲವು ಆ ಮರದ ಗುಣಕ್ಕೆ ತಕ್ಕಂತೆ ಬೆಳೆಯುತ್ತದೆ. ಹಾಗಾಗಿ ಒಬ್ಬ ವ್ಯಕ್ತಿಯ ಮಾತುಗಳ ಮತ್ತು ಕ್ರಿಯೆಗಳ ಫಲವನ್ನು ಯೇಸು ಇಲ್ಲಿ ಉಲ್ಲೇಖಿಸುತ್ತಿದ್ದಾನೆ. ಈ ಫಲವು ಆ ವ್ಯಕ್ತಿಯ ನಿಜವಾದ ಗುಣವನ್ನು ಪ್ರಕಟಿಸುತ್ತದೆ.

19. ನೀವು ಈ ರೂಪಾಲಂಕಾರಗಳನ್ನು ಸಭೆಯಲ್ಲಿರುವ ಸುಳ್ಳು ಬೋಧಕರಿಗೆ (ಮತ್ತು ಸುಳ್ಳು ಪ್ರವಾದಿಗಳಿಗೆ) ಹೀಗೆ ಅನ್ವಯಿಸಬಹುದು:

ಒಬ್ಬ ಬೋಧಕನು (ಅಥವಾ ಪ್ರವಾದಿಯು) ಸಭೆಯಲ್ಲಿ ಮಾತನಾಡುವಾಗ ನಾವು ಸೂಕ್ಷವಾಗಿ ಆತನ ಸೇವೆಯ ಪರಿಣಾಮಗಳನ್ನು ಗಮನಿಸಬೇಕು. ಉದಾಹರಣೆಗೆ, ಒಂದು ವೇಳೆ ಆ ವ್ಯಕ್ತಿಯ ಸೇವೆಯ ಪರಿಣಾಮವಾಗಿ ಎಲ್ಲಾ ವಿಶ್ವಾಸಿಗಳು ಗೊಂದಲಕ್ಕೀಡಾದರೆ, ಗರ್ವಿಷ್ಠರಾದರೆ, ಜಗಳ ಮಾಡಲು ತೊಡಗಿದರೆ, ಸತ್ಯವೇದಕ್ಕೆ ಹಾಗೂ ದೇವರ ರಾಜ್ಯದ ಮೌಲ್ಯಗಳಿಗೆ ಸ್ಪಷ್ಟವಾಗಿ ವಿರುದ್ಧವಾದ ಅಭ್ಯಾಸಗಳನ್ನು ಮತ್ತು ನಂಬಿಕೆಗಳನ್ನು ಅಳವಡಿಸಿಕೊಂಡರೆ ಆ ಬೋಧಕನು (ಅಥವಾ ಪ್ರವಾದಿಯು) ಸುಳ್ಳು ಎಂಬುದಾಗಿ ತಿಳಿದುಕೊಳ್ಳಬಹುದು. ಆತನು "ಕುರಿ ವೇಷಹಾಕಿಕೊಡಿರುವ ತೋಳವಾಗಿದ್ದಾನೆ".

## ಅವಲೋಕನ

ನಮ್ಮ ಜೊತೆ ವಿಶ್ವಾಸಿಯ ಕುರಿತು ನಮಗಿರುವ ಜವಾಬ್ದಾರಿಯು ಆತನನ್ನು ನ್ಯಾಯತೀರುಸುವುದಲ್ಲ ಬದಲಾಗಿ ಆತನಿಗೆ ಸಹಾಯ ಮಾಡುವುದಾಗಿದೆ. ದೇವರು ಮಾತ್ರ ಒಬ್ಬ ವ್ಯಕ್ತಿಗೆ ನ್ಯಾಯತೀರಿಸಲು ಸಾಧ್ಯ. ನಾವೆಲ್ಲರೂ ಸಹ ಆತನ ನ್ಯಾಯತೀರ್ಪಿನ ಅಡಿಯಲ್ಲಿದ್ದೇವೆ. ಆದರೆ ಆತನು ಕೃಪಾಳುವಾಗಿರುವಂತೆ ನಾವೂ ಸಹ ಕೃಪೆಯುಳ್ಳವರಾಗಿರಬೇಕು. ನಮ್ಮ ಸಹೋದರನಲ್ಲಿ ಅಥವಾ ಸಹೋದರಿಯಲ್ಲಿ ನಾವು ಯಾವುದಾದರೊಂದು ಬಲಹೀನತೆಯನ್ನು ಅಥವಾ ಪಾಪವನ್ನು ಕಾಣುವಾಗ ಅವರಿಗೆ ಸಹಾಯ ಮಾಡಬೇಕೆನ್ನುವ ಕ್ರಿಸ್ತೀಯ ಜವಾಬ್ದಾರಿಯು ನಮ್ಮ ಮೇಲಿದೆ. ಈ ಪ್ರೀತಿಯನ್ನು ನಾವು ಪ್ರೀತಿಯಿಂದಲೂ ಹಾಗೂ ಕ್ರಿಸ್ತನ ಆತ್ಮವುಳ್ಳವರಾಗಿಯೂ ಮಾಡಬೇಕು. ನಾವು ಎಂದಿಗೂ ಸಹ ಮೈಮರೆಯಬಾರದು. ನಮ್ಮ ಸ್ವಂತ ಬಲಹೀನತೆಗಳನ್ನು ಹಾಗೂ ಪಾಪವನ್ನು ಅಲಕ್ಷಿಸಬಾರದು. ನಾವು ಮೊದಲು ನಮ್ಮ ಕುರಿತು ವ್ಯವಹರಿಸೋಣ. ಆಗ ದೇವರು ಇನ್ನೊಬ್ಬರೊಂದಿಗೆ ವ್ಯವಹರಿಸಲು ನಮ್ಮನ್ನು ನಡೆಸಬಹುದು.

ನಮ್ಮಲ್ಲಿ ಅನೇಕರಿಗೆ ಮತ್ತಾಯ 7:7–11 ರಲ್ಲಿನ ಯೇಸುವಿನ ಮಾತುಗಳ ಕುರಿತು ವೈಯಕ್ತಿಕವಾದ ಬೇಸರ ಹಾಗೂ ನಿರಾಶೆ ವ್ಯಕ್ತಪಡಿಸುತ್ತಾರೆ. ನಾವು ದೇವರಲ್ಲಿ ಬೇಡಿಕೊಂಡಿದ್ದೇವೆ ಆದರೆ ಬೇಡಿದ್ದನ್ನು ಹೊಂದಿಕೊಂಡಿಲ್ಲ. ನಾವು ಹುಡುಕಿದ್ದೇವೆ ಆದರೆ ಹುಡುಕಿದ್ದನ್ನು ಕಂಡುಕೊಂಡ ಅನುಭವವಾಗಿಲ್ಲ. ನಾವು ದೇವರ ಬಾಗಿಲನ್ನು ತಟ್ಟಿದ್ದೇವೆ ಆದರೆ ತೆರೆದದ್ದನ್ನು ಕಂಡಿಲ್ಲ.

ಆದರೆ ಈ ವಾಕ್ಯಭಾಗದಲ್ಲಿ ದೇವರು ಒಬ್ಬ ಒಳ್ಳೆಯ ದೇವರಾಗಿದ್ದಾನೆ ಎಂಬುದನ್ನು ಯೇಸು ಧೃಢೀಕರಿಸುತ್ತಿದ್ದಾನೆ. ಇಹಲೋಕದ ಅತ್ಯುತ್ತಮವಾದ ತಂದೆಗಿಂತ ಆತನು ಉತ್ತಮ ತಂದೆಯಾಗಿದ್ದಾನೆ. ಹಾಗಾಗಿ ದೇವರ ಎಲ್ಲಾ ವರಗಳು ನಮಗೆ ಒಳ್ಳೆಯ ವರಗಳಾಗಿವೆ. ಆತನು ನಮ್ಮ ಅಗತ್ಯತೆಗಳನ್ನು ಬಲ್ಲವನಾಗಿದ್ದು ನಮಗೆ ಅತ್ಯುತ್ತಮವಾದದ್ದನ್ನೇ ಬಯಸುತ್ತಾನೆ. ಅದರ ಅರ್ಥ ನಾವು ಪ್ರಾರ್ಥನೆಯಲ್ಲಿ ಧೈರ್ಯವಾಗಿ ನಮ್ಮ ಪರಲೋಕದ ತಂದೆಯಾದ ಆತನ ಮುಂದೆ ಬರಬಹುದು. ನಾವು ಆತನಲ್ಲಿ ಏನು ಬೇಡಿದರೂ ಸಹ ಆತನು ಕೇಳುವನು ಮತ್ತು ನಮಗೂ ಹಾಗೂ ದೇವರ ರಾಜ್ಯಕ್ಕೂ ಸೂಕ್ತವಾದ ವಿಧದಲ್ಲಿ ಮತ್ತು ಸಮಯದಲ್ಲಿ ನಮ್ಮ ಪ್ರಾರ್ಥನೆಗೆ ಉತ್ತರ ನೀಡುವನು. ನಾವು ಆತನ ಮಾರ್ಗದರ್ಶನ ಹುಡುಕುವಾಗಲೆಲ್ಲಾ ಆತನು ತನ್ನ ಮಾರ್ಗಗಳಲ್ಲಿ ನಮ್ಮನ್ನು ನಿಶ್ಚಯವಾಗಲೂ ಮಾರ್ಗದರ್ಶಿಸುತ್ತಾನೆ. ನಾವು ಆತನ ದೈವಿಕ ಪ್ರಸನ್ನತೆಯನ್ನು ಹುಡುಕಿ ಆತನ ಬಾಗಿಲನ್ನು ತಟ್ಟುವಾಗಲೆಲ್ಲಾ ಆತನು ಬಾಗಿಲನ್ನು ತೆರೆದು ನಮ್ಮನ್ನು ಒಳಗೆ ಸೇರಿಸಿಕೊಳ್ಳುವನು. ಆತನು ಪವಿತ್ರಾತ್ಮನ ಮೂಲಕ ನಮ್ಮೊಂದಿಗೆ ಅನ್ಯೋನ್ಯತೆಯನ್ನು ಹೊಂದುವನು. ಆತನು ನಮ್ಮನ್ನು ತನ್ನ ಮಕ್ಕಳನ್ನಾಗಿಯೂ ಸ್ನೇಹಿತರನ್ನಾಗಿಯೂ ಕರೆಯುವನು.

ಯೇಸು ಗೆತ್ಸೆಮನೆ ತೋಟದಲ್ಲಿ ತನ್ನ ಇಹಲೋಕದಲ್ಲಿನ ಸೇವೆಯ ಒಂದು ಕಾರ್ಗತ್ತಲೆಯ ಕ್ಷಣವನ್ನು ಅನುಭವಿಸಿದಾಗ ಮಾಡಿದ ಪ್ರಾರ್ಥನೆಯನ್ನು ಗಮನಿಸುತ್ತಾ ನಮ್ಮ ಪರಲೋಕದ ತಂದೆಯ ಮಕ್ಕಳಾಗಿ ನಾವು ದೇವರ ಸ್ವಂತ ಮಗನ ಪ್ರಾರ್ಥನಾ ಮನೋಭಾವನೆಯನ್ನು ಅಳವಡಿಸಿಕೊಳ್ಳಬೇಕು. ಯೇಸು ನಿಜವಾಗಲೂ ತನ್ನನ್ನು ತನ್ನ ಪರಲೋಕದ ತಂದೆಗೆ ಸಮರ್ಪಿತನಾಗಿದ್ದನು. ಯೇಸು ಬೋರಲ ಬಿದ್ದು ಪ್ರಾರ್ಥಿಸುತ್ತಾ, *"ನನ್ನ ತಂದೆಯೇ, ಸಾಧ್ಯವಾದರೆ ಈ ಪಾತ್ರೆಯು ನನ್ನನ್ನು ಬಿಟ್ಟು ತೊಲಗಲಿ. ಆದರೂ ನನ್ನ ಚಿತ್ತದಂತಲ್ಲ, ನಿನ್ನ ಚಿತ್ತದಂತೆಯೇ ಆಗಲಿ"* ಎಂದನು (ಮತ್ತಾಯ 26:39).

# ಉತ್ತರಗಳು 18: ನಾವು ಮಾಡಲೇಬೇಕಾದ ಆಯ್ಕೆ

## ಶಿಕ್ಷಕರಿಗಾಗಿ

ನೀವು ಈ ಅಧ್ಯಯನವನ್ನು ಒಂದು ಗಂಟೆಯಲ್ಲಿ ಮುಗಿಸಬಹುದು. ಒಂದು ವೇಳೆ ಸಮಯವಿದ್ದಲ್ಲಿ, ವಿದ್ಯಾರ್ಥಿಗಳು ಪ್ರಶ್ನೆ 3 ಮತ್ತು 6 ರೊಂದಿಗೆ ಹೆಚ್ಚಿನ ಸಮಯ ಕಳೆಯಬಹುದು (ಬಹುಶಃ ಮನೆಗೆಲಸವಾಗಿ).

## ಉತ್ತರಗಳು

1. ಮತ್ತಾಯ 7:21–23 ನ್ನು ಹೀಗೆ ಪುನರಚಿಸಬಹುದು:

   ನ್ಯಾಯತೀರ್ಪಿನ ದಿನವು ಯಾರು ಪ್ರಾಮಾಣಿಕರು ಹಾಗೂ ಯಾರು ಅಪ್ರಾಮಾಣಿಕರು ಎಂಬುದನ್ನು ಪ್ರಕಟಿಸುತ್ತದೆ. ಆ ದಿನದಂದು ಕೆಲವು ಕ್ರೈಸ್ತರಿಗೆ ನಮ್ಮ ಪರಲೋಕದ ತಂದೆಯು ತನ್ನ ಜನರಿಗಾಗಿ ಸಿದ್ಧಪಡಿಸಿರುವ ನಿತ್ಯವಾದ ದೇವರ ರಾಜ್ಯವನ್ನು ಪ್ರವೇಶಿಸಲು ಅನುಮತಿಯಿರುವುದಿಲ್ಲ. ಲೋಕದ ರಕ್ಷಕನಾದ ಯೇಸುವಿನೊಂದಿಗೆ ನಮಗಿರುವ ನಿಜವಾದ ಸಂಬಂಧವೇ ನಿರ್ಣಾಯಕ ಪರೀಕ್ಷೆಯಾಗಿರುವುದು. ಆತನನ್ನು ನಿಜವಾಗಲೂ ತಿಳಿದವರು ಹಾಗೂ ಆತನನ್ನು ನಿಜವಾಗಲೂ ಕರ್ತನನ್ನಾಗಿ ಅರಿಕೆಮಾಡುವವರು ಯಾರೆಂಬುದನ್ನು ಆತನ ಚಿತ್ತಕ್ಕೆ ಮತ್ತು ನಮ್ಮ ಜೀವಿತಕ್ಕಾಗಿ ಆತನಿಗಿರುವ ಯೋಜನೆಗೆ ನಾವು ತೋರಿಸುವ ವಿಧೇಯತೆಯಲ್ಲಿ ಕಂಡುಕೊಳ್ಳಬಹುದು. ಬಾಯಿಂದ ಸ್ತುತಿಸುವುದು ಮಾತ್ರ ಸಾಲದು. ನಮ್ಮ ಬಾಯಿಗಳಿಂದ "ಕರ್ತನೇ, ಕರ್ತನೇ" ಎಂದು ಹೇಳುವುದು ಮಾತ್ರ (ಆದರೆ ಪಶ್ಚಾತ್ತಾಪಪಡದ ಮತ್ತು ಅವಿಧೇಯ ಹೃದಯವನ್ನು ಹೊಂದಿರುವುದು) ಸಾಲದು. ನಾವು ಪ್ರವಾದಿಸಿದ್ದೇವೆ, ರೋಗಿಗಳನ್ನು ಗುಣಪಡಿಸಿದ್ದೇವೆ, ದೆವ್ವಗಳನ್ನು ಓಡಿಸಿದ್ದೇವೆ ಮತ್ತು ಯೇಸುವಿನ ಹೆಸರಿನಲ್ಲಿ ಇತರೆ ಅದ್ಭುತಗಳನ್ನು ಮಾಡಿದ್ದೇವೆ ಎಂದು ಘೋಷಿಸಿಕೊಳ್ಳುವುದು ಮಾತ್ರ ಸಾಲದು, ಆತನೊಂದಿಗೆ ಒಂದು ವೈಯಕ್ತಿಕ ಸಂಬಂಧವಿರಬೇಕು ಮತ್ತು ಆತನು ನಮ್ಮನ್ನು ತಿಳಿದಿರಬೇಕು.

2.

3. –

4. ಮತ್ತಾಯ 7:24–27 ನ್ನು ಹೀಗೆ ಪುನರಚಿಸಬಹುದು: ಯೇಸು ತನ್ನ ಹಿಂಬಾಲಕರಿಂದ ಅಪೇಕ್ಷಿಸುವ ಪ್ರತಿಕ್ರಿಯೆಯನ್ನು ವರ್ಣಿಸಲು ಎರಡು ವ್ಯಕ್ತಿಗಳನ್ನು ಬಳಸಿದನು. ಒಬ್ಬ ವ್ಯಕ್ತಿಯು ಬುದ್ಧಿವಂತನಾಗಿದ್ದು ತನ್ನ ಮನೆಯನ್ನು ಬಂಡೆಯ ಮೇಲೆ ಕಟ್ಟಿದನು. ಆ ಮನೆಯು ಎಲ್ಲಾ ರೀತಿಯ ವ್ಯತಿರಿಕ್ತ ಹವಾಮಾನಗಳನ್ನು ಮೆಟ್ಟಿ ನಿಂತಿತು. ಇನ್ನೊಬ್ಬ ವ್ಯಕ್ತಿಯು ಮೂರ್ಖನಾಗಿದ್ದು ಮರಳಿನ ಮೇಲೆ ತನ್ನ ಮನೆಯನ್ನು ಕಟ್ಟಿದನು. ಆ ಮನೆಯು ಮಳೆ ಬಡಿದು ಗಾಳಿ ಬೀಸಿದಾಗ ಕುಸಿದು ಬಿದ್ದಿತು. ಬುದ್ಧಿವಂತ ಪ್ರತಿಕ್ರಿಯೆಯು ಯೇಸುವಿನ ಬೋಧನೆಯನ್ನು ಕೇಳಿಸಿಕೊಳ್ಳುವುದು ಮಾತ್ರವಾಗಿರದೆ ಅದನ್ನು ಕಾರ್ಯರೂಪದಲ್ಲಿ ಪಾಲಿಸುವುದಾಗಿದೆ. ಮೂರ್ಖತನದ ಪ್ರತಿಕ್ರಿಯೆಯು ಯೇಸುವಿನ ಬೋಧನೆಯನ್ನು ಕೇಳಿಸಿಕೊಂಡು ಕಾರ್ಯರೂಪದಲ್ಲಿ ಯಾವುದನ್ನೂ ಪಾಲಿಸುವುದಾಗಿದೆ.

5. –

6. –

## ಅವಲೋಕನ

ನಿಮ್ಮ ಬಗ್ಗೆ ಏನು? ನೀವು ಒಬ್ಬ ಬುದ್ಧಿವಂತ ವಿಶ್ವಾಸಿಯೋ ಅಥವಾ ಮೂರ್ಖ ವಿಶ್ವಾಸಿಯೋ? ನೀವು ಮರಳಿನ ಮೇಲೆ ಮನೆ ಕಟ್ಟಿಕೊಂಡ ಮನುಷ್ಯನಂತೆ ಮೂರ್ಖರಾಗಿದ್ದೀರೋ? ನೀವು ಯೇಸುವಿನ ಪರ್ವತ ಪ್ರಸಂಗವನ್ನು ಕೇಳಿ ಬಹುಶಃ ಅದರಲ್ಲಿ

ಸಂತೋಷಪಟ್ಟು ನಂತರ ನಿಮ್ಮ ದಿನನಿತ್ಯ ಜೀವನದಲ್ಲಿ ಅದು ಒಡ್ಡುವ ಸವಾಲುಗಳನ್ನು ಮರೆತುಹೋಗಿದ್ದೀರೋ ಅಥವಾ ನಿರ್ಲಕ್ಷಿಸಿದ್ದೀರೋ?

ಅಥವಾ ಬಂಡೆಯ ಮೇಲೆ ತನ್ನ ಮನೆಯನ್ನು ಕಟ್ಟಿಕೊಂಡ ಬುದ್ಧಿವಂತ ಮನುಷ್ಯನಂತಿದ್ದೀರೋ? ನೀವು ಯೇಸುವಿನ ಬೋಧನೆಯನ್ನು ಕೇಳಿಸಿಕೊಳ್ಳುವುದು ಮಾತ್ರವಲ್ಲದೆ ಅದನ್ನು ಕಾರ್ಯರೂಪದಲ್ಲಿ ಪಾಲಿಸಿದ್ದೀರೋ? ಯೇಸು ವಿಶ್ವಾಸಿಗಳಾದ ನಮ್ಮಿಂದ ಬಯಸುವಂತಹ ಸರಿಯಾದ ಆಯ್ಕೆಗಳನ್ನು ನೀವು ಮಾಡಿದ್ದೀರೋ? ನಿಮ್ಮ ನೈತಿಕ ನೀತಿವಂತಿಕೆ ಹೇಗಿದೆ? ಫರಿಸಾಯರ ನೀತಿವಂತಿಕೆಯಂತೆ ಅದು ತೆಳುವಾದದ್ದು ಮತ್ತು ??ಆಗಿದೆಯೋ? ಅಥವಾ ನಿಮ್ಮ ನೀತಿವಂತಿಕೆಯು ರೂಪಾಂತರ ಹೊಂದಿದ ಹೃದಯದಿಂದ ಹೊರಸೂಸುವ ಒಂದು ಸಂಗತಿಯಾಗಿದೆಯೋ? ನಿಮ್ಮ ಧಾರ್ಮಿಕ ಜೀವನ ಹೇಗಿದೆ? (ಫರಿಸಾಯರಲ್ಲಿದ್ದಂತೆ) ಕಪಟತನದಿಂದ ತುಂಬಿದೆಯೋ? (ಅನ್ಯಜನರಲ್ಲಿದ್ದಂತೆ) ಯಾಂತ್ರಿಕವಾಗಿದೆಯೋ? ಅಥವಾ ಅದು ಯಥಾರ್ಥವುಳ್ಳದ್ದೂ ಹಾಗೂ ನೈಜವಾದದ್ದೂ ಆಗಿದೆಯೋ? ನಿಮ್ಮ ನಿಕ್ಷೇಪ ಎಲ್ಲಿದೆ? ಅದು ಇಲ್ಲಿ ಭೂಮಿಯಲ್ಲಿದೆಯೋ? ಅಥವಾ ಪರಲೋಕದಲ್ಲಿದೆಯೋ? ನಮ್ಮ ಗಂಟು ಎಲ್ಲಿದೆಯೋ ಅಲ್ಲಿಯೇ ನಮ್ಮ ಹೃದಯ ಇರುವುದು ಎಂದು ಯೇಸು ಹೇಳಿದನು. ನೀವು ಯಾವ ಯಜಮಾನನಿಗೆ ಸೇವೆ ಮಾಡುತ್ತೀರಿ? ನೀವು ಐಶ್ವರ್ಯಕ್ಕೆ ಹಾಗೂ ಆಸ್ತಿಗಳಿಗೆ ಸೇವೆ ಮಾಡುವವರಾಗಿದ್ದೀರೋ? ಅಥವಾ ದೇವರಿಗೆ ಸೇವೆ ಮಾಡುವವರಾಗಿದ್ದೀರೋ? ನಿಮ್ಮ ಜೀವನದಲ್ಲಿರುವ ಮಹತ್ವಾಕಾಂಕ್ಷೆಯನ್ನು ನೀವು ಹೇಗೆ ವರ್ಣಿಸುವಿರಿ? ಅದು ಊಟವಾಗಿದೆಯೋ, ಬಟ್ಟೆಯಾಗಿದೆಯೋ ಮತ್ತು ಮನೆಯಾಗಿದೆಯೋ? ಅಥವಾ ಅದು ದೇವರ ರಾಜ್ಯ ಹಾಗೂ ಆತನ ನೀತಿವಂತಿಕೆಯಾಗಿದೆಯೋ? ನಿಮ್ಮ ಜೀವನದಲ್ಲಿ ಮೊದಲ ಸ್ಥಾನವನ್ನು ನೀವು ದೇವರಿಗೆ ನೀಡಿದ್ದೀರೋ? ಅಥವಾ ನಿಮ್ಮ ಜೀವನದ ಕೇಂದ್ರವು ನೀವೇ ಆಗಿದ್ದೀರೋ?

ಈ ಪ್ರಶ್ನೆಗಳನ್ನು ಆಲೋಚಿಸುತ್ತಾ ಸ್ವಲ್ಪ ಸಮಯವನ್ನು ಪ್ರಾರ್ಥನೆಯಲ್ಲಿ ಕಳೆಯಿರಿ. ನಿಮ್ಮ ಜೀವನವನ್ನು ಯೇಸುವಿಗೆ ಮತ್ತೊಮ್ಮೆ ಸಮರ್ಪಿಸಿರಿ. ನೀವು ಒಬ್ಬ ಬುದ್ಧಿವಂತ ಹಾಗೂ ಪ್ರೌಢ ಶಿಷ್ಯನಾಗುವಂತೆ ಬೆಳೆಯಲು ದೇವರು ಸಹಾಯ ಮಾಡುವಂತೆ ಪ್ರಾರ್ಥಿಸಿರಿ. ಈಗಿರುವ ದುಷ್ಟ ಲೋಕದಲ್ಲಿ ದೇವರ ಭಯಭಕ್ತಿಯುಳ್ಳ ಒಂದು ಜೀವನವನ್ನು ನಡೆಸಲು, ಅಂದರೆ ದೇವರ ರಾಜ್ಯದ ಮೌಲ್ಯಗಳನ್ನು ಹಾಗೂ ನಿಯಮಗಳನ್ನು ನಿಜವಾಗಲೂ ಪ್ರತಿಬಿಂಬಿಸುವ ಒಂದು ಜೀವನವನ್ನು ನಡೆಸಲು ಪವಿತ್ರಾತ್ಮನು ನಿಮ್ಮನ್ನು ಮಾರ್ಗದರ್ಶಿಸುವಂತೆ ಬೇಡಿಕೊಳ್ಳಿರಿ.